ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು

(ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಸೋಮಕ್ಕ ಎಂ.

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ

ಪ್ರವಾಚಕರು

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

279

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

CORPUS-ID
PH-62

Shree Mahantesh
XEROX & BOOK BINDING
Near S.B.I.,K.C.D.Road,DWD
Ph-2447880.

279

AKSHARA GRANTHALAYA

ACC.NO. 049172

ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು

(ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ)

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಸೋಮಕ್ಕ ಎಂ.

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ

ಪ್ರವಾಚಕರು

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಧ್ಯಯನಾಂಗ

ವಿದ್ಯಾರಣ್ಯ-೫೮೩ ೨೭೬

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

4K0.9
SOM l

049172

ಪ್ರಮಾಣ ಪತ್ರ

ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಡಾ. ಪಿ. ಮಹಾದೇವಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೮.೨.೨೦೦೮
ಸ್ಥಳ : ವಿದ್ಯಾರಣ್ಯ

(ಸೋಮಕ್ಕ ಎಂ.)
ಸಂಶೋಧಕರು
ಕನ್ನಡ ಭಾಷಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ದೃಢೀಕರಣ ಪತ್ರ

ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕುಮಾರಿ. ಸೋಮಕ್ಕ ಎಂ. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವು ದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೨೮.೨.೨೦೦೮
ಸ್ಥಳ : ವಿದ್ಯಾರಣ್ಯ

(ಡಾ. ಪಿ. ಮಹಾದೇವಯ್ಯ)
ಮಾರ್ಗದರ್ಶಕರು
ಕನ್ನಡ ಭಾಷಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಕೃತಜ್ಞತೆಗಳು

"ಲಂಬಾಣಿ ಮಕ್ಕಳ ಕನ್ನಡ ಕಲಿಕೆಯ ಸಮಸ್ಯೆಗಳು" (ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಪ್ರಾಥಮಿಕ ಶಾಲಾ ಮಕ್ಕಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲು ನನಗೆ ತುಂಬಾ ಹರ್ಷವೆನಿಸುತ್ತಿದೆ. ಈ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನನ್ನ ಅಧ್ಯಯನಕ್ಕೆ ನೆರವಾದವರಿಗೆ ಕೃತಜ್ಞತೆಗಳನ್ನು ಹೇಳುವುದು ನನ್ನ ಆಧ್ಯ ಕರ್ತವ್ಯ ಎಂದು ಭಾವಿಸುತ್ತೇನೆ.

ಪ್ರಾರಂಭದಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಂತಹ ಹಿಂದಿನ ಕುಲಪತಿಗಳಾದ ಪ್ರೊ. ಬಿ.ಎ. ವಿವೇಕ ರೈ ಅವರಿಗೆ ಈಗಿನ ಕುಲಪತಿಗಳಾದಂತಹ ಪ್ರೊ. ಎ. ಮುರಿಗೆಪ್ಪ ಅವರಿಗೆ ಹಿಂದಿನ ಕುಲಸಚಿವರಾದ ಪ್ರೊ. ಹಿ.ಚಿ. ಬೋರಲಿಂಗಯ್ಯ ಅವರಿಗೆ ಹಾಗೂ ಈಗಿನ ಕುಲಸಚಿವರಾದ ಎಸ್.ಎಸ್. ಪೂಜಾರ ಅವರಿಗೂ ಹಾಗೂ ಅಧ್ಯಯನಾಂಗದ ನಿರ್ದೇಶಕರಾದ ಪ್ರೊ. ಡಿ. ಪಾಂಡುರಂಗಬಾಬು ಅವರಿಗೆ ಮೊದಲು ಕೃತಜ್ಞತೆಗಳನ್ನು ಹೇಳುತ್ತೇನೆ.

ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ನನ್ನನ್ನು ಪ್ರೋತ್ಸಾಹಿಸಿ ಅಧ್ಯಯನದ ಎಲ್ಲ ಸಂದರ್ಭಗಳಲ್ಲೂ ಚರ್ಚಿಸಿ, ಓದಿ ತಿದ್ದಿ ತೀಡಿ ಮಾರ್ಗದರ್ಶನ ಮಾಡಿದ ನೆಚ್ಚಿನ ಗುರುಗಳಾದ ಡಾ. ಪಿ. ಮಹಾದೇವಯ್ಯ ಅವರಿಗೂ ಅಧ್ಯಯನಕ್ಕೆ ಸ್ಫೂರ್ತಿಯನ್ನು ನೀಡಿ ಆತ್ಮವಿಶ್ವಾಸವನ್ನು ತುಂಬಿದ ನಮ್ಮ ವಿಶ್ವವಿದ್ಯಾಲಯದಲ್ಲಿ ಕುಲಸಚಿವರು, ಪ್ರಭಾರಿ ಕುಲಪತಿಗಳೂ ಆಗಿದ್ದ ಪ್ರೊ. ಕೆ.ವಿ. ನಾರಾಯಣ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆರಂಭದಿಂದಲೂ ಅಧ್ಯಯನದ ಇತಿಮಿತಿಗಳನ್ನು ಚರ್ಚಿಸುತ್ತಾ, ಅಧ್ಯಯನ ವಿಷಯದ ಬಗೆಗೆ ಪ್ರತಿಯೊಂದು ಸಂದರ್ಭದಲ್ಲಿಯೂ ಸಲಹೆ ಸೂಚನೆಗಳನ್ನು ನೀಡಿ, ಅಧ್ಯಯನಕ್ಕೆ ಮತ್ತಷ್ಟು ಗಟ್ಟಿತನವನ್ನು ತಂದುಕೊಡುವಲ್ಲಿ ಅನುಕೂಲ ಮಾಡಿದ ನಮ್ಮ ವಿಭಾಗದ ಗುರುಗಳಾದ ಡಾ. ಸಾಂಬಮೂರ್ತಿ, ಡಾ. ಅಶೋಕ ಕುಮಾರ ರಂಜೇರಿ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಧ್ಯಯನದ ಬಗೆಗೆ ಸಲಹೆ ಸೂಚನೆಗಳನ್ನು ನೀಡಿದ ಪ್ರೊ. ಕರೀಗೌಡ ಬೀಚನಹಳ್ಳಿ, ಡಾ. ಬಿ.ವಿ. ತಾರಕೇಶ್ವರ, ಡಾ. ವಿಠಲ್‌ರಾವ್ ಗಾಯಕ್ವಾಡ, ಡಾ. ಉಷಾ, ಡಾ. ಮೋಹನ ಕುಂಟಾರ, ಡಾ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ಎಸ್.ಎಸ್. ಅಂಗಡಿ, ಡಾ. ಮಾಧವ ಪೆರಾಜೆ, ಸಿ. ವೆಂಕಟೇಶ, ಡಾ. ಸುಬ್ಬಣ್ಣ ರೈ, ಡಾ. ಸುಚೇತನಸವರತ್ನ, ಡಾ. ಚನ್ನವೀರಪ್ಪ, ಡಾ. ಕೆ. ರವೀಂದ್ರನಾಥ, ಡಾ. ವಿರೇಶ ಬಡಿಗೇರ, ಡಾ. ಡಿ.ವಿ. ಪರಶಿವಮೂರ್ತಿ, ಪ್ರೊ. ದೇವರಕೊಂಡ ರೆಡ್ಡಿ, ಡಾ. ಬಿ.ಎಂ. ಪುಟ್ಟಯ್ಯ, ಪ್ರೊ. ರಹಮತ್ ತರೀಕೆರೆ, ಡಾ. ಅಮರೇಶ ನುಗಡೋಣಿ, ಡಾ. ವೆಂಕಟೇಶ

ಇಂದ್ವಾಡಿ, ಡಾ. ಪಿ.ಕೆ. ಖಂಡೋಬಾ, ಡಾ. ಡಿ.ಬಿ. ನಾಯಕ, ಗೋಪಿನಾಯಕ, ಹಾಲ್ಯನಾಯ್ಕ, ಭಾಸ್ಕರ್‌ರಾವ್, ಡಾ. ಎಚ್. ನಾಗವೇಣಿ, ಡಾ. ಎ. ವೆಂಕಟೇಶ, ಗ್ಯಾನಪ್ಪ ಬಡಿಗೇರ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲುಹಿದ ಪ್ರತಿಯೊಂದು ಹಂತದಲ್ಲಿಯೂ ಪ್ರೋತ್ಸಾಹಿಸಿ ಬೆಳವಣಿಗೆಗೆ ಕಾರಣಕರ್ತರಾದ ಪೂಜ್ಯ ತಂದೆ ರಾಮಲಿಂಗಪ್ಪ, ತಾಯಿ ಪಾರ್ವತಮ್ಮ, ಅಣ್ಣ ನಾಗರಾಜ ಅತ್ತಿಗೆ ಶಕುಂತಲಾ, ತಮ್ಮಂದಿರಾದ ಪರಶುರಾಮ, ರವಿಕುಮಾರ, ಮುದ್ದುಮರಿಗಳಾದ ವಿಶ್ವನಾಥ, ಭೂಮಿಕಾ, ರಾಕೇಶ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಹಾಗೂ ಅಧ್ಯಯನ ವಿಷಯದ ಕುರಿತು ಪ್ರತಿ ಸಂದರ್ಭದಲ್ಲೂ ಚರ್ಚೆ ಮಾಡಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಸ್ನೇಹಿತರಾದ ಲಿಂಗಣ್ಣ ಎಚ್. ಅವರಿಗೂ ಕೃತಜ್ಞತೆಗಳು.

ಚಿಕ್ಕಂದಿನಿಂದಲೂ ವಿದ್ಯಾದಾನ ಮಾಡಿ ಅತ್ಯಂತ ಅಕ್ಕರೆಯಿಂದ ಕಂಡು ಹೊಸ ಹೊಸ ಆಲೋಚನೆಗಳಿಗೆ ತೆರೆದುಕೊಳ್ಳುವಂತೆ ಪ್ರೋತ್ಸಾಹಿಸಿ ಬೆಳವಣಿಗೆಗೂ ಕಾರಣರಾದ ನನ್ನ ನೆಚ್ಚಿನ ಶಿಕ್ಷಕರಾದ ಶಾರದಬಾಯಿ, ವೆಂಕಪ್ಪ ಬಾರಕೇರಿ, ಮಿಥಿಲಾಬಾಯಿ, ಹನುಮಕ್ಕ ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನನ್ನ ಜೊತೆಗಿದ್ದು ಸಹಕಾರ ನೀಡಿದ ಸ್ನೇಹಿತ ಕೆ. ಶಂಕರ್ ಹಾಗೂ ಸಲಹೆ ಸೂಚನೆಗಳನ್ನಿತ್ತು ಕರಡು ಪ್ರತಿ ತಿದ್ದಿದ ಸ್ನೇಹಿತರಾದ ಬಿ. ಹುಲಿಗೆಮ್ಮ, ಎರ್ರಿಸ್ವಾಮಿ, ಕೆ. ಪಾರ್ವತಿ ಅವರಿಗೆ ಕೃತಜ್ಞತೆಗಳು.

ಆರಂಭಿಕ ದಿನಗಳಿಂದಲೂ ನನ್ನ ಶ್ರೇಯಸ್ಸನ್ನು ಬಯಸಿದ ಆತ್ಮೀಯ ಗೆಳತಿಯರಾದ ಅಂಬಕ್ಕ, ಮಂಜುಳಾ, ಸಹೋದರರಾದ ಕೊಟ್ರೇಶ್, ನಾಗರಾಜ ಅವರನ್ನು ನೆನೆಯುತ್ತೇನೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿಯನ್ನು ನೀಡಿ ಸಹಕರಿಸಿದ ಎಲ್ಲಾ ತಾಂಡಾಗಳ ಪ್ರಾಥಮಿಕ ಶಾಲಾ ಶಿಕ್ಷಕರಿಗೂ, ಮಕ್ಕಳಿಗೂ ಹಾಗೂ ಕ್ಷೇತ್ರಕಾರ್ಯ ಮಾಡಲು ಸಹಕರಿಸಿದ ಸಹೋದರ ಮಿತ್ರರಾದ ಆರ್. ರಂಗಸ್ವಾಮಿ, ಪಿ. ವಿಶ್ವನಾಥ, ರಾಮಚಂದ್ರ, ಆರ್ಮುಗಂ, ಕಾಂತರಾಜ, ಜೆ. ಕುಮಾರ್, ಮಿಟ್ಯಾನಾಯಕ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ.

ವಿವಿಧ ರೀತಿಯ ಸಲಹೆ ಸಹಕಾರಗಳನ್ನು ನೀಡಿದ ನಮ್ಮ ವಿಭಾಗದ ಸಹಪಾಠಿ ಮಿತ್ರರಾದ ಹುಲೆಪ್ಪ ಸಂಡೂರು ಡಾ. ಭೀಮಣ್ಣಮೇಟಿ, ವಾಗೀಶ, ಎಸ್.ಎಮ್. ವೀರಾಕ್ಷಿ, ವೆಳ್ಳಿಮಾ, ನಾಗರಾಜ, ಶೇಖರಾಚಾರಿ, ವಿಷ್ಣುವಿ, ಅನ್ನಪೂರ್ಣ ಜಿ. ಸುಮತಿ ಒಟ್ಟಾರೆ ಈ ಸಮಗ್ರ ಅಧ್ಯಯನ ಹೊರಹೊಮ್ಮಲು ಪ್ರತ್ಯೇಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಹಿತಚಿಂತಕರಿಗೂ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಮತ್ತು ಕನ್ನಡ ಭಾಷಾ ಅಧ್ಯಯನ ವಿಭಾಗದ ಎಲ್ಲ ಸಿಬ್ಬಂದಿ ವರ್ಗದವರೆಲ್ಲರಿಗೂ ಹಾಗೂ ಆತ್ಮಿಯತೆಯಿಂದ ಮಹಾಪ್ರಬಂಧವನ್ನು ಅಂದವಾದ ಅಕ್ಷರ ರೂಪದಲ್ಲಿ ಸಂಯೋಜಿಸಿದ ಶ್ರೀನಿವಾಸ ಕೆ. ಕಲಾಲ್, ಭಾವನಾ ಗ್ರಾಫಿಕ್ಸ್, ಕಮಲಾಪುರ ಇವರಿಗೆ ನಾನು ಅಭಾರಿಯಾಗಿರುವೆ.

ಸೋಮಕ್ಕ ಎಂ.

ಪರಿವಿಡಿ

ಸಿರಿಗನ್ನಡ ಗ್ರಂಥಾಲಯ.
ಕನ್ನಡ ವಿಶ್ವವಿದ್ಯಾಲಯ. ಹಂಪಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ಮಹತ್ವ

ಪ್ರಸ್ತಾವನೆ

ಭಾಷಾ ಬೋಧನೆ ಮತ್ತು ಕಲಿಕೆ

ಅಧ್ಯಯನದ ಉದ್ದೇಶ

ಅಧ್ಯಯನದ ವ್ಯಾಪ್ತಿ

ಅಧ್ಯಯನದ ವಿಧಾನ

ಅಧ್ಯಯನದ ಸ್ವರೂಪ

ಅಧ್ಯಯನದ ಮಹತ್ವ

ಇದುವರೆಗಿನ ಲಂಬಾಣಿ ಜನಾಂಗದ ಕುರಿತು ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಮಹತ್ವ

ಪ್ರಸ್ತಾವನೆ

ಭಾರತವು ಬಹುಭಾಷಿಕ ಪರಿಸರವನ್ನು ಹೊಂದಿದ ಹಾಗೆ ಕರ್ನಾಟಕವೂ ಸಹ ಬಹುಭಾಷಿಕ ಪರಿಸರವನ್ನು ಹೊಂದಿದೆ. ಇಲ್ಲಿ ಒಂದೇ ಪ್ರದೇಶದಲ್ಲಿ ಹಲವಾರು ಧರ್ಮಗಳು, ಹಲವಾರು ಭಾಷೆಗಳು, ಹಲವಾರು ಜಾತಿ, ಉಪಜಾತಿಗಳು ಇರುವುದರಿಂದ ಪರಸ್ಪರ ಕೊಡುಕೊಳ್ಳುವಿಕೆಯಿಂದಾಗಿ, ಸಾಂಸ್ಕೃತಿಕವಾಗಿ, ಭಾಷಿಕವಾಗಿ ಒಂದರ ಮೇಲೊಂದು ಪ್ರಭಾವ ಬೀರುವ, ಸ್ವೀಕರಿಸುವ ಪ್ರಕ್ರಿಯೆ ಅನಾದಿ ಕಾಲದಿಂದಾಲೂ ನಡೆಯುತ್ತಾ ಬಂದಿದೆ. ಇದರಿಂದಾಗಿ ಬಹುಭಾಷಿಕ ಪರಿಸರ, ದ್ವಿಭಾಷಿಕ ಪರಿಸರ, ಪ್ರಾದೇಶಿಕ ಉಪಭಾಷೆಗಳು, ಸಾಮಾಜಿಕ ಉಪಭಾಷೆಗಳು ಸೃಷ್ಟಿಯಾಗಿವೆ ಮತ್ತು ಸೃಷ್ಟಿಯಾಗುತ್ತಲೇ ಇವೆ. ಹೀಗಾಗಿ ಭಾಷೆ ಕೇವಲ ಸಂವಹನ ಮಾಧ್ಯಮವಾಗಿರದೆ, ಒಂದು ಜನಾಂಗದ ಆಚಾರ-ವಿಚಾರ, ಸಂಸ್ಕೃತಿ ಮತ್ತು ಸಮುದಾಯವನ್ನು ಅರ್ಥ ಮಾಡಿಸುವ ಸಾಧನವೂ ಆಗಿದೆ. ಕರ್ನಾಟಕದಲ್ಲಿ ಕನ್ನಡ ಭಾಷೆಯಲ್ಲಿ ಹಲವಾರು ಸಾಮಾಜಿಕ ಉಪಭಾಷೆಗಳು ಸೃಷ್ಟಿಯಾಗಿವೆ. ಉದಾಹರಣೆಗೆ ಹವ್ಯಕ ಕನ್ನಡ, ಕುರುಬ ಕನ್ನಡ, ತೆಲುಗರ ಕನ್ನಡ, ಉರ್ದು ಭಾಷಿಕರ ಕನ್ನಡ, ಮಾದಿಗರ ಕನ್ನಡ ಇತ್ಯಾದಿ. ಇದೇ ರೀತಿ ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯವಾದ ಲಂಬಾಣಿ ಸಮುದಾಯವು ಬಹುತೇಕವಾಗಿ ಎಲ್ಲಾ ಪ್ರದೇಶಗಳಲ್ಲಿ ಕಂಡುಬರುತ್ತಾರೆ. ಅವರು ಲಂಬಾಣಿ ಮಾತೃಭಾಷೆಯನ್ನು ಹೊಂದಿದ್ದರೂ, ಸಾಮಾಜಿಕ ಸಂಪರ್ಕ ಮತ್ತು ವ್ಯವಹಾರಿಕ ಭಾಷೆಯಾಗಿ ಕನ್ನಡ ಭಾಷೆಯನ್ನು ಬಳಕೆ ಮಾಡುವರು. ಭಾಷಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಪ್ರತ್ಯೇಕತೆಯನ್ನು ಹೊಂದಿರುವ ಈ ಸಮುದಾಯದ ಭಾಷೆಯ ಮೇಲೆ ಕನ್ನಡ ಭಾಷೆಯ ಪ್ರಭಾವವನ್ನು ಕಾಣಬಹುದು. ಜೊತೆಗೆ ಬಹುತೇಕ ಲಂಬಾಣಿಗರು ಕನ್ನಡವನ್ನು ಮಾತನಾಡುತ್ತಾರೆ. ಆದರೆ ಅವರಾಡುವ ಕನ್ನಡ ವೈವಿಧ್ಯತೆಯಿಂದ ಕೂಡಿದೆ.

ಮನುಷ್ಯನ ಬೆಳವಣಿಗೆಯಲ್ಲಿ ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ. ಲಂಬಾಣಿಗರಿಗೆ ಈ ಹೊತ್ತಿನ ಆರ್ಥಿಕ, ರಾಜಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ತಮ್ಮ ಪಾಲಿನ ಅವಕಾಶಗಳನ್ನು ಪಡೆಯಲು ಅಥವಾ ಸೃಷ್ಟಿಸಿಕೊಳ್ಳಲು "ಶಿಕ್ಷಣ" ಇಂದು ಅನಿವಾರ್ಯ ಅಸ್ತ್ರವಾಗಿದೆ. ಈ ಸಂದರ್ಭದಲ್ಲಿ ಲಂಬಾಣಿಗರು ಯಾವುದೇ ಅಭಿವೃದ್ಧಿ ಚಟುವಟಿಕೆಗಳೂ ಔಪಚಾರಿಕ ಶಿಕ್ಷಣದ ಮೂಲಕ ಮಾತ್ರವೇ ಸ್ಥಾಪಿತವಾಗಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಶೈಕ್ಷಣಿಕವಾಗಿ ಔಪಚಾರಿಕವಾಗಿ ಕನ್ನಡ ಮಾಧ್ಯಮವನ್ನೇ ಆಶ್ರಯಿಸಬೇಕಾದ ಅಗತ್ಯತೆಯೂ ಇದೆ. ಪ್ರತ್ಯೇಕ ಮಾತೃಭಾಷೆಯನ್ನು ಹೊಂದಿದ ಮತ್ತು ಕನ್ನಡ ಭಾಷಿಕ ಪರಿಸರದಿಂದ ದೂರ ಇರುವ ಲಂಬಾಣಿ ಭಾಷಿಕ ಮಕ್ಕಳು ಔಪಚಾರಿಕವಾಗಿ ಶಾಲಾ ತರಗತಿಯಲ್ಲಿ ಕನ್ನಡ ಭಾಷೆಯ ಕಲಿಕೆ ಅಂದರೆ ಆಲಿಸುವ, ಮಾತನಾಡುವ, ಓದು ಮತ್ತು ಬರಹ ಈ ನಾಲ್ಕು ಕೌಶಲಗಳನ್ನು ಒಟ್ಟೊಟ್ಟಿಗೆ ಕಲಿಯಬೇಕಾದಂತಹ ಪರಿಸ್ಥಿತಿ ಲಂಬಾಣಿ ಭಾಷಿಕರ ಮಕ್ಕಳಿಗೆ ಆರಂಭ ವಾಗುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವ ಲಂಬಾಣಿ ಭಾಷಿಕ ಮಕ್ಕಳು ಯಾವತ್ತು ಶಿಕ್ಷಣವನ್ನು ಪಡೆಯಲು ಪ್ರಾರಂಭಿಸಿದರೊ ಅಂದಿನಿಂದ ಇಂದಿನವರೆಗೂ ಕನ್ನಡ ಭಾಷೆ ಕಲಿಯುವಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಅಲ್ಲಲ್ಲಿ ಪತ್ರಿಕೆಗಳಲ್ಲಿ ಶಿಕ್ಷಕರುಗಳಿಂದ ಕೇಳಿ ಬರುತ್ತಲೇ ಇವೆ. ಇದಕ್ಕೆ ಸಂಬಂಧಪಟ್ಟ ಶಿಕ್ಷಣ ಇಲಾಖಾಧಿಕಾರಿಗಳು ಗಮನಹರಿಸದಿರುವುದು ವಿಷಾಧಕರ ಸಂಗತಿ. ಇಂತಹ ಸಂದರ್ಭದಲ್ಲಿ ಲಂಬಾಣಿ ಭಾಷಿಕ ಮಕ್ಕಳ ಕಲಿಕೆಯಲ್ಲಿನ ಸಮಸ್ಯೆಗಳ ಕುರಿತು ಅಧ್ಯಯನ ಮಾಡುವ ಅಗತ್ಯತೆ ಇದೆ. ಈ ಅಗತ್ಯತೆಯನ್ನು ಮನಗಂಡು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕನ್ನಡ ಭಾಷೆಯನ್ನು ಕುರಿತು ಅಧ್ಯಯನಗಳು ಬೇರೆ ಬೇರೆ ನೆಲೆಗಳಲ್ಲಿ ನಡೆದಿದ್ದರೂ ಕನ್ನಡ ರಚನೆ, ಬಳಕೆಯನ್ನು ವಿವರಿಸುವ ಕನ್ನಡದ ಉಪಭಾಷೆಗಳ ರಚನೆ, ಬಳಕೆಯನ್ನು ವಿವರಿಸುವ ಮತ್ತು ಹೊಸ ಸಾಧ್ಯತೆಗಳನ್ನು ಅನುಸರಿಸಿ ನಡೆದ ಅಧ್ಯಯನಗಳು ಕಡಿಮೆ ಎಂದೇ ಹೇಳಬೇಕು. ಹಾಗೆ ಕನ್ನಡ ಕಲಿಕಾ ವಲಯದ ಬಗ್ಗೆ ಹೆಚ್ಚಿನ ಅಧ್ಯಯನಗಳು ಮತ್ತು ಆ ಕುರಿತ ಆಸಕ್ತಿ ಕನ್ನಡ ಅಧ್ಯಯನ ಮಾಡುವವರಲ್ಲಿ ಕಡಿಮೆ. ಕನ್ನಡ ಶಾಲೆಗಳಲ್ಲಿ ಔಪಚಾರಿಕವಾಗಿ ಕಲಿಯುವವರೂ ಕೂಡ ಸಿದ್ಧ ಮಾದರಿಗಳನ್ನು ಉಪಯುಕ್ತ ವೆಂದು ನಂಬಿಕೊಂಡಿದ್ದಾರೆ. ಶಾಲೆಗಳಿಗೆ ಬರುವ ವಿದ್ಯಾರ್ಥಿಗಳು ಕನ್ನಡದ ಬಳಕೆಯ ಸಾಮರ್ಥ್ಯವನ್ನು ಈಗಾಗಲೇ ಪಡೆದುಕೊಂಡಿರುತ್ತಾರೆನ್ನುವ ಅಂಶ ಕನ್ನಡ ಮಾತೃಭಾಷಿಕ ಮಕ್ಕಳು ಮತ್ತು ಕನ್ನಡ ಭಾಷಿಕ ಪರಿಸರದಲ್ಲಿ ಜೀವಿಸುವ ಇತರೆ ಭಾಷಿಕ ಮಕ್ಕಳ ವಿಚಾರದಲ್ಲಿ ಸರಿ. ಆದರೂ ಇಂತಹ ಮಕ್ಕಳ ಕನ್ನಡ ಬಳಕೆಯ ಸಾಮರ್ಥ್ಯಗಳಲ್ಲಿ ಇರುವ ಸಾಮಾಜಿಕ ಮತ್ತು ಪ್ರಾದೇಶಿಕ ವ್ಯತ್ಯಾಸಗಳು ಕಲಿಕೆಯ ಮೇಲೆ ಪರಿಣಾಮವನ್ನು ಬೀರುತ್ತವೆ. ಆದರೆ ಕನ್ನಡ ಭಾಷಿಕ ಪರಿಸರದಿಂದ ದೂರ ಇರುವ ಲಂಬಾಣಿ ಭಾಷಿಕ ಮಕ್ಕಳು ಇತರೆ ಭಾಷಿಕ ಮಕ್ಕಳಂತೆ (ಉರ್ದು, ತೆಲುಗು ಭಾಷಿಕ ಮಕ್ಕಳು) ಕನ್ನಡ ಬಳಕೆಯ ಸಾಮರ್ಥ್ಯವನ್ನು ಪಡೆಯದೆ ಔಪಚಾರಿಕವಾಗಿ ಕನ್ನಡ ಭಾಷಿಕ ಮಕ್ಕಳಿಗೆ ಸರಿಸಮವಾಗಿ ಕಲಿಕೆ ಮತ್ತು ಬೋಧನೆ ನಡೆಯುತ್ತಿದೆ. ಇಂತಹ ಮಕ್ಕಳ ಕನ್ನಡ ಬಳಕೆಯ ಸಾಮರ್ಥ್ಯ ಇಲ್ಲದಿರುವ ಮತ್ತು ಅವರ ಸಾಮಾಜಿಕ, ಪ್ರಾದೇಶಿಕ

ಹಾಗೂ ಸಾಂಸ್ಕೃತಿಕ ವ್ಯತ್ಯಾಸಗಳು ಶಾಲಾ ತರಗತಿಗಳಲ್ಲಿ, ಬೋಧನಾ ವಿಧಾನಗಳಲ್ಲಿ ಮತ್ತು ಪಠ್ಯಕ್ರಮದಲ್ಲಿ ಪರಿಗಣನೆಗೆ ಒಳಗಾಗುವುದೇ ಇಲ್ಲ. ಈ ವ್ಯತ್ಯಾಸಗಳು ಕಲಿಕೆಯಲ್ಲಿ ನಿರ್ಣಾಯಕ ಪರಿಣಾಮಗಳನ್ನು ಬೀರುತ್ತವೆ. ಆದ್ದರಿಂದ ಶಾಲಾ ಪಠ್ಯಕ್ರಮ, ಪಠ್ಯ ಸಾಮಗ್ರಿ ಮತ್ತು ಬೋಧನೆ ವಿಧಾನಗಳನ್ನು ಕಲಿಕೆಗೆ ತಕ್ಕಂತೆ ಬದಲಾಯಿಸಿಕೊಳ್ಳಬೇಕಾದ ಅಗತ್ಯವಿದೆ. ಆದರೆ ಈ ದಿಕ್ಕಿನಲ್ಲಿ ಚಿಂತನೆಗಳು, ಪ್ರಯತ್ನಗಳು ನಡೆಯಬೇಕಾದ ಜರೂರು ಇದೆ.//

ಶಿಕ್ಷಣ ಮಾನವನ ಸರ್ವಾಂಗೀಣ ವಿಕಾಸಕ್ಕೆ ನಾಂದಿ ಹಾಡುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಶಿಕ್ಷಣ ವ್ಯಕ್ತಿಯ ಸನ್ಮಾರ್ಗ ಪಥಕ್ಕೆ ಕೊಂಡೊಯ್ಯಲು ಸಹಕಾರಿಯಾಗಿದೆ. ಪ್ರಾಥಮಿಕ ಶಿಕ್ಷಣದ ತಳಪಾಯ ವ್ಯಕ್ತಿಯ ಮೂಲಭೂತ ಕ್ರಿಯೆಯ ಒಡನಾಡಿ. ಈ ನಿಟ್ಟಿನಲ್ಲಿ ಜ್ಞಾನ ಶಾಖೆಗಳಲ್ಲಿ ಒಂದಾದ ಶಿಕ್ಷಣ ಆಧರಿಸಿರುವುದು ಭಾಷಾ ಕಲಿಕೆ ಮತ್ತು ಬೋಧನೆಯ ಮೇಲೆ. ಹಾಗಾಗಿ ಭಾಷಾ ಕಲಿಕೆ, ಬೋಧನೆ ಮತ್ತು ಶಿಕ್ಷಣ ಪರಸ್ಪರ ಸಂಬಂಧ ಹೊಂದಿವೆ. ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಕಲಿಕೆ ಮತ್ತು ಬೋಧನೆಗೆ ಮಹತ್ತರ ಸ್ಥಾನವಿದೆ. ಮಕ್ಕಳು ಯಾವುದೇ ವಿಷಯವನ್ನು ಕಲಿಯುವುದು ಅಥವಾ ಗ್ರಹಿಸುವುದು ಅವರವರ ಮಾತೃಭಾಷೆಯ ಮೂಲಕವೇ. ಭಾಷಾ ಕಲಿಕೆಯಲ್ಲಿ ಮಕ್ಕಳ ಮನೆಯ ಮತ್ತು ಅವರ ಸಾಮಾಜಿಕ ಪರಿಸರ ಪ್ರಭಾವ ಬೀರುತ್ತಲೇ ಇರುತ್ತದೆ. ಹೀಗಾಗಿ ಭಾಷಾ ಕಲಿಕೆಗೆ ಉತ್ತಮ ಪರಿಸರ ಮುಖ್ಯ. ಜೊತೆಗೆ ಮಕ್ಕಳಿಗೆ ಮಾತೃಭಾಷೆ ಮತ್ತು 'ಅನ್ಯ' ಭಾಷಾ ಕಲಿಕೆಯಲ್ಲಿ ಪರಿಪೂರ್ಣ ತಿಳುವಳಿಕೆ ಮೂಡಿಸುವಲ್ಲಿ ಶಿಕ್ಷಕರ ಜವಾಬ್ದಾರಿ ಗುರುತರವಾದುದು. ಹಾಗೆಯೇ ಒಂದು ದೇಶದ ಒಟ್ಟಾರೆ ಸಾಂಸ್ಕೃತಿಕ ಚರಿತ್ರೆ ಅರಿಯುವಲ್ಲಿ ಪಠ್ಯಗಳ ಪಾತ್ರ ಮಹತ್ವದ್ದು. ಕಲಿಕೆ ಮತ್ತು ಬೋಧನೆ ಪರಿಣಾಮಕಾರಿಯಾಗಬೇಕಾದರೆ ಪಠ್ಯ ಸಾಮಗ್ರಿ ಅವಶ್ಯಕ. ಶಾಲಾ ಆವರಣದಲ್ಲಿ ಪಠ್ಯಗಳೇ ಬೋಧನ ಸಾಮಗ್ರಿ. ಇಂತಹ ಪಠ್ಯಗಳನ್ನು ಆಧರಿಸಿ ಮಕ್ಕಳಿಗೆ ಪರಿಪೂರ್ಣ ಕಲಿಕೆ ನೀಡುವ ಸಂದರ್ಭದಲ್ಲಿ ಮಾತೃಭಾಷೆ ಮತ್ತು 'ಅನ್ಯ' ಭಾಷೆ ಕಲಿಕಾರ್ಥಿಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಕರ್ನಾಟಕದಲ್ಲಿ ಕನ್ನಡೇತರ ಮತ್ತು ಕನ್ನಡ ಭಾಷಿಕ ಪರಿಸರದಿಂದ ದೂರ ಇರುವ ಮಕ್ಕಳು ಕನ್ನಡ ಭಾಷೆ ಕಲಿಯುವಾಗ (ಗ್ರಹಿಕೆ, ಮಾತನಾಡುವಿಕೆ, ಓದುವಿಕೆ ಮತ್ತು ಬರವಣಿಗೆ) ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಂತಹ ಸಮಸ್ಯೆಗಳನ್ನು ಎದುರಿಸುವವರಲ್ಲಿ ಕರ್ನಾಟಕದಲ್ಲಿನ ಲಂಬಾಣಿ ಭಾಷಿಕ ಮಕ್ಕಳು ಪ್ರಮುಖರು. ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದ ಲಂಬಾಣಿ ಭಾಷೆಯನ್ನು ಮಾತೃಭಾಷೆಯಾಗಿ ಹೊಂದಿದ ಮಕ್ಕಳು, ಶೈಕ್ಷಣಿಕವಾಗಿ / ಔಪಚಾರಿಕವಾಗಿ ಕನ್ನಡ ಭಾಷೆಯನ್ನು ಪ್ರಥಮ ಭಾಷೆಯಾಗಿ ಶಾಲಾ ತರಗತಿಗಳಲ್ಲಿ ಕಲಿಯುತ್ತಿದ್ದಾರೆ. ಲಂಬಾಣಿ ಭಾಷಿಕ ಮಕ್ಕಳು ಶಾಲೆಗೆ ಬರುವ ಮುನ್ನ ಅನೌಪಚಾರಿಕವಾಗಿ ತನ್ನ ಮನೆ ಮತ್ತು ಸಾಮಾಜಿಕ ಪರಿಸರದಲ್ಲಿ ಕಲಿಯಬೇಕಾದ ಭಾಷೆಯ ಪ್ರಧಾನ ಕೌಶಲಗಳಾದ ಆಲಿಸುವಿಕೆ ಮತ್ತು ಮಾತನಾಡುವಿಕೆಯನ್ನು ಶಾಲಾ ಆವರಣದಲ್ಲೇ ಓದು ಮತ್ತು ಬರಹದ ಜೊತೆ ಜೊತೆಗೆ ಕಲಿಯಬೇಕಾಗುತ್ತದೆ. ಅಂದರೆ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಗೆ ತೆರೆದುಕೊಳ್ಳುವುದು ಶಾಲಾ

ಪರಿಸರದಲ್ಲಿ. ಅದು ಭಾಷಾ ಬೋಧಕರಿಂದಲೇ ಕನ್ನಡ ಭಾಷಾ ಕಲಿಕೆ ಆರಂಭವಾಗುತ್ತದೆ. ಹೀಗೆ ಅವರ ಮಾತೃಭಾಷೆಯಾದ ಲಂಬಾಣಿ ಭಾಷೆಯ ಪ್ರಭಾವ ಕಲಿಯುವ ಕನ್ನಡ ಭಾಷೆಯ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂಬುದು ಗಮನಿಸುವಂತಹ ಅಂಶ. ಪ್ರಸ್ತುತ ಪ್ರಬಂಧದಲ್ಲಿ ಶಾಲಾ ಆವರಣದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಕಲಿಯುವ ಸಂದರ್ಭದಲ್ಲಿ ಮಾಡುವ ವ್ಯತ್ಯಾಸ (ಓದು ಮತ್ತು ಬರವಣಿಗೆ)ಗಳನ್ನು ಮತ್ತು ಪ್ರಭಾವ ಬೀರುವ ಅಂಶಗಳನ್ನು ಮತ್ತು ಕಾರಣ, ಪರಿಹಾರೋಪಾಯಗಳನ್ನು ಕುರಿತು ಚರ್ಚಿಸುವುದು ಪ್ರಸ್ತುತ ಸಂಶೋಧನೆಯ ಪ್ರಮುಖ ಉದ್ದೇಶವಾಗಿದೆ.

ಭಾಷಾ ಬೋಧನೆ ಮತ್ತು ಕಲಿಕೆ

ಕರ್ನಾಟಕದಲ್ಲಿ ಬುಡಕಟ್ಟು ಸಮುದಾಯವಾದ ಲಂಬಾಣಿ ಮಕ್ಕಳು ಲಂಬಾಣಿಯನ್ನು ಮಾತೃಭಾಷೆಯಾಗಿ ಹೊಂದಿದ್ದು, ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿ ಶಿಕ್ಷಣವನ್ನು ಪಡೆಯುವರು. ಆದರೆ ಕರ್ನಾಟಕ ಸರ್ಕಾರ ಲಿಪಿ ಇಲ್ಲದ ಭಾಷಿಕ ಸಮುದಾಯಗಳ ಮಕ್ಕಳಿಗೆ ಪ್ರಾದೇಶಿಕ ಭಾಷೆಯಾದ ಕನ್ನಡ ಮಾಧ್ಯಮದ ಮೂಲಕ ಶಿಕ್ಷಣ ನೀಡಲು ಆದೇಶಿಸಿದೆ. ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಸಂಪೂರ್ಣವಾಗಿ ಕನ್ನಡ ಮಾಧ್ಯಮದ ಮೂಲಕ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುತ್ತಿದ್ದಾರೆ. ಕನ್ನಡ ಲಂಬಾಣಿ ಭಾಷಿಕ ಮಕ್ಕಳಿಗೆ ಎರಡನೆಯ ಮಾತೃಭಾಷೆ ಎಂದು ಪರಿಗಣಿಸಿ ಶಿಕ್ಷಣ ಇಲಾಖೆ ಹಾಗೂ ಪಠ್ಯ ರಚನಾ ಸಮಿತಿಯ ಭಾಷಾ ತಜ್ಞರು ಕನ್ನಡ ಮಾತೃಭಾಷಿಕ ಮಕ್ಕಳನ್ನು ಗಮನದಲ್ಲಿರಿಸಿ ರಚಿಸಿದ ಏಕ ಮಾದರಿಯ ಪಠ್ಯಪುಸ್ತಕಗಳನ್ನು ಲಂಬಾಣಿ ಭಾಷಿಕ ಮಕ್ಕಳಿಗೂ ಅದೇ ಪಠ್ಯಪುಸ್ತಕಗಳನ್ನು ನಿಗದಿ ಮಾಡಲಾಗಿದೆ. ಇಂತಹ ಸಂದರ್ಭದಲ್ಲಿ ಆ ಮಕ್ಕಳು ಕನ್ನಡವನ್ನು ಓದುವಾಗ ಮತ್ತು ಬರೆಯುವಾಗ ಎದುರಿಸುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನವನ್ನು ಶೈಕ್ಷಣಿಕವಾಗಿ ಹಿಂದುಳಿದ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಲಂಬಾಣಿ ಭಾಷಿಕ ಮಕ್ಕಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಮುಖ್ಯವಾಗಿ ಕಿರಿಯ ಪ್ರಾಥಮಿಕ ಅಂದರೆ ಒಂದನೆ ತರಗತಿಯಿಂದ ನಾಲ್ಕನೆ ತರಗತಿಯ ಕನ್ನಡ ಮಾಧ್ಯಮದಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳನ್ನು ಮಾತ್ರ ಗಮನದಲ್ಲಿರಿಸಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಭಾಷೆ ಮಾನವನ ಜೀವನದಲ್ಲಿ ಅವಿಭಾಜ್ಯ ಅಂಗ. ಮನುಷ್ಯನ ಎಲ್ಲ ವ್ಯವಹಾರಗಳಿಗೂ, ವಿಚಾರ ಗಳಿಗೂ ಅನಿವಾರ್ಯವೂ, ಸಮರ್ಪಕವೂ, ಆಕರ್ಷಕವೂ ಮತ್ತು ಪ್ರಯೋಜಕವೂ ಆದುದು ಭಾಷೆ. ಆದುದರಿಂದಲೇ ಭಾಷೆ ಮಾನವನಿಗೆ ಅಗತ್ಯವಾದ ಒಂದು ಸಂವಹನ ಮಾಧ್ಯಮ. ಜೊತೆಗೆ ಶಕ್ತಿಶಾಲಿ ಸಂಪರ್ಕ ಮಾಧ್ಯಮವೂ ಆಗಿದೆ. ಭಾಷೆಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಸ್ಥಾನವಿದೆ. ಇಂಥ ಭಾಷೆಯ ಪರಿಣಾಮಕಾರಿ ಬೋಧನೆಯಿಂದ ಉತ್ತಮ ಕಲಿಕೆ ಸಾಧ್ಯವಾಗುತ್ತದೆ. ಕಲಿಕೆಯು ಜೀವಿಗಳಲ್ಲಿ ನಡೆಯುವ ಒಂದು ಅನಿವಾರ್ಯ ಪ್ರಕ್ರಿಯೆ. ಆದ್ದರಿಂದಲೇ ಕಲಿಕೆಯು ಮನುಷ್ಯನ ಜೀವನ ಪರ್ಯಂತ ನಡೆಯುತ್ತಲೇ ಇರುತ್ತದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಬೋಧನೆ ಮತ್ತು ಕಲಿಕೆಗೆ ಮಹತ್ವದ ಸ್ಥಾನವಿದ್ದು, ಇದು ತನ್ನದೇ ಆದ ಉದ್ದೇಶವನ್ನು ಹೊಂದಿದೆ. ವಿವಿಧ ಶಿಕ್ಷಣ ನೀತಿಗಳ ಪ್ರಭಾವದಿಂದ ಶಿಕ್ಷಣದಲ್ಲಿ ಪದ್ಧತಿಗಳು ಕಾಲಕ್ಕೆ

[illegible]

ತಕ್ಕ ಹಾಗೆ ಬದಲಾಗುತ್ತಾ ಬಂದಿವೆ. ಹೀಗಾಗಿ ಆಧುನಿಕ ಶಿಕ್ಷಣ ಪದ್ಧತಿಗಳು ಪ್ರಾಚೀನ ಶಿಕ್ಷಣ ಪದ್ಧತಿಗಳಿಗಿಂತ ಭಿನ್ನವಾಗಿವೆ. ಜೊತೆಗೆ ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಹಲವಾರು ಬದಲಾವಣೆಗಳನ್ನು ಕಾಣಬಹುದಾದರೂ ಕನ್ನಡ ಭಾಷಿಕ ಪಠ್ಯಪುಸ್ತಕಗಳನ್ನು ಮತ್ತು ಕಲಿಕೆಯ ಪ್ರಕ್ರಿಯೆಗಳನ್ನು ಆಯಾ ಮಾತೃಭಾಷಿಕ, ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಬದಲಾವಣೆಗಳನ್ನು ತರುವ ಅಗತ್ಯತೆ ಇದೆ.

"ಭಾಷೆಯ 'ಕಲಿಕೆ' ಎಂದರೆ ಅದರ ಘಟಕಗಳಾದ ಧ್ವನಿ, ಪದ, ಪದಪುಂಜ ಮತ್ತು ವಾಕ್ಯಗಳ ಪರಿಣಾಮಕಾರಿ ಗ್ರಹಿಕೆ ಮತ್ತು ಬಳಕೆಯ ಪರಿಚಯ ಮಾಡಿಕೊಳ್ಳುವುದಾಗಿದೆ. ಇವು ಭಾಷೆಯ ನಾಲ್ಕು ಕೌಶಲಗಳಾದ ಕೇಳುವಿಕೆ, ಮಾತುಗಾರಿಕೆ, ಓದುಗಾರಿಕೆ ಮತ್ತು ಬರವಣಿಗೆಗಳ ರೂಪದಲ್ಲಿದೆ".[೧] ಈ ನಾಲ್ಕು ಕೌಶಲಗಳನ್ನು ಹಿನ್ನೆಲೆಯಾಗಿಸಿ ಕನ್ನಡ ಭಾಷಾ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಇಲ್ಲಿ ನಾವು ಕನ್ನಡ ಭಾಷೆಯ ಕಲಿಕೆಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಎದುರಿಸುವ ಸಮಸ್ಯೆಗಳು, ಅದರಿಂದಾಗುವ ವ್ಯತ್ಯಾಸಗಳು, ಅವುಗಳಿಗೆ ಕಾರಣ ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಿಸುವುದು ಸರಿ. "ಮಗುವು ಶಾಲೆಗೆ ಬರುವ ಮುನ್ನ ಅನೌಪಚಾರಿಕವಾಗಿ ತನ್ನ ನೆರೆ ಹೊರೆಯ ಪರಿಸರದ ಭಾಷಾ ರೂಪವನ್ನು ತನ್ನದಾಗಿಸಿಕೊಳ್ಳುವುದನ್ನು ಭಾಷಾ ಕಲಿಕೆಯ ಮೊದಲನೆಯ ಘಟ್ಟವೆಂದಲೂ, ಶಾಲೆಗೆ ಹಾಜರಾಗಿ ಶಿಕ್ಷಕರು, ಸಹಪಾಠಿಗಳು, ಪಠ್ಯಪುಸ್ತಕ ಮತ್ತು ಸಮಾಜದ ಪರಿಸರದ ಮೂಲಕ ಹಾಗೂ ಔಪಚಾರಿಕವಾಗಿ ಪಡೆಯುವ ಭಾಷಾ ಜ್ಞಾನವನ್ನು ಎರಡನೆಯ ಘಟ್ಟವೆಂತಲೂ ವಿಭಾಗಿಸಿಕೊಳ್ಳಬಹುದು".[೨] ಇಲ್ಲಿ ಲಂಬಾಣಿ ಭಾಷಿಕ ಮಗು ಮೊದಲನೆಯ ಘಟ್ಟದಲ್ಲಿ ತನ್ನ ಮಾತೃಭಾಷೆಯನ್ನು ತಿಳಿದಿರುತ್ತದೆ. ಅಲ್ಲದೆ ಲಂಬಾಣಿಗರು ಪ್ರತ್ಯೇಕವಾಗಿ ಕನ್ನಡ ಭಾಷಿಕ ಸಮಾಜದಿಂದ ದೂರವಾಗಿ ಬದುಕುತ್ತಿರುವ ಲಂಬಾಣಿ ಭಾಷಿಕ ಮಕ್ಕಳು ಲಂಬಾಣಿ ಭಾಷೆಯ ಹೊರತು ಕನ್ನಡ ಭಾಷೆಯ ಪರಿಚಯವಿರುವುದಿಲ್ಲ. ಆದರೆ ಕನ್ನಡ ಭಾಷಿಕ ಪರಿಸರದಲ್ಲಿ ಬದುಕುವ ಇತರೆ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಪರಿಚಯವಿರುತ್ತದೆ. ಎರಡನೆಯ ಘಟ್ಟದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಔಪಚಾರಿಕವಾಗಿ ಶಾಲೆಯ ತರಗತಿಯ ಕನ್ನಡ ಭಾಷಾ ಬೋಧನೆ ಮತ್ತು ಕಲಿಕೆ ನಡೆಯುತ್ತದೆ. ಇವೆರಡರ ನಡುವೆ ಸಂವಹನವಾಗಿ ಪಠ್ಯಪುಸ್ತಕ ಕೆಲಸ ಮಾಡುತ್ತದೆ. ಹೀಗೆ ಕಲಿಕೆ, ಬೋಧನೆ ಮತ್ತು ಪಠ್ಯಕ್ರಮ ಈ ಮೂರು ಅಂಗಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಿದಾಗಲೇ ಶೈಕ್ಷಣಿಕ ಗುರಿ ಮತ್ತು ಉದ್ದೇಶಗಳು ಈಡೇರುತ್ತವೆ.

ಕರ್ನಾಟಕ ಸರ್ಕಾರ ೧೯೮೬ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಎನ್.ಸಿ.ಇ.ಆರ್.ಟಿ ಸಂಸ್ಥೆಯ ಸಹಯೋಗದಲ್ಲಿ ಶೈಕ್ಷಣಿಕ ಕೊರತೆಗಳನ್ನು ತುಂಬಿಕೊಳ್ಳುವುದರ ಹಿನ್ನೆಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಪರಿಣಾಮ ಕಲಿಕೆಯ ದೃಷ್ಟಿಯಿಂದ ಕಲಿಕೆಯ ಕನಿಷ್ಟ ಮಟ್ಟದ ತತ್ವಗಳನ್ನು ಆಧರಿಸಿ ಪಠ್ಯಪುಸ್ತಕಗಳ

---

೧. ಭ. ಮಲ್ಲಿಕಾರ್ಜುನ, ಭಾಷಾ ಕಲಿಕೆ, ಪು. ೧

೨. ಅದೇ ಪು.೧

ರಚನೆಯನ್ನು ಅರಿತು ೧೯೯೫-೯೬ನೇ ವರ್ಷದಲ್ಲಿ ಕರ್ನಾಟಕ ಸರ್ಕಾರ ಕಲಿಕೆಯ ಕನಿಷ್ಠ ಸಾಮರ್ಥ್ಯಾಧಾರಿತ ಪಠ್ಯವಸ್ತುವನ್ನು ಮತ್ತು ಪಠ್ಯಪುಸ್ತಕಗಳನ್ನು ರಚಿಸಿ ಅನುಷ್ಠಾನಕ್ಕೆ ತರಲಾಯಿತು. ಅದೇ ರೀತಿ ಕರ್ನಾಟಕ ಸರ್ಕಾರ ೨೦೦೧-೦೨ನೇ ಸಾಲಿನಿಂದ ಬೋಧನೆ ಯಾವ ತೆರನಾಗಿರಬೇಕೆಂದು ನಿರ್ಣಯಿಸಿ ಚಟುವಟಿಕೆ ಯಾಧಾರಿತ ಬೋಧನೆ ಪರಿಣಾಮಕಾರಿ ಬೋಧನೆಯಾಗುವುದು ಎಂದು ಅರಿತು ಪ್ರಸ್ತುತ ಶಾಲೆಗಳಲ್ಲಿ ಚಟುವಟಿಕೆಯಾಧಾರಿತ ಭಾಷಾ ಬೋಧನಾ ವಿಧಾನವನ್ನು ಅಳವಡಿಸಿದೆ. ಪ್ರಸ್ತುತ ಪಠ್ಯಪುಸ್ತಕಗಳು ಹೊಸ ಯುಗದ ಆಕಾಂಕ್ಷೆಗಳನ್ನು ಹೊತ್ತು ಇತ್ತೀಚಿನ ಶೈಕ್ಷಣಿಕ ಸಂಶೋಧನೆಗಳನ್ನು ಮೈಗೂಡಿಸಿಕೊಂಡು ಮಕ್ಕಳ ಮನೋವಿಕಾಸಕ್ಕೆ ತಕ್ಕಂತೆ ಕಲಿಕೆಯ ಪ್ರಮಾಣವನ್ನು ಗಣನೀಯ ರೀತಿಯಲ್ಲಿ ಹೆಚ್ಚಿಸುವ, ಜೀವನ ಮೌಲ್ಯಗಳನ್ನು ಅರಿಯುವ ಮಹತ್ವದ ಉದ್ದೇಶವಿಟ್ಟುಕೊಂಡು ಭಾಷಾ ಬೋಧನೆಯಲ್ಲಿ ಬರಹಭಾಷೆಗೆ ಒತ್ತುನೀಡಿದೆ. ಈ ಪಠ್ಯಪುಸ್ತಕಗಳು ಕನಿಷ್ಟ ಕಲಿಕೆ ಮತ್ತು ಚಟುವಟಿಕೆ ಆಧಾರಿತ ಸಂತಸ ಕಲಿಕೆ ತರುತ್ತದೆ ಎಂದು ಹೇಳಲಾಗಿದೆ. ಅಷ್ಟೇ ಅಲ್ಲದೆ ಪಠ್ಯವಸ್ತು ಮಕ್ಕಳ ಕಲಿಕೆಯಲ್ಲಿನ ಸಾಮರ್ಥ್ಯವನ್ನು ಬೆಳೆಸಲು ಸೂಕ್ತ ಕಲಿಕೆಯ ಅನುಭವ ಗಳನ್ನು ಚಟುವಟಿಕೆಗಳ ಮೂಲಕ ಬೋಧನೆ ಮಾಡಲು ಹೇಳಿದೆ. ಮೇಲೆ ತಿಳಿಸಿದಂತೆ “೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೂಚಿತವಾಗಿರುವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಾಸನಕ್ಕೆ ಅಗತ್ಯವಾದ ಕೇಂದ್ರ ತತ್ವ ೧೦ ಮೂಲಭೂತ ಅಂಶ ಮತ್ತು ೮೪ ಮಾನವೀಯ ಮೌಲ್ಯಗಳನ್ನು ಆಧರಿಸಿ ಪಠ್ಯವಸ್ತು ತಯಾರಿಸ ಲಾಗಿದೆ. ಅಷ್ಟೇ ಅಲ್ಲದೆ ಪಠ್ಯವಸ್ತುವನ್ನು ಶಿಶುಕೇಂದ್ರಿಕೃತವಾಗುವಂತೆ ರಚಿಸಲಾಗಿದೆ ಎಂದು ಹೇಳಿದೆ”.[೩] ಇಷ್ಟೆಲ್ಲ ಮಹತ್ವದ ಅಂಶಗಳನ್ನು ಒಳಗೊಂಡರೂ ಕೂಡ ನಮ್ಮ ಭಾಷಾ ಪಠ್ಯಪುಸ್ತಕಗಳನ್ನು ಆಯಾ ಮಾತೃಭಾಷಿಕ, ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ಅಂಶಗಳ ಹಿನ್ನಲೆಯಲ್ಲಿ ಪಠ್ಯರಚನೆಯ ಅಗತ್ಯತೆ ಇದೆ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಪಠ್ಯಪುಸ್ತಕಗಳಲ್ಲಿ ಸಮಗ್ರ ಬದಲಾವಣೆ ಆಗಬೇಕಾಗಿದೆ ಎಂಬ ಅಂಶ ಗಮನಾರ್ಹವಾದುದು.

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಒಟ್ಟಾರೆ ಶೈಕ್ಷಣಿಕ ಗುರಿ ಮತ್ತು ಉದ್ದೇಶಗಳು ಈಡೇರ ಬೇಕಾದರೆ ಕಲಿಕೆ, ಬೋಧನೆ ಮತ್ತು ಪಠ್ಯಕ್ರಮ ಈ ಮೂರು ಅಂಶಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಸಾಧ್ಯ. ವಿದ್ಯಾರ್ಥಿಗಳ ಕಲಿಕೆ ನಿರಂತರವಾಗಿ ನಡೆಯುವ ಕಾರ್ಯವಾಗಿರುವುದರಿಂದ ಶಿಕ್ಷಕರು ಸೂಕ್ತಬೋಧನಾ ಉದ್ದೇಶಗಳಿಗನುಣವಾಗಿ ಪಠ್ಯಕ್ರಮದ ತಂತ್ರಗಳನ್ನು ಅನುಸರಿಸಲಾಗುತ್ತದೆ. ಆದರೆ ಇಲ್ಲಿ ಪಠ್ಯದಲ್ಲಿ ಇರುವ ಸಿದ್ಧ ಮಾದರಿ ಹಾಗೂ ಶಿಷ್ಟ ಭಾಷೆಯ ಅಂಶಗಳನ್ನೇ ಮಗುವಿಗೆ ಹೇಳಿ ಪರಿಣಾಮಕಾರಿ ಕಲಿಕೆ ಮಾಡಲಾಗುವುದಿಲ್ಲ. ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಮತ್ತು ಇತರ ಭಾಷಿಕ ಮಕ್ಕಳಿಗೆ ಪ್ರಸ್ತುತ ಬೋಧನೆ ಮತ್ತು ಕಲಿಕೆ ಯಶಸ್ವಿಯಾಗದಿರುವುದನ್ನು ನೋಡಬಹುದು. ಈ ರೀತಿ ಭಾಷಾ ಕಲಿಕೆಯಲ್ಲಿ ಹಿಂದುಳಿಯಲು ಕಾರಣಗಳನ್ನು ಅವಲೋಕಿಸಿದಾಗ ಪರಿಣಾಮಕಾರಿ ಬೋಧನೆ ಆಗದಿರುವುದು, ಅಗತ್ಯವಾದ ಸೂಕ್ತ ಬೋಧನಾ ವಿಧಾನಗಳನ್ನು ಅನುಸರಿಸ

---


೩. ೨೦೦೧೦೨ರ ಪಠ್ಯಪುಸ್ತಕ ರಚನಾ ನಿರ್ದೇಶನಾಲಯದ ಆದೇಶ

ದಿರುವುದು ಪಠ್ಯಪುಸ್ತಕಗಳ ಹೊರೆ ಈ ಎಲ್ಲಾ ಅಂಶಗಳನ್ನು ಮಕ್ಕಳಿಗೆ ಮತ್ತು ಬೋಧಕರಿಗೆ ಸಮಸ್ಯೆಯಾಗಿ ಕಾಡುತ್ತಿರುವುದನ್ನು ಗಮನಿಸಬಹುದು.

ಬೋಧನೆ ಒಂದು ಕಲೆ. ಸ್ವಯಂ ಆಸಕ್ತಿ, ಅಭ್ಯಾಸ ಹಾಗೂ ಬೋಧನಾ ಸೂಕ್ಷ್ಮಗಳನ್ನು ಕರಗತ ಮಾಡಿಕೊಳ್ಳದ ಹೊರತು ಪರಿಣಾಮಕಾರಿ ಬೋಧಕನಾಗುವುದು ಅಸಾಧ್ಯ. ಇಂದಿನ ಶಿಕ್ಷಣ ಕ್ಷೇತ್ರದಲ್ಲಿ ಪರಿಣಾಮಕಾರಿ ಬೋಧನೆ ಎಂದರೆ, ಇರುವ ವಿಷಯ ವಸ್ತುವನ್ನು ಅಧ್ಯಾಪಕನೊಬ್ಬ ತನಗೆ ಬೇಕಿರುವ ಪರಿಕರಗಳನ್ನು ಬಳಸಿಕೊಂಡು ತರಗತಿಯಲ್ಲಿ ತನಗೆ ಬೇಕಾದಂತೆ ಪ್ರಸ್ತುತಪಡಿಸುವ ಕಾರ್ಯ ಎಂದು ತಿಳಿಯಲಾಗಿದೆ. ಆದರೆ ಶಿಕ್ಷಣ ರಂಗದಲ್ಲಿ ಪರಿಣಾಮಕಾರಿ ಬೋಧನೆಗೆ ಅವಶ್ಯವಾಗಿ ಬೇಕಿರುವ ಧ್ವನಿಯ ಕುರಿತು ಚರ್ಚೆ ನಡೆಯಬೇಕಾಗಿದೆ.

ವಿದ್ಯಾರ್ಥಿಗಳ ಕಲಿಕೆಗೂ ಮತ್ತು ಶಿಕ್ಷಕರ ಬೋಧನೆಗೂ ನೇರವಾದ ಸಂಬಂಧವಿದೆ. ಬೋಧನೆಯು ಸೂಕ್ತ ರೀತಿಯಲ್ಲಿ ಗುರಿಯನ್ನು ತಲುಪಿದೆ ಎಂದು ನಿರ್ಧರಿಸಬೇಕಾದರೆ, ಬೋಧಿಸಿದ ವಿದ್ಯಾರ್ಥಿಯ ಕಲಿಕೆಯ ಫಲಿತಾಂಶವನ್ನು ಅವಲಂಬಿಸಿರುತ್ತದೆ. ಆದ್ದರಿಂದ ಬೋಧನೆ ಮತ್ತು ಕಲಿಕೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಒಬ್ಬ ಶಿಕ್ಷಕನ ಬೋಧನೆ ಎಷ್ಟು ಪರಿಣಾಮಕಾರಿಯಾಗಿದೆ ಅಥವಾ ಆಗಿಲ್ಲ ಎಂಬುದನ್ನು ವಿದ್ಯಾರ್ಥಿಗಳ ಕಲಿಕೆಯಿಂದ ನಿರ್ಧರಿತವಾಗುತ್ತದೆ. ಆದರೆ ಕಲಿಕೆ ಪರಿಣಾಮಕಾರಿಯಾಗಿಲ್ಲ ಎಂದರೆ ಇಲ್ಲಿ ಏನೋ ಸಮಸ್ಯೆ ಇದೆ ಎಂದರ್ಥ.

ಬೋಧನೆಯ ಮುಖ್ಯ ಗುರಿ ವಿದ್ಯಾರ್ಥಿಗಳಲ್ಲಿ ಅಪೇಕ್ಷಣೀಯ ಬದಲಾವಣೆಯನ್ನುಂಟು ಮಾಡುವುದೇ ಆಗಿದೆ. ಆದ್ದರಿಂದ ಶಿಕ್ಷಕರು ಬೋಧನೆ ಕಲಿಕೆಯ ಉದ್ದೇಶಗಳನ್ನು ಅರಿತಿರಬೇಕು. ಶಿಕ್ಷಕ ಯಾವ ವಿಷಯಗಳನ್ನೇ ಬೋಧಿಸಲಿ, ಅವರಿಗೆ ಆ ವಿಷಯದ ಸಾಮಾನ್ಯ ಹಾಗೂ ನಿರ್ದಿಷ್ಟ ಗುರಿಗಳ ಅರಿವು ಇರಬೇಕು. ಅದಕ್ಕಾಗಿ ಪಠ್ಯಕ್ರಮವನ್ನು ಬಳಸಿಕೊಂಡು ಬೋಧನೆ ಮಾಡಲಾಗುತ್ತದೆ. ಆದ್ದರಿಂದ ಕಲಿಕೆಯು ಬೋಧನೆಯನ್ನು ಅವಲಂಬಿಸಿರುವಂತೆಯೇ ಬೋಧನೆಯು ಪಠ್ಯಕ್ರಮವನ್ನು ಅವಲಂಬಿಸಿದೆ. ಪಠ್ಯಕ್ರಮ ವಿದ್ಯಾರ್ಥಿಗಳ ಸಮರ್ಪಕ ಕಲಿಕೆಗೆ ಮತ್ತು ಶಿಕ್ಷಕರ ಬೋಧನೆಗೆ ಮಾರ್ಗದರ್ಶಿಯಾಗಿದೆ. ವಿವಿಧ ಭಾಷಿಕ ಮಕ್ಕಳ ಮಾನಸಿಕ ಮತ್ತು ಪರಿಸರವನ್ನು ಪರಿಗಣಿಸಿ ಕಲಿಕೆಯ ಸ್ವರೂಪ ಮತ್ತು ಬೋಧನೆಯ ಉದ್ದೇಶಗಳು ಮತ್ತು ಪಠ್ಯವಸ್ತು ಬದಲಾವಣೆ ಮಾಡುವ ಅಗತ್ಯತೆ ಇದೆ.



ಈ ಮೇಲಿನ ತ್ರಿಕೋನ ಆಕೃತಿಯನ್ನು ನೋಡಿದರೆ ಕಲಿಕೆ, ಬೋಧನೆ, ಪಠ್ಯಕ್ರಮ ಈ ಮೂರು ಪೂರಕ ಅಂಶಗಳಾಗಿ ಪರಸ್ಪರ ಸಂಬಂಧ ಹೊಂದಿವೆ. ಹಾಗೆಯೇ ಮಗುವನ್ನು ಕೇಂದ್ರವಾಗಿರಿಸಿಕೊಂಡು ಕಲಿಕೆ ಬೋಧನೆ ಮತ್ತು ಪಠ್ಯ ವಸ್ತುವನ್ನು ಪ್ರಸ್ತುತ ಸಂದರ್ಭದಲ್ಲಿ ಅಳವಡಿಸಲಾಗಿದೆ ಎಂಬುದನ್ನು ಗಮನಿಸಬಹುದು. ಆದರೆ ಮಗುವಿನ ಕೇಂದ್ರಿತ ಶಿಕ್ಷಣ ನೀಡುವುದರಿಂದ ಕಲಿಕೆ ಸುಗಮವಾಗುವುದಿಲ್ಲ. ಬದಲಾಗಿ ವಿವಿಧ ಸ್ತರದ ಭಾಷಿಕ ಮಕ್ಕಳ ಮಾನಸಿಕ, ಬೌದ್ಧಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಮುಖ್ಯವಾಗಿರಿಸಿಕೊಂಡು ಶಿಕ್ಷಣದ ಪಠ್ಯ ವಸ್ತುವನ್ನು ಮನೋವೈಜ್ಞಾನಿಕವಾಗಿ ಅಳವಡಿಸಿದಾಗ ಮಾತ್ರ ಸುಗಮವಾದ ಕಲಿಕೆ ಸಾಧ್ಯವಾಗಬಹುದು. ಪ್ರಸ್ತುತ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಮಗು, ಶಿಕ್ಷಕ ಮತ್ತು ಪಠ್ಯ ಈ ಮೂರು ವಿಷಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ. ಕನ್ನಡವನ್ನು ಬಿಟ್ಟು ಇತರೆ ಭಾಷಿಕ ಮಾಧ್ಯಮದಲ್ಲಿ ಅಭ್ಯಾಸ ಮಾಡುವ ಮಕ್ಕಳು ಕನ್ನಡವನ್ನು ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಕಲಿಯಲಾಗುತ್ತದೆ. ಇದಕ್ಕೆ ಪ್ರತ್ಯೇಕವಾದ ದ್ವಿತೀಯ ಭಾಷಾ ಬೋಧನ ವಿಧಾನಗಳನ್ನು ಅನುಸರಿಸಲಾಗುತ್ತದೆ. ಇಲ್ಲಿಯೂ ಸಮಸ್ಯೆಗಳು ಇಲ್ಲದಿಲ್ಲ. ಆದರೆ ಲಿಪಿ ಇಲ್ಲದ ಇತರ ಭಾಷಿಕ ಮಕ್ಕಳು ಅಂದರೆ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲಿಯೇ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಸಲಾಗುತ್ತಿದೆ. ಇಲ್ಲಿ ಕನ್ನಡ ಮಾತೃ ಭಾಷಿಕ ಮಕ್ಕಳಂತೆ ಈ ಮಕ್ಕಳನ್ನು ಪರಿಗಣಿಸಿ ಮಾತೃಭಾಷೆಯ ಬೋಧನಾ ವಿಧಾನಗಳನ್ನೇ ಬಳಸಲಾಗುತ್ತಿದೆ. ಪದ್ಯ, ಗದ್ಯ ಮತ್ತು ವ್ಯಾಕರಣಗಳಂತಹ ವಿಷಯಗಳನ್ನು ಬೋಧನೆ ಮಾಡುವಾಗ ಒಂದೇ ವಿಧಾನವನ್ನು ಬಳಸದೆ ವಿವಿಧ ವಿಧಾನಗಳನ್ನು ಅನುಸರಿಸಿ ಕಲಿಕೆ ಮಾಡಲಾಗುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ೮ ಹಂತಗಳನ್ನು ಒಳಗೊಂಡಿರುವ ಚೈತನ್ಯಾಧಾರಿತ ಬೋಧನಾ ಪದ್ಧತಿಗಳನ್ನು ಸೃಜನಶೀಲತೆ ಮತ್ತು ಚಟುವಟಿಕೆಯಾಧಾರಿತವಾಗಿ ಅಳವಡಿಸಲಾಗಿದೆ. ಅಲ್ಲದೆ ದೃಶ್ಯ, ಶ್ರವ್ಯ ಉಪಕರಣಗಳನ್ನು ಉಪ ಯೋಗಿಸಿ ಪರಿಣಾಮಕಾರಿಯಾಗಿ ಬೋಧನೆ ಮಾಡುವಂತೆ ಶಿಕ್ಷಕರಿಗೆ ತರಬೇತಿಗಳನ್ನು ನೀಡಲಾಗುತ್ತಿದೆ. ಆದರೆ ಶಿಕ್ಷಕರು ಮಕ್ಕಳ ವಯೋಮಾನ ಮತ್ತು ಮಾನಸಿಕ ಸಾಮರ್ಥ್ಯವನ್ನು ಅರಿತು ಕಲಿಕೆಗೆ ಅನುಕೂಲ ವಾಗುವ ಸುಲಭ ವಿಧಾನಗಳ ಮೂಲಕ ಬೋಧನೆ ಮಾಡಿದಾಗ ಮಾತ್ರ ಕಲಿಕೆ ಯಶಸ್ವಿಯಾಗುತ್ತದೆ.

ಶೈಕ್ಷಣಿಕವಾಗಿ ಪಠ್ಯಕ್ರಮ ಶಿಕ್ಷಣದ ಗುರಿ ಮತ್ತು ಉದ್ದೇಶಗಳನ್ನು ಯಶಸ್ವಿಗೊಳಿಸುವಲ್ಲಿ ನೆರವಾಗುವ ಪ್ರಮುಖ ಸಾಧನವಾಗಿದೆ. ಪಠ್ಯಕ್ರಮ ವಿದ್ಯಾರ್ಥಿಗಳ ಸಮರ್ಪಕ ಕಲಿಕೆಗೆ ಮತ್ತು ಶಿಕ್ಷಕರ ಬೋಧನೆಗೆ ಮಾರ್ಗದರ್ಶಿಯಾಗಿದೆ. ಇಂತಹ ಪಠ್ಯಕ್ರಮವೂ ಮಕ್ಕಳ ಕಲಿಕೆಯಲ್ಲಿ ಹಿಂದುಳಿವಿಕೆಗೆ ಕಾರಣವಾಗುವುದು ಪಠ್ಯಕ್ರಮವೂ ಸಹ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಪ್ರಸ್ತುತ ಸಂದರ್ಭದಲ್ಲಿರುವ ಪಠ್ಯಕ್ರಮಗಳನ್ನು ಕನ್ನಡ ಭಾಷಿಕ ಮಕ್ಕಳನ್ನು ಗಮನದಲ್ಲಿರಿಸಿ ರಚಿಸಲಾಗಿದೆ. ಆದರೆ 'ಅನ್ಯ'ಭಾಷಿಕ ಮಕ್ಕಳಾದ ಮತ್ತು ಕನ್ನಡ ಭಾಷಿಕ ಪರಿಸರದಿಂದ ದೂರವಿರುವ ಲಂಬಾಣಿ ಮಕ್ಕಳ ವಯೋಮಾನ ಮತ್ತು ಮಾನಸಿಕ ಸಾಮರ್ಥ್ಯಕ್ಕೆ ತಕ್ಕಂತೆ ಮಕ್ಕಳು ವಾಸಿಸುವ ಪರಿಸರದ ಮತ್ತು ಅವರ ಸಾಂಸ್ಕೃತಿಕ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಪಠ್ಯಪುಸ್ತಕವನ್ನು ಇಂಥ ಮಕ್ಕಳು ಸರಳವಾಗಿ ಕಲಿಯುವಂತೆ ರಚಿಸಬೇಕು. ಆದರೆ

ಪ್ರಸ್ತುತ ಸಂದರ್ಭದಲ್ಲಿರುವ ಪಠ್ಯಪುಸ್ತಕಗಳು ಶಿಷ್ಟ ಸಂಸ್ಕೃತಿಯ ಮತ್ತು ಶಿಷ್ಟಭಾಷೆಯ ಸಿದ್ಧ ಮಾದರಿಯನ್ನು ಒಳಗೊಂಡ ಕಾರಣ ಕನ್ನಡ ಭಾಷೆಯನ್ನು ಆಲಿಸುವ ಮತ್ತು ಮಾತನಾಡುವ ಕೌಶಲವಿಲ್ಲದ ಲಂಬಾಣಿ ಭಾಷಿಕ ಮಕ್ಕಳು ಒಂದು ರೀತಿಯ ಒತ್ತಡಕ್ಕೆ ಒಳಗಾಗುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಕಲಿಕೆ-ಬೋಧನೆಯ ಗುಣಮಟ್ಟವನ್ನು ಮೌಲೀಕರಿಸುವ ಸದುದ್ದೇಶದಿಂದ ಕಲಿಕೆಯ ಕನಿಷ್ಠ ಮಟ್ಟಗಳ ಅನ್ವಯ "ಭಾಷಾಕಲಿಕೆಯಲ್ಲಿ ಹೊಸತನ ತರಬೇಕೆಂಬ ದೃಷ್ಟಿಯಿಂದ ರ, ಗ, ಸ, ದ, ಅ ಅಕ್ಷರಗಳ ಮೂಲಕ ಪದರಚನೆ ಮಾಡಲು ಅನುಕೂಲವಾಗುವಂತೆ ಸಾಮರ್ಥ್ಯಧಾರಿತ ರೀತಿಯಲ್ಲಿ ಭಾಷಾ ಪಠ್ಯವಸ್ತುವನ್ನು ಬದಲಾಯಿಸಲಾಗಿದೆ".[೪] ಇದಕ್ಕೆ ಸಂಬಂಧಿಸಿದಂತೆ ಶಿಕ್ಷಕರಿಗೆ ಚೈತನ್ಯಾಧಾರಿತ ತರಬೇತಿ, ಚಟುವಟಿಕೆ ಆಧಾರಿತ ಬೋಧನೆ, ರಂಗಕಲೆಯನ್ನು ಅಳವಡಿಸಿ ಬೋಧನೆ ಮಾಡಲು ಹಲವಾರು ರೀತಿಯಲ್ಲಿ ತರಬೇತಿ ಕೊಡಲಾಗಿದೆ. ತರಬೇತಿ ಪಡೆದಂತೆ ಶಿಕ್ಷಕರು ಶ್ರಮವಹಿಸಿ ಮಕ್ಕಳಿಗೆ ಬೋಧನೆ ಮಾಡಿದರೆ ತಕ್ಕಮಟ್ಟಿಗೆ ಮಕ್ಕಳ ಕಲಿಕೆಯಲ್ಲಿ ಬದಲಾವಣೆಯನ್ನು ಕಾಣಬಹುದು. ಆದರೆ ಶಿಕ್ಷಕರು ಬೋಧನೆಯಲ್ಲಿ ಆದ ಹಲವಾರು ರೀತಿಯ ಬದಲಾವಣೆ ಯನ್ನು ತಿಳಿದುಕೊಂಡರೂ ಬಹುತೇಕ ಶಿಕ್ಷಕರು ಮಕ್ಕಳ ಮಾನಸಿಕ ಸಾಮರ್ಥ್ಯವನ್ನು ಅರಿತುಕೊಳ್ಳದೆ ಮತ್ತೆ ಸಾಂಪ್ರದಾಯಿಕ ವಿಧಾನಗಳ ಮೂಲಕ ಬೋಧನೆ ಮಾಡುವುದನ್ನು ನಾವು ಕಾಣಬಹುದಾಗಿದೆ.

ಒಟ್ಟಾರೆ ಅನ್ಯಭಾಷಿಕ ಮಕ್ಕಳ ಕನ್ನಡ ಭಾಷಾ ಕಲಿಕೆ ಪರಿಣಾಮಕಾರಿಯಾಗಬೇಕಾದರೆ ಬೋಧನಾ ವಿಧಾನಗಳು ಮತ್ತು ಪಠ್ಯವಸ್ತುಗಳಲ್ಲಿ ಬದಲಾವಣೆ ಅಗತ್ಯವಾಗಿ ಆಗಬೇಕಾಗಿದೆ. ಅಂದರೆ ಮಕ್ಕಳ ಭಾಷಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಭಾಷಾ ತಜ್ಞರಿಂದ ಪಠ್ಯವಸ್ತು ರಚನೆ ಗೊಳ್ಳಬೇಕು. ಹಾಗೂ ಇಂಥ ಮಕ್ಕಳ ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯಕ್ಕನುಗುಣವಾಗಿ ಪರಿಣಾಮಕಾರಿ ಯಾದ ಹೊಸ ಹೊಸ ಬೋಧನಾ ವಿಧಾನಗಳನ್ನು ಅಳವಡಿಸಿ ಪ್ರಾಯೋಗಿಕವಾಗಿ ಮಕ್ಕಳ ಕಡೆಯಿಂದ ಮಾಡಿಸಿದಾಗ ಮಾತ್ರ ನಿರೀಕ್ಷಿತ ಗುಣಮಟ್ಟದ ಕಲಿಕೆ ಸಾಧ್ಯವಾಗುತ್ತದೆ.

ಕನ್ನಡ ಭಾಷಾ ಬೋಧನೆಯ ಗುರಿಗಳು

ಭಾಷಾ ಬೋಧನೆಯ ಗುರಿ ಎಂದರೆ ಆ ಭಾಷೆಯಲ್ಲಿ ಸಾಮರ್ಥ್ಯವನ್ನು ಬೆಳೆಸುವುದು. ಯಾವುದೇ ಮಗು ತನ್ನ ಮನೆಯ ಮತ್ತು ಸುತ್ತ ಮುತ್ತಲಿನ ಪರಿಸರದ ಪ್ರಭಾವದಿಂದ ಆಲಿಸುವ ಮಾತನಾಡುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತದೆಯಾದರೂ ಅದೇ ಪರಿಪೂರ್ಣವೆಂದು ಹೇಳಲಾಗದು. ಏಕೆಂದರೆ ಭಾಷೆಯಲ್ಲಿ ಸಾಮರ್ಥ್ಯಗಳನ್ನು ಗಳಿಸುತ್ತಾ ಹೋದಂತೆಲ್ಲಾ ಕಲಿಯಬೇಕಾದುದು ಉಳಿದೇ ಇರುತ್ತದೆ. ಅಂದರೆ ಭಾಷಾ ಸಾಮರ್ಥ್ಯ ಬೆಳೆಸಬೇಕಾದರೆ ಭಾಷೆಯ ಮೂಲ ಕೌಶಲಗಳಾದ ಆಲಿಸುವಿಕೆ, ಮಾತು ಓದು, ಬರಹ ಮೊದಲಾದ ಸಾಮರ್ಥ್ಯಗಳು ಸಮತೋಲನವಾಗಿ ಬೆಳೆದು ಬಂದರೆ ಮಾತ್ರ ಆ ಭಾಷೆಯಲ್ಲಿ

೪. ಟಿ.ಎಂ. ಕುಮಾರ, ಪ್ರಾಥಮಿಕ ಶಿಕ್ಷಣದ ಒಂದು ಚರ್ಚೆ, ಪು. ೨೫

ಮಗುವಿಗೆ ಸಾಮರ್ಥ್ಯ ಬೆಳೆದಿದೆ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಔಪಚಾರಿಕ ಶಿಕ್ಷಣದಲ್ಲಿ ಮಕ್ಕಳಲ್ಲಿ ಕನ್ನಡ ಭಾಷಾ ಸಾಮರ್ಥ್ಯಗಳನ್ನು ಬೆಳೆಸಲು ಈ ಕೆಳಗಿನ ಹಲವಾರು ಗುರಿಗಳನ್ನು ಹೊಂದಿದೆ.

* ಮಕ್ಕಳಲ್ಲಿ ಆಲಿಸುವ ಮತ್ತು ಅರ್ಥಗ್ರಹಿಕೆಯ ಸಾಮರ್ಥ್ಯ ಬೆಳೆಸುವುದು.
* ವಿದ್ಯಾರ್ಥಿಗಳಲ್ಲಿ ಮೌಖಿಕ ಮತ್ತು ಲಿಖಿತ ಅಭಿವ್ಯಕ್ತಿಯ ಸಾಮರ್ಥ್ಯ ಬೆಳೆಸುವುದು.
* ಓದುಗಾರಿಕೆಯ ಸಾಮರ್ಥ್ಯ ಬೆಳೆಸುವುದು.
* ವಾಕ್ಯ ಪ್ರಬಂಧಗಳನ್ನು ಅರ್ಥಮಾಡಿಕೊಂಡು, ಪದಸಂಪತ್ತನ್ನು ವೃದ್ಧಿಸಿಕೊಂಡು, ಉಚ್ಚಾರಣೆಯನ್ನು ಸ್ಪಷ್ಟಗೊಳಿಸಿಕೊಂಡು, ಭಾಷೆಯನ್ನು ದೋಷರಹಿತವಾಗಿ, ನಿಖರವಾಗಿ, ಪರಿಣಾಮಕಾರಿಯಾಗಿ ಬೆಳೆಸುವ ಸಾಮರ್ಥ್ಯವನ್ನು ಹೆಚ್ಚಿಸುವುದು.
* ಸೌಂದರ್ಯ ಪ್ರಜ್ಞೆ, ಸ್ವಂತಿಕೆ, ಕಲ್ಪನೆ ಮತ್ತು ಸೃಜನಾತ್ಮಕ ಶಕ್ತಿಯನ್ನು ಬೆಳೆಸುವುದು.
* ಕನ್ನಡ ವ್ಯಾಕರಣವನ್ನು ಪರಿಚಯಿಸುವುದು.
* ತಾರ್ಕಿಕ ಪ್ರಜ್ಞೆ ಮತ್ತು ವಿಮರ್ಶಾತ್ಮಕ ಕೌಶಲಗಳನ್ನು ಬೆಳೆಸುವುದು.
* ಸಾಹಿತ್ಯಾಭಿರುಚಿಯನ್ನುಂಟು ಮಾಡುವುದು.
* ನಾಡು-ನುಡಿ, ಸಂಸ್ಕೃತಿಯ ಬಗೆಗೆ ಆತ್ಮೀಯತೆ, ಅಭಿಮಾನವನ್ನು ಅಭಿವೃದ್ಧಿ ಗೊಳಿಸುವುದು.
* ರಸಾನುಭವವನ್ನುಂಟು ಮಾಡುವುದು.
* ಕ್ರಿಯಾತ್ಮಕ ಶಿಕ್ಷಣದ ಜ್ಞಾನ ಪಡೆಯುವುದು.
* ಜೀವನ ಮೌಲ್ಯಗಳನ್ನು ಬೆಳೆಸುವುದು.
* ಮಾತನಾಡುವಾಗ, ಓದುವಾಗ, ಬರೆಯುವಾಗ, ಅಕ್ಷರಗಳಲ್ಲಿ ವ್ಯತ್ಯಾಸಕ್ಕನುಗುಣವಾಗಿ ಅರಿತು ತಪ್ಪಿಲ್ಲದಂತೆ ಉಪಯೋಗಿಸುವ ಸಾಮರ್ಥ್ಯ ಬೆಳೆಸುವುದು.
* ಕನ್ನಡ ಭಾಷೆಯಲ್ಲಿನ ಪ್ರಮುಖ ಗ್ರಂಥಕರ್ತರ ವಿವಿಧ ರೀತಿಯ ಸಾಹಿತ್ಯದ ಪ್ರಕಾರಗಳನ್ನು ಪರಿಚಯ ಮಾಡಿಕೊಡುವುದು.

ಭಾಷಾ ಕೌಶಲಗಳು

ಭಾಷೆಯಲ್ಲಿ ಪ್ರಧಾನವಾಗಿ ಆಲಿಸುವಿಕೆ, ಮಾತು, ಓದು ಮತ್ತು ಬರಹ ಎಂಬ ನಾಲ್ಕು ಕೌಶಲಗಳನ್ನು ಗುರ್ತಿಸಬಹುದು. ಈ ನಾಲ್ಕು ಕೌಶಲಗಳಲ್ಲಿ ಆಲಿಸುವಿಕೆ ಮತ್ತು ಓದುಗಾರಿಕೆಗಳು ಪ್ರಧಾನವಾಗಿ ಸ್ವೀಕೃತ ಕೌಶಲಗಳಾಗಿವೆ. ಮಾತು ಹಾಗೂ ಬರವಣಿಗೆಗಳು ಪ್ರಧಾನವಾಗಿ ಉತ್ಪಾದನಾ/ಅಭಿವ್ಯಕ್ತಿ ಕೌಶಲಗಳಾಗಿವೆ. ಈ ನಾಲ್ಕು ಕೌಶಲಗಳಲ್ಲಿ ಸೂಕ್ತ ತರಬೇತಿ ವ್ಯವಸ್ಥಿತ ಅಭ್ಯಾಸ ಮತ್ತು ನಿರಂತರ ಪ್ರಯೋಗದಿಂದ ಮಾತ್ರ ಭಾಷಾ ಸಾಮರ್ಥ್ಯ ಬೆಳೆಯುತ್ತದೆ.

ಆಲಿಸುವಿಕೆ

ಆಲಿಸುವಿಕೆಯು ಯಾವುದೇ ಭಾಷೆಯ ಪ್ರಥಮ ಹಾಗೂ ಮೂಲ ಕೌಶಲ. ಮುಖ್ಯವಾಗಿ ಧ್ವನಿ ಸಂಕೇತಗಳನ್ನು ಆಲಿಸುವುದು ಮತ್ತು ಅನುಕರಿಸುವುದರಿಂದ ಭಾಷೆಯನ್ನು ಕಲಿಯಲಾಗುತ್ತದೆ. ಆಲಿಸುವಿಕೆ ಮತ್ತು ಮಾತುಗಾರಿಕೆಯನ್ನು ಮಗು ಅನೌಪಚಾರಿಕವಾಗಿ ಮನೆಯ ಮತ್ತು ಕುಟುಂಬದ ಸುತ್ತಮುತ್ತಲಿನ ಪರಿಸರದ ಅನುಕರಣೆಯಿಂದ ಕಲಿಯಲಾಗುತ್ತದೆ. ಸಾಮಾನ್ಯಾರ್ಥದಲ್ಲಿ ಕೇಳುವಿಕೆಯನ್ನು ಆಲಿಸುವಿಕೆ ಎಂದು ಭಾವಿಸಲಾಗುತ್ತದೆ. ಆದರೆ ಕೇಳುವಿಕೆಯು ಆಲಿಸುವಿಕೆಯ ಒಂದು ಭಾಗ. ನಮ್ಮ ಕಿವಿಗೆ ಬೀಳುವ ಶಬ್ದಗಳೆಲ್ಲ ಆಲಿಸುವಿಕೆಯಾಗುವುದಿಲ್ಲ. ಒಂದು ಭಾಷೆಯಲ್ಲಿ ಕೇಳುವ ಧ್ವನಿಗಳನ್ನು ಅರ್ಥಮಾಡಿಕೊಂಡು ಗ್ರಹಿಸುವುದೇ ಆಲಿಸುವಿಕೆ. ಆಲಿಸುವಿಕೆಯು ಒಂದು ಪ್ರಜ್ಞಾಪೂರ್ವಕವಾದ, ಉದ್ದೇಶ ಪೂರ್ವಕ ಹಾಗೂ ಮಾನಸಿಕ ಕ್ರಿಯೆಯಾಗಿದ್ದು, ಕೇಳುವ ಶಬ್ದಗಳನ್ನು ಅರ್ಥಮಾಡಿಕೊಳ್ಳುವುದೇ ಆಗಿದೆ. ನಾವು ಯಾಂತ್ರಿಕವಾಗಿ ಕೇಳಿಸಿ ಕೊಳ್ಳುವ ಶಬ್ದಗಳೆಲ್ಲ ಆಲಿಸುವಿಕೆಯಾಗುವುದಿಲ್ಲ. ನಾವು ಕೇಳುವ ಭಾಷೆಯ ಶಬ್ದಗಳನ್ನು ಕೇವಲ ಶಬ್ದಗಳಾಗಿ ಕೇಳದೆ ಶಬ್ದಗಳು ಅರ್ಥಗಳಾಗಿ, ಭಾವನೆಗಳಾಗಿ ಸ್ವೀಕೃತವಾಗುವ ಕ್ರಿಯೆಯೇ ಆಲಿಸುವಿಕೆ.

ಆಲಿಸುವಿಕೆಯ ಕೌಶಲ ಬೆಳೆಯದೆ ಭಾಷೆಯ ಉಳಿದ ಕೌಶಲಗಳಾದ ಮಾತು, ಓದು ಮತ್ತು ಬರಹ ಇವುಗಳನ್ನು ಗಳಿಸುವುದು ಕಷ್ಟ. ಏಕೆಂದರೆ ಆಲಿಸುವಿಕೆಯು ಅರ್ಥಗ್ರಹಿಕೆ ಮಾತನಾಡುವಿಕೆ, ಓದುಗಾರಿಕೆ ಬರವಣಿಗೆ ಮತ್ತು ಶಬ್ದ ಭಂಡಾರವನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗುತ್ತದೆ. ಕಲಿಕೆಯ ಹೆಚ್ಚು ಭಾಗ ಆಲಿಸುವಿಕೆಯಿಂದಲೇ ಆಗುತ್ತದೆ. ಮಕ್ಕಳು ಪದಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಮಾನಸಿಕ ವಿಕಾಸವಾಗುವಲ್ಲಿ ಆಲಿಸುವಿಕೆ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಕನ್ನಡ ಭಾಷೆಯ ಆಲಿಸುವಿಕೆಯ ಅವಕಾಶಗಳು ಲಂಬಾಣಿ ಭಾಷಿಕ ಮಕ್ಕಳಿಗೆ ಅವರ ಕೌಟುಂಬಿಕ ಪರಿಸರದಲ್ಲಿ ಹಾಗೂ ತಾಂಡಾಗಳ ಪರಿಸರ ದಲ್ಲಿ ಸಿಗುವುದು ಅಪರೂಪ. ಲಂಬಾಣಿ ಭಾಷಿಕ ಮಕ್ಕಳಿಗೆ ಶಾಲಾತರಗತಿಗಳಲ್ಲಿ ಕನ್ನಡ ಭಾಷೆಯ ಆಲಿಸು ವಿಕೆಯ ಅವಕಾಶ ಸಿಗುತ್ತದೆ. ಆದರೆ ಇಂಥ ಮಕ್ಕಳಲ್ಲಿ ಅರ್ಥಪೂರ್ಣವಾದ ಆಲಿಸುವಿಕೆ ಕೌಶಲವನ್ನು ಬೆಳೆಸುವ ಬಗ್ಗೆ ಶಿಕ್ಷಕರು ಸರಿಯಾಗಿ ಗಮನ ನೀಡದಿರುವುದು ಕಳವಳದ ಸಂಗತಿ. ಕನ್ನಡ ಭಾಷೆಯ ಅರ್ಥವೇ ಗೊತ್ತಿರದ ಈ ಮಕ್ಕಳು ತರಗತಿಗಳಲ್ಲಿ ನಿಷ್ಕ್ರೀಯ ಕೇಳುಗರಾಗಿ ಕುಳಿತಿರುತ್ತಾರೆ. ಈ ರೀತಿ ಯಾಂತ್ರಿಕವಾಗಿ ಶಬ್ದಗಳನ್ನು ಕೇಳುವುದರಿಂದ ಮಕ್ಕಳ ಜ್ಞಾನಾರ್ಜನೆ ನಿರೀಕ್ಷಿತ ಮಟ್ಟದಲ್ಲಿ ಆಗುವುದಿಲ್ಲ. ಅವ್ಯವಸ್ಥಿತ ಮತ್ತು ಅವೈಜ್ಞಾನಿಕ ಆಲಿಸುವಿಕೆಯಿಂದಾಗಿ ಮಕ್ಕಳು ಅಪಾರ ಜ್ಞಾನವನ್ನು ನಷ್ಟಮಾಡಿಕೊಳ್ಳುತ್ತಾರೆ. ಹಾಗೂ ಕಲಿಕೆಯಲ್ಲಿ ಹಿಂದೆ ಬೀಳುತ್ತಾರೆ. ಇಂತಹ ಮಕ್ಕಳ ಆಲಿಸುವಿಕೆಯ ಬಗ್ಗೆ ಇರುವ ತಾತ್ಸಾರ, ಅನಾದರಣೆ, ಅವೈಜ್ಞಾನಿಕತೆಯನ್ನು ಬಿಟ್ಟು ಪ್ರಾಥಮಿಕ, ಮಾಧ್ಯಮಿಕ ಹಂತದ ಮಕ್ಕಳಲ್ಲಿ ಆಲಿಸುವಿಕೆಯನ್ನು ವೈಜ್ಞಾನಿಕವಾಗಿ ಬೆಳೆಸಲು ಹಲವಾರು ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆ ರೂಪಿಸಬೇಕು. ಹಾಗೆ ಭಾಷಾ ಶಿಕ್ಷಕರು ಆಲಿಸುವಿಕೆಯ ಕೌಶಲದ ಬಗ್ಗೆ ಹೆಚ್ಚು ವೈಜ್ಞಾನಿಕವಾಗಿ ತಿಳಿದು ಮಕ್ಕಳ ಆಲಿಸುವಿಕೆಯಲ್ಲಿ ಕಂಡು ಬರುವ ದೋಷಗಳನ್ನು ಗುರ್ತಿಸಿ ಸೂಕ್ತ ಅಭ್ಯಾಸಗಳ ಮೂಲಕ ಅವುಗಳನ್ನು ಪರಿಹರಿಸಿ ಮಕ್ಕಳ ಉತ್ತಮ ಆಲಿಸುವಿಕೆಯ ಕೌಶಲವನ್ನು ಬೆಳೆಸಬೇಕಾಗಿದೆ.

ಮಾತನಾಡುವುದು

ಭಾಷೆಯ ನಾಲ್ಕು ಪ್ರಧಾನ ಕೌಶಲಗಳಲ್ಲಿ ಮಾತುಗಾರಿಕೆ ಪ್ರಮುಖವಾದ ಹಾಗೂ ಭಾಷೆಯ ಉಗಮದ ರೂಪವೂ ಆಗಿದೆ. ಮನಸ್ಸಿನ ಭಾವನೆಗಳು ಆಲೋಚನೆಗಳು ಮತ್ತು ಅಭಿಪ್ರಾಯ ಮೊದಲಾದವುಗಳನ್ನು ಅರ್ಥಪೂರ್ಣವಾಗಿ ವ್ಯವಸ್ಥಿತವಾಗಿ ಶಾಬ್ದಿಕ ರೂಪದಲ್ಲಿ ಪ್ರಕಟಪಡಿಸುವುದೇ ಮಾತು. ಆಲಿಸುವುದನ್ನು ಕಲಿತ ನಂತರ ಮಕ್ಕಳು ಕುಟಂಬದಲ್ಲಿ ಮತ್ತು ಸುತ್ತಮುತ್ತ ಜನರ ಮಾತುಗಳನ್ನು ಅನುಕರಣೆ ಮಾಡುತ್ತಾ ಮಾತುಗಳನ್ನು ಕಲಿಯುತ್ತಾರೆ. ಹೀಗೆ ಮನಸ್ಸಿನ ಭಾವನೆ, ಆಲೋಚನೆ ಮತ್ತು ಅಭಿಪ್ರಾಯಗಳನ್ನು ಪದಗಳಾಗಿ ಪದಪುಂಜಗಳಾಗಿ, ವಾಕ್ಯಗಳಾಗಿ ಜೋಡಿಸಿ ಅರ್ಥಬದ್ಧವಾಗಿ ಧ್ವನಿಯನ್ನು ಹೊರಡಿಸುವುದೆ ಮಾತು. ಪ್ರಧಾನವಾಗಿ ಅಭಿವ್ಯಕ್ತಿ ಸಾಧನವಾಗಿರುವ ಮಾತು ಒಂದು ಮಾನಸಿಕ ಕ್ರಿಯೆ. ಶೈಕ್ಷಣಿಕ ಕ್ಷೇತ್ರದಲ್ಲಿ ಮಗುವಿನ ಎಲ್ಲಾ ರೀತಿಯ ಶೈಕ್ಷಣಿಕ ಸಾಧನೆಗೂ ಮಾತುಗಾರಿಕೆ ಬೇಕು. ಭಾಷೆಯಲ್ಲಿನ ವಿಷಯವನ್ನು ಗ್ರಹಿಸಲು, ಅಭಿಪ್ರಾಯವನ್ನು ತಿಳಿಸಲು, ಬೇರೆಯವರೊಂದಿಗೆ ವ್ಯವಹರಿಸಲು ಮಾತುಗಾರಿಕೆ ತುಂಬಾ ಅವಶ್ಯಕವಾದುದು. ಮಾತುಗಾರಿಕೆ ಅನುಕರಣೆಯಿಂದ ಲಭ್ಯವಾಗುವಂತಹದ್ದು. ಮಗು ಶಾಲೆಗೆ ಬರುವ ವೇಳೆಗೆ ಮಾತುಗಾರಿಕೆಯನ್ನು ಕಲಿತು ಬಂದಿರುತ್ತದೆ. ಆದರೂ ಮಗು ಗಳಿಸಿಕೊಂಡ ಈ ಪರಿಮಿತ ಸಾಮರ್ಥ್ಯದಿಂದ ಶೈಕ್ಷಣಿಕವಾಗಿ ಪಡೆಯಬೇಕಾದ ಎಲ್ಲ ಸಾಮರ್ಥ್ಯಗಳನ್ನು ಪಡೆಯಲಾಗುವುದಿಲ್ಲ. ಆದರೆ ಮಾತುಗಾರಿಕೆಯ ಕೌಶಲವನ್ನು ಕುಟುಂಬ ಮತ್ತು ಪರಿಸರದಲ್ಲಿ ಏನೊಂದು ಕಲಿಯದ ಲಂಬಾಣಿ ಭಾಷಿಕ ಮಗು ಮಾತುಗಾರಿಕೆಯನ್ನು ಕಲಿಯದೆ ಶಾಲೆಗೆ ಪ್ರವೇಶಿಸುತ್ತದೆ. ಇಂತಹ ಮಗು ಸರಳವಾಗಿ, ನೇರವಾಗಿ, ನಿರರ್ಗಳವಾಗಿ ಅರ್ಥಬದ್ಧವಾಗಿ ಹಾಗೂ ಭಾವಪೂರ್ಣವಾಗಿ ಮಾತನಾಡಲು ಸಾಧ್ಯವಿಲ್ಲ. ಅಲ್ಲದೆ ಶೈಕ್ಷಣಿಕವಾಗಿ ಗಳಿಸಿಕೊಳ್ಳಬೇಕಾದ ಎಲ್ಲಾ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವಲ್ಲಿ ಲಂಬಾಣಿ ಭಾಷಿಕ ಮಕ್ಕಳು ಹಿಂದುಳಿದಿರುತ್ತಾರೆ. ಮಕ್ಕಳ ಇಂತಹ ಅಸಮರ್ಥ್ಯತೆಯನ್ನು ಕಡೆಗಣಿಸದೆ ಸುಲಭವಾಗಿ ಮಾತು ಕಲಿಸಬೇಕಾದ ಹಲವಾರು ಮಾರ್ಗೋಪಾಯಗಳನ್ನು ಶಿಕ್ಷಣ ಇಲಾಖೆಯು ರೂಪಿಸಬೇಕಾಗಿದೆ ಹಾಗೂ ಭಾಷಾ ಶಿಕ್ಷಕರು ಮಕ್ಕಳ ಮಾತುಗಾರಿಕೆಯಲ್ಲಿ ಕಂಡುಬರುವ ದೋಷಗಳನ್ನು ಗುರ್ತಿಸಿ, ಸೂಕ್ತ ತರಬೇತಿಗಳ ಮೂಲಕ ವೈಜ್ಞಾನಿಕವಾಗಿ ಅವುಗಳನ್ನು ಪರಿಹರಿಸಿ ಮಕ್ಕಳ ಉತ್ತಮ ಮಾತುಗಾರಿಕೆ ಕೌಶಲವನ್ನು ಬೆಳೆಸಬೇಕಾಗಿದೆ.

ಓದುವುದು

ಭಾಷೆಯ ಕೌಶಲಗಳಲ್ಲಿ ಓದುಗಾರಿಕೆ ಪ್ರಮುವಾದದು. ಈ ಕೌಶಲವನ್ನು ಮಗು ಔಪಚಾರಿಕವಾಗಿ/ ಶೈಕ್ಷಣಿಕವಾಗಿ ಪಡೆಯುತ್ತಿರುತ್ತದೆ. ಓದುವುದು ಒಂದು ಮಾನಸಿಕ ಮತ್ತು ಶಾಬ್ದಿಕ ಕ್ರಿಯೆ. ಓದುವ ಕ್ರಿಯೆ ನಿಯಮಬದ್ಧವಾಗಿರುತ್ತದೆ. ಸಾಮಾನ್ಯಾರ್ಥದಲ್ಲಿ ಲಿಪಿಗಳನ್ನು ಅರ್ಥಬದ್ಧವಾಗಿ, ಶಾಬ್ದಿಕವಾಗಿ ಉಚ್ಚಾರಣೆ ಮಾಡುವುದನ್ನು 'ಓದುವಿಕೆ' ಎನ್ನುತ್ತೇವೆ. ಸೂಕ್ಷ್ಮಾರ್ಥದಲ್ಲಿ ಲಿಪಿಯನ್ನು ಅಥವಾ ಮುದ್ರಿತ ವಿಷಯವನ್ನು ಕಣ್ಣಿನಿಂದ ನೋಡಿ ಅದಕ್ಕೆ ಮನಸ್ಸಿನಲ್ಲಿ ಅರ್ಥ ರೂಪಿಸಿಕೊಂಡು ಅರ್ಥಕ್ಕನುಗುಣವಾಗಿ ಧ್ವನಿಯನ್ನು ಸೇರಿಸಿ ವ್ಯವಸ್ಥಿತವಾಗಿ, ನಿಯಮ ಬದ್ಧವಾಗಿ ಶಬ್ದವನ್ನು ಹೊರಹೊಮ್ಮಿಸುವುದೇ ಓದುಗಾರಿಕೆ. ಓದುಗಾರಿಕೆಗಿಂತ ಮುಂಚೆ ಗ್ರಹಿಸುವ ಸಾಮರ್ಥ್ಯ ಮತ್ತು ಮಾತುಗಾರಿಕೆಯನ್ನು ಕಲಿತಿರಬೇಕು. ಏಕೆಂದರೆ ಭಾಷಾ

ಕೌಶಲಗಳಾದ ಆಲಿಸುವಿಕೆ, ಮಾತು, ಪದಜ್ಞಾನ, ಬರಹ, ವಾಕ್ಯರಚನೆ, ಲೇಖನ ಚಿಹ್ನೆ ಮೊದಲಾದ ಕೌಶಲಗಳು ಓದುವಿಕೆಗೆ ಅಗತ್ಯವಾದವುಗಳಾಗಿವೆ. ಪರಿಣಾಮಕಾರಿಯಾಗಿ ಓದುವ ಸಾಮರ್ಥ್ಯವನ್ನು ಬೆಳೆಸುವುದು ಭಾಷಾ ಬೋಧನೆಯ ಉದ್ದೇಶವೂ ಆಗಿದೆ. ಆದರೆ ಆಲಿಸುವಿಕೆ ಮತ್ತು ಮಾತುಗಾರಿಕೆಯನ್ನು ಗಳಿಸಿಕೊಳ್ಳದ ಲಂಬಾಣಿ ಭಾಷೆಯ ಮಕ್ಕಳನ್ನು ಶಾಲಾ ಆವರಣದಲ್ಲಿ ನೇರವಾಗಿ ಓದುವ ಕ್ರಿಯೆಗೆ ತೊಡಗಿಸಲಾಗುತ್ತದೆ. ಇಲ್ಲಿ ಮಕ್ಕಳ ಮಾನಸಿಕ ಹಾಗೂ ಶಾಬ್ದಿಕ ಪ್ರಕ್ರಿಯೆಯನ್ನು ಪರಿಗಣಿಸದೆ, ಸಮಸ್ಯೆಗಳನ್ನು ಕಂಡುಕೊಳ್ಳದೆ, ತಾತ್ಸಾರ, ನಿರಾಸಕ್ತಿಯಿಂದ ಶಿಕ್ಷಕರು ಮಕ್ಕಳನ್ನು ಓದುವ ಕ್ರಿಯೆಗೆ ತೊಡಗಿಸುತ್ತಾರೆ. ಇಲ್ಲಿ ಪ್ರಾಥಮಿಕ ಕೌಶಲಗಳಾದ ಆಲಿಸುವಿಕೆ ಮತ್ತು ಮಾತುಗಾರಿಕೆಗಳನ್ನು ಕಲಿಯದ ಲಂಬಾಣಿ ಭಾಷಿಕ ಮಕ್ಕಳು ಓದುಗಾರಿಕೆಯಲ್ಲಿ ಗಣನೀಯವಾಗಿ ಹಿಂದುಳಿಯುತ್ತಾರೆ. ಇಂಥ ಸೂಕ್ಷ್ಮತೆಯನ್ನು ಗಮನಿಸಿ ಶಿಕ್ಷಣ ಇಲಾಖೆ ಹಲವಾರು ಸೂಕ್ತ ಕಾರ್ಯಕ್ರಮಗಳ ಮೂಲಕ ಮಕ್ಕಳ ಓದುಗಾರಿಕೆಯ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಹಾಗೆ ಶಿಕ್ಷಕರು ಮಕ್ಕಳ ಓದುಗಾರಿಕೆಯಲ್ಲಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿಕೊಳ್ಳುವ ಮೂಲಕ ಅವರ ಮಾನಸಿಕ ಸ್ಥಿತಿಯನ್ನು ಅರಿತು ಸೂಕ್ತ ಅಭ್ಯಾಸ, ಚಟುವಟಿಕೆಗಳನ್ನು ಮಾಡಿಸಬೇಕು. ಮಾನಸಿಕ, ಚಾಕ್ಷುಶ, ಶ್ರವಣ ಮತ್ತು ಧ್ವನ್ಯಾಂಗಗಳಲ್ಲಿ ಕೌಶಲ ಮತ್ತು ಸಾಮರ್ಥ್ಯಗಳನ್ನು ಬೆಳೆಸುವುದರ ಮೂಲಕ ಓದುಗಾರಿಕೆಯಲ್ಲಿ ಸಾಮರ್ಥ್ಯವನ್ನು ಬೆಳೆಸಬೇಕು. ಓದುಗಾರಿಕೆಯು ವ್ಯಕ್ತಿಯ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಿಕವಾಗಿ ಉಪಯುಕ್ತವಾಗಿದ್ದು ಉತ್ತಮ ಜೀವನಕ್ಕಾಗಿ ಓದುಗಾರಿಕೆಯನ್ನು ವೈಜ್ಞಾನಿಕವಾಗಿ ಹಲವಾರು ಸೂಕ್ತ ಚಟುವಟಿಕೆಗಳ ಮೂಲಕ ಕಲಿಸುವುದು ಅಗತ್ಯವೆನಿಸುತ್ತದೆ.

ಬರವಣಿಗೆ

ಬರವಣಿಗೆ ಔಪಚಾರಿಕ ಶಿಕ್ಷಣದಲ್ಲಿ ಮಹತ್ವದ ಸ್ಥಾನವಿದೆ. ಹಾಗೆ ಒಂದು ಭಾಷೆಯ ವಿಕಾಸ ಮತ್ತು ಅಭಿವೃದ್ಧಿಯಲ್ಲಿಯೇ ಬರವಣಿಗೆಗೆ ವಿಶಿಷ್ಟವಾದ ಸ್ಥಾನವಿದೆ. ಭಾಷೆಯ ಮೂರ್ತರೂಪವೆ ಬರವಣಿಗೆ. ಬರವಣಿಗೆಯು ಅರ್ಥಗ್ರಹಿಕೆ, ಮಾತು ಮತ್ತು ಓದುಗಾರಿಕೆ ಈ ಮೂರನ್ನು ಒಳಗೊಂಡಿರುತ್ತದೆ. ರೇಖಾವಿನ್ಯಾಸಗಳನ್ನು ವ್ಯವಸ್ಥಿತವಾಗಿ, ಅರ್ಥಬದ್ಧವಾಗಿ ಜೋಡಿಸುವುದೇ ಬರವಣಿಗೆಯಾಗುತ್ತದೆ. ಆಲೋಚನೆಗಳು, ಭಾವನೆಗಳು ಅಥವಾ ವಿಷಯಗಳನ್ನು ನಿರ್ದಿಷ್ಟವಾಗಿ ಅರ್ಥವನ್ನು ಕೊಡುವ ರೇಖಾ ಸಂಕೇತಗಳ ಮೂಲಕ ಮೂರ್ತಗೊಳಿಸಿ ರೂಪಿಸುವುದೇ ಬರವಣಿಗೆ. ಮಾತಿಗಿಂತ ಓದುವುದು ಕಷ್ಟವಾದರೂ ಓದುವಿಕೆಗಿಂತ ಬರವಣಿಗೆ ಸಂಕೀರ್ಣವಾದುದು. ಬರಹಕ್ಕೆ ಲಿಪಿಗಳ ಪರಿಚಯ, ರೇಖಾವಿನ್ಯಾಸ ಕ್ರಮ, ಅಕ್ಷರಗಳ ಸಂಯೋಜನೆ, ಕಾಗುಣಿತ, ಲೇಖನ ಚಿಹ್ನೆಗಳು, ವಾಕ್ಯರಚನೆ ಮೊದಲಾದವುಗಳಲ್ಲಿ ಜ್ಞಾನವಿರಬೇಕು. ಶಿಕ್ಷಣದಲ್ಲಿ ಓದು ಮತ್ತು ಬರಹ ಜೊತೆ ಜೊತೆಯಲ್ಲಿಯೆ ಸಾಗುತ್ತಿದ್ದು ಓದುವ ವಿಚಾರಗಳಿಗೆ ಬರಹವು ಶಾಶ್ವತ ಸ್ಮರಣೆಯನ್ನು ತಂದುಕೊಡುತ್ತದೆ. ಮಾತು ಮತ್ತು ಓದುವಿಕೆ ಪರಿಣಾಮಕಾರಿಯಾಗಬೇಕಾದರೆ ಸತತ ಬರವಣಿಗೆಯ ಅಭ್ಯಾಸವಿರಬೇಕು. ಶಬ್ದಗಳನ್ನು ಓದುತ್ತಾ ನಿರಂತರವಾಗಿ ಬರವಣಿಗೆ ಮಾಡುವುದರಿಂದ ಸ್ಮರಣೆ ಮತ್ತು ಅವಧಾರಣೆ ಶಕ್ತಿಗಳು ಮಕ್ಕಳಲ್ಲಿ ವೃದ್ಧಿಯಾಗುತ್ತವೆ. ಬರವಣಿಗೆಯ ಸೂಕ್ತ ಅಭ್ಯಾಸ ಹಾಗೂ ಸ್ವತಂತ್ರವಾಗಿ ಬರೆಯುವ ಸಾಮರ್ಥ್ಯ ಗಳಿಸುವುದರ ಜೊತೆಗೆ ಶೈಕ್ಷಣಿಕವಾಗಿ ಹೆಚ್ಚಿನ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ.

ಆಲಿಸುವಿಕೆ, ಮಾತುಗಾರಿಕೆ ಮತ್ತು ಓದುವಿಕೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವ ಲಂಬಾಣಿ ಭಾಷಿಕ ಮಕ್ಕಳು ಈ ಮೂರು ಕೌಶಲಗಳನ್ನು ಒಳಗೊಂಡ ಬರವಣಿಗೆ ಕೌಶಲದಲ್ಲಿಯೂ ದ್ವಿಮುಖವಾಗಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇಂತಹ ಮಕ್ಕಳ ಒಟ್ಟಾರೆ ಭಾಷಿಕ ಕೌಶಲಗಳ ಕಲಿಕೆ ಮತ್ತು ಕಲಿಸುವಿಕೆಯ ಕುರಿತು ಮರುಚಿಂತನೆಯ ಅಗತ್ಯತೆ ಹಾಗೂ ಸೂಕ್ತ ಕ್ರಮಗಳ ಕೈಗೊಳ್ಳುವುದು ಅನಿವಾರ್ಯ ಮತ್ತು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಭಾಷಾ ಶಿಕ್ಷಕರು ಮಕ್ಕಳ ಪ್ರತಿಯೊಂದು ಕೌಶಲಗಳ ಬಗ್ಗೆ ಹಾಗೂ ಮಾನಸಿಕ ಸಾಮರ್ಥ್ಯದ ಕುರಿತು ಸೂಕ್ಷ್ಮವಾಗಿ ಅಧ್ಯಯನ ಮಾಡಿ ಅಗತ್ಯ ಅಭ್ಯಾಸ ಕ್ರಮಗಳನ್ನು ನಿರಂತರವಾಗಿ ಮಾಡಿಸಬೇಕು.

ಕಲಿಕೆ

ಜಗತ್ತಿನ ಸಕಲ ಜೀವರಾಶಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುವ ಸಹಜ ಪ್ರಕ್ರಿಯೆ ಎಂದರೆ ಕಲಿಕೆ. ಕಲಿಕೆಯು ಜೀವಿಗಳಲ್ಲಿ ಒಂದು ಅನಿವಾರ್ಯ ಪ್ರಕ್ರಿಯೆ. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಕಲಿಯುವಿಕೆ ಒಂದು ಮಹತ್ವದ ಭಾಗ. ಶಿಕ್ಷಕರು ಮತ್ತು ಪೋಷಕರು ಮಕ್ಕಳಿಗೆ ಸೂಕ್ತವಾದ ಕಲಿಕೆಯ ವಾತಾವರಣವನ್ನು ನಿರ್ಮಿಸಬೇಕು. ಶಿಕ್ಷಣದ ಪ್ರತಿಯೊಂದು ಕಾರ್ಯಕ್ರಮಗಳು, ಚಟುವಟಿಕೆಗಳು ಉತ್ತಮ ಕಲಿಕೆಯುಂಟು ಮಾಡಲು ನಿಯೋಜಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಕಲಿಯುವಿಕೆಗೆ ಒಂದು ಮಹತ್ವವಾದ ಸ್ಥಾನವಿದೆ. ಶಿಕ್ಷಕರು ಶಿಕ್ಷಣ ಕ್ಷೇತ್ರದಲ್ಲಿ ಯಶಸ್ಸನ್ನು ಸಾಧಿಸಲು ಕಲಿಕೆಯ ಪ್ರಕ್ರಿಯೆ ಬಗ್ಗೆ ಆಳವಾದ ಜ್ಞಾನ ಹೊಂದಿರಬೇಕಾದುದ್ದು ಅವಶ್ಯಕ ಮತ್ತು ಅನಿವಾರ್ಯ. ಕೇವಲ ಓದು-ಬರಹ ಕಲಿಯುವುದು ಮಾತ್ರ ಕಲಿಕೆಯಲ್ಲ. ಇದು ಕಲಿಕೆಯ ಸಂಕುಚಿತ ಅರ್ಥ. ಶಿಕ್ಷಣವೆಂದರೆ "ಅನುಭವದ ಮೂಲಕ ವ್ಯಕ್ತಿಯ ವರ್ತನೆಯಲ್ಲಾಗುವ ಶಾಶ್ವತ ಬದಲಾವಣೆಯೇ ಕಲಿಕೆ". ಕಲಿಕೆ ಎಂಬುದು ಕೇವಲ ಶಾಲೆಯಲ್ಲಿ ಮಾತ್ರ ನಡೆಯುವ ಚಟುವಟಿಕೆಯಲ್ಲ. ಮಗುವು ಹುಟ್ಟಿನಿಂದ ಸಾಯುವವರೆಗೆ ಈ ಮಾರ್ಪಾಡು ಎಲ್ಲ ಕಾಲಗಳಲ್ಲಿಯೂ ನಡೆಯುತ್ತಿರುತ್ತದೆ. ಕಲಿಕೆ ಎನ್ನುವುದು ನರ ಮಂಡಲದಲ್ಲಿ ಆಗುವ ಬದಲಾವಣೆಯೂ ಆಗಿದೆ. ಆದ್ದರಿಂದ ಈ ಬದಲಾವಣೆಯು ನರಮಂಡಲಕ್ಕೂ ಸಂಬಂಧಿಸಿದುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಸಹಜ ಪ್ರವೃತ್ತಿಗಳೊಡನೆ ಜನಿಸುತ್ತಾರೆ. ಅವುಗಳನ್ನು ಸುಧಾರಿಸಿ ಸಂಪನ್ನಗೊಳಿಸುವುದೂ ಅವುಗಳಲ್ಲಿ ಮಾರ್ಪಾಡನ್ನುಂಟು ಮಾಡುವುದು ಅವಶ್ಯ. ಈ ಪ್ರಪಂಚ ಇಷ್ಟೊಂದು ಪ್ರಗತಿ ಹಾಗೂ ಸುಧಾರಣೆಗಳನ್ನು ಹೊಂದಿರುವುದು ಕಲಿಕೆಯಿಂದಲೆ. ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಕಲಿಕೆಯ ಸನ್ನಿವೇಶಗಳು ಸಾಮಾನ್ಯ ಹಾಗೂ ಸ್ವಾಭಾವಿಕ. ಪ್ರತಿಯೊಂದು ಹಂತದಲ್ಲಿ ವ್ಯಕ್ತಿ ಏನನ್ನಾದರೂ ಕಲಿಯುತ್ತಲೆ ಇರುತ್ತಾನೆ. ಒಟ್ಟಿನಲ್ಲಿ ವ್ಯಕ್ತಿಯ ಬದುಕಿನಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಲಿಕೆಯ ಪ್ರಕ್ರಿಯೆಯು ನಡೆಯುತ್ತಲೇ ಇರುತ್ತದೆ. ಒಟ್ಟಿನಲ್ಲಿ ವ್ಯಕ್ತಿಯ ಹುಟ್ಟಿನಿಂದ ಸಾಯುವವರೆಗೆ ನಿರಂತರವಾಗಿ ಹೊಸ ಹೊಸ ಅನುಭವಗಳನ್ನು ಗಳಿಸುತ್ತಾ ಹೋಗುತ್ತಾನೆ. ಇದರಿಂದ ಅವನ ವರ್ತನೆಗಳು ಪರಿವರ್ತನೆಗೊಳ್ಳುತ್ತವೆ. ಹೀಗೆ ಅನುಭವಗಳಿಂದ ವರ್ತನೆ ಯಲ್ಲುಂಟಾದ ಪರಿವರ್ತನೆಯೇ 'ಕಲಿಕೆ' ಆಗಿದೆ.

ಕಲಿಕೆಯ ವ್ಯಾಖ್ಯಾನಗಳು

ವಿಶಾಲವಾದ ಅರ್ಥವನ್ನು ಹೊಂದಿರುವ 'ಕಲಿಕೆ'ಯನ್ನು ವಿವಿಧ ಮನಶಾಸ್ತ್ರಜ್ಞರು ತಮ್ಮದೇ ಆದ ವ್ಯಾಖ್ಯಾನಗಳ ಮೂಲಕ ಅರ್ಥೈಸಿದ್ದಾರೆ. ಪ್ರಮುಖವಾದ ಮನಃಶಾಸ್ತ್ರಜ್ಞರ ವ್ಯಾಖ್ಯಾನಗಳು ಈ ಕೆಳಕಂಡಂತಿವೆ.

ಥಾನ್‌ಡೈಕ್‌ರವರ ಪ್ರಕಾರ "ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ನಡುವಿನ ಸಂಬಂಧವೇ ಕಲಿಕೆ".

ಗೇಟ್ಸ್‌ರವರ ಪ್ರಕಾರ "ಅನುಭವದ ಮೂಲಕ ವರ್ತನೆಯಲ್ಲಾಗುವ ಬದಲಾವಣೆಯೆ ಕಲಿಕೆ".

ಹೆನ್ರಿ ಪಿ. ಸ್ಮಿತ್‌ರವರ ಪ್ರಕಾರ "ಹೊಸ ವರ್ತನೆಗಳನ್ನು ಸಂಗ್ರಹಿಸುವುದು, ಇಲ್ಲದೆ ಹಳೆಯ ವರ್ತನೆಯನ್ನು ಸನ್ನಿವೇಶಕ್ಕನುಗುಣವಾಗಿ ಮಾರ್ಪಡಿಸುವುದೇ ಕಲಿಕೆ".

ಸ್ಕಿನ್ನೆರವರ ಪ್ರಕಾರ "ಕಲಿಕೆ ಎಂದರೆ ಗಳಿಸಿಕೊಳ್ಳುವಿಕೆ ಮತ್ತು ಗಳಿಸಿಕೊಂಡಿದ್ದನ್ನು ಉಳಿಸಿ ಕೊಳ್ಳುವಿಕೆಯೇ ಆಗಿದೆ".

ಕ್ರೋ ಮತ್ತು ಕ್ರೋರವರ ಪ್ರಕಾರ "ಕಲಿಕೆ ಎಂದರೆ ಜ್ಞಾನದ ಗಳಿಕೆ, ಅಭ್ಯಾಸ ಹಾಗೂ ಮನೋಭಾವಗಳ ನಿರ್ಮಾಣವಾಗಿದೆ".

ಹಿಲ್‌ಗಾರ್ಡ್‌ರವರ ಪ್ರಕಾರ "ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುವ ಕ್ರಮವೇ ಕಲಿಕೆ".

ಗೇಟ್ಸ್ ಅವರ ಪ್ರಕಾರ "ತರಬೇತಿ ಮತ್ತು ಅನುಭವಗಳಿಂದಾದ ವರ್ತನೆಯ ಪರಿವರ್ತನೆಯೇ ಕಲಿಕೆ".

ಕಿಂಗ್ಸ್‌ಲೇ ಮತ್ತು ಗ್ಯಾರಿ ಅವರ ಪ್ರಕಾರ "ಅಭ್ಯಾಸ ಅಥವಾ ತರಬೇತಿಯ ಮೂಲಕ ವ್ಯಕ್ತಿಯಲ್ಲಿ ಉಂಟಾಗುವ ವರ್ತನೆಯ ಬದಲಾವಣೆ ಕಾರ್ಯಕ್ಕೆ ಕಲಿಕೆ ಎನ್ನುವರು".

ವುಡ್‌ವರ್ತ್ ಅವರ ಪ್ರಕಾರ "ಅನುಭವಗಳು ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆ ತರುವ ಯಾವುದೇ ಚಟುವಟಿಕೆ ಕಲಿಕೆ" ಎನಿಸುವುದು.

ಗಾರ್ಡನ್ ಮರ್ಫಿ ಅವರ ಪ್ರಕಾರ "ಪರಿಸರದ ಅವಶ್ಯಕತೆಗಳನ್ನು ಸರಿದೂಗಿಸಲು ವರ್ತನೆಯ ಮಾರ್ಪಾಡೇ ಕಲಿಕೆ".

ಸ್ಕಿನ್ನರ್ ಅವರ ಪ್ರಕಾರ "ಜ್ಞಾನಾರ್ಜನೆ ಹಾಗೂ ಧಾರಣಾಶಕ್ತಿಗೆ ಸಂಬಂಧಿಸಿರುವುದೇ ಕಲಿಕೆ".

ಗುತ್ರಿ ಅವರ ಪ್ರಕಾರ "ಒಂದು ವರ್ತನೆಯನ್ನು ಹಿಂಬಾಲಿಸುವ ಮತ್ತೊಂದು ವರ್ತನೆಯೇ ಕಲಿಕೆ".

ಕಲಿಕಾ ನಿಯಮಗಳು

ಕಲಿಕೆಯ ಪ್ರಾಥಮಿಕ ನಿಯಮಗಳನ್ನು ಪ್ರಯತ್ನ ಪ್ರಮಾದ ಕಲಿಕಾ ಸಿದ್ಧಾಂತದ ಮೂಲಕ ಥಾರ್ನ್ ಡೈಕ್‌ನು ಮೂರು ವಿಧವಾಗಿ ನಿರೂಪಿಸಿದನು.

೧. ಸಿದ್ಧತಾ ನಿಯಮ

೨. ಅಭ್ಯಾಸ ನಿಯಮ

೩. ಪರಿಣಾಮ ನಿಯಮ

೧. ಸಿದ್ಧತಾ ನಿಯಮ

ಈ ನಿಯಮವನ್ನು ಅಭಿಪ್ರೇರಣಾ ಅಥವಾ ಮಾನಸಿಕ ಸಿದ್ಧತಾ ನಿಯಮವೆಂದೂ ಕರೆಯುತ್ತಾರೆ. ಸಾಮಾನ್ಯವಾಗಿ ಪಾಠಯೋಜನೆಯ ಮೊದಲ ಹಂತವೇ ಅಭಿಪ್ರೇರಣೆ ಅಥವಾ ಸಿದ್ಧತಾ ನಿಯಮ. ವಿದ್ಯಾರ್ಥಿ ಈಗಾಗಲೆ ಹೊಂದಿರುವ ಪೂರ್ವಜ್ಞಾನವನ್ನು ಹೇಳಿ ಪ್ರಶ್ನೆ ಕೇಳುತ್ತಾ ಮುಂದುವರಿದು ಪ್ರಸ್ತುತ ಚರ್ಚಿಸುವ ವಿಷಯವನ್ನು ಕಲಿಯುವಂತೆ ಸಿದ್ಧಪಡಿಸುವ ಗುರಿ ಸಿದ್ಧತಾ ನಿಯಮದ್ದಾಗಿದೆ.

ಇಲ್ಲಿ ಮುಖ್ಯವಾಗಿ ಶಿಕ್ಷಕರು ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಸ್ಥಿತಿಗತಿಯನ್ನು ಅರಿತು ಪೂರ್ವಜ್ಞಾನವನ್ನೂ ನೀಡಿ, ಆಕರ್ಷಕ ಬೋಧನೋಪಕರಣಗಳನ್ನು ಬಳಸಿ, ವಿಷಯದ ಬಗ್ಗೆ ಆಸಕ್ತಿ ಮತ್ತು ಕುತೂಹಲ ಹುಟ್ಟಿಸಬೇಕು. ಜೊತೆಗೆ ಮಗು ಯಾವ ವಯಸ್ಸಿನಲ್ಲಿದೆ ಅವನು ಯಾವ ವಿಷಯ ಕಲಿಯಲು ಅರ್ಹ ಮತ್ತು ಯಾವ ವಿಷಯ ಕಲಿಸಬೇಕು ಎನ್ನುವುದನ್ನು ಶಿಕ್ಷಕ ಅರಿತಿರಬೇಕು.

೨. ಅಭ್ಯಾಸ ನಿಯಮ

ಕಲಿತ ವಿಷಯ ಮನಸ್ಸಿನಲ್ಲಿ ನೆಲೆಗೊಳ್ಳಬೇಕಾದರೆ ಅದನ್ನು ಪದೇ ಪದೇ ಅಭ್ಯಾಸ ಮಾಡುತ್ತಿರಬೇಕು. "ಯಾವ ಕ್ರಿಯೆಯನ್ನಾದರೂ ಪುನಃ ಪುನಃ ಅಭ್ಯಾಸ ಮಾಡುತ್ತಿದ್ದರೆ ಅದು ಕ್ರಮೇಣ ಬಲವಾಗುತ್ತಾ ಬಂದು ನೆಲೆಗೊಳ್ಳುತ್ತದೆ". ಆದ್ದರಿಂದ ವಿದ್ಯಾರ್ಥಿಗಳು ಕಲಿತದ್ದನ್ನು ಆಗಾಗ್ಗೆ ಉಪಯೋಗಿಸಲು ಅವಕಾಶಗಳನ್ನು ಕೊಡಬೇಕು. ಆದ್ದರಿಂದಲೇ ಕಲಿಕೆಯಲ್ಲಿ ಪುನರಾವರ್ತನೆ ಮಹತ್ವದ್ದಾಗಿದೆ. ಪಾಠದ ಅಂತ್ಯದಲ್ಲಿ ಪುನರಾವರ್ತನೆ ಪ್ರಶ್ನೆಗಳನ್ನು ಕೇಳುವುದು, ಮನೆಗೆಲಸ, ಪ್ರಬಂಧ, ಲೇಖನ, ಪರೀಕ್ಷೆಗಳು ಮುಂತಾದವು ಈ ದಿಶೆಯಲ್ಲಿ ಕೈಗೊಳ್ಳಬಹುದಾದ ಉತ್ತಮ ಕಾರ್ಯಗಳು. ಕಲಿತ ಕ್ರಿಯೆಯನ್ನು ಬಹಳ ಕಾಲದವರೆಗೆ ಬಳಸಿಕೊಳ್ಳದೆ ಹಾಗೆಯೇ ಬಿಟ್ಟರೆ ಅದು ನಾಶವಾಗುತ್ತದೆ. ಅದೇ ರೀತಿ ಪುನರಾವೃತ್ತಿ ನಿಧಾನವಾದರೆ ಕಲಿಕೆ ಬಲಗೊಳ್ಳುವಿಕೆಯೂ ನಿಧಾನವಾಗುತ್ತದೆ.

೩. ಪರಿಣಾಮ ನಿಯಮ

ಒಂದು ಕಲಿಕೆ ಉಂಟಾಗುವಿಕೆ ಮತ್ತು ಅದರ ಉಳಿಯುವಿಕೆ ಅಥವಾ ನಶಿಸುವಿಕೆಗೆ ಕಾರಣವಾಗುವ ಮತ್ತೊಂದು ಅಂಶ ಪರಿಣಾಮ. ಈ ನಿಯಮ ಕಲಿಯುವುದರಿಂದಾಗುವ ಲಾಭ ಅಥವಾ ತೃಪ್ತಿಯ ಬಗ್ಗೆ ತಿಳಿಸುತ್ತದೆ. ಪ್ರಚೋದನೆಯೊಂದಿಗೆ ಏರ್ಪಟ್ಟ ಪ್ರತಿಕ್ರಿಯೆಯ ಪರಿಣಾಮ ಒಳ್ಳೆಯದಾಗಿದ್ದರೆ ಬಂಧ ದೀರ್ಘ ಕಾಲಿಕವಾಗಿರುತ್ತದೆ. ಬದಲಾಗಿ ಕೆಟ್ಟದ್ದಾಗಿದ್ದರೆ ಬಂಧ ಕೊನೆಗೊಂಡು ಅಲ್ಪಕಾಲಿಕವಾಗಿರುತ್ತದೆ. ಹಾಗಾಗಿ ಶಾಲೆಗಳಲ್ಲಿ ಮಕ್ಕಳ ಕಲಿಕೆಯ ಪ್ರಮಾಣವನ್ನು ಹೆಚ್ಚಿಸಬೇಕಾದರೆ ಶಿಕ್ಷಕ ಪ್ರಶಂಸಿಸುವುದು, ಬಹುಮಾನ, ಸ್ಪರ್ಧೆಗಳನ್ನು ನೀಡಿ ಪ್ರೋತ್ಸಾಹಿಸಬೇಕು. ಇದರಿಂದ ಶಾಲಾ ವಾತಾವರಣದಲ್ಲಿ ಮಗುವಿಗೆ ನಂಬಿಕೆ, ಭರವಸೆ

ಉಂಟಾಗುವುದರ ಮೂಲಕ ಆಗಾಗ ತಮ್ಮ ಕಾರ್ಯದಲ್ಲಿ ಯಶಸ್ಸನ್ನು ಪಡೆಯಲು ಸಹಾಯಕವಾಗುವ ವಾತಾವರಣ ನಿರ್ಮಿಸಬೇಕು.

ಬೋಧನೆ

ಶಿಕ್ಷಣವು ಒಂದು ವಿಶೇಷವಾದ ಜ್ಞಾನ. ಅದರಲ್ಲಿ ಬೋಧನೆಯು ಒಂದು ಕಲೆ. ಬೋಧನೆ ಉದ್ದೇಶ ಪೂರ್ವಕ ಹಾಗೂ ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿರುತ್ತದೆ. ಮನಸ್ಸಿಗೆ ತೋಚುವ ವಿಚಾರ ಹೇಳುವುದು ಬೋಧನೆಯಾಗುವುದಿಲ್ಲ. ಬೋಧನೆ ಒಂದು ಮನೋವೈಜ್ಞಾನಿಕ ಕ್ರಿಯೆಯಾಗಿರುತ್ತದೆ. ಏಕೆಂದರೆ ಇರುವ ವಿಷಯವನ್ನು ವಿವರಿಸುವುದಲ್ಲ. ಅದರ ಬದಲು ಅರ್ಥವಾಗುವ ಹಾಗೆ ಮಕ್ಕಳ ಹಂತಕ್ಕೆ ಇಳಿದು ಪರಿಣಾಮ ಕಾರಕ ಹಾಗೂ ಶಾಶ್ವತ ಕಲಿಕೆಯನ್ನು ಉಂಟು ಮಾಡುವುದು ಬೋಧನೆ ಯಾಗಿರುತ್ತದೆ.

ಬೋಧನೆಯು ಶಿಕ್ಷಣದ ಅವಿಭಾಜ್ಯ ಅಂಗ. ಶಿಕ್ಷಣದ ನೈಜ ಸ್ವರೂಪ ಮತ್ತು ಗುಣಾತ್ಮಕತೆ ಬೋಧನೆಯಲ್ಲಿ ಅಡಕವಾಗಿದೆ. ಮಕ್ಕಳು ಕಲಿಯುವಂತೆ ಸಹಾಯಮಾಡುವ ಕ್ರಿಯೆ ಬೋಧನೆ. ಪ್ರಾಥಮಿಕ ಶಾಲೆಯಲ್ಲಿ ಬೋಧನೆಯು ಕ್ರಿಯಾತ್ಮಕತೆಯಿಂದ ಕೂಡಿರಬೇಕು. ಏಕೆಂದರೆ ಪ್ರಾಥಮಿಕ ಶಿಕ್ಷಣವು ಮಗುವಿಗೆ ಉತ್ತಮ ಶಿಕ್ಷಣದ ಬುನಾದಿಯನ್ನು ಹಾಕುತ್ತದೆ. ಉತ್ತಮ ಬೋಧನೆಯಿಂದ ಶಿಕ್ಷಣದ ಗುಣಮಟ್ಟ ಹೆಚ್ಚುತ್ತದೆ.

ವಿದ್ಯಾರ್ಥಿಗಳನ್ನು ಕಲಿಯುವಂತೆ ಪ್ರೇರೇಪಿಸುವುದೇ ಬೋಧನೆಯಾಗಿರುತ್ತದೆ. ಆದರೆ ವಿಷಯಗಳನ್ನು ವಿದ್ಯಾರ್ಥಿಗಳ ಮುಂದೆ ಪಠಿಸುವುದು ಮಾತ್ರವೇ ಬೋಧನೆಯಾಗುವುದಿಲ್ಲ. ಒಬ್ಬ ಶಿಕ್ಷಕನ ಬೋಧನೆಯು ಎಷ್ಟು ಪರಿಣಾಮಕಾರಿಯಾಗಿದೆ ಎಂದು ನಿರ್ಧರಿಸಬೇಕಾದರೆ ಬೋಧಿಸುವ ವಿದ್ಯಾರ್ಥಿಗಳು ಎಷ್ಟು ಚೆನ್ನಾಗಿ ಕಲಿಕೆ ಸಾಧಿಸಿದ್ದಾರೆ ಎಂಬುದರ ಮೇಲೆ ನಿರ್ಧರಿತವಾಗುತ್ತದೆ. ಅಂದರೆ ಹೆಚ್ಚು ಪರಿಣಾಮಕಾರಿಯಾಗಿ ಬೋಧಿಸಿದಷ್ಟು ಮಕ್ಕಳು ಕಡಿಮೆ ಸಮಯದಲ್ಲಿ ಹೆಚ್ಚಿನ ಫಲಿತಾಂಶವನ್ನು ನೀಡುತ್ತಾರೆ. ಒಬ್ಬ ಶಿಕ್ಷಕನ ಬೋಧನೆ ಎಷ್ಟು ಪರಿಣಾಮಕಾರಿಯಾಗಿದೆ ಎಂಬುದನ್ನು ವಿದ್ಯಾರ್ಥಿಗಳೇ ನಿರ್ಧರಿಸುತ್ತಾರೆ. ಆದ್ದರಿಂದಲೇ ಕ್ರಮವರಿತು ಬೋಧನೆಗಯ್ಯುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಬೋಧನೆಯು ದಾರಿ ದೀಪದಂತೆ ಕಾರ್ಯ ನಿರ್ವಹಿಸಿದರೆ ಮಾತ್ರ ಕಲಿಕೆ ಪರಿಣಾಮಕಾರಿಯಾಗುತ್ತದೆ.

ಬೋಧನೆಯ ವ್ಯಾಖ್ಯಾನಗಳು

ರೈಬರ್ನ್ ಅವರ ಪ್ರಕಾರ "ಬೋಧನೆಯು ಮಕ್ಕಳ ಮನೋಭಾವನೆಗಳಿಗೆ ಕೊಡುವ ತರಬೇತಿ ಯನ್ನು ಒಳಗೊಂಡಿರುತ್ತದೆ".

ಮಾರ್ಶೆಲ ಅವರ ಪ್ರಕಾರ "ಬೋಧನೆಯು ನಿರ್ದೇಶಿಸಿ ಮಾರ್ಗದರ್ಶಿಸುವುದರ ಜೊತೆಗೆ ವ್ಯವಸ್ಥಿತವಾದ ಕಲಿಕೆಯನ್ನು ರೂಪಿಸುತ್ತದೆ".

ಬರ್ಟನ್ ಅವರ ಪ್ರಕಾರ "ಬೋಧನೆಯು ಒಂದು ಪ್ರೇರಕ ಶಕ್ತಿ, ಉತ್ತೇಜನಕಾರಿ ಹಾಗೂ ಮಾರ್ಗದರ್ಶಿ".

ರೈಟನ್ ಅವರ ಪ್ರಕಾರ "ಮಕ್ಕಳ ಉದ್ವೇಗಗಳನ್ನು ನಿಯಂತ್ರಿಸಿ ಯೋಗ್ಯ ರೀತಿಯಲ್ಲಿ ಕಲಿಯಲು ಸಹಾಯಕ ವಾಗುವುದೇ ಬೋಧನೆ".

ಜಿಂಟ್ಸನ್ ಅವರ ಪ್ರಕಾರ "ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಪರಿಣಾಕಾರಿಯಾಗಿ ಪ್ರಭಾವ ಬೀರುವುದೇ ಬೋಧನೆ".

ಕ್ಲಾರ್ಕ್ ಅವರ ಪ್ರಕಾರ "ಬೋಧನೆ ಎಂದರೆ ಚಟುವಟಿಕೆಗಳಲ್ಲಿ ವಿನ್ಯಾಸಗೊಳಿಸುವುದು ಮತ್ತು ವಿದ್ಯಾರ್ಥಿಗಳ ವರ್ತನೆಯಲ್ಲಿ ಬದಲಾವಣೆ ತರುವುದು".

ಆಲ್‌ಕಾರ್ನ್ ಅವರ ಪ್ರಕಾರ "ಬೋಧನೆಯು ಶಿಕ್ಷಕನ ಒಂದು ವಿಶಿಷ್ಟ ಶಕ್ತಿ ಆಗಿದ್ದು ಕಲಿಯುವವರಿಗೆ ಮಾರ್ಗದರ್ಶನ ನೀಡುತ್ತದೆ".

ಈ ಮೇಲಿನ ವ್ಯಾಖ್ಯಾನಗಳನ್ನು ಗಮನಿಸಿದಾಗ ಬೋಧನೆಯು ವಿದ್ಯಾರ್ಥಿಗಳನ್ನು ಕಲಿಕೆಗೆ ಪ್ರಚೋಧಿಸುವುದರ ಜೊತೆಗೆ ವರ್ತನೆಯಲ್ಲಿ ಪರಿವರ್ತನೆಯನ್ನು ತರುತ್ತದೆ. ಅಲ್ಲದೆ ಒಂದು ಪ್ರೇರಕ ಶಕ್ತಿ ಆಗಿ ಚೈತನ್ಯ ಮೂಡಿಸುತ್ತದೆ. ಹೊಸ ಹೊಸ ವಿಷಯಗಳ ಕಡೆಗೆ ವಿದ್ಯಾರ್ಥಿಗಳ ಗಮನವನ್ನು ಸೆಳೆಯುತ್ತದೆ.

ಪಠ್ಯವಸ್ತು ಅಥವಾ ಪಠ್ಯಕ್ರಮ

ಯಾವುದೇ ಕಾರ್ಯಕ್ರಮವನ್ನು ಮಾಡಬೇಕಾದರೆ ಗುರಿ ಮತ್ತು ಉದ್ದೇಶಗಳು ಇರಬೇಕಾಗುತ್ತದೆ. ಹಾಗೆ ಶೈಕ್ಷಣಿಕ ಚಟುವಟಿಕೆಗಳಿಗೂ ಸಹ ಗುರಿ ಮತ್ತು ಉದ್ದೇಶಗಳು ಇರುತ್ತದೆ. ಕಾಲಕಾಲಕ್ಕೆ ಬದಲಾಗುವ ಸಮಾಜದ ಅವಶ್ಯಕತೆಗಳು ಹಾಗೂ ಆಕಾಂಕ್ಷೆಗಳಿಗೆ ಶಾಲಾ ಪಠ್ಯಕ್ರಮವು ಸ್ಪಂದಿಸುವಂತಿರಬೇಕು. ಅಂದರೆ ಶಾಲಾ ಪಠ್ಯಕ್ರಮದಲ್ಲಿ ಯಾವಾಗಲೂ ಬದಲಾವಣೆಗೆ ಅವಕಾಶವಿರಬೇಕು. ಈ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣದ ಪಠ್ಯವಸ್ತು ಹಾಗೂ ಕಾರ್ಯ ವಿಧಾನದ ಪುನರಚನೆಗೆ ನೂತನ ನಿರ್ದೇಶನಗಳನ್ನು ಹೊಂದಿದೆ.

ಶಿಕ್ಷಣ ಪ್ರಮುಖ ಪ್ರಕ್ರಿಯೆ ಆಗಿದೆ. ಮಗುವಿನ ಸರ್ವತೋಮುಖ ವಿಕಾಸವನ್ನುಂಟುಮಾಡುವುದು ಶಿಕ್ಷಣದ ಉದ್ದೇಶವಾಗಿರುವುದರಿಂದ ಶಿಕ್ಷಣದ ಉದ್ದೇಶ ಮತ್ತು ಗುರಿಗಳನ್ನು ಯಶಸ್ವಿಗೊಳಿಸಲು ನೆರವಾಗುವ ಸಾಧನವೇ ಪಠ್ಯಕ್ರಮ ಅಥವಾ ಪಠ್ಯವಸ್ತು. ಇದು ಬೋಧನೆ ಮತ್ತು ಕಲಿಕೆಗೆ ಮಾರ್ಗದರ್ಶಿ ಆಗಿದೆ. ಶಾಲಾ ಹಂತದಲ್ಲಿ ಮಕ್ಕಳು ಕಲಿಯಬೇಕಾದ ವಿಷಯಗಳು, ಅವುಗಳ ಪ್ರಮಾಣ, ಯಾವ ಯಾವ ವಿಷಯಗಳಿರಬೇಕು ಮತ್ತು ಶಿಕ್ಷಣದ ಗುರಿ ಮತ್ತು ಉದ್ದೇಶ ಇವೆಲ್ಲವುಗಳನ್ನು ಗಮನದಲ್ಲಿರಿಸಿಕೊಂಡು ರಚಿಸಲಾದ ಪೂರ್ವಯೋಜಿತ ಕಾರ್ಯಕ್ರಮವನ್ನೂ "ಪಠ್ಯಕ್ರಮ" ಎನ್ನುತ್ತಾರೆ. ಪಠ್ಯಕ್ರಮವು ಅಪೇಕ್ಷಿತ ಗುರಿಯನ್ನು ತಲುಪಲು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಸಹಾಯಕವಾಗುತ್ತದೆ.

ಪಠ್ಯಕ್ರಮದ ವಾಖ್ಯಾನಗಳು

ಕನ್ನಿಂಗ್ ಹ್ಯಾಮ್ ಅವರ ಪ್ರಕಾರ "ಶಾಲೆ ಒಂದು ಛಾಯಾ ಗ್ರಾಹಕರ ಕೊಠಡಿ ಅದರಲ್ಲಿರುವ ಸಾಮಗ್ರಿಗಳೇ ವಿದ್ಯಾರ್ಥಿಗಳು. ನಿರ್ದಿಷ್ಟ ತತ್ವ ಹಾಗೂ ಉದ್ದೇಶಗಳಿಂದ ಅವರನ್ನು ರೂಪಿಸುವ ಕಲಾವಿದನೇ ಶಿಕ್ಷಕ. ಅವನಿಗೆ ಸಹಾಯ ಮಾಡುವ ಸಾಧನವೇ ಪಠ್ಯವಸ್ತು".

ಕ್ರೋ ಮತ್ತು ಕ್ರೋ ಅವರ ಪ್ರಕಾರ "ವಿದ್ಯಾರ್ಥಿಗಳು ಶಾರೀರಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಸಂವೇಗಾತ್ಮಕವಾಗಿ, ಮತ್ತು ನೈತಿಕವಾಗಿ ವಿಕಾಸವಾಗಲು ಸಹಾಯಕವಾಗುವುದೆ ಪಠ್ಯವಸ್ತು".

ಕಾರ್ಟವಿ.ಗುಡ್ ಅವರ ಪ್ರಕಾರ "ಬೋಧನಾ ವಿಷಯಗಳನ್ನು ಸಮರ್ಪಕವಾಗಿ ಅಳವಡಿಸಿ ವ್ಯಕ್ತಿಯ ಜೀವನೋಪಾಯಕ್ಕೆ ಅನುಕೂಲಕರವಾದ ವೃತ್ತಿಯನ್ನವಲಂಬಿಸುವಂತೆ ಮಾಡುವುದೇ ಪಠ್ಯಕ್ರಮ".

ಜಾನ್‌ಡ್ಯೂಯಿ ಅವರ ಪ್ರಕಾರ "ಸಮಾಜದ ಅಗತ್ಯವನ್ನು ಪೂರೈಸುವ ಹಾಗೂ ಮಕ್ಕಳ ಭವಿಷ್ಯವನ್ನು ರೂಪಿಸಲು ನೆರವಾಗುವುದೇ ಪಠ್ಯಕ್ರಮ".

ಪ್ಯಾಟ್ರಿಕ್ ಅವರ ಪ್ರಕಾರ "ಪಠ್ಯಕ್ರಮ ಜೀವನದ ವಾಸ್ತವಿಕತೆಗಳನ್ನು ವ್ಯಕ್ತಗೊಳಿಸುತ್ತದೆ".

ಎಡ್ವರ್ಡ್ ಕರ್ಗ್ ಅವರ ಪ್ರಕಾರ "ಅಪೇಕ್ಷಿತ ಕಲಿಕಾ ಅನುಭವಗಳಿಗೆ ಅವಕಾಶಗಳನ್ನು ಒದಗಿಸಿಕೊಡುವುದೇ ಪಠ್ಯವಸ್ತು".

ಕೆ.ಜಿ. ಸಯ್ಯುದ್ದೀನ್ ಅವರ ಪ್ರಕಾರ "ಮಗುವನ್ನು ಅದು ಜೀವಿಸುತ್ತಿರುವ ಪರಿಸರಕ್ಕೆ ಅಥವಾ ಸಮಾಜಕ್ಕೆ ಹೊಂದಿಕೊಳ್ಳವಂತೆ ಮಾಡಲು ನೆರವಾಗುವ ವ್ಯವಸ್ಥಿತ ಮತ್ತು ಕ್ರಮಬದ್ಧ ಮಾರ್ಗವೇ ಪಠ್ಯವಸ್ತು".

ಎಡ್ವರ್ಡ್ ಎ. ಕರ್ಗ್ ಅವರ ಪ್ರಕಾರ "ಶಾಲೆಯಲ್ಲಿ ಮಕ್ಕಳು ಆರೋಗ್ಯವಾದ ಅನುಭವಗಳನ್ನು ಬೆಳಸಿಕೊಳ್ಳಲು ಅವಕಾಶ ಮಾಡಿಕೊಡುವುದೇ ಪಠ್ಯಕ್ರಮ".

ಈ ಮೇಲಿನ ಎಲ್ಲಾ ವ್ಯಾಖ್ಯಾನಗಳನ್ನು ಗಮನಿಸಿದಾಗ ಇಡೀ ಶೈಕ್ಷಣಿಕ ಎಲ್ಲಾ ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು ಪಠ್ಯವಸ್ತು ಒಳಗೊಂಡಿದೆ. ಸಮಾಜದ ಅನನ್ಯತೆ, ಶೈಕ್ಷಣಿಕ ಅನುಭವ ಮತ್ತು ಉದ್ದೇಶ ಹಾಗೂ ವಿದ್ಯಾರ್ಥಿಗಳ ವರ್ತನೆಯಲ್ಲಿನ ಬದಲಾವಣೆ ಹೀಗೆ ಒಟ್ಟಾರೆ ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಪಠ್ಯಕ್ರಮ ನೆರವಾಗುತ್ತದೆ.

ಕರ್ನಾಟಕದಲ್ಲಿನ ಬುಡಕಟ್ಟು ಸಮುದಾಯದ ಲಂಬಾಣಿ ಭಾಷಿಕರ ಮಕ್ಕಳು ಮಾತೃ ಭಾಷೆಯಾದ ಲಂಬಾಣಿ ಭಾಷೆಯನ್ನು ಹೊಂದಿದ್ದು, ಕನ್ನಡ ಭಾಷೆಯಲ್ಲಿ ಶಿಕ್ಷಣ ಪಡೆಯುವರು. ಆದರೆ ಕರ್ನಾಟಕ ಸರ್ಕಾರ ಭಾಷಾ ಅಲ್ಪಸಂಖ್ಯಾತರಾದ ಲಂಬಾಣಿ ಮಕ್ಕಳಿಗೆ ಔಪಚಾರಿಕ ಶಿಕ್ಷಣದಲ್ಲಿ ಕನ್ನಡವನ್ನು ಪ್ರಥಮ

ಭಾಷೆಯನ್ನಾಗಿ ಅಭ್ಯಾಸ ಮಾಡಬೇಕೆಂದು ಆದೇಶಿಸಿದೆ. ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಶೈಕ್ಷಣಿಕವಾಗಿ ಪ್ರಥಮ ಭಾಷೆಯ ವಿಷಯವನ್ನಾಗಿ ಕನ್ನಡವನ್ನು ಕಲಿಯುತ್ತಿದ್ದಾರೆ. ಈ ಸಂದರ್ಭದಲ್ಲಿ ಆ ಮಕ್ಕಳು ಓದುವಾಗ ಮತ್ತು ಬರೆಯುವಾಗ ಎದುರಿಸುವ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನವನ್ನು ಕರ್ನಾಟಕದ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಲಂಬಾಣಿ ಭಾಷಿಕರ ಮಕ್ಕಳಿಗೆ ಸೀಮಿತಗೊಳಿಸಲಾಗಿದೆ. ಮುಖ್ಯವಾಗಿ ಲಂಬಾಣಿ ತಾಂಡಾಗಳಲ್ಲಿನ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷಾ ಪಠ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಈ ಅಧ್ಯಯನ ವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಕನ್ನಡ ಭಾಷೆಯನ್ನು ಕುರಿತು ಅಧ್ಯಯನಗಳು ಬೇರೆ ಬೇರೆ ನೆಲೆಗಳಲ್ಲಿ ನಡೆದಿದ್ದರೂ ಕನ್ನಡ ಭಾಷಾ ಕಲಿಕೆಯ ವಲಯದ ಬಗ್ಗೆ ಹೆಚ್ಚಿನ ಅಧ್ಯಯನಗಳು ಮತ್ತು ಆ ಕುರಿತ ಆಸಕ್ತಿ ಕನ್ನಡ ಅಧ್ಯಯನ ಮಾಡು ವವರಲ್ಲಿ ಕಡಿಮೆ. ಆದರೆ ಔಪಚಾರಿಕ ಕನ್ನಡ ಕಲಿಕೆ ಮತ್ತು ಬಳಕೆಯಲ್ಲಿ ಆಲಿಸುವಿಕೆ ಮತ್ತು ಮಾತನಾಡುವ ಪ್ರಕ್ರಿಯೆಯನ್ನು ಕುರಿತು ಸಾಮಾನ್ಯವಾಗಿ ಇಲ್ಲಿಯವರೆಗೆ ಆಗಿರುವ ಅಧ್ಯಯನಗಳು ಈ ಕೆಲಸ ಮಾಡಿದಂತಿಲ್ಲ. ಹಾಗೆ ಔಪಚಾರಿಕ ಶಿಕ್ಷಣದ ಕನ್ನಡ ಕಲಿಕೆಯಲ್ಲಿ ಓದು ಮತ್ತು ಬರವಣಿಗೆಯನ್ನು ಕುರಿತು ಕೆಲವೊಂದು ಅಧ್ಯಯನಗಳು ನಡೆದರೂ ಕಡಿಮೆ ಎಂದೇ ಹೇಳಬೇಕು. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಆಲಿಸುವ ಮತ್ತು ಮಾತನಾಡುವ ಕೌಶಲದ ಕುರಿತು ಚರ್ಚೆ ಮಾಡಿಲ್ಲ. ಈ ಎರಡು ಕೌಶಲಗಳಲ್ಲಿ ಕಾಣಿಸಿ ಕೊಳ್ಳುವ ಕೊರತೆಗಳು ಓದು ಮತ್ತು ಬರವಣಿಗೆಯಲ್ಲಿ ಕಾಣಿಸಿಕೊಳ್ಳುತ್ತಿರುತ್ತವೆ. ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಔಪಚಾರಿಕವಾಗಿ ಶಾಲಾ ತರಗತಿಗಳಲ್ಲಿ ಕನ್ನಡವನ್ನು ಓದುವಲ್ಲಿ ಮತ್ತು ಬರೆಯುವಲ್ಲಿ ಎದುರಿಸುವ ಸಮಸ್ಯೆಗಳನ್ನು ಮತ್ತು ಕಲಿಕೆಗೆ ಅಡ್ಡಿಯಾಗುವ ಭಾಷಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳನ್ನು ಚರ್ಚೆ ಮಾಡುವುದು ಹಾಗೂ ಅವುಗಳನ್ನು ಸರಿಪಡಿಸುವಲ್ಲಿ ಕೈಗೊಳ್ಳಬಹುದಾದ ಪರಿಹಾರೋ ಪಾಯಗಳನ್ನು ಕುರಿತು ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶ.

ಕರ್ನಾಟಕದಲ್ಲಿ ಹಲವಾರು ಸಮುದಾಯದ ಭಾಷಿಕ ಮಕ್ಕಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ೨೦೧೦ರ ವೇಳೆಗೆ ಎಲ್ಲರಿಗೂ ತೃಪ್ತಿದಾಯಕ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ನೀಡುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭವಾದ 'ಸರ್ವಶಿಕ್ಷಾ ಅಭಿಯಾನ' ತನ್ನ ಯೋಜನೆಯ ಅನುಷ್ಠಾನಕ್ಕಾಗಿ ಇದುವರೆಗೆ ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿದೆ. ಯೋಜನೆಗಾಗಿ ಹಣದ ಹೊಳೆ ಹರಿದರೂ ಇದರ ಉದ್ದೇಶ ಈಡೇರಿದೆಯೆ? ಎಂಬ ಪ್ರಶ್ನೆಗೆ ೨೦೦೬ನೇ ಸಾಲಿನ ವಾರ್ಷಿಕ ಶೈಕ್ಷಣಿಕ ವರದಿಯನ್ವಯ ೫ನೇ ತರಗತಿ ಓದುತ್ತಿರುವ ಮಕ್ಕಳ ಪೈಕಿ ಶೇಕಡಾ ೫೫ರಷ್ಟು ವಿದ್ಯಾರ್ಥಿಗಳಿಗೆ ಸರಳ ಭಾಗಕಾರವೂ ಗೊತ್ತಿಲ್ಲ. ಶೇಕಡಾ ೪೭ರಷ್ಟು ಮಕ್ಕಳಿಗೆ ೨ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳನ್ನು ಸಮರ್ಪಕವಾಗಿ ಓದಲು ಬರುವುದಿಲ್ಲ ಎಂಬ ನಿರಾಶಾದಾಯಕ ಉತ್ತರವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಯ ರಾಜ್ಯಸಚಿವೆ

ಡಿ. ಪುರಂದರೇಶ್ವರಿಯವರು ರಾಜ್ಯ ಸಭೆಯಲ್ಲಿ ಹೇಳಿಕೆಯನ್ನು ನೀಡಿದ್ದಾರೆ. ಇಂಥ ಹೇಳಿಕೆಯು ಸರ್ವರನ್ನು ಚಿಂತೆ ಮಾಡುವುದರ ಜೊತೆಗೆ ಚಿಂತನೆಗೂ ಎಡೆಮಾಡಿಕೊಟ್ಟಿದೆ.

ಗುರಿಮುಟ್ಟುವೆಡೆಗೆ ಶೈಕ್ಷಣಿಕ ಚಟುವಟಿಕೆಗಳು ಸುಗಮವಾಗಿ ಸಾಗುತ್ತಿಲ್ಲ ಎಂಬುದಕ್ಕೆ ಹಲವಾರು ಕಾರಣಗಳು ಇರಬಹುದು. ಆದರೆ ಶಿಕ್ಷಣ ತಜ್ಞರಾಗಲಿ ಅಥವಾ ಶಿಕ್ಷಣ ಇಲಾಖೆಯಾಗಲಿ ದೊಡ್ಡ ದೊಡ್ಡ ಕಾರಣಗಳತ್ತ ಚಿಂತನೆ ನಡೆಸಿವೆಯೆ ಹೊರತು ಮೂಲ ಕಾರಣಗಳತ್ತ ಗಮನ ಹರಿಸುವುದಿಲ್ಲ. ಹೀಗೆ ನಿರಾಕರಿಸಿದ ಮೂಲ ಕಾರಣಗಳು ಜಟಿಲವಾದ ಸಮಸ್ಯೆಗಳಿಗೆ ಕಾರಣವಾಗುತ್ತವೆಂಬ ಅಂಶದತ್ತ ಗಮನ ನೀಡುವುದಿಲ್ಲ. ಒಂದು ಸಣ್ಣ ಅಂಗದ ವೈಕಲ್ಯ ಇಡೀ ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತೆ ಕಡೆಗಣಿಸಬಹುದಾದ ಕೆಲ ಮೂಲ ಕಾರಣಗಳೂ ಯಶಸ್ಸಿನ ಹಾದಿಗೆ ಮುಳ್ಳಾಗಿ ಕಾಡುತ್ತವೆ. ಅಂಥ ಸಣ್ಣ ಕಂಟಿಯನ್ನು ಕಡಿಯದೆ, ತೊಲಗಿಸದೆ ಸುಗಮ ಹಾದಿ ಸಾಧ್ಯವಿಲ್ಲ. ಅಂಥಹ ಹಲವಾರು ಮೂಲ ಕಾರಣಗಳಲ್ಲಿ 'ಅನ್ಯ' ಮಾತೃಭಾಷೆಯಿಂದ ಬಂದ ಮಕ್ಕಳ ಕಡೆಗಣನೆಯೂ ಒಂದೆಂದು ಹೇಳಬಹುದು. ತನ್ನ ಮಾತೃ ಭಾಷೆಯಲ್ಲದ ಅನ್ಯ 'ಮಾತೃಭಾಷೆ'ಯಲ್ಲಿ ಕಲಿಯಬೇಕಾದ ಮಕ್ಕಳ ಸಮಸ್ಯೆಗಳನ್ನು ಅಧ್ಯಯನ ಮಾಡದಿದ್ದರೆ ಮೇಲೆ ತಿಳಿಸಿದ ಶೇಕಡಾ ೫೫ ಹಾಗೂ ಶೇಕಡಾ ೪೭ರ ಮಕ್ಕಳ ಸಂಖ್ಯೆ ಹೆಚ್ಚುತ್ತಲೇ ಹೋಗಬಹುದು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕರ್ನಾಟಕದ ರಾಜ್ಯ ಭಾಷೆ ಕನ್ನಡವಾಗಿದ್ದರೂ ೨೦೦೪ರ ಕೇಂದ್ರ ಭಾಷಾ ಅಲ್ಪಸಂಖ್ಯಾತರ ಆಯುಕ್ತರ ವರದಿಯ ಪ್ರಕಾರ ಇಲ್ಲಿ ಕೊಂಕಣಿ ಭಾಷೆಯ ೭,೦೬,೩೯೭, ಲಂಬಾಣಿ ಭಾಷೆಯ ೧೫,೪೭,೭೯೭, ತಮಿಳು ಭಾಷೆಯ ೧೭,೨೮,೩೬೧ ಹಾಗೂ ಮರಾಠಿ ಭಾಷೆಯನ್ನಾಡುವ ೧೬,೪೦,೦೨೦ ಜನರು ವಾಸಿಸುತ್ತಿದ್ದಾರೆ.

ಬೇರೆ ಮಾತೃಭಾಷೆಯಿಂದ ಬಂದ ಮಕ್ಕಳಿಗೂ ಕನ್ನಡ ಮಾಧ್ಯಮದ ಪಠ್ಯಕ್ರಮ ಅಳವಡಿಸಿ ಅವರನ್ನು ಕನ್ನಡ ಭಾಷಿಕ ಮಕ್ಕಳಂತೆ ಪರಿಗಣಿಸಿ ಬೋಧಿಸಿ, ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತಿದೆ. ಆದರೆ ಅಂತಹ ಮಕ್ಕಳು ಎದುರಿಸುತ್ತಿರುವ ಹಾಗೂ ಅವರಿಗೆ ಬೋಧಿಸುತ್ತಿರುವ ಶಿಕ್ಷಕರ ಸಮಸ್ಯೆಗಳತ್ತ ಗಮನ ಹರಿಸ ದಿರುವುದು ಶಿಕ್ಷಣದ ಪ್ರಗತಿಗೆ ಅಡ್ಡಗಾಲಾಗುವುದರಲ್ಲಿ ಸಂದೇಹವಿಲ್ಲ. ಇಂತಹ ಸಮಸ್ಯೆಗಳ ಗಂಭೀರತೆಯನ್ನು ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಕಲಿಯುವಲ್ಲಿ ಎದುರಿಸುತ್ತಿರುವುದು ಕಂಡುಬರುತ್ತದೆ.

ಲಂಬಾಣಿ ಜನಾಂಗದ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಕಲಿಯುವಾಗ ಪಡುವ ಪಾಡು ಹೇಳತೀರದು. ಮಗು ೫ ವರ್ಷದವರೆಗೆ ತನ್ನ ಮನೆಯವರೊಂದಿಗೆ ವ್ಯವಹರಿಸುವ ಭಾಷೆಯೇ ಅದರ ಮಾತೃ ಭಾಷೆಯಾಗಿರುತ್ತದೆ. ಅಂದರೆ ಲಂಬಾಣಿ ಮಕ್ಕಳ ಮಾತೃಭಾಷೆ 'ಲಂಬಾಣಿ'ಯೇ ಆಗಿರುವುದು ಸಹಜ. ಆ ಮಗು ಒಂದನೇ ತರಗತಿಗೆ ಕಾಲಿರಿಸುವುದಕ್ಕಿಂತ ಮೊದಲೇ ತನ್ನ ಭಾಷೆಯ ಹಲವಾರು ಧ್ವನಿ, ಪದ, ವಾಕ್ಯ, ವಿಷಯಗಳನ್ನು ತುಂಬಿಕೊಂಡೆ ಬಂದಿರುತ್ತದೆ. ಈ ಮಗು ಶಾಲೆಗೆ ಬಂದಾಗ ಆಡುವ ಭಾಷೆಯೇ ಬೇರೆ, ಶಿಕ್ಷಕರು ಕಲಿಸುವ ಭಾಷೆಯೇ ಬೇರೆಯಾಗಿ ಅದಕ್ಕೆ ಹೊಸದೊಂದು ಪ್ರಪಂಚಕ್ಕೆ ಕಾಲಿರಿಸಿದ ಅನುಭವ ವಾಗುತ್ತದೆ. ಮಗು ತನಗೆ ಅರ್ಥವಾಗದ ಭಾಷೆಯಲ್ಲಿ ಕಲಿಕೆಯನ್ನು ಆರಂಭಮಾಡುತ್ತದೆ.

ಕನ್ನಡ ಮಾಧ್ಯಮದ ಮಕ್ಕಳಿಗೆ ನಿಗದಿಗೊಳಸಿದ ಪಠ್ಯಕ್ರಮದಂತೆ ೧ನೇ ತರಗತಿಗೆ ಕಾಲಿಟ್ಟ ಮಗು ಸರಳ ಜನಪ್ರಿಯ ಪ್ರಾಸಗೀತೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳಬೇಕಾಗುವುದು. ಆಲಿಸಿದ ನಂತರ ಯಾರು? ಯಾವಾಗ? ಎಲ್ಲಿ? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥವಾಗಬೇಕು. 'ಲಂಬಾಣಿ' ಭಾಷೆಯ ಮಗುವಿಗೆ ಇದು ಸಾಧ್ಯವಾದೀತೆ? ಲಂಬಾಣಿ ಮಾತೃಭಾಷೆಯ ಮಗುವಿಗೆ ಪರಿಸರ ಅಧ್ಯಯನ ವಿಷಯದಲ್ಲಿನ ದೇಹದ ಮುಖ್ಯ ಭಾಗಗಳನ್ನು ಗುರುತಿಸುವ, ಅಂಗಾಂಗದ ಸ್ವಚ್ಛತೆ, ಪ್ರಾಣಿ, ಪಕ್ಷಿ, ತರಕಾರಿ, ಸಸ್ಯಗಳನ್ನು ಗುರುತಿಸುವ ಕೆಲಸ ಮಾಡುವುದಾದರು ಹೇಗೆ?

ಹೀಗೆ ಲಂಬಾಣಿ ಭಾಷಿಕ ಮಕ್ಕಳು ಶಾಲೆಗೆ ಬರುವ ಮುನ್ನ ಯಾಡಿ (ತಾಯಿ) ಬಾಯಿ (ಅಕ್ಕ) ನಾನಾ (ಅಜ್ಜ) ಬಾಪ್ (ತಂದೆ) ಗೋಣ್ಣಿ (ಹೆಂಡತಿ) ಚೋರಿ (ಹುಡುಗಿ) ವಾಘ (ಹುಲಿ) ಗಾವಡಿ (ಆಕಳು) ಕುತ್ರಾ (ನಾಯಿ) ಸಿಬ್ಬಿ (ಬೆಕ್ಕು) ಛೇಳಿ (ಆಡು) ವೆಂಗಣ್ (ಬದನೆಕಾಯಿ) ಅಂಬಾ (ಮಾವಿನ ಹಣ್ಣು) ಆಮಲಿ ಝೂಡ್ (ಹುಣಸೆಮರ) ಖೇಳಾ (ಬಾಳೆಹಣ್ಣು) ಕಾಂದಾ (ಈರುಳ್ಳಿ) ಕಾಕಡಿ (ಸೌತೆಕಾಯಿ) ಮೊದಲಾದ ತನ್ನ ಮಾತೃಭಾಷೆಯ ಸಾವಿರಾರು ಪದಗಳನ್ನು ತಲೆಯಲ್ಲಿ ತುಂಬಿಕೊಂಡು ಬಂದ ಮಗು, ಕನ್ನಡ ಭಾಷಿಕ ಪರಿಸರದಿಂದಲೂ ಹೊರತಾದ, ಲಂಬಾಣಿ ಭಾಷಿಕ ಪರಿಸರದ ನಡುವೆ ಇರುವ ಮಗು ಕನ್ನಡ ಭಾಷೆಯ ಧ್ವನಿ, ಪದ, ವಾಕ್ಯ, ದಿನನಿತ್ಯದ ಬಳಕೆಯ ವಿಷಯವನ್ನಾಗಲಿ ಕಲಿಯುವುದು ಹೇಗೆ ಸಾಧ್ಯ. ಎಲ್ಲ ವಿಷಯಗಳ ಅಡಿಪಾಯವಾದ ಭಾಷೆಯೇ ಅರ್ಥವಾಗದಿದ್ದಾಗ ಮಕ್ಕಳಲ್ಲಿ ಪರಿಣಾಮಕಾರಿಯಾದ ಕನ್ನಡ ಕಲಿಕೆ ಆಗದು, ಆದರೂ ನಿರೀಕ್ಷಿತ ಮಟ್ಟದಲ್ಲಿ ಸಾಧ್ಯವಿಲ್ಲ.

ಹೀಗಾಗಿ 'ಅನ್ಯ' ಮಾತೃಭಾಷೆಯಿಂದ ಬಂದ ಮಕ್ಕಳು ಕನ್ನಡ ಭಾಷೆಯನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ಕಲಿಯುವಲ್ಲಿ ಎದುರಿಸುವ ಸಮಸ್ಯೆಗಳನ್ನು ಬಿಡಿ ಬಿಡಿಯಾಗಿ ಅಧ್ಯಯನ ಮಾಡುವ ಅಗತ್ಯತೆ ಇದೆ. ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಪ್ರಥಮ ಭಾಷೆಯಾಗಿ ಕನ್ನಡವನ್ನು ಕಲಿಯುವಲ್ಲಿ ಅನುಭವಿಸುವ ಅಥವಾ ಎದುರಿಸುವ ಸಮಸ್ಯೆಗಳ ಕುರಿತು ಅಧ್ಯಯನ ಮಾಡುವ ಅಗತ್ಯತೆಯನ್ನು ಮನಗಂಡು ಪ್ರಸ್ತುತ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಕರ್ನಾಟಕದ ಎಲ್ಲಾ ಜಿಲ್ಲೆಯಲ್ಲಿನ ಲಂಬಾಣಿ ಮಕ್ಕಳಿಗೂ ಶಾಲೆಯಲ್ಲಿನ ಕಲಿಕೆಯಲ್ಲಿ ಅನೇಕ ಸಮಸ್ಯೆಗಳಿವೆ. ಅವುಗಳನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಪ್ರಸ್ತುತ ಈ ಅಧ್ಯಯನಕ್ಕೆ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಜಿಲ್ಲೆಗಳಲ್ಲಿನ ಎಲ್ಲಾ ತಾಲ್ಲೂಕುಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅದರಲ್ಲಿಯೂ ಇತರೆ ಭಾಷಿಕರಿಂದ ಪ್ರತ್ಯೇಕವಾಗಿ ವಾಸವಾಗಿರುವ ತಾಂಡಾ ಶಾಲೆಗಳು ಮತ್ತು ಆ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಲಂಬಾಣಿ ಮಕ್ಕಳು ಈ ಅಧ್ಯಯನದ ವ್ಯಾಪ್ತಿಗೆ ಬರುತ್ತಾರೆ. ಪ್ರತಿಯೊಂದು ತಾಲ್ಲೂಕಿಗೆ ಮೂರು ತಾಂಡಗಳ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗಳನ್ನು, ಅದರಲ್ಲಿ ಒಂದರಿಂದ ನಾಲ್ಕನೇ ತರಗತಿಯ ಮಕ್ಕಳನ್ನು ಪ್ರಸ್ತುತ ಅಧ್ಯಯನಕ್ಕೆ

ಆಯ್ಕೆಮಾಡಿಕೊಳ್ಳಲಾಗಿದೆ. ೨೦೦೬-೨೦೦೭ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಲಂಬಾಣಿ ಮಕ್ಕಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ. ಇದು ಈ ಅಧ್ಯಯನದ ಮಿತಿಯೂ ಆಗಿದೆ. ಇದು ಕೇವಲ ಒಂದು ವರ್ಷದ ಸಮಸ್ಯೆಯಲ್ಲ. ನಿರಂತರವಾಗಿ ಆ ಮಕ್ಕಳಲ್ಲಿ ಕಾಡುತ್ತಿರುವ ಸಮಸ್ಯೆಯಾಗಿದೆ.

ಅಧ್ಯಯನದ ವಿಧಾನ

ಸಂಶೋಧನೆಯ ಅಧ್ಯಯನಕ್ಕೆ ಸ್ಥಳದ ಆಯ್ಕೆ

ಪ್ರಸ್ತುತ ಈ ಅಧ್ಯಯನವು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕು ಮತ್ತು ಕೊಪ್ಪಳ ಜಿಲ್ಲೆಯ ನಾಲ್ಕು ತಾಲ್ಲೂಕುಗಳು. ಒಟ್ಟು ಹನ್ನೊಂದು ತಾಲ್ಲೂಕುಗಳಲ್ಲಿ ಬರುವ ತಾಂಡಾಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಆಯ್ದುಕೊಂಡ ತಾಲ್ಲೂಕುಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಮೂರು ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡಿಕೊಂಡ ಪ್ರಾಥಮಿಕ ಶಾಲೆಗಳು ಕರ್ನಾಟಕ ಸರ್ಕಾರದಿಂದ ಅನುಮತಿ ಪಡೆದವುಗಳಾಗಿವೆ. ಇವುಗಳಲ್ಲಿ ಕರ್ನಾಟಕ ಸರ್ಕಾರದ ಪಠ್ಯಕ್ರಮಕ್ಕನುಸಾರವಾಗಿ ಇಲ್ಲಿ ಶಿಕ್ಷಣ ನೀಡಲಾಗುತ್ತದೆ. ಈ ಶಾಲೆಗಳಲ್ಲಿ ಒಂದರಿಂದ ನಾಲ್ಕನೆ ತರಗತಿಯವರೆಗಿನ ಮಕ್ಕಳನ್ನು ಮಾತ್ರ ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲೆಯ ತಾಲ್ಲೂಕುಗಳು

೧. ಬಳ್ಳಾರಿ

೨. ಹೂವಿನ ಹಡಗಲಿ

೩. ಹಗರಿಬೊಮ್ಮನಹಳ್ಳಿ

೪. ಹೊಸಪೇಟೆ

೫. ಕೂಡ್ಲಿಗಿ

೬. ಸಂಡೂರು

೭. ಸಿರುಗುಪ್ಪ



ಕೊಪ್ಪಳ ಜಿಲ್ಲೆಯ ತಾಲ್ಲೂಕುಗಳು

೧. ಕೊಪ್ಪಳ

೨. ಗಂಗಾವತಿ

೩. ಯಲಬುರ್ಗಾ

೪. ಕುಷ್ಟಗಿ



೧೯೯೬-೯೭ರಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ಲಂಬಾಣಿಗರ ಜನಸಂಖ್ಯೆ

ಕ್ರ.ಸಂ.	ಜಿಲ್ಲೆಯ ಹೆಸರು	ಜನಸಂಖ್ಯೆ	ಪ್ರತಿಶತ
೧	ಗುಲಬರ್ಗಾ	೨೬೮೫೪೪	೧೭.೯೫
೨	ವಿಜಾಪುರ	೨೪೪೫೬೩	೧೬.೩೫
೩	ಶಿವಮೊಗ್ಗ	೧೫೯೮೩೬	೧೦.೬೮
೪	ಧಾರವಾಡ	೧೨೮೮೦೧	೮.೬೧
೫	ಬಳ್ಳಾರಿ	೧೧೩೯೯೨	೭.೬೨
೬	ರಾಯಚೂರು	೧೦೫೯೮೦	೭.೦೮
೭	ಚಿತ್ರದುರ್ಗ	೧೦೨೭೬೩	೬.೮೭
೮	ಬೀದರ	೯೮೪೬೦	೬.೫೮
೯	ತುಮಕೂರು	೬೫೨೧೨	೪.೩೬
೧೦	ಚಿಕ್ಕಮಗಳೂರು	೫೯೮೨೪	೪.೦
೧೧	ಬೆಂಗಳೂರು	೫೩೧೮೫	೩.೫೫
೧೨	ಬೆಳಗಾವಿ	೨೮೨೨೦	೧.೮೯
೧೩	ಹಾಸನ	೨೬೯೭೦	೧.೮೦
೧೪	ಮೈಸೂರು	೨೦೨೮೭	೧.೩೬
೧೫	ಕೋಲಾರ	೧೦೭೮೯	೦.೭೨
೧೬	ಉತ್ತರ ಕನ್ನಡ	೬೩೫೯	೦.೪೨
೧೭	ಮಂಡ್ಯ	೨೨೮೯	೦.೧೫
	ಒಟ್ಟು, ಜನಸಂಖ್ಯೆ	೧೪,೯೬,೦೭೮	೧೦೦.೦೦

ಆಧಾರ : ಎಂ.ಎಸ್. ನಾಯಕ್ ಸಂ. ಕರ್ನಾಟಕ ಬಂಜಾರಾ ಕೈಪಿಡಿ, ೧೯೯೭ ಪು. ೧೭೬, ಅಖಿಲ ಕರ್ನಾಟಕ ಬಂಜಾರಾ ವಿದ್ಯಾರ್ಥಿ ವೇದಿಕೆ ರಿ. ಬೆಂಗಳೂರು.

ಕ್ಷೇತ್ರಕಾರ್ಯ ಕೈಗೊಂಡ ಸ್ಥಳಗಳು

ಬಳ್ಳಾರಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಂಡ ಲಂಬಾಣಿ ತಾಂಡಾ ಪ್ರಾಥಮಿಕ ಶಾಲೆಗಳು

ಕ್ರ.ಸಂ.	ತಾಲ್ಲೂಕುಗಳು	ಶಾಲೆಯ ಹೆಸರು
೧.	ಬಳ್ಳಾರಿ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊನ್ನಾಳಿ ತಾಂಡಾ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೆಳಗಲ್ಲು ತಾಂಡಾ
		೩. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಜಾನೆಕುಂಟೆ ತಾಂಡಾ
೨.	ಹೂವಿನ ಹಡಗಲಿ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ದಾಸರಹಳ್ಳಿ ಕೆರೆತಾಂಡಾ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಸರಹಳ್ಳಿ ತಾಂಡಾ
		೩. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಲ್ವಿತಾಂಡಾ
		೪. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮುದ್ಲಾಪುರ ಹೊಸತಾಂಡಾ
೩.	ಹಗರಿಬೊಮ್ಮನಹಳ್ಳಿ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶ್ರೀರಾಮನಗರ ತಾಂಡಾ
		೨. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮರಬ್ಬಿಹಾಳ್ ತಾಂಡಾ
		೩. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಸರಕೊಡು ತಾಂಡಾ
೪.	ಹೊಸಪೇಟೆ	೧. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನಾಗಲಾಪುರ ತಾಂಡಾ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮರಿಯಮ್ಮನಹಳ್ಳಿ ತಾಂಡಾ
		೩. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆರೆತಾಂಡ
೫.	ಕೂಡ್ಲಿಗಿ	೧. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತಿಮ್ಮಲಾಪುರ ಹಳೆ ತಾಂಡ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಸಾಪುರ ತಾಂಡ
		೩. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ದೂಪದಹಳ್ಳಿ ತಾಂಡ
೬.	ಸಂಡೂರು	೧. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತುಮಲೆ ತಾಂಡ
೭.	ಸಿರುಗುಪ್ಪ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಣಜಾರು ಹಟ್ಟಿ ತಾಂಡ

ಕೊಪ್ಪಳ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಂಡ ಲಂಬಾಣಿ ತಾಂಡ ಪ್ರಾಥಮಿಕ ಶಾಲೆಗಳು

ಕ್ರ.ಸಂ.	ತಾಲ್ಲೂಕುಗಳು	ಶಾಲೆಯ ಹೆಸರು
೧.	ಕೊಪ್ಪಳ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕುಣಕೇರಿ ತಾಂಡ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆಂಚನದೋಣಿ ತಾಂಡ
		೩. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಿರೇಸೋಳಿಕೇರಿ ತಾಂಡ
೨.	ಗಂಗಾವತಿ	೧. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಬಸಾಪಟ್ಟಣ ತಾಂಡ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಡವಿಬಾವಿ ತಾಂಡ
		೩. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಇಂಗಳದಾಳ ತಾಂಡ
೩.	ಯಲಬುರ್ಗಾ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಲ್ಲೂರುತಾಂಡ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕುಪ್ಪ ತಾಂಡ
		೩. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಣಸಿಹಾಳ್ ತಾಂಡ
೪.	ಕುಷ್ಟಗಿ	೧. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ವೆಂಕಟಾಪುರ ತಾಂಡ
		೨. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆ. ಬೋಜೂರು ತಾಂಡ
		೩. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೇಣಸಗೇರಿ ತಾಂಡ

ಮಾಹಿತಿ ಒದಗಿಸಿದ ವಿದ್ಯಾರ್ಥಿಗಳ ಆಯ್ಕೆ

ಯಾದೃಚ್ಛಿಕ ವಿಧಾನದ ಮೂಲಕ ವಿದ್ಯಾರ್ಥಿಗಳ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬರುವ ತಾಂಡಗಳ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಲಂಬಾಣಿ ಜನಾಂಗದ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ಜನಾಂಗದವರು ತಾಂಡಾಗಳಲ್ಲಿ ಅಭ್ಯಾಸ ಮಾಡುವುದಿಲ್ಲ. ಇಂತಹ ಶಾಲೆಗಳಲ್ಲಿ ಲಂಬಾಣಿ ಮಾತೃ ಭಾಷಿಕ ಮಕ್ಕಳು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇವರು ಊರು, ಗ್ರಾಮಗಳಿಂದ ಸುಮಾರು ಐದರಿಂದ ಹನ್ನೆರಡು ಕಿ.ಮೀ. ದೂರದಲ್ಲಿ ಪ್ರತ್ಯೇಕವಾಗಿ ವಾಸಿಸುವುದರಿಂದ ತಮ್ಮ ಮನೆಯ ಸುತ್ತಮುತ್ತಲಿನ ಪರಿಸರವೂ ಲಂಬಾಣಿಭಾಷಿಕ ಪರಿಸರವೇ ಇರುವುದರಿಂದ ಲಂಬಾಣಿ ಮಕ್ಕಳು ಶಾಲೆಗೆ ಬರುವ ಪೂರ್ವದಲ್ಲಿ ಕನ್ನಡ ಭಾಷೆಯನ್ನು ಅಲ್ಪಸ್ವಲ್ಪವಾದರೂ ಬಲ್ಲವರಾಗಿರುವುದಿಲ್ಲ. ಲಂಬಾಣಿ ಭಾಷಿಕ ಮಕ್ಕಳು ತಮ್ಮ ಮಾತೃಭಾಷೆಯ ಹೊರತು ಬೇರೆ ಭಾಷೆಯ ಅರಿವು ಇರುವುದಿಲ್ಲ. ಅಂತಹ ಲಂಬಾಣಿ ಭಾಷಿಕ ಮಕ್ಕಳು ಔಪಚಾರಿಕ ಶಿಕ್ಷಣದಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಮಾತ್ರ ಕನ್ನಡ ಭಾಷಾ ಕಲಿಕೆ ನಡೆಯುತ್ತಿರುತ್ತದೆ. ಹೀಗೆ ಕನ್ನಡ ಭಾಷೆಯ ಸ್ವಲ್ಪವೂ ಜ್ಞಾನವಿಲ್ಲದ ಲಂಬಾಣಿ ಭಾಷಿಕ ಮಕ್ಕಳನ್ನು

ಸಂಶೋಧನೆಗೆ ಮಾಹಿತಿ ಸಂಗ್ರಹಿಸಲು ಆಯ್ಕೆ ಮಾಡಿಕೊಳ್ಳಲಾಗಿದೆ. ೨೦೦೬-೨೦೦೭ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡುತ್ತಿರುವ ಲಂಬಾಣಿ ಭಾಷಿಕ ಮಕ್ಕಳನ್ನು ಮಾಹಿತಿದಾರರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಕನ್ನಡ ಪ್ರಥಮ ಭಾಷೆಯಾಗಿ ಕಲಿಯುವ ಲಂಬಾಣಿ ಭಾಷಿಕ ಮಕ್ಕಳನ್ನು ಒಂದನೇ ತರಗತಿಯಿಂದ ನಾಲ್ಕನೆಯ ತರಗತಿಯವರೆಗೆ ಅಂದರೆ ಪ್ರತಿಯೊಂದು ತರಗತಿಯಿಂದ ಐದು ಗಂಡು ಮಕ್ಕಳು, ಐದು ಹೆಣ್ಣು ಮಕ್ಕಳು. ಹೀಗೆ ಹತ್ತು ಮಕ್ಕಳನ್ನು ಆಯ್ಕೆಮಾಡಿಕೊಂಡು, ಒಟ್ಟು ಪ್ರತಿಯೊಂದು ಶಾಲೆಯಿಂದ ನಲವತ್ತು ಮಕ್ಕಳನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಲಂಬಾಣಿ ಮಾತೃಭಾಷೆ ಮಕ್ಕಳು

೧ನೇ ತರಗತಿ			೨ನೇ ತರಗತಿ			೩ನೇ ತರಗತಿ			೪ನೇ ತರಗತಿ		
ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
೫	೫	೧೦	೫	೫	೧೦	೫	೫	೧೦	೫	೫	೧೦

ಈ ಮೇಲೆ ಆಯ್ಕೆ ಮಾಡಿಕೊಂಡ ಲಂಬಾಣಿ ಭಾಷಿಕ ಮಕ್ಕಳ ಸಾಮಾಜಿಕ, ಭಾಷಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಮುಖ್ಯವಾಗಿ ಗಮನಿಸಲಾಗಿದೆ.

ಮಾಹಿತಿ ಸಂಗ್ರಹಿಸುವ ವಿಧಾನ

ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆ ಓದುವಾಗಿನ ಸಮಸ್ಯೆಗಳನ್ನು ಗುರುತಿಸಲು ಎರಡು ವಿಧಾನಗಳನ್ನು ಅನುಸರಿಸಲಾಯಿತು. ಒಂದನೇ ತರಗತಿಯಿಂದ ನಾಲ್ಕನೆಯ ತರಗತಿಯವರೆಗೆ ಅವರು ಅಭ್ಯಾಸ ಮಾಡುವ ಆಯಾ ತರಗತಿಯ ಕನ್ನಡ ಭಾಷೆಯ ಪಠ್ಯಪುಸ್ತಕಗಳಲ್ಲಿನ ಹಾಗೂ ಪದಕೋಶಿಯಿಂದ ಪದಗಳನ್ನು ಮೂಲಾಕ್ಷರ, ಗುಣಿತಾಕ್ಷರ ಮತ್ತು ಒತ್ತಕ್ಷರಗಳು ಎಂದು ಮೂರು ವಿಧವಾಗಿ ವಿಂಗಡಿಸಿ ಪದ ಪಟ್ಟಿಯನ್ನು ನೀಡಿ ಪ್ರತಿಯೊಂದು ಮಗುವಿಗೆ ಪ್ರತ್ಯೇಕವಾಗಿ ಓದಲು ಕೇಳಲಾಯಿತು. ಹಾಗೆಯೇ ಪಠ್ಯಪುಸ್ತಕಗಳಲ್ಲಿನ ಪದ್ಯ ಮತ್ತು ಪಾಠಗಳನ್ನು ಓದಿಸಲಾಯಿತು. ಮಕ್ಕಳು ಓದಿದ್ದನ್ನು ಧ್ವನಿ ಮುದ್ರಿತ ಯಂತ್ರದಲ್ಲಿ ಮುದ್ರಿಸಿ ಕೊಳ್ಳಲಾಯಿತು.

ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಎಲ್ಲ ಶಾಲೆಯ ಲಂಬಾಣಿ ಭಾಷಿಕ ಮಕ್ಕಳಿಗೆ ಇದೇ ಪಟ್ಟಿ ಯನ್ನು ಓದಿಸಿ ಧ್ವನಿ ಮುದ್ರಿಸಿಕೊಳ್ಳಲಾಯಿತು. ಈ ರೀತಿ ಪದಗಳ ಪಟ್ಟಿ ಮಾಡಿ ಮಕ್ಕಳಿಗೆ ಓದಿಸುವ ಉದ್ದೇಶವೆಂದರೆ ಯಾವ ತೆರನಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಓದುತ್ತಾರೆ ಮತ್ತು ಓದುವಾಗ ನಮ್ಮ ನಿರ್ದಿಷ್ಟ ಉದ್ದೇಶವಾದ ಸ್ವರಗಳು, ವ್ಯಂಜನಗಳು, ಅರ್ಧಸ್ವರಗಳು, ಗುಣಿತಾಕ್ಷರಗಳು ಮತ್ತು ಒತ್ತಕ್ಷರಗಳ ಉಚ್ಚಾರಣಾ ರೀತಿಯನ್ನು ಅಥವಾ ವ್ಯತ್ಯಾಸವನ್ನು ತಿಳಿಯಬಹುದು. ಈ ಉಚ್ಚಾರಣಾ ರೀತಿಯನ್ನು ತಿಳಿಯುವಂತಹ ಸಂದರ್ಭದಲ್ಲಿ ಕೇವಲ ಕೆಲವೇ ವಿದ್ಯಾರ್ಥಿಗಳ ಓದುಗಾರಿಕೆಯನ್ನು ಕೇಂದ್ರ

ವಾಗಿರಿಸಿಕೊಳ್ಳದೆ, ಸಂಶೋಧನೆಗೆ ಆಯ್ಕೆ ಮಾಡಿಕೊಂಡ ಎಲ್ಲ ವಿದ್ಯಾರ್ಥಿಗಳ ಓದುಗಾರಿಕೆಯನ್ನು ನೋಡಿ ಅವರು ಸ್ವರಗಳು, ವ್ಯಂಜನಗಳು, ಅರ್ಧಸ್ವರಗಳು, ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಓದುವಾಗ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಎಲ್ಲೆಲ್ಲಿ ಸಮಸ್ಯೆಗಳನ್ನು ಎದುರಿಸುತ್ತಾರೆ ಎನ್ನುವುದನ್ನು ಪತ್ತೆ ಹಚ್ಚಲಾಯಿತು.

ಲಂಬಾಣಿ ಭಾಷಿಕ ಮಕ್ಕಳಿಗೆ ಅವರು ಅಭ್ಯಾಸ ಮಾಡುತ್ತಿರುವ ಆಯಾ ತರಗತಿಗಳ ಕನ್ನಡ ಭಾಷೆಯ ಪಠ್ಯಪುಸ್ತಕಗಳಲ್ಲಿನ ಗದ್ಯ ಮತ್ತು ಪದ್ಯಗಳನ್ನು ಓದಲು ಹೇಳಲಾಯಿತು. ಆ ಸಂದರ್ಭದಲ್ಲಿ ಮಾಡುವಂತಹ ವ್ಯತ್ಯಾಸಗಳನ್ನು ಗುರುತಿಸಿ ವಿಶ್ಲೇಷಣೆ ಮಾಡಲಾಯಿತು. ಹೀಗೆ ಲಂಬಾಣಿ ಮಾತೃಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಎದುರಿಸುವ ಸಮಸ್ಯೆಗಳನ್ನು ತಿಳಿಯಲು ಈ ಎರಡು ವಿಧಾನಗಳನ್ನು ಅನುಸರಿಸಿ ಸಮಸ್ಯೆಗಳ ಪಟ್ಟಿಯನ್ನು ಸಂಗ್ರಹಿಸಲಾಯಿತು.

ಬರವಣಿಗೆಯಲ್ಲಿನ ಸಮಸ್ಯೆಗಳ ಮಾಹಿತಿ ತಿಳಿಯಲು ಲಂಬಾಣಿ ಭಾಷಿಕ ಮಕ್ಕಳಿಗೆ ಓದುವಲ್ಲಿ ತಯಾರಿಸಿದ ಅಕಾರಾದಿ ಪಟ್ಟಿಯನ್ನು ಒಂದೊಂದಾಗಿ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಹೇಳುವ ಮೂಲಕ ಎಲ್ಲಾ ಮಕ್ಕಳಿಂದ ಬರೆಯಿಸಲಾಯಿತು. ಹಾಗೆ ಪಾಠ ಮತ್ತು ಪದ್ಯಗಳನ್ನು ಕುರಿತು ಬರೆಯಿಸಲಾಯಿತು. ಹಾಗಾಗಿ ಲಂಬಾಣಿ ಭಾಷಿಕ ಮಕ್ಕಳು ಬರೆದ ಕಿರುಪರೀಕ್ಷೆ ಮತ್ತು ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಬರವಣಿಗೆಯನ್ನು ವೀಕ್ಷಿಸಲಾಯಿತು. ಇವೆಲ್ಲವುಗಳಲ್ಲಿ ಅವರು ಮಾಡುವ ಬರವಣಿಗೆ ವ್ಯತ್ಯಾಸಗಳನ್ನು ಗುರುತಿಸಿ ಮಾಹಿತಿ ಸಂಗ್ರಹಿಸಲಾಯಿತು.

ವ್ಯಾಕರಣಾಂಶಗಳ ಬಗ್ಗೆ ತಿಳಿಯಲು ಒಂದರಿಂದ ನಾಲ್ಕನೆಯ ತರಗತಿಯ ಕನ್ನಡ ಪಠ್ಯ ಪುಸ್ತಕಗಳಲ್ಲಿ ಕೊಟ್ಟಿರುವ ಅಭ್ಯಾಸ, ಭಾಷಾಭ್ಯಾಸ, ಅಭ್ಯಾಸ ಚಟುವಟಿಕೆಗಳಲ್ಲಿನ ವ್ಯಾಕರಣಕ್ಕೆ ಸಂಬಂಧಿಸಿದ ಅಂಶಗಳನ್ನು ಸೂಕ್ತ ಮಾದರಿಗಳ ಮೂಲಕ ಬರೆಯುವಲ್ಲಿ ಮಾಡುವ ವ್ಯತ್ಯಾಸಗಳನ್ನು ಸಂಗ್ರಹಿಸಲಾಗುವುದು. ಹಾಗೆಯೇ ಯಾವುದಾದರೊಂದು ವಿಷಯವನ್ನು ಅಂದರೆ ಆಕಳು, ಶಾಲೆ, ದಿನಚರಿ, ಹಬ್ಬಗಳು ಹೀಗೆ ಇವುಗಳನ್ನು ಕುರಿತು ತಮ್ಮದೇ ಆದ ವಾಕ್ಯಗಳಲ್ಲಿ ಅವರಿಗೆ ಗೊತ್ತಿರುವಷ್ಟು ಬರೆಯಲು ತಿಳಿಸಲಾಯಿತು. ಅಂತಹ ಉತ್ತರ ಪತ್ರಿಕೆಗಳಲ್ಲಿ ಮಾಡುವ ವ್ಯಾಕರಣ ವ್ಯತ್ಯಾಸಗಳನ್ನು ಸಂಗ್ರಹಿಸಲಾಯಿತು.

ಅಧ್ಯಯನದ ಸ್ವರೂಪ

ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಮತ್ತು ಮಹತ್ವ : ಈ ಅಧ್ಯಾಯದಲ್ಲಿ ಇಡೀ ಸಂಶೋಧನಾ ವಿಷಯದ ಉದ್ದೇಶವನ್ನು ಪ್ರಾರಂಭದಲ್ಲಿ ತಿಳಿಸಲಾಗಿದೆ. ಸಂಶೋಧನೆಯ ಚೌಕಟ್ಟು, ಭಾಷಾ ಕಲಿಕಾ ಕೌಶಲಗಳು, ಇದುವರೆಗೂ ಲಂಬಾಣಿ ಜನಾಂಗ ಮತ್ತು ಭಾಷೆ ಕುರಿತು ನಡೆದ ಅಧ್ಯಯನಗಳ ವಿಮರ್ಶಾತ್ಮಕ ಅಧ್ಯಯನ, ಅಧ್ಯಯನದ ವಿಷಯ ವ್ಯಾಪ್ತಿಯನ್ನು, ಮಿತಿಯನ್ನು ತಿಳಿಸಲಾಗಿದೆ. ಪ್ರಸ್ತುತ ಅಧ್ಯಯನದಿಂದ ಲಂಬಾಣಿ ಭಾಷಿಕ ಮಕ್ಕಳಿಗೆ (ಇಂತಹ ಇತರೆ ಅನ್ಯಭಾಷಿಕ ಮಕ್ಕಳಿಗೆ) ಮತ್ತು ಶೈಕ್ಷಣಿಕ ವಲಯಕ್ಕೆ ಸಂಬಂಧಿಸಿದ ಮಹತ್ವದ ಅಂಶಗಳ ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಲಂಬಾಣಿಗರು : ಚಾರಿತ್ರಿಕ ಹಿನ್ನೆಲೆ ಈ ಅಧ್ಯಾಯದಲ್ಲಿ ಲಂಬಾಣಿಗರ ಭಾಷೆಯ ಚಾರಿತ್ರಿಕ ಹಿನ್ನೆಲೆ, ಲಂಬಾಣಿ ಮತ್ತು ಕನ್ನಡ ಭಾಷೆಯ ಸಂಬಂಧ ಮತ್ತು ಕನ್ನಡ ಬಳಕೆಯ ನೆಲೆಗಳು, ಲಂಬಾಣಿಗರ ಸ್ಥಿತಿಗತಿಯನ್ನು ಕುರಿತು ಈಗಾಗಲೇ ನಡೆದಿರುವ ಅಧ್ಯಯನಗಳ ಹಿನ್ನೆಲೆಯಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಲಂಬಾಣಿಗರ ಮೂಲ, ವಿವಿಧ ಹೆಸರು, ತಾಂಡಾದ ಸ್ವರೂಪ ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ ವಿವರಗಳನ್ನು, ಆಧುನೀಕರಣದಿಂದಾಗಿ ಲಂಬಾಣಿಗರಲ್ಲಿ ಆದ ಸ್ಥಿತ್ಯಂತರವನ್ನು ಮತ್ತು ಪ್ರಾಥಮಿಕ ಶಿಕ್ಷಣದ ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ಈ ಎಲ್ಲ ವಿವರಗಳನ್ನು ದಾಖಲಿಸುವುದರ ಜೊತೆಗೆ ಲಂಬಾಣಿಗರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳು ಅವರ ಮಕ್ಕಳ ಭಾಷಾ ಕಲಿಕೆಯ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಓದಿನ ಸಮಸ್ಯೆಗಳು : ಪ್ರಸ್ತುತ ಅಧ್ಯಾಯದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಧ್ವನಿಮಾ ಹಂತದಲ್ಲಿ ಎದುರಿಸುವ ವಿಭಿನ್ನ/ವಿವಿಧ ರೀತಿಯ ಸಮಸ್ಯೆಗಳನ್ನು, ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮಾಡುವ ವ್ಯತ್ಯಾಸಗಳನ್ನು ದಾಖಲಿಸಿ, ಓದುಗಾರಿಕೆಯಲ್ಲಿ ಮಾಡುವ ವ್ಯತ್ಯಾಸಗಳಿಗೆ ಕಾರಣಗಳನ್ನು ಭಾಷಿಕ ಮತ್ತು ಭಾಷಿಕೇತರವಾಗಿ ವಿಭಾಗಿಸಿಕೊಂಡು ಭಾಷಿಕ ಕಾರಣಗಳನ್ನು ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯತ್ಯಾಸಗಳ ಉದಾಹರಣೆಗಳ ಜೊತೆಗೆ ಚರ್ಚಿಸಲಾಗಿದೆ. ಹಾಗೆ ಲಂಬಾಣಿ ಭಾಷೆಯ ಧ್ವನಿಮಾಗಳ ಬಳಕೆಯ ಆಧಾರದ ಮೇಲೆ ಕಾರಣಗಳನ್ನು ಖಚಿತವಾಗಿ ಹಾಗೂ ಸಂಭವನಾತ್ಮಕವಾಗಿ ನೀಡಲು ಪ್ರಯತ್ನಿಸಲಾಗಿದೆ. ನಂತರ ಓದುವಿಕೆಗೆ ಸಂಬಂಧಿಸಿದ ಒಟ್ಟಾರೆ ಭಾಷಿಕೇತರ ಕಾರಣಗಳನ್ನು ಚರ್ಚಿಸಲಾಗಿದೆ. ಉದಾ. ಪದಾದಿಯಲ್ಲಿ 'ಅಯ' ಎಂಬ ಪದವನ್ನು 'ಆಯಾ' ಎಂದು, ಪದಮಧ್ಯ ಪರಿಸರದಲ್ಲಿ 'ಈಚಲ' ಎಂಬ ಪದವನ್ನು 'ಈಚಾಲಾ' ಎಂದು, ಪದಾಂತ್ಯ ಪರಿಸರದಲ್ಲಿ ಈಶ ಎಂಬ ಪದವನ್ನು 'ಈಶಾ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ. ಈ ರೀತಿಯ ವ್ಯತ್ಯಾಸಕ್ಕೆ ಕಾರಣವೆಂದರೆ ಲಂಬಾಣಿ ಭಾಷೆಯಲ್ಲಿ ದೀರ್ಘಸ್ವರ 'ಆ' ಧ್ವನಿ ಎಲ್ಲಾ ಪರಿಸರಗಳಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಹ್ರಸ್ವಸ್ವರ 'ಅ' ಧ್ವನಿಯನ್ನು ಸಂದರ್ಭಾನುಸಾರ ದೀರ್ಘವಾಗಿ ಬಳಕೆ ಮಾಡುವುದರಿಂದ ಲಂಬಾಣಿ ಮಕ್ಕಳು ಕನ್ನಡದ ಎಲ್ಲಾ ಪರಿಸರಗಳಲ್ಲಿಯೂ ದೀರ್ಘವಾಗಿ ಓದುತ್ತಾರೆ. ಈ ಮಾದರಿಯ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣವಲ್ಲ. ಅವರ ಮಾತೃಭಾಷೆಯ ಪ್ರಭಾವ ಕಾರಣವಾಗಿದೆ. ಹಾಗಾಗಿ ಲಂಬಾಣಿ ಭಾಷಿಕ ಮಕ್ಕಳು ಓದುವಿಕೆಯಲ್ಲಿ ಮಾಡುವ ವ್ಯತ್ಯಾಸಗಳಿಗೆ ಕೈಗೊಳ್ಳಬೇಕಾದ ಮತ್ತು ಅನುಸರಿಸಬಹುದಾದ ಪರಿಹಾರೋಪಾಯಗಳನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಬರವಣಿಗೆ ಸಮಸ್ಯೆಗಳು : ಈ ಅಧ್ಯಾಯದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯ ಬರವಣಿಗೆಯಲ್ಲಿ ಮಾಡುವ ಸ್ವರ, ವ್ಯಂಜನ ಮತ್ತು ಅರ್ಧಸ್ವರಗಳಲ್ಲಿನ ವ್ಯತ್ಯಾಸಗಳನ್ನು ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ವಿಶ್ಲೇಷಿಸುವುದರ ಜೊತೆಗೆ ಆ ವ್ಯತ್ಯಾಸಗಳಿಗೆ ಕಾರಣಗಳನ್ನು ಮಕ್ಕಳು ಮಾಡುವ ಬರವಣಿಗೆ ವ್ಯತ್ಯಾಸಗಳೊಂದಿಗೆ ಚರ್ಚಿಸಲಾಗಿದೆ. ಉದಾ.

ಪದಾದಿಯಲ್ಲಿ 'ಆಲ' ಎಂಬ ಪದವನ್ನು 'ಅಲಾ' ಎಂದೂ, ಪದಮಧ್ಯ ಪರಿಸರದಲ್ಲಿ 'ಕಾಲು' ಎಂಬ ಪದವನ್ನು 'ಕಲು' ಎಂದು, ಪದಾಂತ್ಯ ಪರಿಸರದಲ್ಲಿ ಅಬ್ಬಾ ಎಂಬ ಪದವನ್ನು ಅಬ ಎಂದು ಒಂದರಿಂದ ನಾಲ್ಕನೇ ತರಗತಿ ಮಕ್ಕಳು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸಕ್ಕೆ ಕಾರಣ 'ಆ' ಮತ್ತು 'ಅ' ಈ ಎರಡೂ ಧ್ವನಿಗಳ ಅಲ್ಪ ಉಚ್ಚಾರಣಾ ಧ್ವನಿ ವ್ಯತ್ಯಾಸವನ್ನು ಗ್ರಹಿಸದೆ ಮತ್ತು ರೂಪ ಸಾಮ್ಯತೆಯ ಗೊಂದಲದ ಕಾರಣದಿಂದ ಈ ರೀತಿಯಾಗಿ ಬರೆಯುವುದು ಕಂಡುಬಂದಿದೆ. ನಂತರ ಭಾಷಿಕೇತರ ಕಾರಣಗಳನ್ನು ಒಟ್ಟಾರೆಯಾಗಿ ಚರ್ಚಿಸಲಾಗಿದೆ. ಹಾಗೆಯೇ ಬರವಣಿಗೆ ಸಮಸ್ಯೆಗಳನ್ನು ನಿವಾರಿಸಲು ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಗುಣಿತಾಕ್ಷರಗಳು ಮತ್ತು ಒತ್ತಕ್ಷರಗಳು : ಕನ್ನಡದ ವರ್ಣಮಾಲೆಯನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ಮೂಲಾಕ್ಷರಗಳು ಗುಣಿತಾಕ್ಷರಗಳು ಮತ್ತು ಒತ್ತಕ್ಷರಗಳು ಎಂದು ಪ್ರಮುಖವಾಗಿ ಮೂರು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಓದುವ ಮತ್ತು ಬರವಣಿಗೆ ಎರಡೂ ನೆಲೆಗಳಲ್ಲಿ ವ್ಯತ್ಯಾಸ ಮಾಡುವರು. ಅಂತಹ ರಚನೆಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಓದುವುದು ಮತ್ತು ಬರೆಯುವುದನ್ನು ಪ್ರತ್ಯೇಕವಾಗಿ ವಿಶ್ಲೇಷಣೆ ಮಾಡದೆ ಒಟ್ಟಿಗೆ ವಿವರಿಸುವ ಪ್ರಯತ್ನ ಮಾಡಲಾಗಿದೆ. ಉದಾ. ಗುಣಿತಾಕ್ಷರವನ್ನು ಓದುವಾಗ ಕಿವಿ>ಕೀವೀ, ಕುರಿ>ಕೂರೀ, ಕೆರೆ>ಕೇರೇ, ಕೊಡು>ಕೋಡೂ, ಎಂದು ಬರೆಯುವಾಗ ಕೀಟ>ಕಿಟ, ಕೂಸು>ಕುಸು, ಕೇರಿ>ಕೆರಿ, ಕೋಲು>ಕೂಲು ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ವ್ಯತ್ಯಾಸ ಮಾಡುವರು.

ಒತ್ತಾಕ್ಷರವನ್ನು ಓದುವಾಗ ಅಜ್ಜ>ಆಜಾ, ಸಜ್ಜನ>ಸಾಜಾನ ಎಂದು ಬರೆಯುವಾಗ ಅಜ್ಜ>ಅಜ, ಸಜ್ಜನ>ಸಜನ ಎಂದು ಒಂದರಿಂದ ನಾಲ್ಕನೆಯ ತರಗತಿಯ ಮಕ್ಕಳು ವ್ಯತ್ಯಾಸ ಮಾಡುವರು. ಜೊತೆಗೆ ಒಟ್ಟಾರೆಯಾಗಿ ಕಾರಣಗಳನ್ನು ಚರ್ಚೆ ಮಾಡಲಾಗಿದೆ. ಹಾಗೆಯೇ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ವ್ಯಾಕರಣಾಂಶಗಳು : ಈ ಅಧ್ಯಾಯದಲ್ಲಿ ಚರ್ಚೆ ಮಾಡಿರುವ ವ್ಯಾಕರಣಾಂಶ ಗಳಿಗೆ ಮಾಹಿತಿಯನ್ನು ೧, ೨, ೩ ಮತ್ತು ೪ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಅಲ್ಲಿ ಅಳವಡಿಸಿರುವ ವ್ಯಾಕರಣಾಂಶಗಳ ಹಲವಾರು ಮಾದರಿ ಪ್ರಶ್ನೆಗಳನ್ನು ಲಂಬಾಣಿ ಭಾಷಿಕ ಮಕ್ಕಳಿಂದ ಓದಿಸಿ ಜೊತೆಗೆ ಬರವಣಿಗೆ ಮಾಡಿಸಲಾಗಿದೆ. ಹಾಗೆ ಪಠ್ಯದಲ್ಲಿನ ಒಂದು ವಿಷಯವನ್ನು ಕೊಟ್ಟು ಅದನ್ನು ಅವರದೇ ಆದ ವಾಕ್ಯಗಳ ಮೂಲಕ ಬರೆಯಿಸಿ ಮತ್ತು ಓದಿಸಲಾಗಿದೆ. ಅಂತಹ ಸಂದರ್ಭದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯಾಕರಣ ವ್ಯತ್ಯಾಸಗಳನ್ನು ಪಟ್ಟಿಮಾಡಿ ವಿಶ್ಲೇಷಿಸ ಲಾಗಿದೆ.

ಉದಾ. ಬಹುವಚನ ರೂಪಗಳನ್ನು ಬರೆಯುವಲ್ಲಿ ರಾಜ>ರಾಜಗಳು, ಅಣ್ಣ>ಅಣ್ಣಗಳು, ಹಬ್ಬ>ಹಬ್ಬಗಳು, ಹೀಗೆ ಎಲ್ಲಕ್ಕೂ 'ಗಳು' ಎಂಬ ಬಹುವಚನ ಪ್ರತ್ಯಯವನ್ನು ಹಚ್ಚಿ ಬರೆಯುವರು

ಮತ್ತು ಓದುವರು. ಈ ಮಾದರಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಸಂದರ್ಭನುಸಾರ ಒಂದೇ ಪದ ಏಕವಚನ ಮತ್ತು ಬಹುವಚನ ಎರಡೂ ಆಗಿರುತ್ತದೆ. ಇದರ ಪ್ರಭಾವ ಈ ಮಕ್ಕಳ ಮೇಲೆ ಇರುವುದರಿಂದ ಮತ್ತು ಅರು, ಅಂದಿರು, ರು ಇವುಗಳ ಬಳಕೆಯ ಕುರಿತು ಸ್ಪಷ್ಟತೆ ಇಲ್ಲದಿರುವುದು. ಕಾರಣಗಳನ್ನು ಕೆಲವು ಕಡೆ ಖಚಿತವಾಗಿ ಮತ್ತೆ ಕೆಲವು ಸಾಧ್ಯತೆ ಕುರಿತು ಚರ್ಚೆಮಾಡಲಾಗಿದೆ. ಜೊತೆಗೆ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಉಪಸಂಹಾರ : ಈ ಅಧ್ಯಾಯದಲ್ಲಿ ಇಡೀ ಅಧ್ಯಾಯನದಲ್ಲಿ ಕಂಡುಕೊಂಡ ಒಳನೋಟಗಳನ್ನು ಚರ್ಚಿಸಲಾಗಿದೆ. ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಒಟ್ಟಾರೆ ಪ್ರಂಬಂಧವನ್ನು ಈ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ಮುಕ್ತಾಯಗೊಳಿಸಲಾಗಿದೆ.

ಅಧ್ಯಯನದ ಮಹತ್ವ

ಪ್ರಸ್ತುತ ಅಧ್ಯಯನವು ಸಮಾಜೋಭಾಷಿಕ ಮಾದರಿಯ ಅಧ್ಯಯನವಾಗಿದೆ. ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳ ಆಧಾರದ ಮೇಲೆ ಲಂಬಾಣಿ ಭಾಷಿಕ ಮಕ್ಕಳು ಹಾಗೂ ಇಂತಹ ಇತರೆ 'ಅನ್ಯ' ಭಾಷಿಕ ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚು ಸುಧಾರಿಸಬಹುದಾಗಿದೆ.

ಸರ್ಕಾರಕ್ಕೆ ವಿಶೇಷವಾಗಿ ಶೈಕ್ಷಣಿಕ ಕ್ಷೇತ್ರ/ಶಿಕ್ಷಣ ಇಲಾಖೆಗೆ ಪ್ರಸ್ತುತ ಅಧ್ಯಯನ ತುಂಬಾ ಉಪಯುಕ್ತ ವಾಗಿದೆ. ಶಿಕ್ಷಣ ಇಲಾಖೆಯು ಸದರಿ ಅಧ್ಯಯನದ ಆಧಾರದ ಮೇಲೆ ಅನೇಕ ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ಜೊತೆಗೆ ತಾಲ್ಲೂಕು ಮಟ್ಟದಲ್ಲಿ ತಾಂಡಾಗಳಲ್ಲಿನ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಳ್ಳುವ ಮೂಲಕ ಮೂಲ ತೊಡಕುಗಳನ್ನು ಗುರುತಿಸುವುದರಿಂದ ಅಂತಹ ತೊಡಕುಗಳಿಗೆ ಪರಿಹಾರವನ್ನು ಅಲ್ಲಿಯೇ ಕಂಡುಕೊಳ್ಳಬಹುದಾಗಿದೆ. ಅಲ್ಲದೆ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಯೋಜನೆಗಳನ್ನು ರೂಪಿಸಲು ಸಹಕಾರಿಯಾಗಿದೆ.

ಶೈಕ್ಷಣಿಕವಾಗಿ ಅನ್ಯಭಾಷಿಕ ಮಕ್ಕಳು ಕನ್ನಡ ಪ್ರಥಮ ಭಾಷೆಯಾಗಿ ಕಲಿಯುವಲ್ಲಿ ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಎಂಬುದನ್ನು ಈ ಅಧ್ಯಯನದಿಂದ ತಿಳಿಯಬಹುದಾಗಿದೆ. ಇದರಿಂದ ಕಲಿಕೆಯ ಕುಂಟಿತಕ್ಕೆ ಕಾರಣವಾಗಿರುವ ಭಾಷಿಕೇತರ ಆಯಾಮಗಳನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಜೊತೆಗೆ ಶೈಕ್ಷಣಿಕ ಅಭಿವೃದ್ಧಿಗೆ ಕೈಗೊಳ್ಳಬಹುದಾದ ಪರಿಹಾರಗಳನ್ನು ಕಂಡುಕೊಳ್ಳಬಹುದಾಗಿದೆ. ಹೀಗೆ ಪ್ರಸ್ತುತ ಅಧ್ಯಯನವು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವಲ್ಲಿ ತನ್ನದೇ ಆದ ಕಾಣಿಕೆಯನ್ನು ನೀಡುತ್ತದೆ ಎಂದು ಭಾವಿಸಿಕೊಂಡಿದ್ದೇನೆ.

ಬ್ರಿಟೀಷ್ ಆಡಳಿತಾವಧಿಯಲ್ಲಿ ಭಾರತದಲ್ಲಿ ರೂಪುಗೊಂಡ ಶಿಕ್ಷಣ ನೀತಿಯು ಏಕಮಾದರಿಯಾಗಿ ಬದಲಾದ ಸಂದರ್ಭಕ್ಕೆ ಅದು ಅಪ್ರಸ್ತುತವಾಗಿದೆ. ಅಂದರೆ ಪ್ರಾರಂಭ ಕಾಲದ ಆಡಳಿತದಲ್ಲಿ ಅನುಕೂಲವಾಗುವ ರೀತಿಯಲ್ಲಿ ಭಾರತೀಯರಿಗೆ ಇಂಗ್ಲೀಶ್ ಜೊತೆಗೆ ಸ್ಥಳೀಯ ಭಾಷೆಯನ್ನು ಕಲಿಸುವ ಪರಿಪಾಠ ಜಾರಿಗೆ

ಬಂದಿತು. ಅಂದರೆ ಇಂಗ್ಲೀಶ್‌ನ್ನು ಸಾರ್ವತ್ರಿಕರಣಗೊಳಿಸಿ ಆಯಾ ಪ್ರಾದೇಶಿಕ ಭಾಷೆಯನ್ನು ಕಲಿಸುವ, ಶಿಕ್ಷಣವನ್ನು ನೀಡುವ ಪದ್ಧತಿ ಜಾರಿಯಾಯಿತು. ಇದರಿಂದ ತಮಿಳು, ಕನ್ನಡ, ತೆಲುಗು, ಭಾಷಿಕರಿಗೆ ಸ್ವಲ್ಪಮಟ್ಟಿನ ಅನುಕೂಲವಾಗಿತೆಂಬುದು ನಿಜವಾದರೂ ಆಯಾ ರಾಜ್ಯಗಳಲ್ಲಿನ ಬುಡಕಟ್ಟು ಭಾಷಿಕರು, ಅಲ್ಪಸಂಖ್ಯಾತ ಭಾಷಿಕರಿಗೆ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡಿತು. ತುಳು, ಕೊಡವ, ಬ್ಯಾರಿ, ಹಾಗೂ ಲಂಬಾಣಿಯಂತಹ ಅಲ್ಪಸಂಖ್ಯಾತ ಭಾಷಿಕರು ಇಂಗ್ಲೀಶ್ ಕಲಿಯುವಷ್ಟೇ ಕಷ್ಟವನ್ನು ಕನ್ನಡ ಭಾಷೆ ಕಲಿಯುವಾಗ ಅನುಭವಿಸಬೇಕಾದ ಅನಿವಾರ್ಯತೆಗಳು ಎದುರಾದವು. ಈ ಅಂಶಗಳು ಆಳುವ ಸರ್ಕಾರಕ್ಕಾಗಲಿ, ಶಿಕ್ಷಣತಜ್ಞರಿಗಾಗಲೀ, ಶಿಕ್ಷಣ ಸಂಸ್ಥೆಗಳಿಗಾಗಲಿ ಮನವರಿಕೆಯಾಗಲೇ ಇಲ್ಲ. ಈ ಹಿನ್ನೆಲೆಯಲ್ಲಿ ಹಲವಾರು ದಶಕಗಳ ಕಾಲ ಆ ಸಮುದಾಯಗಳು ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ಅವಕಾಶವನ್ನೇ ಕಳೆದುಕೊಂಡವು. ಮಾತೃಭಾಷೆಯ ಸ್ಥಾನದಲ್ಲಿ ಕನ್ನಡವನ್ನೇ ಆರೋಪಿಸಿ ಕಲಿಕೆ, ಬೋಧನೆಯನ್ನು ಜಾರಿಗೆ ತರಲಾಯಿತು. ಇದೆಲ್ಲದರ ಪರಿಣಾಮವಾಗಿ ಲಂಬಾಣಿಯಂತಹ ಬುಡಕಟ್ಟು ಸಮುದಾಯದ ಮಕ್ಕಳು ಕಲಿಕೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಕುರಿತು ಅಧ್ಯಯನಗಳು ಇದುವರೆಗೂ ನಡೆದಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನ ಭಾಷಾ ಅಲ್ಪಸಂಖ್ಯಾತರ ಶಿಕ್ಷಣದ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವಾಗಿದೆ.

ಇದುವರೆಗಿನ ಲಂಬಾಣಿ ಜನಾಂಗದ ಕುರಿತು ಅಧ್ಯಯನಗಳ ಸಮೀಕ್ಷೆ

ಲಂಬಾಣಿಗರ ಕುರಿತು ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಗಮನಿಸಿದಾಗ ಮಾನವ ಶಾಸ್ತ್ರೀಯ, ಜಾನಪದೀಯ, ಸಾಂಸ್ಕೃತಿಕ ದೃಷ್ಟಿಯಿಂದ ಮತ್ತು ಲಂಬಾಣಿ ಭಾಷೆಯ ಕುರಿತು ಕೆಲ ಲೇಖನಗಳು ಹಾಗೂ ಒಂದೆರಡು ಲಂಬಾಣಿ ಭಾಷೆಯ ವರ್ಣನಾತ್ಮಕ ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಆದರೆ ಲಂಬಾಣಿಗರು ದ್ವಿಭಾಷಿಕ ಪರಿಸರದಲ್ಲಿ ಬದುಕುತ್ತಿದ್ದು, ಕನ್ನಡ ಭಾಷೆಯನ್ನು ಅವಲಂಬಿಸಿಯೆ ಶೈಕ್ಷಣಿಕ ಚಟುವಟಿಕೆಗಳು ನಡೆಯಬೇಕಾಗಿರುವುದರಿಂದ ಲಂಬಾಣಿ ಭಾಷಿಕ ಮಕ್ಕಳು ಕರ್ನಾಟಕದಲ್ಲಿ ಕನ್ನಡವನ್ನು ಎರಡನೆ ಭಾಷೆಯಾಗಿ ಕಲಿಯಲಾಗುತ್ತದೆ. ಆದರೆ ಶೈಕ್ಷಣಿಕವಾಗಿ ಈ ಮಕ್ಕಳು ಕನ್ನಡ ಮಾಧ್ಯಮದಲ್ಲೇ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯಬೇಕಾಗಿರುವುದರಿಂದ ಕನ್ನಡ ಕಲಿಕೆಯಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ಈವರೆಗೂ ಲಂಬಾಣಿ ಭಾಷಿಕ ಮಕ್ಕಳ ಶೈಕ್ಷಣಿಕವಾಗಿ ಕನ್ನಡ ಕಲಿಯುವಲ್ಲಿ ಎದುರಿಸುವ ಸಮಸ್ಯೆಗಳ ಕುರಿತು ಯಾವುದೇ ಅಧ್ಯಯನಗಳು ನಡೆದಿರುವುದಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಇದೊಂದು ಗಂಭೀರ ಸಮಸ್ಯೆಯಾದ್ದರಿಂದ ಈ ಅದ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ಸಂಶೋಧನಾ ಪತ್ರಿಕೆಗಳ ಲೇಖನಗಳು

೧. ಡಾ. ಪಿ.ಕೆ. ಖಂಡೋಬಾ ಅವರು "ಲಂಬಾಣಿಗರ ಪೂರ್ವದ ಸ್ಥಿತಿಗತಿ" (ಕರ್ನಾಟಕ ಬಂಜಾರ ವಾರ ಪತ್ರಿಕೆ ವಿಜಾಪುರ ಸಂಪುಟ ಸಂಚಿಕೆ-೨೫, ಪು. ೩ ದಿನಾಂಕ ೨೩.೧೦.೧೯೮೬ರಲ್ಲಿ ಪ್ರಕಟ) ಎಂಬ

ಲೇಖನದಲ್ಲಿ ಲಂಬಾಣಿಗರು ಒಂದು ಕಡೆ ಸ್ಥಿರವಾದ ನೆಲೆಯನ್ನು ಕಂಡುಕೊಳ್ಳುವ ಮುಂಚೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಖಾದ್ಯ ಪದಾರ್ಥಗಳ ವ್ಯಾಪಾರ ಮಾಡುತ್ತಾ, ಅಸಂಖ್ಯಾತ ದನ ಕರುಗಳನ್ನು ಸಾಕುತ್ತಾ, ವಾಹನ ಸೌಕರ್ಯವಿಲ್ಲದ ಆ ಕಾಲದಲ್ಲಿ ಭಾರಿ ವಸ್ತುಗಳ ರಫ್ತು ಕಾರ್ಯವನ್ನು ಮಾಡುತ್ತಿದ್ದರು. ಧೈರ್ಯ ಶಾಲಿಗಳಾದ ಲಂಬಾಣಿಗರನ್ನು ಮೊಗಲರು ತಮ್ಮ ಸೈನಿಕ ಆಹಾರ ಮುಂತಾದ ಸಾಮಗ್ರಿಗಳನ್ನು ಪೂರೈಸುವುದಕ್ಕಾಗಿ ನೇಮಿಸಿಕೊಂಡರು. ಹೀಗಾಗಿ ಈ ಜನ ಮೊಗಲರ ಸೈನ್ಯಗಳಿಗೆ ಭಾರಿ ಪ್ರಮಾಣದ ಆಹಾರ ಧಾನ್ಯಗಳನ್ನು ಪೂರೈಸುವ ಕೆಲಸದಲ್ಲಿ ನಿರತರಾಗಿದ್ದರು. ಮೊಗಲರ ಆಳ್ವಿಕೆ ಕೊನೆಗೊಂಡ ಮೇಲೆ, ರೈಲು ಮುಂತಾದ ವಾಹನ ಸೌಕರ್ಯಗಳು ಬಳಕೆಗೆ ಬಂದು ಅವರ ರಫ್ತುಕಾರ್ಯ ಸಂಪೂರ್ಣ ನಿಂತುಹೋಗಿ, ಈ ಜನರು ತಂಡೋಪತಂಡವಾಗಿ ಹಿಂದೂಸ್ತಾನದ ತುಂಬೆಲ್ಲ ಅಲ್ಲಲ್ಲಿ ನೆಲೆನಿಂತರು. ಹಾಗೆ ಅವರ ವಿಭಿನ್ನ ವೃತ್ತಿಗಳನ್ನು ಕೈಕೊಂಡ ಪರಿಣಾಮವಾಗಿ ಒಂದೊಂದು ಕಡೆ ಅಸ್ಪೃಶ್ಯರಾಗಿ, ಪರಿಶಿಷ್ಟಜಾತಿ, ಪಂಗಡ, ಅಪರಾಧಿ ಪಂಗಡದವರಾಗಿ ಗುರುತಿಸಲ್ಪಟ್ಟು ತುಂಬಾ ಹೀನಾಯವಾದ ಸ್ಥಿತಿಯನ್ನು ತಲುಪಿದ ಕುರಿತು ಚರ್ಚೆಯನ್ನು ಮಾಡಿದ್ದಾರೆ. ಈ ಲೇಖನದಲ್ಲಿ ಲಂಬಾಣಿಗರ ಪೂರ್ವದ ಸ್ಥಿತಿಯನ್ನು ವಿವರಿಸುವುದೇ ಮುಖ್ಯ ಉದ್ದೇಶವಾಗಿದೆ.

೨. ಡಾ. ಪಿ.ಕೆ. ಖಂಡೋಬಾ ಅವರು "ಲಂಬಾಣಿ ಜನ" (ಜಾನಪದ ಜಗತ್ತು: ದ್ವೈಮಾಸಿಕ ಪತ್ರಿಕೆ ಜನವರಿ ೧೯೮೧ ಸಂಪುಟ-೨ ಸಂಚಿಕೆ-೧ ಪು. ೩೧-೩೨ ಕರ್ನಾಟಕ ಜಾನಪದ ಟ್ರೆಸ್ಟ್ ಬೆಂಗಳೂರು) ಎಂಬ ಲೇಖನದಲ್ಲಿ ಮೂಲತಃ ರಾಜಸ್ಥಾನದವರಾದ ಲಂಬಾಣಿಗರು ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಮೊದಲಾದ ಕಡೆಗಳಲ್ಲಿ ನೆಲೆಯೂರಿ ಬಂಜಾರಾ, ಬಂಜಾರಿ, ಲಂಬಾಣಿ, ಲಮಾಣಿ, ಸುಕಾಲಿ ಮೊದಲಾದ ಹೆಸರುಗಳಿಂದ ಗುರುತಿಸಿಕೊಳ್ಳುವ ಇವರು ಎಂತಹ ಕಷ್ಟದ ಪರಿಸ್ಥಿತಿಯಲ್ಲಿಯೂ ಭಿಕ್ಷೆ ಬೇಡಿ ತಿನ್ನದೇ ಎಂತಹ ಕೆಲಸಕ್ಕಾದರೂ ಸೈ ಎನ್ನುವ ಶ್ರಮಜೀವಿಗಳು. ಲಂಬಾಣಿ ಸಮಾಜದಲ್ಲಿ ಒಂದೇ ರೀತಿ-ನೀತಿ, ಸಂಪ್ರದಾಯ ವೇಷ-ಭಾಷೆಯನ್ನು ಕಾಣಬಹುದಲ್ಲದೆ ಸ್ತ್ರೀಯರ ಉಡುಗೆ-ತೊಡುಗೆ, ಅವರ ಕುಣಿತ ವೈಶಿಷ್ಟ್ಯಪೂರ್ಣವಾಗಿದೆ. ಸ್ತ್ರೀಯರ ಕುಣಿತದ ವಿವಿಧ ಭಂಗಿಗಳನ್ನು ವಿವರಿಸುತ್ತಾ ಪುರುಷರು ಕೆಲ ವಿಶೇಷ ಹಬ್ಬ-ಹರಿದಿನಗಳಲ್ಲಿ ಕುಣಿಯುವುದನ್ನು ತಿಳಿಸುತ್ತಾರೆ. ಹಾಗೆ ಲಂಬಾಣಿಗರಲ್ಲಿ ಒಳಪಂಗಡಗಳಿವೆ. ಬ್ರಿಟಿಷ್ ಸರ್ಕಾರ ಈ ಸಮಾಜಕ್ಕೆ ಅಪರಾಧಿ ಜನ ಎಂದು ಪರಿಗಣಿಸಿದ್ದರಿಂದ ಶೈಕ್ಷಣಿಕ ಸಾಮಾಜಿಕ, ಆರ್ಥಿಕ, ಹಾಗೂ ಸಾಂಸ್ಕೃತಿಕವಾಗಿ ಹಿಂದುಳಿಯಲು ಕಾರಣವಾಯಿತು ಎಂದು ಚರ್ಚೆಮಾಡಿದ್ದಾರೆ.

೩. ಡಾ. ಪಿ.ಕೆ ಖಂಡೋಬಾ ಅವರ "ಲಂಬಾಣಿ - ಒಂದು ವಿವೇಚನೆ" (ಸಾಧನೆ ಸಂಪುಟ-೧೦, ಸಂಚಿಕೆ-೨ ಏಪ್ರಿಲ್-ಜೂನ್ ೧೯೮೧, ಪು. ೧೦೪ ತ್ರೈಮಾಸಿಕ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು) ಎಂಬ ಲೇಖನದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಚದುರಿರುವ ಲಂಬಾಣಿಗರನ್ನು ರಾಜ್ಯವಾರು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಅಲ್ಲದೆ ಲಂಬಾಣಿ ಜನಾಂಗದಲ್ಲಿ ಒಟ್ಟು ೧೬ ಉಪಜಾತಿಗಳು ಹಾಗೂ ೨೭ ಪರ್ಯಾಯ ಪದಗಳಿರುವ ಪಟ್ಟಿಯನ್ನು ಕೊಟ್ಟಿದ್ದಾರೆ. ಬಂಜಾರ ಅಥವಾ ಬಣಜಾರ್ ಎಂಬ ಪದ

ಮೂಲತಃ ವರ್ತಕರಾಗಿದ್ದಾರೆಂಬುದನ್ನು ಸೂಚಿಸಿದರೆ, ಲಮಾಣಿ ಎಂಬ ಪದ ಲವಣದ ವ್ಯಾಪಾರವನ್ನು ಕೈಕೊಂಡಿದ್ದರೆಂಬುದನ್ನು, ಲಾದೇವಿಯಾ ಎಂಬುದು ಅವರ ವೃತ್ತಿಯನ್ನು ಸೂಚಿಸುತ್ತದೆ. 'ಸುಗಾಲಿ' ಎಂದರೆ ತೆಲಗು ಭಾಷೆಯಲ್ಲಿ ಉತ್ತಮ ಆಕಳುಗಳನ್ನು ಸಾಕುವವನು ಎಂದರ್ಥ. ಗೌರ, ಗವಾರಿಯ, ಗಂವಾರಿಯ, ಗಾಮೂಲಾ ಮೊದಲಾದ ಹೆಸರುಗಳು ಗೌಡ ಪದದಿಂದ ಬಂದಿದೆ. ಕಂಗಿ, ಕಂಗಸಿಯಾ ಹಾಗೂ ಘಣದ ಎಂಬುವುಗಳು ಅವರ ಕಸಬುಗಳನ್ನು ಅವಲಂಬಿಸಿವೆ. ಶಿರರೆ ಬಂಜಾರ ಎಂದೂ ಕರೆಯಲ್ಪಡುವ ಈ ಜನರು ಉತ್ತರ ಪ್ರದೇಶದ ದೆಹಲಿ, ರಾಜಸ್ಥಾನ ಮತ್ತು ಪಂಜಾಬ್‌ಗಳಲ್ಲಿ ಕಂಡುಬರುತ್ತಾರೆ. ಶಿರರೆ ಎಂದರೆ ಒಂದು ಪ್ರಕಾರದ ಚಾಪೆ, ಹಗ್ಗಗಳನ್ನು ತಯಾರಿಸುವ ಹುಲ್ಲು ಎಂದರ್ಥ. ದಾಡಿ ಥಾಲಿಯಾ, ಸನಾರ, ಜೋಗಿ, ವಾಡಿ ಹೀಗೆ ಮೊದಲಾದ ಬಂಜಾರ ಜಾತಿಯಲ್ಲಿ ಕೆಳವರ್ಗವನ್ನು ಸೂಚಿಸುತ್ತದೆ. ಹೀಗೆ ಭಾರತದ ಪ್ರತಿಯೊಂದು ಭಾಗಗಳಲ್ಲಿ ನೆಲೆಯೂರಿರುವ ಲಂಬಾಣಿ ಜನಾಂಗದ ಜಾತಿ ಒಂದೇ ಆಗಿದ್ದರೂ ಅವರಪರ ವೃತ್ತಿಗನುಗುಣವಾಗಿ ಕರೆಯುವ ಹೆಸರುಗಳಲ್ಲಿ ಭಿನ್ನತೆ ಕಂಡುಬರುತ್ತದೆ ಎಂಬುದನ್ನು ಚರ್ಚೆ ಮಾಡಿದ್ದಾರೆ.

೪. ಡಾ. ಪಿ.ಕೆ. ಖಂಡೋಬಾ ಅವರ "ಲಂಬಾಣಿ: ವೇಷ-ಭೂಷಣಗಳು" (ಪ್ರಪಂಚ ವಾರಪತ್ರಿಕೆ: ಸಂಪುಟ-೨೬, ಸಂಚಿಕೆ-೧೩೦೬, ಪು. ೨೯-೩೦ ದಿನಾಂಕ ೧೨.೧೦.೧೯೮೦ ಹುಬ್ಬಳ್ಳಿ) ಎಂಬ ಲೇಖನದಲ್ಲಿ ಭಾರತದ ಹಲವಾರು ಬುಡಕಟ್ಟುಗಳಲ್ಲಿ ವಿಶೇಷವಾದ ವೇಷ ಭೂಷಣಗಳಿಂದ ಯಾವ ಮೂಲೆಯಲ್ಲಿದ್ದರೂ ಒಂದೇ ಜನಾಂಗ ಎಂದು ಗುರುತಿಸಿಕೊಳ್ಳುವ ಬಡುಕಟ್ಟು ಜನಾಂಗ ಎಂದರೆ ಲಂಬಾಣಿ ಜನಾಂಗ ಒಂದೇ. ಈ ಲಂಬಾಣಿ ಜನಾಂಗದಲ್ಲಿ ವಿಶೇಷವಾಗಿ ಹೆಣ್ಣುಮಕ್ಕಳು ಧರಿಸುವ ವಸ್ತುಗಳ ವಿನ್ಯಾಸ-ಸ್ವರೂಪವನ್ನು ಹಾಗೂ ಒಡವೆಗಳ ವಿಧಗಳನ್ನು ವಿಸ್ತಾರವಾಗಿ ವಿವರಿಸುತ್ತಾ, ಪುರುಷರ ವಸ್ತ್ರ ಒಡವೆಗಳ ಕುರಿತು ಚರ್ಚೆ ಮಾಡಿದ್ದಾರೆ.

೫. ಡಾ. ಪಿ.ಕೆ. ಖಂಡೋಬಾ ಅವರ "ಲಂಬಾಣಿಗರ ವಿವಾಹ ವೈಶಿಷ್ಟ್ಯ" (ಜಾನಪದ ಜಗತ್ತು: ಸಂ. ಎಚ್.ಎಲ್. ನಾಗೇಗೌಡ. ದ್ವೈಮಾಸಿಕ ಪತ್ರಿಕೆ ಸಂಪುಟ-೨, ಸಂಚಿಕೆ-೪, ಪು. ೧೧ ಜುಲೈ ೧೯೮೧) ಎಂಬ ಲೇಖನದಲ್ಲಿ ಲಂಬಾಣಿಗರಲ್ಲಿ ಒಳಪಂಗಡಗಳು ಇರುವ ಹಾಗೆ ಜಾತ್ ಹಾಗೂ ಭುಕ್ಯಾ ಎಂಬ ಗೋತ್ರಗಳು ಕಂಡು ಬರುತ್ತವೆ. ಇವರಲ್ಲಿ ಸಗೋತ್ರಗಳ ನಡುವೆ ವಿವಾಹ ನಿಶಿದ್ಧ ಹಾಗೂ ಮುಂಚೆ ತೆರ ಅಥವಾ ಕನ್ಯಾಶುಲ್ಕ ಕೊಡುವ ಪದ್ಧತಿ ಇತ್ತು. ಆದರೆ ನಗರೀಕರಣ ಪ್ರಭಾವ ಆದಂತೆ ವರದಕ್ಷಣೆ ಪದ್ಧತಿಯೂ ಇವರಲ್ಲಿದೆ. ಹಾಗೂ ವಿವಾಹದ ಸಮಾರಂಭದಲ್ಲಿ ಆಚರಿಸುವ ಆಚರಣೆಗಳನ್ನು ವಿವರವಾಗಿ ಚರ್ಚೆಮಾಡಿದ್ದಾರೆ.

೬. ಡಾ. ಪಿ.ಕೆ ಖಂಡೋಬಾ ಅವರ "ಲಂಬಾಣಿ ಸಂಸ್ಕೃತಿ ಹಾಗೂ ಬದಲಾವಣೆ" ('ಕರ್ನಾಟಕ ಬಂಜಾರಾ' ವಾರಪತ್ರಿಕೆ, ವಿಜಾಪುರ ಪು. ೨ ಸಂಪುಟ-೧ ಸಂಚಿಕ-೩೨ ದಿನಾಂಕ ೧೬.೪.೧೯೮೨ರಲ್ಲಿ ಪ್ರಕಟ) ಎಂಬ ಲೇಖನದಲ್ಲಿ ಲಂಬಾಣಿಗರು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ತುಂಬಾ ಹಿಂದುಳಿಯಲು ಅವರ ಸಂಸ್ಕೃತಿಯಲ್ಲಿ ಅಡಕವಾಗಿರುವ ಹಲವಾರು ಅನಿಷ್ಟಗಳಾದ ಬಡತನದ

ನಡುವೆಯೂ ಮದುವೆ ಕಾರ್ಯಕ್ರಮಗಳಲ್ಲಿ ಮಾಂಸ, ಕುಡಿತಗಳಿಂದಾಗಿ ಮಾಡುವ ದುಂದು ವೆಚ್ಚ, ಅಕ್ಷರತೆ, ಬಾಲ್ಯವಿವಾಹ, ಮೂಢನಂಬಿಕೆ, ಅರ್ಥಹೀನ ಸಂಪ್ರದಾಯಗಳನ್ನು ತೊಡೆದು ಹಾಕದ ವಿನಃ ಇವರ ಅಭಿವೃದ್ಧಿ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಕೆಲಸೌಲಭ್ಯಗಳನ್ನು ಇವರಿಗೆ ದೊರಕಿಸಿ ಕೊಡುವ ಮೂಲಕ ಅವರ ಅಭಿವೃದ್ಧಿ ಅನುವು ಮಾಡಿಕೊಬೇಕೆಂದು ಚರ್ಚೆ ಮಾಡಿದ್ದಾರೆ.

೭. ಡಾ. ಪಿ.ಕೆ. ಖಂಡೋಬಾ ಅವರ "ಶ್ರಮಜೀವಿಗಳಲ್ಲಿ ಸಂತೃಪ್ತಿ ಕಂಡ ಲಂಬಾಣಿಗರು" (ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ: ಸಾಪ್ತಾಹಿಕ ಸೌರಭ, ರವಿವಾರ ದಿ. ೧೯.೭.೧೯೮೨ರಲ್ಲಿ ಪ್ರಕಟ) ಎಂಬ ಲೇಖನದಲ್ಲಿ ಲಂಬಾಣಿಗರು ಆರ್ಥಿಕವಾಗಿ ಕಡುಬಡವರಾದರೂ ಭಿಕ್ಷೆ ಬೇಡದೆ ಎಲ್ಲಾರೀತಿಯ ಕೆಲಸಗಳನ್ನು ಮಾಡಿ ದುಡಿದು ತಿನ್ನುವ ಜನ. ಹಾಗೆ ಯಾವುದೇ ಆಚರಣೆ, ಸಂಪ್ರದಾಯಗಳನ್ನು ಕಟ್ಟುನಿಟ್ಟಾಗಿ ಆಚರಿಸುವ ಜನ ಹಣವಿಲ್ಲದಿದ್ದರೂ ಸಾಲ ಮಾಡಿಯಾದರೂ ಅವುಗಳನ್ನು ಆಚರಿಸುತ್ತಾರೆ. ಅವರಲ್ಲಿರುವ ಕೆಲ ಸಂಪ್ರದಾಯ ಗಳಾದ ಶವಸಂಸ್ಕಾರ, ಹೆಣ್ಣು ಮಕ್ಕಳು ಮೈ ಮೇಲೆ ಹಚ್ಚೆ ಹಾಕಿಸಿಕೊಳ್ಳುವುದು, ಹೆಣ್ಣು ಗಂಡು ಮಗುವಿನ ಜನನ ಸಂದರ್ಭವನ್ನು ಹಾಗೂ ಅವರು ಆರಾಧಿಸುವ ದೇವರುಗಳನ್ನು, ಆಚರಿಸುವ ಹಬ್ಬ ಹರಿದಿನಗಳನ್ನು ಕುರಿತು ಚರ್ಚೆ ಮಾಡಿದ್ದಾರೆ.

೮. ಡಾ. ಪಿ.ಕೆ. ಖಂಡೋಬಾ ಅವರ "ಲಂಬಾಣಿಗರ ಆಳುವ ಸಂಪ್ರದಾಯ" (ಕರ್ನಾಟಕ ಬಂಜಾರಾ ವಾರ ಪತ್ರಿಕೆ, ವಿಜಾಪುರ, ಸಂ-೧, ಸಂ-೨೫ ಪು. ೩ ದಿನಾಂಕ ೨೩.೧೦.೮೬ರಲ್ಲಿ ಪ್ರಕಟ) ಎಂಬ ಲೇಖನ ದಲ್ಲಿ ಲಂಬಾಣಿಗರಲ್ಲಿ ವಿಶಿಷ್ಟ ಆಚರಣೆಗಳಲ್ಲಿ ಒಂದಾದ ಮದುವೆ, ಹಬ್ಬ-ಹರಿದಿನ ಹಾಗೂ ಸಂತೋಷ ಸಮಾರಂಭಗಳಲ್ಲಿ ಒಬ್ಬರೊನ್ನೊಬ್ಬರು ತಬ್ಬಿಕೊಂಡು ಅಳುವ ದೃಶ್ಯವೂ ವಿಶೇಷವಾಗಿದೆ. ಹೀಗೆ ಆಳುವ ಸಂಪ್ರದಾಯ ಈ ಜನಾಂಗದಲ್ಲಿ ಏಕೆ ಇದೆ ಎಂಬುದನ್ನು ವಿವರಿಸುತ್ತಾ ಲಂಬಾಣಿಗರು ಒಂದು ಕಡೆ ನೆಲೆ ನಿಲ್ಲದೆ ತಂಡೋಪತಂಡವಾಗಿ ದೇಶ ವಿದೇಶಗಳಲ್ಲಿ ಅಲೆಯುವ ಇವರು ಮದುವೆ ಆದರೆ ಮತ್ತೆ ಬೇಗ ಸಿಗುವುದಿಲ್ಲ ಎಂಬ ಕಾರಣಕ್ಕೆ ಹೀಗೆ ಮಾಡುತ್ತಾರೆ ಎಂಬ ಅಂಶವನ್ನು ವಿವರವಾಗಿ ಚರ್ಚೆಮಾಡಿದ್ದಾರೆ.

೯. ಡಾ. ಪಿ.ಕೆ. ಖಂಡೋಬಾ ಅವರ "ಎಲ್ಲಿಂದಲೊ ಬಂದವರು ಅಲ್ಲಲ್ಲಿ ನಿಂದವರು" (ಕರ್ನಾಟಕ ಬಂಜಾರಾ, ವಾರ ಪತ್ರಿಕೆ ವಿಜಾಪುರ ಸಂಪುಟ-೧ ಸಂಚಿಕೆ-೨೭, ಪು. ೨ ದಿನಾಂಕ ೨೭.೧೦.೧೯೮೬ರಲ್ಲಿ ಪ್ರಕಟ) ಎಂಬ ಲೇಖನದಲ್ಲಿ ಲಂಬಾಣಿಗರು ಸಣ್ಣ-ಪುಟ್ಟ ಸಾಂಸ್ಥಾನಿಕ ರಾಜರುಗಳಲ್ಲಿ ಒಬ್ಬನಾದ ರಜಪೂತ ವಂಶದ ರಾಣಾಪ್ರತಾಪನ ಮೇಲೆ ಮಹಮ್ಮದೀಯರ ದಾಳಿಯಿಂದಾಗಿ ರಾಣ ಆತನ ಬೆಂಬಲಿಗರು ಕಾಡನ್ನು ಸೇರಬೇಕಾದ ಪರಿಸ್ಥಿತಿಯನ್ನು ಹಾಗೂ ಅವರು ಅನುಭವಿಸಿದ ತೊಂದರೆಗಳನ್ನು, ಅದರಿಂದ ಹೊರಬಂದು ಪಶುಪಾಲನೆ ಮಾಡುತ್ತಾ, ರಾಜಸ್ಥಾನದ ಮಾಳವಾ ಮೂಖಾಂತರ ದೇಶದ ಬೇರೆ ಬೇರೆ ಕಡೆ ಚದುರಿ, ಅಲೆಮಾರಿಗಳಾಗಿ ಲವಣದ ವ್ಯಾಪಾರ, ಆಹಾರ ಧಾನ್ಯಗಳ ವ್ಯಾಪಾರ ಮೊದಲಾದವುಗಳನ್ನು ಮಾಡುತ್ತಾ ರಾಜ-ಮಹಾರಾಜರುಗಳ ಸೈನ್ಯದಲ್ಲಿ ಆಹಾರ ರಫ್ತುಮಾಡುವ ಕೆಲಸವನ್ನು ಕಾರ್ಯವನ್ನು ಹೊತ್ತ ಇವರು ನಂತರದಲ್ಲಿ ೧೯ನೇ ಶತಮಾನದಲ್ಲಿ ಒಂದು ಕಡೆ ತಾಂಡಾಗಳನ್ನು ರಚಿಸಿಕೊಂಡು ನೆಲೆಯೂರಲು ಪ್ರಾರಂಭಮಾಡಿದರು.

ಹೀಗೆ ಲಂಬಾಣಿಗರು ಭಾರತದಲ್ಲಿ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ, ಗೋವಾ, ಮೊದಲಾದ ಕಡೆಗಳಲ್ಲಿ ವಾಸಮಾಡಿದಂತೆ ಹೊರದೇಶಗಳಾದ ಬಲ್ಗೇರಿಯಾ, ರುಮೇನಿಯಾ, ಹಂಗೇರಿ, ಸ್ವಿಟ್ಜರ್‌ಲೆಂಡ್, ಫ್ರಾನ್ಸ್, ಲಂಡನ್, ಜರ್ಮನ್, ಸ್ಪೇನ್, ಗ್ರೀಸ್ ಮೊದಲಾದ ಪ್ರಪಂಚದ ೫೬ ದೇಶಗಳಲ್ಲಿ ಕಂಡು ಬರುತ್ತಿದ್ದು, ಅವರನ್ನು ಜಿಪ್ಸಿ, ಸಿಂಧಿರೋಮನ್ ಎಂದು ಮೊದಲಾದ ಹೆಸರುಗಳಿಂದ ಕರೆಯುತ್ತಿದ್ದಾರೆ ಎಂಬುದನ್ನು ಕುರಿತು ಚರ್ಚೆ ಮಾಡಿದ್ದಾರೆ.

೧೦. ಡಾ. ಪಿ.ಕೆ. ಖಂಡೋಬಾ ಅವರ "ಲಂಬಾಣಿ-ಬ್ರಾಹ್ಮಣ-ಮಾರವಾಡಿ-ಗುರ್ಜರ ಸಂಬಂಧ" (ಕರ್ನಾಟಕ ಬಂಜಾರಾ, ವಾರಪತ್ರಿಕೆ ಸಂ-೧ ಸಂಚಿಕೆ-೨೫ ಪು. ೨ ದಿನಾಂಕ ೨೩.೧೦.೧೯೮೬ ಪ್ರಕಟ) ಎಂಬ ಲೇಖನದಲ್ಲಿ ಬ್ರಾಹ್ಮಣ, ಮಾರವಾಡಿ ಮತ್ತು ಗುರ್ಜರ ಸಮಾಜಗಳೊಂದಿಗೆ ಬುಡಕಟ್ಟು ಲಂಬಾಣಿ ಜನಾಂಗ ನಿಕಟವಾದ ಸಂಬಂಧ ಮತ್ತು ಹೋಲಿಕೆಯನ್ನು ಹೊಂದಿದೆ. ಹಾಗೆ ಮೇಲೆ ಎಲ್ಲಾ ಸಾಮ್ರಾಜ್ಯಗಳಲ್ಲಿರುವ ಆಚಾರ-ವಿಚಾರ, ಮದುವೆ, ಶವಸಂಸ್ಕಾರ ಪದ್ಧತಿ, ಸಂಪ್ರದಾಯ ಮೊದಲಾದ ಸಾಂಸ್ಕೃತಿಕ ವಿಷಯಗಳಲ್ಲಿ ಇರುವ ಪರಸ್ಪರ ಸಂಬಂಧ ಹಾಗೂ ಹೋಲಿಕೆಗಳನ್ನು ವಿವರವಾಗಿ ಚರ್ಚಿಸಿದ್ದಾರೆ.

೧೧. ಡಾ. ಪಿ.ಕೆ. ಖಂಡೋಬಾ ಅವರ "ಲಂಬಾಣಿ-ಹರಿಣಶಿಕಾರಿ-ಸಿಕ್ಕಲಿಗರು: ಒಂದು ವಿವೇಚನೆ" (ಕರ್ನಾಟಕ ಬಂಜಾರಾ-ವಾರಪತ್ರಿಕೆ ಸಂ-೧, ಸಂಚಿಕೆ-೨೯, ಪು. ೨ ದಿನಾಂಕ ೧೧.೧೨.೧೯೮೬ರಲ್ಲಿ ಪ್ರಕಟ) ಎಂಬ ಲೇಖನದಲ್ಲಿ ಬುಡಕಟ್ಟು ಜನಾಂಗದವರಾದ ಲಂಬಾಣಿ ಹರಿಣಿ ಶಿಕಾರಿ ಮತ್ತು ಸಿಕ್ಕಲಿಗರು ಈ ಮೂರು ಜನಾಂಗ ಮೂಲತಃ ಒಂದೇ ಪ್ರದೇಶದಿಂದ ಬೇರೆ ಬೇರೆ ಕಡೆಗೆ ಚದುರಿರುವ ಇವರ ಮೂಲ ವೃತ್ತಿಗಳು ಬೇರೆ-ಬೇರೆಯಾದರೂ ಅವರ ದೈಹಿಕ ಲಕ್ಷಣಗಳು, ವೇಷ-ಭೂಷಣಗಳು, ಆಚಾರ-ವಿಚಾರ ಹಾಗೂ ಭಾಷಿಕವಾಗಿ ಮೊದಲಾದ ಅಂಶಗಳಲ್ಲಿ ಸಾಮ್ಯತೆ ಇರುವುದನ್ನು ಚರ್ಚೆಮಾಡಿದ್ದಾರೆ.

೧೨. ಬಿ.ಟಿ. ಲಲಿತಾ ನಾಯಕ್ ಅವರು "ದೇಶ ವಿದೇಶಗಳಲ್ಲಿ ಲಂಬಾಣಿಗರು" (ಉದ್ಧೃತ: ಲಂಬಾಣಿ ಸ್ಮರಣ ಸಂಚಿಕೆ ರಾಜ್ಯಮಟ್ಟದ ಲಂಬಾಣಿ ಸಮ್ಮೇಳನ ೧೯೮೭) ಎಂಬ ಲೇಖನದಲ್ಲಿ ಲಂಬಾಣಿಗರು ರಾಜಸ್ಥಾನದಿಂದ ಭಾರತದ ಎಲ್ಲಾ ರಾಜ್ಯಗಳಲ್ಲಿ ಪಸರಿಸಿರುವಂತೆ ವಿದೇಶಗಳಾದ ಬಲ್ಗೇರಿಯಾ, ರುಮೇನಿಯಾ, ಹಂಗೇರಿ, ಸ್ವಿಡ್ಜರ್‌ಲೆಂಡ್ ಫ್ರಾನ್ಸ್, ಲಂಡನ್, ಜರ್ಮನ್, ಸ್ಪೇನ್, ಗ್ರೀಸ್ ಮೊದಲಾದ ಪ್ರಪಂಚದ ೫೬ ದೇಶಗಳಲ್ಲಿ ಕಂಡುಬರುವ ಇವರನ್ನು ಜಿಪ್ಸಿ, ಸಿಂಧಿ, ಮೊದಲಾದ ವಿವಿಧ ಹೆಸರುಗಳಿಂದ ಕರೆಯುತ್ತಿರುವ ಅಂಶಗಳನ್ನು ಇಲ್ಲಿ ಚರ್ಚೆ ಮಾಡಲಾಗಿದೆ.

೧೩. ಮಲ್ಲಿಕಾರ್ಜುನ ಸಂ. ಅಂಗಡಿ ಅವರ "ಲಂಬಾಣಿ ಮಕ್ಕಳ ಕಲಿಕಾ ಸಮಸ್ಯೆಗಳು" (ಪ್ರಜಾವಾಣಿ ದಿನ ಪತ್ರಿಕೆ ದಿನಾಂಕ ೧೮.೯.೨೦೦೭) ಎಂಬ ಲೇಖನದಲ್ಲಿ ಸರ್ಕಾರ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ನೀಡುವುದಕ್ಕಾಗಿ ರೂಪಿಸಿಕೊಂಡ ಹಲವಾರು ಯೋಜನೆಗಳಲ್ಲಿ ಸರ್ವಶಿಕ್ಷಣ ಅಭಿಯಾನ"ವೂ ಒಂದು. ತನ್ನ ಯೋಜನೆಯ ಸಾಕಾರಕ್ಕಾಗಿ ಸರ್ಕಾರ ಸಾವಿರಾರು ಕೋಟಿ ರೂ. ಗಳನ್ನು ವೆಚ್ಚ ಮಾಡುತ್ತಿದ್ದೆ. ಆದರೆ ನಿರೀಕ್ಷಿತ ಅಭಿವೃದ್ಧಿಯಾಗದೆ ಕಲಿಕೆಯ ಗುಣಮಟ್ಟ ಕಡಿಮೆಯಾಗುತ್ತಿದೆ. ಅಲ್ಲದೆ ಅನ್ಯ ಮಾತೃಭಾಷಿಕರಾದ

ಕೊಂಕಣಿ, ತಮಿಳು, ಮರಾಠಿ, ಹಾಗೂ ಲಂಬಾಣಿ ಮಕ್ಕಳಿಗೆ ಕನ್ನಡ ಮಾಧ್ಯಮ ಪಠ್ಯಕ್ರಮ ಅಳವಡಿಸಿ, ಅವರನ್ನು ಇತರ ಮಕ್ಕಳಂತೆ ಪರಿಗಣಿಸಿ ಬೋಧನೆ ಮತ್ತು ಮೌಲ್ಯಮಾಪನಕ್ಕೆ ಅಳವಡಿಸಲಾಗುತ್ತದೆ. ಆದರೆ ಅಂತಹ ಮಕ್ಕಳು ಎದುರಿಸುತ್ತಿರುವ ಹಾಗೂ ಬೋಧಿಸುತ್ತಿರುವ ಶಿಕ್ಷಕರ ಸಮಸ್ಯೆಗಳತ್ತ ಶಿಕ್ಷಣ ಇಲಾಖೆ ಗಮನಹರಿಸದೆ ಸಮಸ್ಯೆಗಳ ಆಗರಕ್ಕೆ ಕಾರಣವಾಗುತ್ತದೆ. ಇಂತಹ ಗಂಭೀರ ಸಮಸ್ಯೆಯನ್ನು ಎದುರಿಸುತ್ತಿರುವ ಲಂಬಾಣಿ ಭಾಷೆಯ ಮಕ್ಕಳು ಕನ್ನಡ ಕಲಿಯುವಲ್ಲಿ ಎದುರಿಸುವ ಸಮಸ್ಯೆಗಳತ್ತ ಬೆಳಕು ಚೆಲ್ಲುತ್ತಾ, ಮಕ್ಕಳು ಆರು ವರ್ಷದವರೆಗೆ ಲಂಬಾಣಿ ಪದ ಸಂಪಸತ್ತನ್ನು ತಲೆಯಲ್ಲಿಟ್ಟುಕೊಂಡು ಬಂದ ಮಗು ೧ನೇ ತರಗತಿಯಲ್ಲಿ ಕನ್ನಡ ಭಾಷೆಗೆ ಮುಖಾಮುಖಿಯಾಗುತ್ತದೆ. ಕನ್ನಡ ಭಾಷೆಯ ಪದಪರಿಚಯವಿಲ್ಲದ ಮಗು ಯಾರು, ಏನು, ಯಾವಾಗ, ಎಲ್ಲಿ ಎಂಬ ಪ್ರಶ್ನೆಗಳಿಗೆ ಉತ್ತರಿಸಿದ ಮಗು ಪರಿಸರ ಅಧ್ಯಯನ, ಗಣಿತ ಮೊದಲಾದ ವಿಷಯಗಳನ್ನು ಹೇಗೆ ಕಲಿಯಲು ಸಾಧ್ಯ? ಎಂಬ ವಿಷಯವನ್ನು ಸಂಕ್ಷಿಪ್ತವಾಗಿ ಚರ್ಚೆ ಮಾಡಿದ್ದಾರೆ.

೧೪. ಡಾ. ಚಿದಾನಂದ ಮೂರ್ತಿ ಅವರು ಸಂಶೋಧನಾ ತರಂಗ ಸಂಪುಟ ಎರಡರಲ್ಲಿ "ಲಂಬಾಣಿ ಜನ ಮತ್ತು ಅವರ ಭಾಷೆ" ಎಂಬ ಲೇಖನವನ್ನು ಬರೆದಿದ್ದು, ಅದರಲ್ಲಿ ಲಂಬಾಣಿ ಜನರ ಹಬ್ಬ-ಹರಿದಿನ ಧಾರ್ಮಿಕತೆ, ಗಾದೆ ಮತ್ತು ಲಂಬಾಣಿ ಭಾಷೆಯ ವೈಶಿಷ್ಟ್ಯತೆಗಳು ವ್ಯಕ್ತಿನಾಮಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.

ಪುಸ್ತಕಗಳು

೧. ೧೮೭೭ರಲ್ಲಿ ಅಬ್ಬೆಡೂಬೀಸ್‌ರವರು "ಹಿಂದೂ ಮ್ಯಾನರ್ಸ್ ಕಸ್ಟಂಸ್ ಅಂಡ್ ಸೆರೆಮೊನೀಸ್" ಎಂಬ ಗ್ರಂಥದಲ್ಲಿ ಲಂಬಾಣಿ ಜನಾಂಗವನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

೨. ೧೯೦೯ರಲ್ಲಿ ಥರ್ಸ್‌ಟನ್, ಇ ಮತ್ತು ರಂಗಾಚಾರಿ ಕೆ. ಅವರು ಬರೆದಿರುವ "ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ" ಎಂಬ ಗ್ರಂಥದ ನಾಲ್ಕನೆ ಸಂಪುಟದಲ್ಲಿ ಈ ಜನಾಂಗದ ಮೂಲ, ವಲಸೆ ಹಾಗೂ ಉಪಜಾತಿಗಳ ಕುರಿತು ವಿವರಣೆಯನ್ನು ಕೊಟ್ಟಿದ್ದಾರೆ.

೩. ೧೯೧೭ರಲ್ಲಿ ಗ್ರಿಯರ್‌ಸನ್ ಜಿ.ಎ. ಅವರ "ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ" ಸಂಪುಟ ನಾಲ್ಕರಲ್ಲಿ ಲಂಬಾಣಿಗರ ಕುರಿತು ಕೆಲ ಮಾಹಿತಿಯನ್ನು ಒದಗಿಸಿದ್ದಾರೆ.

೪. ೧೯೧೬ರಲ್ಲಿ ಪ್ರಕಟವಾದ ರಸ್ಸಲ್ ಮತ್ತು ಹಿರಲಾಲ್‌ರವರು "ದಿ ಟ್ರೈಬ್ಸ್ ಅಂಡ್ ಕ್ಯಾಸ್ಟ್ ಆಫ್ ದಿ ಸೆಂಟ್ರಲ್ ಪ್ರೊವಿನ್ಸೆಸ್ ಆಫ್ ಇಂಡಿಯಾ" ಸಂಪುಟ ಎರಡರಲ್ಲಿ ಲಂಬಾಣಿ ಜನಾಂಗದ ಕುರಿತು ಮಾಹಿತಿಯನ್ನು ನೀಡಿದ್ದಾರೆ.

೫. ೧೯೩೬ರಲ್ಲಿ ಮರಾಠಿಯಲ್ಲಿ ಪ್ರಕಟವಾದ ಶ್ರೀ ಬಳಿರಾಮಜಿ, ಹೀರಾ ಮಣಜಿ, ರಾಠೋಡ ಮಾಂಡವೀಕ ರವರ "ಗೋರೆ ಬಂಜಾರಾ ತೋಕಾಂಚಾ ಇತಿಹಾಸ" ಎಂಬ ಕಿರು ಪುಸ್ತಕದಲ್ಲಿ ಲಂಬಾಣಿಗರ ಇತಿಹಾಸವನ್ನು ಕುರಿತು ಚರ್ಚೆ ಮಾಡಿದ್ದಾರೆ.

೬. ೧೯೭೭ರಲ್ಲಿ ಪ್ರಕಟವಾದ ಎನ್. ಬಸವರಾಜ ಅವರ "ಲಂಬಾಣಿಗರು ಮತ್ತು ಬಗ್ಗರು" ಎಂಬ ಪುಸ್ತಕದಲ್ಲಿ ಲಂಬಾಣಿಗರ ಜೀವನಕ್ಕೆ ಸಂಬಂಧಿಸಿದ ಉಡುಗೆ-ತೊಡುಗೆ, ಮದುವೆ, ಪ್ರಸ್ಥ, ಹಬ್ಬಗಳು, ಜನನ, ಮರಣ, ನಂಬಿಕೆಗಳು ಮೊದಲಾದ ಸಾಂಸ್ಕೃತಿಕ ವಿವರಗಳ ಬಗೆಗೆ ಹೆಚ್ಚು ಒತ್ತು ಕೊಟ್ಟು ಚರ್ಚೆ ಮಾಡಿದ್ದಾರೆ.

೭. ೧೯೮೧ರಲ್ಲಿ ಪ್ರಕಟವಾದ ಬೆನಕನ ಹಳ್ಳಿ ಜಿ. ನಾಯಕ ಅವರು ಸಂಗ್ರಹಿಸಿದ "ಲಂಬಾಣಿಗರ ಜನಪದ ಗೀತೆಗಳು ಎಂಬ ಪುಸ್ತಕದಲ್ಲಿ ಲಂಬಾಣಿಗರು ಕೆಲವು ಸ್ವಾರಸ್ಯಕರ ಜನಪದ ಗೀತೆಗಳನ್ನು ನಿರೂಪಿಸಿದ್ದಾರೆ.

೮. ೧೯೮೩ರಲ್ಲಿ ಪ್ರಕಟವಾದ ಸಣ್ಣರಾಮ ಅವರು ಸಂಪಾದಿಸಿದ "ಲಂಬಾಣಿ ಗಾದೆಗಳು" ಎಂಬ ಪುಸ್ತಕದಲ್ಲಿ ಲಂಬಾಣಿ ಭಾಷೆಯಲ್ಲಿನ ಗಾದೆಗಳನ್ನು ಸಂಪಾದಿಸಿ ಅವುಗಳನ್ನು ಕನ್ನಡಕ್ಕೆ ಅನುವಾದಿಸುವ ಪ್ರಯತ್ನ ಮಾಡಿದ್ದಾರೆ. ಇಲ್ಲಿಯ ಗಾದೆಗಳಿಂದ ಲಂಬಾಣಿಗರ ಆಚಾರ-ವಿಚಾರ, ನ್ಯಾಯ-ನೀತಿ, ನಂಬಿಕೆಗಳನ್ನು ಗುರುತಿಸಬಹುದಾಗಿದೆ.

೯. ೧೯೮೮ರಲ್ಲಿ ಪ್ರಕಟವಾದ ಡಾ. ಪಿ.ಕೆ ಖಂಡೋಬಾ ಅವರ "ಲಂಬಾಣಿ ಸಂಸ್ಕೃತಿ" ಎಂಬ ಪುಸ್ತಕದಲ್ಲಿ ಲಂಬಾಣಿಗರ ಸಂಪ್ರದಾಯಗಳು ಮತ್ತು ಜನಪದವನ್ನು ಕುರಿತಂತೆ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಕಟಿಸಿದ ಹದಿನೇಳು ಲೇಖನಗಳ ಸಂಕಲನ ಕೃತಿಯಾಗಿದೆ. ಇಲ್ಲಿ ಮುಖ್ಯವಾಗಿ ಲಂಬಾಣಿಗರ ಪೂರ್ವದ ಸ್ಥಿತಿ-ಗತಿ, ಮೂಲ, ವೇಷ-ಭೂಷಣ ವಿವಾಹ ವೈಶಿಷ್ಟ್ಯ, ಸಂಸ್ಕೃತಿ ಬದಲಾವಣೆ, ಸಂಪ್ರದಾಯ, ಜಾತಿ ಉಪ-ಜಾತಿಗಳು, ಲಂಬಾಣಿ-ರಜಪೂತ-ಜಿಪ್ಸಿಗಳ ಸಂಬಂಧ, ಒಗಟುಗಳು ಸಂಸ್ಕೃತಿಯ ಸ್ಥೂಲ ಚಿತ್ರಣವನ್ನು ಕೊಟ್ಟಿದ್ದಾರೆ.

೧೦. ೧೯೮೮ರಲ್ಲಿ ಪ್ರಕಟವಾದ ಡಾ. ಪಿ.ಕೆ. ಖಂಡೋಬಾ ಅವರ "ಲಂಬಾಣಿ ಒಗಟುಗಳು" ಎಂಬ ಪುಸ್ತಕದಲ್ಲಿ ಲಂಬಾಣಿಗರಲ್ಲಿ ಬಳಕೆಯಾಗುವ ಒಗಟುಗಳನ್ನು ಸಂಗ್ರಹಿಸುವುದರ ಜೊತೆಗೆ ವಿವರಿಸುವ ಪ್ರಯತ್ನವನ್ನು ಮಾಡಿದ್ದಾರೆ.

೧೧. ೧೯೯೦ರಲ್ಲಿ ಪ್ರಕಟವಾದ ಡಾ. ಪಿ.ಕೆ. ಖಂಡೋಬಾ ಅವರ "ತಾಂಡಾ ಸಂಸ್ಕೃತಿ" ಎಂಬ ಪುಸ್ತಕದಲ್ಲಿ ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಗಡಿ ಭಾಗದಲ್ಲಿನ ಲಂಬಾಣಿಗರು ನಾಗರೀಕ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದೆ ತಮ್ಮದೆ ಆದ ಪ್ರತ್ಯೇಕತೆಯನ್ನು ಕಾಯ್ದುಕೊಂಡ ಈ ಜನರ ಆಚಾರ-ವಿಚಾರ, ವೇಷ-ಭೂಷಣ ಹಾಗೂ ಭಾಷೆಯ ಕುರಿತು ಲಂಬಾಣಿಗರ ಸಾಂಸ್ಕೃತಿಕ ವಿವರಣೆಯನ್ನು ಚರ್ಚೆ ಮಾಡಿದ್ದಾರೆ.

೧೨. ೧೯೯೪ರಲ್ಲಿ ಡಾ. ಡಿ.ಬಿ. ನಾಯಕ್ ಅವರ "ಲಂಬಾಣಿ ಸಂಸ್ಕೃತಿ" ಎಂಬ ಪುಸ್ತಕದಲ್ಲಿ ಲಂಬಾಣಿಗರ ಜೀವನ ವಿಧಾನ ಸಾಮಾಜಿಕ ವ್ಯವಸ್ಥೆಯ ಸ್ವರೂಪ ಭಾಷೆ ಮತ್ತು ಸಾಹಿತ್ಯ, ಆಚರಣೆ ಮತ್ತು ಕಲೆ, ಕ್ರೀಡೆಗಳು ಹಾಗೂ ಸಾಮಾಜಿಕ ಪರಿವರ್ತನೆಯ ಕುರಿತು ವಿಸ್ತೃತವಾಗಿ ಚರ್ಚೆ ಮಾಡಿದ್ದಾರೆ.

೧೩. ೧೯೯೯ರಲ್ಲಿ ಪ್ರಕಟವಾದ ಡಾ. ಸಣ್ಣರಾಮ ಅವರ "ಲಂಬಾಣಿ ಸಂಸ್ಕೃತಿ" ಎಂಬ ಪುಸ್ತಕದಲ್ಲಿ ಲಂಬಾಣಿ ಸಂಸ್ಕೃತಿಯ ಮೂಲ, ಆಚರಣೆ, ವಿಧಿ-ವಿಧಾನ ಸಂಪ್ರದಾಯ, ಸಾಹಿತ್ಯ, ಕಲೆ, ಮೊದಲಾದ ಆಯಾಮಗಳನ್ನು ಕುರಿತು ಚರ್ಚೆ ಮಾಡಿದ್ದಾರೆ.

೧೪. ೨೦೦೦ರಲ್ಲಿ ಪ್ರಕಟವಾದ ಡಾ. ಪಿ.ಕೆ. ಖಂಡೋಬಾ ಅವರ "ಕರ್ನಾಟಕ ಬುಡಕಟ್ಟು ಲಂಬಾಣಿಗಳು" ಎಂಬ ಪುಸ್ತಕದಲ್ಲಿ ಬುಡಕಟ್ಟಿನ ಮೂಲ ಮತ್ತು ಪ್ರಸಾರ, ಪರಿಸರ, ಬಂಧುತ್ವ, ಮದುವೆ, ಆಚಾರ-ವಿಚಾರ, ನಂಬಿಕೆ, ಅವರ ಒಳಾಡಳಿತ ವ್ಯವಸ್ಥೆ, ಆರ್ಥಿಕ ಜೀವನ ವಿಧಾನ, ಸಾಹಿತ್ಯ, ಪ್ರದರ್ಶನ ಕಲೆಗಳು ಹಾಗೂ ಆಧುನಿಕತೆಯ ಪರಿಣಾಮಗಳ ಕುರಿತು ಸೂಕ್ಷ್ಮವಾಗಿ ಚರ್ಚೆ ಮಾಡಿದ್ದಾರೆ.

೧೫. ೨೦೦೨ರಲ್ಲಿ ಪ್ರಕಟವಾದ ಮಹಾದೇವಿ ಬಾಯಿಯವರ "ಲಂಬಾಣಿ ಸಂಸ್ಕೃತಿ: ಕೆಲವು ಅಧ್ಯಯನಗಳು" ಎಂಬ ಪುಸ್ತಕದಲ್ಲಿ ಲಂಬಾಣಿಗರ ಉಡುಗೆ-ತೊಡುಗೆಗಳು, ಜನಪದ ವಾದ್ಯಗಳು, ಜನಪದ ವೈದ್ಯ, ಆಹಾರ ಪಾನೀಯಗಳು, ಕಸೂತಿ, ಕಲೆ, ದೀಪಾವಳಿ ಆಚರಣೆಯಲ್ಲಿ ಲಂಬಾಣಿ ಹೆಣ್ಣು ಮಕ್ಕಳ ಪಾಲ್ಗೊಳ್ಳುವಿಕೆಯ ಮಹತ್ವ, ಗಾದೆ-ನಂಬಿಕೆಗಳಲ್ಲಿ ಮಹಿಳೆಯ ಪಾತ್ರ, ಜಾನಪದ ಆಟ-ಕುಣಿತ, ಮಳೆ ಸಂಬಂಧಿ ಆಚರಣೆ ಹಾಗೂ ಕೋಳಿಪಾಳ್ಯ ತಾಂಡದ ಲಕ್ಷ್ಮೀದೇವಿ ಜಾತ್ರೆಯ ವಿಶೇಷತೆ ಹೀಗೆ ೧೨ ಲೇಖನಗಳಲ್ಲಿ ಲಂಬಾಣಿ ಜನಾಂಗದ ಸಾಂಸ್ಕೃತಿಕ ವಿವರಗಳನ್ನು ಚರ್ಚಿಸಿದ್ದಾರೆ.

೧೬. ಡಾ. ಹಿ.ಚಿ. ಬೋರಲಿಂಗಯ್ಯನವರು "ಗಿರಿಜನರ ನಾಡಿಗೆ ಪಯಣ" ಎಂಬ ಗ್ರಂಥದಲ್ಲಿ ಲಂಬಾಣಿ ಕಲೆ, ಸಂಗೀತ ಇವುಗಳ ಸ್ಥೂಲ ಚಿತ್ರಣವನ್ನು ಕೊಟ್ಟಿದ್ದಾರೆ. ಗೊರೂರು ಚನ್ನಬಸಪ್ಪ ಅವರ "ಲಂಬಾಣಿ ಕುಣಿತ" ಎಂಬ ಲೇಖನವು ಇವರ ನೃತ್ಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುತ್ತದೆ.

೧೭. ಶ್ರೀ ಸೋಮಣ್ಣ ಹೊಗಳ್ಳಿ ಅವರ "ಲಂಬಾಣಿ ಜನಪದ ಕಲೆಗಳು" ಎಂಬ ಪುಸ್ತಕದಲ್ಲಿ ಲಂಬಾಣಿಗರ ವಿಶಿಷ್ಟ ಜನಪದ ಕಲೆಗಳ ಕುರಿತು ಮಾಹಿತಿಯನ್ನು ನೀಡಿದ್ದಾರೆ.

೧೮. ಹರಿಲಾಲ್ ಪವಾರ್ ಅವರ "ಲಂಬಾಣಿಗಳಲ್ಲಿ ಹೋಳಿಹಬ್ಬ ಮತ್ತು ಬಂಜಾರಾ ಗೋತ್ರಗಳು" ಎಂಬ ಪುಸ್ತಕಗಳಲ್ಲಿ ಲಂಬಾಣಿಗರು ಪ್ರಮುಖವಾಗಿ ಆಚರಿಸುವ ಹೋಳಿಹಬ್ಬ ಹಾಗೂ ಬಂಜಾರಾ ಪಂಗಡದಲ್ಲಿರುವ ವಿವಿಧ ಗೋತ್ರಗಳ ಕುರಿತು ವಿಸ್ತೃತ ಚರ್ಚೆ ಮಾಡಿದ್ದಾರೆ.

ಸಂಶೋಧನಾ ಗ್ರಂಥಗಳು

ಎಂ.ಫಿಲ್. ಗ್ರಂಥಗಳು

೧. ವಿಜಯಲಕ್ಷ್ಮಿಯವರು "ಲಂಬಾಣಿಗರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಅಧ್ಯಯನ" ಎಂಬ ಎಂ.ಫಿಲ್. ಗ್ರಂಥದಲ್ಲಿ ಲಂಬಾಣಿಗರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳು ಆರಂಭ ದಿಂದ ಕಾಲಕ್ರಮೇಣ ಯಾವ ರೀತಿಯಲ್ಲಿ ಬದಲಾವಣೆಯಾಗುತ್ತಾ ಬಂದಿವೆ ಎಂಬುದರ ಕುರಿತು ವಿವರಿಸಿದ್ದಾರೆ.

ಪಿಎಚ್.ಡಿ. ಮಹಾಪ್ರಬಂಧಗಳು

೧. ೧೯೭೧ರಲ್ಲಿ ಅಮರ್‌ಸಿಂಗ್ ರಾಠೋಡ್ ಅವರು "ಲಂಬಾಣಿ ಭಾಷೆ ಅದರ ವ್ಯಾಕರಣ ಹಾಗೂ ರಾಜಸ್ಥಾನಿ ಮತ್ತು ಹಿಂದಿಯೊಡನೆ ಅದರ ಸಂಬಂಧ" ಎಂಬ ಮಹಾಪ್ರಬಂಧದಲ್ಲಿ ಲಂಬಾಣಿ ಭಾಷೆಯ ವ್ಯಾಕರಣ ಸ್ವರೂಪ ಹಾಗೂ ಭಾಷೆಯ ಮೇಲೆ ರಾಜಸ್ಥಾನಿ ಮತ್ತು ಹಿಂದಿ ಭಾಷೆಗಳ ಪ್ರಭಾವ ಹಾಗೂ ಅವುಗಳ ನಡುವಿನ ಪರಸ್ಪರ ಸಂಬಂಧಗಳನ್ನು ಸೂಕ್ಷ್ಮವಾಗಿ ಚರ್ಚೆ ಮಾಡಿದ್ದಾರೆ.

೨. ೧೯೭೫ರಲ್ಲಿ ಪುಷ್ಪಲತ ರಾಂಪುರೆಯವರು "ಬಂಜಾರಾ ಲೋಗ್ ಗೀತೋಂಕಿ ಸಮಾಜ" ಎಂಬ ಮಹಾಪ್ರಬಂಧವನ್ನು ಹಿಂದಿ ಭಾಷೆಯಲ್ಲಿ ರಚಿಸಿದ್ದಾರೆ. ಈ ಪ್ರಬಂಧದಲ್ಲಿ ಮುಖ್ಯವಾಗಿ ಬಂಜಾರ ಸಮುದಾಯದ ಜಾನಪದ ಗೀತೆಗಳನ್ನು ಸಂಗ್ರಹಿಸಿ, ವಿಶ್ಲೇಷಿಸುವ ಮೂಲಕ ಅವರ ಸಾಂಸ್ಕೃತಿಕ ಅನಾವರಣವನ್ನು ಕುರಿತು ಚರ್ಚೆ ಮಾಡಿದ್ದಾರೆ.

೩. ೧೯೭೫ರಲ್ಲಿ ಬಿ.ಜಿ. ಹಳಬರ ಅವರು "ಉತ್ತರ ಕರ್ನಾಟಕದ ಲಂಬಾಣಿಗಳಲ್ಲಿ ಆರ್ಥಿಕ ಬದಲಾವಣೆಯ ಸಾಮಾಜಿಕ ಪರಿಣಾಮ" ಎಂಬ ಪಿಎಚ್.ಡಿ ಪ್ರಬಂಧವನ್ನು ರಚಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿರುವ ಲಂಬಾಣಿಗರ ಆರ್ಥಿಕ ಸ್ಥಿತಿಗತಿಗಳಲ್ಲಿನ ಬದಲಾವಣೆಯ ಸ್ವರೂಪ ಲಂಬಾಣಿಗರಲ್ಲಿ ಪ್ರಚಲಿತವಿರುವ ಆರ್ಥಿಕ ಸಾಧನಗಳ ಒಕ್ಕಲುತನ ಕುರಿತು ಮತ್ತು ಇದರ ಮೇಲೆ ಸಾಮಾಜಿಕವಾಗಿ ಪರಿಣಾಮ ಎಷ್ಟರ ಮಟ್ಟಿಗೆ ಆಗಿದೆ ಎಂಬುದರ ಕುರಿತು ಚರ್ಚೆ ಮಾಡಿದ್ದಾರೆ.

೪. ೧೯೭೬ರಲ್ಲಿ ಎಚ್.ಡಿ. ಲಮಾಣಿ ಅವರು "ಕರ್ನಾಟಕದ ಲಮಾಣಿ ಜನಪದ ಗೀತೆಗಳ ಸಾಹಿತ್ಯಿಕ ಅಧ್ಯಯನ" ಎಂಬ ಹಿಂದಿ ಭಾಷೆಯಲ್ಲಿ ಸಂಶೋಧನಾ ಪ್ರಬಂಧವನ್ನು ರಚಿಸಿದ್ದಾರೆ. ಇದರಲ್ಲಿ ಲಂಬಾಣಿ ಜಾನಪದ ಗೀತೆಗಳನ್ನು ಸಂಗ್ರಹಿಸಿ, ಇವುಗಳಲ್ಲಿ ಸಾಹಿತ್ಯಿಕ ಅಂಶಗಳನ್ನು ಕುರಿತು ಚರ್ಚೆ ಮಾಡಿದ್ದಾರೆ.

೫. ೧೯೮೨ರಲ್ಲಿ ವಿ.ಎಸ್. ಬಾರಕೇರಿಯವರು "ವಿಜಾಪುರ ಜಿಲ್ಲೆಯ ಲಂಬಾಣಿ ಆಡು ಭಾಷೆಯ ವರ್ಣನಾತ್ಮಕ ವಿಶ್ಲೇಷಣೆ" ಎಂಬ ಮಹಾಪ್ರಬಂಧವನ್ನು ಇಂಗ್ಲೀಷ್ ಭಾಷೆಯಲ್ಲಿ ರಚಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ಲಂಬಾಣಿ ಆಡು ಭಾಷೆಯ ಧ್ವನಿಮಾಗಳು, ಸರ್ವನಾಮಗಳು, ಲಿಂಗವ್ಯವಸ್ಥೆ, ವಚನವ್ಯವಸ್ಥೆ, ವಾಕ್ಯರಚನಾ ನಿಯಮಗಳ ಕುರಿತು ವರ್ಣನಾತ್ಮಕವಾಗಿ ವಿವರಿಸಿದ್ದಾರೆ.

೬. ೧೯೯೧ರಲ್ಲಿ ಡಾ. ಪಿ.ಕೆ. ಖಂಡೋಬಾರವರು "ಕರ್ನಾಟಕ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಲಂಬಾಣಿಗರ ಮೂಲ, ಪ್ರಸಾರ, ಜೀವನ ವಿಧಾನ, ಆಚಾರ-ವಿಚಾರ, ನಂಬಿಕೆಗಳು, ಜನಪದ ಕಲೆ, ಸಾಹಿತ್ಯ ಹಾಗೂ ಭಾಷೆಯ ಸ್ವರೂಪ ಮತ್ತು ವಿವಿಧ ಭಾಷೆಗಳ ಪ್ರಭಾವವನ್ನು ಕುರಿತು ಚರ್ಚಿಸಿದ್ದಾರೆ.

೭. ಸಣ್ಣರಾಮರವರು "ಲಂಬಾಣಿ ಸಂಸ್ಕೃತಿ" ಎಂಬ ಸಂಶೋಧನಾ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಲಂಬಾಣಿಗರ ಮೂಲ, ವಲಸೆ, ಸಾಮಾಜಿಕ, ಆರ್ಥಿಕ ಜೀವನ ವಿಧಾನ, ಹೀಗೆ ಅವರ ಒಟ್ಟಾರೆ ಸಾಂಸ್ಕೃತಿಕ ವಿವರಗಳನ್ನು ಚರ್ಚೆ ಮಾಡಿದ್ದಾರೆ.

೮. ಎಚ್.ಡಿ. ಪ್ರಶಾಂತ್ ಅವರ "ಲಂಬಾಣಿಗಳಲ್ಲಿ ಸಾಮಾಜಿಕ ಬದಲಾವಣೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ" ಎಂಬ ಮಹಾಪ್ರಬಂಧವನ್ನು ರಚಿಸಿದ್ದಾರೆ. ಇಲ್ಲಿ ಲಂಬಾಣಿಗರ ಮೂಲ, ವೃತ್ತಿ ಸಾಮಾಜಿಕ ಸ್ಥಿತಿಗತಿಗಳಲ್ಲಿನ ಬದಲಾವಣೆಯ ಸ್ವರೂಪ ಕುರಿತು ಚರ್ಚೆ ಮಾಡಿದ್ದಾರೆ.

೯. ೨೦೦೮ರಲ್ಲಿ ಸಂತೋಷ್‌ರವರು "ದಕ್ಷಿಣ ಭಾರತದ ಲಂಬಾಣಿ ಭಾಷೆ ಮತ್ತು ಪ್ರಕೋಶ" (ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿದ್ದಾರೆ. ಇದರಲ್ಲಿ ಲಂಬಾಣಿ ಭಾಷೆಯ ಪದಕೋಶವನ್ನು ದಾಖಲೀಕರಣ ಮಾಡಿದ್ದಾರೆ.

೧೦. ೨೦೦೭ರಲ್ಲಿ ಗಣಪತಿ ಕೆ. ಲಮಾಣಿಯವರು "ಲಂಬಾಣಿಗರ ಗೋವಾ ವಲಸೆ ಒಂದು ಸಮಾಜ ಶಾಸ್ತ್ರೀಯ ಅಧ್ಯಯನ" ಎಂಬ ಮಹಾಪ್ರಬಂಧವನ್ನು ರಚಿಸಿದ್ದಾರೆ. ಇದರಲ್ಲಿ ಬಿಜಾಪುರ ಜಿಲ್ಲೆಯ ಐತಿಹಾಸಿಕ ಹಿನ್ನಲೆ, ಇದರಲ್ಲಿ ಪ್ರಚಲಿತವಿರುವ ವಿವಾಹ, ಧರ್ಮ, ಸಂಸ್ಕೃತಿ, ಭಾಷೆ, ವೇಷಭೂಷಣ ಗಳನ್ನು ಬಿಜಾಪುರ ಜಿಲ್ಲೆಯಲ್ಲಿ ಬರುವ ಲಂಬಾಣಿ ತಾಂಡಾಗಳ ಸಾಮಾಜಿಕ ಆರ್ಥಿಕ ಹಿನ್ನೆಲೆಯನ್ನು, ವಲಸೆಯ ಅರ್ಥ ವ್ಯಾಖ್ಯೆಗಳು, ಪ್ರಕಾರಗಳು, ವಲಸೆಗೆ ಕಾರಣಗಳು, ವಲಸೆ ಕುರಿತು ಕೈಗೊಂಡ ಸಮಾಜ ಶಾಸ್ತ್ರಜ್ಞರ ವಿಚಾರಗಳನ್ನು, ವಲಸೆ ಹೋಗಲು ಕಾರಣವಾದ ನಿರುದ್ಯೋಗ, ಕಡಿಮೆ ಕೂಲಿ ಮೊದಲಾದ ಅಂಶಗಳನ್ನು ಗೋವಾದಲ್ಲಿ ಲಂಬಾಣಿಗರನ್ನು ಸೆಳೆಯುವ ಅಂಶಗಳಾದ ಉದ್ಯೋಗ, ಹೆಚ್ಚಿನ ಕೂಲಿದರ, ಮನರಂಜನೆ ಇತ್ಯಾದಿ ಹಾಗೂ ವಲಸೆಯಿಂದ ಲಂಬಾಣಿ ಸಮುದಾಯದ ಮೇಲೆ ಹಾಗೂ ಗೋವಾ ಸಮುದಾಯದ ಮೇಲೆ ಆದ ಪರಿಣಾಮಗಳನ್ನು, ಗೋವಾದಲ್ಲಿರುವ ಲಂಬಾಣಿಗರ ಸಾಮಾಜಿಕ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಜೀವನವನ್ನು ಅಂತಿಮವಾಗಿ ವಲಸೆ ಪ್ರಕ್ರಿಯೆಯಿಂದ ಲಂಬಾಣಿ ಸಮುದಾಯದ ಮೇಲೆ ಆದ ಪರಿಣಾಮ ಮತ್ತು ಫಲಿತಗಳನ್ನು ಕುರಿತು ಚರ್ಚೆ ಮಾಡಲಾಗಿದೆ.

ಒಟ್ಟಿನಲ್ಲಿ ಲಂಬಾಣಿ ಜನಾಂಗದ ಕುರಿತು ಈವರೆಗಿನ ಸಂಶೋಧನಾ ಅಧ್ಯಯನಗಳು ಲಂಬಾಣಿಗರ ಸಾಮಾಜಿಕ ಬದಲಾವಣೆಗೆ ಶಿಕ್ಷಣ ಬಹಳ ಮುಖ್ಯ. ಇಂತಹ ಶೈಕ್ಷಣಿಕ ಚಟುವಟಿಕೆಗಳಲ್ಲಿ ಲಂಬಾಣಿ ಮಕ್ಕಳ ಸಾಧಕ-ಬಾಧಕಗಳೇನು ಎನ್ನುವ ಕುರಿತು ಯಾವುದೇ ಅಧ್ಯಯನಗಳು ಇದುವರೆಗೂ ನಡೆದಿಲ್ಲ. ಪ್ರಸ್ತುತ ಅಧ್ಯಯನ ಇಂತಹದೊಂದು ಕೊರತೆಯನ್ನು ತುಂಬಿಕೊಡುತ್ತದೆ. ಇದರಿಂದ ಕರ್ನಾಟಕದಲ್ಲಿ ಲಂಬಾಣಿ ಮಕ್ಕಳಷ್ಟೇ ಅಲ್ಲ, ಲಂಬಾಣಿ ಮಕ್ಕಳಂತೆ ಕನ್ನಡ ಮಾಧ್ಯಮದ ಮೂಲಕ ಕಲಿಯುವ ತುಳು, ಕೊಡವ, ಕೊರಚ, ಹೀಗೆ ಮೊದಲಾದ ಭಾಷಿಕ ಮಕ್ಕಳಿಗೂ ಅನುಕೂಲವಾಗುತ್ತದೆಂದು ಭಾವಿಸಿದ್ದೇನೆ.

ಅಧ್ಯಾಯ ಎರಡು

ಲಂಬಾಣಿಗರು : ಚಾರಿತ್ರಿಕ ಹಿನ್ನೆಲೆ

೨.೧. ಲಂಬಾಣಿಗರ ಭಾಷೆಯ ಚಾರಿತ್ರಿಕ ಹಿನ್ನೆಲೆ

೨.೨. ಲಂಬಾಣಿಗರ ಸ್ಥಿತಿಗತಿ

೨.೩. ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ೨

ಲಂಬಾಣಿಗರು : ಚಾರಿತ್ರಿಕ ಹಿನ್ನೆಲೆ

೨.೧ ಲಂಬಾಣಿ ಭಾಷೆಯ ಚಾರಿತ್ರಿಕ ಹಿನ್ನಲೆ

ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಲಂಬಾಣಿಗರ ಇತಿಹಾಸ ಬಹಳಷ್ಟು ಪ್ರಾಚೀನವಾಗಿದೆ. ಸುಮಾರು ಕ್ರಿ. ಶ. ೪೦೦ ವರ್ಷಗಳ ಹಿಂದಿನ ಇತಿಹಾಸ ಇವರಿಗಿದೆ. "ಕರ್ನಾಟಕದ ವರ್ಣರಂಜಿತ ಗುಂಪಿಗೆ ಸೇರಿದ ಲಂಬಾಣಿಗರು ತಮ್ಮನ್ನು ತಾವು 'ಗೋರಮಾಟಿ' ಎಂದು ಕರೆದುಕೊಳ್ಳುತ್ತಾರೆ. 'ಗೌರ' ವರ್ಣದ ಲಂಬಾಣಿಗರು ಪೂರ್ವದಲ್ಲಿ ಆರ್ಯವರ್ಗಕ್ಕೆ ಸಂಬಂಧಿಸಿದುದರಿಂದಲೆ ತಮ್ಮ ಬಣ್ಣ, ಸೌಂದರ್ಯಗಳ ಬಗೆಗೆ ಹೆಚ್ಚಿನ ಅಭಿಮಾನವಿರಿಸಿಕೊಂಡು ಹೀಗೆ ಕರೆದುಕೊಂಡಿರಬಹುದು. ಮೂಲತಃ ರಾಜಸ್ಥಾನದ ರಜಪೂತ ವಂಶದವರಾದ ಇವರು ರಾಜಸ್ಥಾನದಿಂದ ಮೊಗಲರ ಸೈನಿಕರ ಜೊತೆಗೆ ಇಲ್ಲಿಗೆ ಬಂದು ದೇಶದ ಪ್ರತಿಯೊಂದು ಕಡೆಗಳಲ್ಲಿ ಹರಕೊಂಡಿದ್ದಾರೆ".[೧] ಹೀಗೆ ಇವರ ಮೂಲದ ಬಗೆಗೆ ಮತ್ತು ಸಾಂಸ್ಕೃತಿಕ ವಿವರದ ಬಗೆಗೆ ಇತಿಹಾಸದ ಕುರಿತು ಸಾಕಷ್ಟು ಮಾಹಿತಿ ದೊರಕಿದೆ. ಆದರೆ ಇವರ ಭಾಷೆಗೆ ಸಂಬಂಧಿಸಿದಂತೆ ಯಾವುದೇ ಸ್ವತಂತ್ರವಾದ ಇತಿಹಾಸವಿಲ್ಲ. ಏಕೆಂದರೆ ಇದು ಆಡುಭಾಷೆಯಾಗಿದೆ. ಲಂಬಾಣಿಗಳು ಮೂಲತಃ ಸಂಚಾರಿ ಜನಾಂಗದವರು ಇವರಾಡುವ ಬಂಜಾರಿ ಭಾಷೆಗೆ ನಿರ್ದಿಷ್ಟವಾದ ಲಿಪಿ ಮಾಧ್ಯಮವಿಲ್ಲ. ಇದು ಕೇವಲ ವ್ಯವಹಾರಿಕ ಭಾಷೆಯಾಗಿ ಉಳಿದಿದೆ. ಲಂಬಾಣಿಗರ ಈ ಭಾಷೆಯು ಯಾವ ಭಾಷೆಯಿಂದ ಪ್ರಭಾವಿತವಾಗಿದೆ ಎಂದು ಖಚಿತ ಪಡಿಸುವುದು ಕಷ್ಟ. ಬಹುಶಃ ಉತ್ತರ ಭಾರತದಿಂದ ದಕ್ಷಿಣಕ್ಕೆ ವಲಸೆ

---

೧. ಡಾ. ಪಿ.ಕೆ. ಖಂಡೋಬಾ ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಪು. ಸಂ. ೩೦

ಬಂದುದರಿಂದ ಲಂಬಾಣಿಗರ ಭಾಷೆಯ ಮೇಲೆ ಉತ್ತರದ ಭಾಷೆಗಳೂ ಪ್ರಭಾವ ಬೀರಿವೆ. ನಿಸ್ಸಂದೇಹ ವಾಗಿಯೂ ಇದೊಂದು ಹಿಂದಿ ಭಾಷೆಯಿಂದ ಪ್ರಭಾವಿತವಾದ ಭಾಷೆಯಾಗಿದೆ ಎಂದು ಡಾ. ಪಿ.ಕೆ.ಖಂಡೋಬಾ ಅವರು ಅಭಿಪ್ರಾಯಪಡುತ್ತಾರೆ.

ಡಾ. ಅಮಸಿಂಗ ರಾಠೋಡರವರೂ ತಮ್ಮ ಸಂಶೋಧನ ಮಹಾಪ್ರಬಂಧದಲ್ಲಿ "ಲಮಾಣಿ ಭಾಷೆಯ ಯಾವ ಲಿಖಿತ ಸಾಹಿತ್ಯವೂ ಇಲ್ಲ. ಭಾಷಾ ಶಾಸ್ತ್ರದ ಅಧ್ಯಯನದ ದೃಷ್ಟಿಯಿಂದ ಜನಪದಗೀತೆ, ಜನಪದ ಕಥೆ ಹಾಗೂ ಜನರ ವ್ಯವಹಾರಿಕ ಭಾಷಾ ಗುಂಪು ಇದನ್ನು ಆಧರಿಸಬೇಕಾಗುತ್ತದೆ. ಇದು 'ನಾಗರಿ ಲಿಪಿ' ಯನ್ನು ಹೊಂದಿದೆ" ಎನ್ನುತ್ತಾರೆ. ಹೀಗೆ ಭಾರತದ ಉದ್ದಗಲಕ್ಕೂ ಹರಡಿರುವ ಲಂಬಾಣಿಗರ ಭಾಷೆ ಒಂದೇ ತೆರನಾಗಿದ್ದರೂ, ಅವರು ವಾಸವಾಗಿರುವ ಆಯಾ ಪ್ರಾದೇಶಿಕ ಭಾಷೆಗಳ ಪ್ರಭಾವ ಅವರ ಭಾಷೆ ಯಾಗಿರುವುದು ಸಹಜವೇ ಆದರೂ ಅವರ ಮೂಲ ಭಾಷೆಯನ್ನು ಬಿಡದೆ ಮುಂದುವರಿಸಿಕೊಂಡು ಬಂದಿದ್ದಾರೆ./ಡಾ. ಗ್ರಿಯರ್‌ಸನ್ ಅವರು "As for their Language, in many of the Conutry they have lost their dialect and use the local languages of the non Lambani majority population in the areas of their Settlement. But in the areas of their Concentration the Lambani have Successful retained in their language Banjari"[2] ಎಂದು ಹೇಳಿದ್ದಾರೆ. ಅಂದರೆ ಬಹಳಷ್ಟು ರಾಜ್ಯಗಳಲ್ಲಿ ಲಂಬಾಣಿಗರು ತಮ್ಮ ಆಡು ನುಡಿಯಿಂದ ದೂರವಾಗಿ ಪ್ರಾದೇಶಿಕ ಭಾಷೆಗಳನ್ನು ಬಳಸುತ್ತಿದ್ದಾರೆ. ಲಂಬಾಣಿಗರೆ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪ್ರದೇಶದಲ್ಲಿ ಅವರು ತಮ್ಮ ಬಂಜಾರಿ ಭಾಷೆಯನ್ನೇ ಬಳಸುತ್ತಿದ್ದಾರೆ. ಲಂಬಾಣಿ ಭಾಷೆಯನ್ನು ಕುರಿತ ಅವರ ಈ ಮಾತುಗಳು ಅರ್ಥಪೂರ್ಣವಾಗಿವೆ. ("ಲಂಬಾಣಿ ಭಾಷೆಯು ಪ್ರಾದೇಶಿಕ ಭಾಷಾ ಪ್ರಭಾವಕ್ಕೆ ಒಳಗಾಗಿರುವ ಅಂಶವನ್ನು ಎತ್ತಿತೋರಿಸುವುದು ಗಮನಾರ್ಹವಾದ ಅಂಶವಾಗಿದೆ. ಆದರೆ ಲಂಬಾಣಿಗರು ಎಲ್ಲಿಯೆ ವಾಸವಾಗಿರಲಿ ಅವರು ತಮ್ಮ ಭಾಷೆಯಿಂದ ದೂರವಾಗಿರಲು ಸಾಧ್ಯವಿಲ್ಲ".[೩] ಲಂಬಾಣಿ ಭಾಷೆಯು ಅನೇಕ ಭಾಷೆಗಳ ಪ್ರಭಾವಕ್ಕೆ ಒಳಗಾಗಿದೆ. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಈ ಜನರು ವಲಸೆ ಬಂದಿರುವುದರಿಂದ ಇವರ ಭಾಷೆಯ ಮೇಲೆ ಉತ್ತರ ಭಾರತದ ಭಾಷೆಗಳ ಪ್ರಭಾವ ಉಂಟಾಗಿದೆ. ಉಳಿದೆಲ್ಲ ಭಾಷೆಗಳಿಗಿಂತಲೂ ಹಿಂದಿಭಾಷೆಯ ಪ್ರಭಾವ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಶತಶತ ಮಾನಗಳಿಂದ ಮೌಖಿಕ ರೂಪದಲ್ಲಿಯೇ ಉಳಿದಿರುವ ಈ ಭಾಷೆಯು ಇಂಡೋ ಆರ್ಯನ್ ಭಾಷಾ ಗುಂಪಿಗೆ ಸೇರಿದುದಾಗಿದೆ. ಈ ಭಾಷೆಗೆ ಲಿಪಿಯಿಲ್ಲದಿದ್ದರೂ ಆಯಾ ಪ್ರಾಂತೀಯ ಭಾಷೆಗಳ ಲಿಪಿಯಲ್ಲಿಯೇ ಅವರ ಸಾಹಿತ್ಯ ಕೂಡ ನಿರ್ಮಾಣಗೊಳ್ಳುತ್ತಿದೆ. ಆದರೆ ಒಂದು ವೇಳೆ ಈ ಆಡುನುಡಿಯ ಎಲ್ಲಾ ಸಾರ್ಥಕ ಧ್ವನಿಮಾಗಳನ್ನು ಅಳವಡಿಸಿಕೊಂಡಿರುವ ಯಾವುದಾದರೂ ಭಾಷೆಯ ಒಂದು ಸಾಮಾನ್ಯ ಲಿಪಿಯನ್ನು ಉಪಯೋಗಿಸಿಕೊಂಡಿದ್ದೆ ಆದರೆ ಸ್ವಲ್ಪ ಸಮಯದಲ್ಲಿಯೇ ಇವರ ಸಾಹಿತ್ಯ ನಿರ್ಮಾಣಗೊಳಿಸಬಹುದಾಗಿದೆ.

---

೨. Grierson G.A., Linguistic Survey of Inida, Vol. IX, P. 93

೩. ಡಾ. ಡಿ.ಬಿ. ನಾಯಕ, ಲಂಬಾಣಿ ಸಂಸ್ಕೃತಿ, ಪು. ೩೩

"ದೇವನಾಗರಿ" ಲಿಪಿಯೇ ಈ ಭಾಷೆಯ ಆಡುನುಡಿಗೆ ಸಿದ್ಧಲಿಪಿಯಾಗುತ್ತದೆ ಎಂದು ಲಮಾಣಿ ಅವರು ಅಭಿಪ್ರಾಯಪಡುತ್ತಾರೆ.

ಲಂಬಾಣಿ ಸಂಸ್ಕೃತಿಯ ಅಧ್ಯಯನಕಾರರಲ್ಲಿ ಒಬ್ಬರಾದ ಶ್ರೀ ವೈ. ರೂಪ್ಲಾನಾಯಕ ಅವರು ಇದೇ ಅಭಿಪ್ರಾಯವನ್ನು ಸಮರ್ಥಿಸುತ್ತ "Devangari Script is the most Scintific, beautiful and easiest Script to follow and most Suitable to Banjari accent and prononciation Hence Devanagari"[4] ಎಂದು ಹೇಳಿದ್ದಾರೆ.

ಎಡ್ಗರ್ ಥರ್ಸ್ಟನ್ ಅವರು ಉತ್ತರ ಕನ್ನಡದ ಲಂಬಾಣಿ ಭಾಷೆಯನ್ನು ಸಮೀಕ್ಷಿಸಿ "In the district of N.K. the Lambani have Still retained their dialect, but it Contains many Marwari, urdu, Gujarathi and a few Marathi or multi Lingual"[5] ಎಂದು ಹೇಳಿರುವ ಮಾತುಗಳು ಉತ್ತರ ಕನ್ನಡದಲ್ಲಿ ಅಷ್ಟೆ ಅಲ್ಲ ಭಾರತದ ಯಾವುದೇ ಪ್ರದೇಶದ ಲಂಬಾಣಿಗರ ಭಾಷಾ ಸ್ವರೂಪಕ್ಕೆ ಅನ್ವಯಿಸುವ ಮಾತುಗಳಾಗಿವೆ. ಯಾವುದೇ ಅಲ್ಪಸಂಖ್ಯಾತರ ಭಾಷೆಯಲ್ಲಿ ಈ ರೀತಿಯ ಪ್ರಭಾವ ಸಾಮಾನ್ಯವಾದುದಾಗಿದೆ.

ಭಾಷೆಯ ಮೂಲ : ಲಂಬಾಣಿ ಭಾಷೆಯು ಇಂಡೋ-ಆರ್ಯನ್ ವರ್ಗಕ್ಕೆ ಸೇರಿದ ಭಾಷೆಯಾಗಿದೆ. ಅವರಾಡುವ ದಿನನಿತ್ಯದ ಬಳಕೆಯ ಪದಗಳಲ್ಲಿ ಇಂಡೋ-ಆರ್ಯನ್ ಪದಗಳೇ ಆಗಿವೆ. ಇಂಡೋ ಆರ್ಯನ್ ವರ್ಗಕ್ಕೆ ಸೇರಿದ ಹಿಂದೀ, ಸಂಸ್ಕೃತ ಭಾಷೆಗಳೇ ಇದಕ್ಕೆ ಪ್ರೇರಕಗಳಾಗಿದೆ. ಲಂಬಾಣಿ ಜನರು ಈ ಭಾಷೆಯನ್ನು 'ಗೋರಬೋಲಿ' ಎಂದು ಕರೆಯುತ್ತಾರೆ. ಆರ್ಯ ಪರಿವಾರದ ಹಿಂದೀ ಭಾಷೆಯ ಉಪ ಭಾಷೆಗಳಾದ ಮಾರವಾಡಿ ಹಾಗೂ ಮಾಲವಿ ಭಾಷೆಗಳೊಂದಿಗೆ ಈ ಭಾಷೆಯ ನಿಕಟ ಸಂಬಂಧ ಕಂಡುಬರುತ್ತದೆ. ಧ್ವನಿತತ್ವ, ಉಚ್ಚಾರಣೆ ಹಾಗೂ ವ್ಯಾಕರಣಗಳ ದೃಷ್ಟಿಯಿಂದ ಇದು ಆರ್ಯ ಪರಿವಾರದ ಭಾಷೆಗಳಾದ ಸಂಸ್ಕೃತ, ಪ್ರಾಕೃತ, ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದು, ಇವುಗಳ ಜೊತೆಗೆ ಮರಾಠಿ, ಗುಜರಾತಿ, ಕನ್ನಡ, ತೆಲುಗು, ಅರಬ್ಬಿ, ಪಾರ್ಸಿ ಮುಂತಾದ ಅನೇಕ ಭಾಷೆಗಳ ರೂಪಗಳು ಈ ಭಾಷೆಯಲ್ಲಿ ಕಂಡುಬರುತ್ತವೆ.

"ಬಣಜಾರರು ಬಹುಶಃ ಉತ್ತರದ ರಾಜಪುತಾಣದಿಂದ ದಕ್ಷಿಣಕ್ಕೆ ಬಂದು ನೆಲೆಸಿದರು. ಸು. ೧೭ನೇಯ ಶತಮಾನದಲ್ಲಿ ವ್ಯಾಪರಕ್ಕಾಗಿಯೇ ಅಥವಾ ರಾಜನೈತಿಕ ಕಾರಣಗಳಿಂದಾಗಿಯೆ ರಾಜಸ್ಥಾನವನ್ನು ಬಿಟ್ಟು 'ಮಾಳವಾ' ಮುಖಾಂತರ 'ನಿಮಾಡ' ಪ್ರದೇಶಕ್ಕೆ ಬಂದು ಕೆಲಕಾಲ ವಾಸಿಸುವಂತೆ ತೋರುತ್ತದೆ. ಇದರಿಂದಾಗಿ 'ನಿಮಾಡದ' ಆಡುನುಡಿಯ ಪ್ರಭಾವವು ಈ ಜನರ ಆಡನುಡಿಯ ಮೇಲಾಗಿರುವುದು ಸಹಜವೇ ಆಗಿದೆ. ಲಂಬಾಣಿ ಭಾಷೆಯು ರಾಜಸ್ಥಾನದ ನಾಲ್ಕು ಮುಖ್ಯ ಉಪಭಾಷೆಗಳಲ್ಲಿ ಒಂದಾಗಿರುವ 'ಮಾಲವಿ'ಯ ಉಪನುಡಿಯಾಗಿದೆ".[6]

---

೪. Y. Ruplanaik, Colourful Banjara Tribe Through The Ages, P.5

೫. Thursten E., Castes and Tribes of Southern India, Vol. IV, Cosmo Publication, Delhi P.8

೬. ಪಿ.ಕೆ. ಖಂಡೋಬಾ, ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ ಪು. ೨೫೫.

ಹೀಗೆ 'ಬಂಜಾರಿ' ಭಾಷೆಯು ರಾಜಸ್ಥಾನಿಯ ಒಂದು ಉಪನುಡಿಯಾಗಿದ್ದು ರಾಜಸ್ಥಾನ ಮಾತನಾಡುವ ಪ್ರದೇಶದಲ್ಲಿ ಹಿಂದಿ ಭಾಷೆಯೇ ಸಾಹಿತ್ಯದ ಭಾಷೆಯಾಗಿರುವುದರ ಪರಿಣಾಮವಾಗಿ ಸ್ಥಾನೀಯ ಭಾಷೆಗಳ ಮೇಲೆ ಹಿಂದಿ ಭಾಷೆಯ ಪ್ರಭಾವ ಅಧಿಕ ಪ್ರಮಾಣದಲ್ಲಿ ಆಗಿರುವುದು ಸ್ವಾಭಾವಿಕವಾಗಿದೆ. ಹೀಗಾಗಿ "ಲಂಬಾಣಿ ಭಾಷೆಯ ಮೇಲೆಯೂ ಇದರ ಪ್ರಭಾವ ಆಗಿರುವುದು ಸಹಜ. ಆದ್ದರಿಂದ ಈ ಭಾಷೆಯ ಬೇರನ್ನು ರಾಜಸ್ಥಾನದಲ್ಲಿಯೇ ಕಾಣುತ್ತೇವೆ. ರಾಜಸ್ಥಾನಿ ಹಿಂದಿ ಭಾಷೆಯ ಉಪಭಾಷೆ ಆಗಿದೆಯಲ್ಲದೆ ಅದರಲ್ಲಿ ರಾಜಸ್ಥಾನ ಮತ್ತು ಮಧ್ಯಭಾರತ ಕ್ಷೇತ್ರದ ಉತ್ತರ ಭಾಗದಲ್ಲಿ ಆಡಲ್ಪಡುವ ಎಲ್ಲ ಭಾಷೆಗಳೂ ಅದರಲ್ಲಿ ಸಮಾವೇಶಗೊಳ್ಳುತ್ತವೆ. 'ಮಾಳವಿ' ರಾಜಸ್ಥಾನಿಯ ಉಪಭಾಷೆಯಾಗಿದ್ದು, ಬಂಜಾರಿ ಮಾಳವಿಯ ಆಡುನುಡಿಯಾಗಿದೆ".[2]

ಹೀಗೆ ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರುವ ಈ ಭಾಷೆಯು ತನ್ನ ಇಂಡೋ-ಆರ್ಯನ್ ಭಾಷಾ ವರ್ಗದ ಭಾಷೆಗಳ ಹಾಗೂ ಅನ್ಯಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದರೂ ತನ್ನದೇ ಆದ ವಿಶಿಷ್ಟ ಶಬ್ದ ಸಂಪತ್ತನ್ನು ಹಾಗೂ ವ್ಯಾಕರಣ ಪ್ರಕ್ರಿಯೆಗಳನ್ನು ಉಳಿಸಿಕೊಂಡು ಬಂದಿದೆ.

ಲಂಬಾಣಿ ಮತ್ತು ಕನ್ನಡ ಭಾಷೆಯ ಸಂಬಂಧ

ಲಂಬಾಣಿಗರು ತಮ್ಮ ಭಾಷೆಗೆ 'ಗೋರಬೋಲಿ' ಎಂದು ಕರೆಯುತ್ತಾರೆ. ಇಂಡೋ ಆರ್ಯನ್ ಭಾಷಾ ಗುಂಪಿಗೆ ಸೇರುವ ಈ ಭಾಷೆಗೆ ತನ್ನದೇ ಆದ ಲಿಪಿವ್ಯವಸ್ಥೆ ಹಾಗೂ ಸ್ವತಂತ್ರವಾದ ಇತಿಹಾಸವಿಲ್ಲ. ಉತ್ತರದ ರಾಜಸ್ಥಾನದಿಂದ ದಕ್ಷಿಣಕ್ಕೆ ವಲಸೆ ಬಂದ ಲಂಬಾಣಿಗರು ಸುಮಾರು ೩೦೦ ವರ್ಷಗಳಿಂದಲೂ ಕನ್ನಡಿಗರ ಸಂಪರ್ಕ ಹಾಗೂ ಜೊತೆಯಲ್ಲಿ ವಾಸವಾಗಿದ್ದಾರೆ. ಧ್ವನಿತತ್ವ, ಉಚ್ಚಾರಣೆ, ಪರಿವಾರದ ಭಾಷೆಗಳಾದ ಸಂಸ್ಕೃತ, ಪ್ರಾಕೃತ, ಹಿಂದಿ ಹಾಗೂ ರಾಜಸ್ಥಾನಿ ಭಾಷೆಗಳ ಪ್ರಭಾವಕ್ಕೆ ಒಳಗಾಗಿದೆ. ಇವುಗಳ ಜೊತೆಗೆ ಮರಾಠಿ, ಗುಜರಾತಿ, ತೆಲುಗು, ಪಾರ್ಶಿ ಭಾಷೆಗಳ ಪ್ರಭಾವ ಆಧರಿತ ಕರ್ನಾಟಕದಲ್ಲಿ ಲಂಬಾಣಿಗರ ಭಾಷೆಯ ಮೇಲೆ ಕನ್ನಡ ಪ್ರಭಾವವನ್ನು ಕಾಣಬಹುದು.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಕ್ಕಿಂತಲೂ ಹೆಚ್ಚಿನ ಇತಿಹಾಸವಿದೆ. ಅಲ್ಲದೆ ತನ್ನದೇ ಆದ ಲಿಪಿವ್ಯವಸ್ಥೆ ಹಾಗೂ ಇತಿಹಾಸವನ್ನು ಹೊಂದಿದ ಈ ಭಾಷೆ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದುದಾಗಿದೆ. ಕರ್ನಾಟಕದಲ್ಲಿ ವಾಸಿಸುವ ಲಂಬಾಣಿಗರು ಆರಂಭದಲ್ಲಿ ವ್ಯಾಪಾರಿಗಳಾಗಿದ್ದರಿಂದ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುತ್ತಿದ್ದರು. ಅಂತಹ ಸಂದರ್ಭದಲ್ಲಿ ಕನ್ನಡಿಗರ ಸಂಪರ್ಕದಿಂದಾಗಿ ಕನ್ನಡ ಭಾಷೆ ಅವರಿಗೆ ಅನಿವಾರ್ಯವಾಯಿತು. ಲಂಬಾಣಿಗರು ಕನ್ನಡ ಭಾಷಿಕ ಪರಿಸರದಲ್ಲಾಗಲಿ, ಅಥವಾ ಕನ್ನಡಿಗರ ಜೊತೆಗೆ ವಾಸಮಾಡದೆ ಪ್ರತ್ಯೇಕವಾಗಿ ಊರು ಗ್ರಾಮಗಳಿಂದ ದೂರದಲ್ಲಿ ತಾಂಡಾಗಳಲ್ಲಿ ನೆಲೆನಿಂತಾಗಲೂ, ವ್ಯವಹಾರಿಕವಾಗಿ ಕನ್ನಡ ಭಾಷೆಯ ಕಲಿಕೆ ಮತ್ತು ಬಳಕೆಯ ಪ್ರಕ್ರಿಯೆ ನಡೆಯುತ್ತಾ ಬಂದಿದೆ.

---

೨. ಪಿ.ಕೆ. ಖಂಡೋಬಾ, ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಪು. ೨೫೬

ಕರ್ನಾಟಕ ರಾಜ್ಯ ಕನ್ನಡಿಗರು ಬಹು ಸಂಖ್ಯೆಯಲ್ಲಿ ಇರುವ ಭೂಪ್ರದೇಶ ಅಲ್ಲದೆ ಕನ್ನಡ ಭಾಷೆಯ ಜೊತೆಗೆ ಇತರ ಭಾಷೆಗಳನ್ನು ಆಡುವ ಹಲವು ಭಾಷಾ ಸಮುದಾಯಗಳು ಈ ರಾಜ್ಯದಲ್ಲಿವೆ. ಕನ್ನಡಿಗರ ಜೊತೆಗೆ ವಾಸಿಸುತ್ತಿರುವ ಹಲವು ಭಾಷಾ ಸಮುದಾಯಗಳ ಜನರು ಸಾವಿರಾರು ವರ್ಷಗಳಿಂದ ಈ ಪ್ರದೇಶದಲ್ಲಿ ಜೀವನ ನಡೆಸುತ್ತಿದ್ದಾರೆ. ಉದಾ. ತುಳು, ಕೊಂಕಣಿ, ತೆಲುಗು, ಮುಸ್ಲಿಂ ಸಮುದಾಯಗಳು ಹಾಗೆಯೇ ಲಂಬಾಣಿ ಸಮುದಾಯ ಸುಮಾರು ೧೭ನೇ ಶತಮಾನದಿಂದ ಇತ್ತೀಚಿನವರೆಗೂ ಕನ್ನಡ ಸಮುದಾಯದೊಂದಿಗೆ ಜೀವಿಸುತ್ತಿದ್ದಾರೆ.

"ಕನ್ನಡ ಭಾಷೆಯನ್ನು ಮಾತನಾಡುವ ಜನರು ಇತರ ಭಾಷಿಕರೊಡನೆ ವ್ಯವಹರಿಸಲು ಆ ಭಾಷೆಗಳನ್ನು ಕಲಿಯುವುದಾಗಲಿ, ಇತರ ಭಾಷಿಕರು ತಮ್ಮ ವ್ಯವಹಾರಕ್ಕಾಗಿ ಕನ್ನಡವನ್ನು ಕಲಿಯುವುದಾಗಲಿ ಅನೌಪ ಚಾರಿಕವಾಗಿ ಗಡಿ ಪ್ರದೇಶದಲ್ಲಿ ನಡೆಯುತ್ತ ಬಂದಿದೆ. ಆದರೆ ಕೆಲವೊಂದು ಸಂದರ್ಭದಲ್ಲಿ ಭಾಷಿಕರು ಪರಸ್ಪರ ಸಂಪರ್ಕದಲ್ಲಿದ್ದರೂ, ಸಾಮಾಜಿಕವಾದ ಹಲವು ಕಾರಣಗಳಿಂದ ಇನ್ನೊಂದು ಭಾಷೆಯನ್ನು ಕಲಿಯ ಬೇಕಾದ ಪ್ರಸಂಗ ಒದಗುವುದಿಲ್ಲ. ಈ ಸಾಮಾಜಿಕ ಕಾರಣಗಳು ಹಲವು. ಉದಾ. ಸಾಮಾಜಿಕವಾಗಿ ಉನ್ನತ ಜಾತಿ ವರ್ಗಗಳಿಗೆ ಸೇರಿದವರು ಇನ್ನೊಂದು ಭಾಷೆಯನ್ನು ಕಲಿಯಬೇಕಾದ ಒತ್ತಾಯಗಳಿಗೆ ಒಳಗಾಗುವುದಿಲ್ಲ. ಅಷ್ಟು ಸಹಜವಾಗಿ ಎಲ್ಲ ಕನ್ನಡಿಗರು ತುಳು ಭಾಷೆಯನ್ನು ಕಲಿತಿರುವುದಿಲ್ಲ".[೮]

ಹಾಗೆಯೇ ಕರ್ನಾಟಕದಲ್ಲಿ ಹಲವು ಪ್ರದೇಶಗಳಲ್ಲಿ ವಾಸವಾಗಿರುವ ಲಂಬಾಣಿ ಭಾಷಿಕರಿಗೆ ಕನ್ನಡ ಭಾಷೆಯನ್ನು ಕಲಿಯಲೇಬೇಕಾದ ಅಗತ್ಯತೆ ಇದೆ. ಏಕೆಂದರೆ ಅಲ್ಪ ಸಂಖ್ಯಾತರಾದ ಲಂಬಾಣಿ ಭಾಷೆ ಲಿಪಿರಹಿತ ಆಡುಭಾಷೆಯಾಗಿದ್ದರಿಂದ ಕನ್ನಡ ಕನ್ನಡಿಗರನ್ನು ಆಶ್ರಯಿಸಬೇಕಾದ ಅನಿವಾರ್ಯತೆ ಅವರಿಗಿದೆ. ದಿನನಿತ್ಯದ ವ್ಯವಹಾರಕ್ಕಾಗಿ ಲಂಬಾಣಿ ಪುರುಷರು ಹಾಗೂ ಕೆಲವು ಸ್ತ್ರೀಯರು ಕನ್ನಡವನ್ನು ಕಲಿಯುತ್ತಾರೆ. ಬಹುತೇಕ ಮಹಿಳೆಯರು ಸಾಮಾಜಿಕ ಸಂಪರ್ಕದ ಕೊರತೆಯಿಂದಾಗಿ ಕನ್ನಡ ಕಲಿಯದೆ ಉಳಿಯುತ್ತಾರೆ. ಹಾಗೆ ಅವರ ಮಕ್ಕಳು ಶೈಕ್ಷಣಿಕವಾಗಿ ಶಾಲೆಯ ಆವರಣದಲ್ಲಿ ಕನ್ನಡ ಕಲಿಕೆ ಆರಂಭವಾಗುತ್ತದೆ. ಹೀಗೆ ಈ ಸಂಕೀರ್ಣ ಪರಿಸ್ಥಿತಿಗೆ ಆರ್ಥಿಕ, ಧಾರ್ಮಿಕ ಹಾಗೂ ಸಾಮಾಜಿಕ ಆಯಾಮಗಳು ಕಾರಣವಾಗಿವೆ.

ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಸುಮಾರು ೩೦೦ ವರ್ಷಗಳಿಂದ 'ಅನ್ಯ'ಭಾಷಿಕರಾದ ಲಂಬಾಣಿ ಗರು ಕನ್ನಡ ಜನಸಮುದಾಯದೊಂದಿಗೆ ಬದುಕುತ್ತಿದ್ದಾರೆ. ಕೇವಲ ವ್ಯವಹಾರಿಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಕನ್ನಡಿಗರೊಂದಿಗೆ ಸಂಪರ್ಕವನ್ನು ಹೊಂದಿದ್ದಾರೆ. ಆದರೆ ಇದೊಂದು ಮುಚ್ಚಿದ ಸಮುದಾಯವಾಗಿದೆ. ಅಂದರೆ ಅವರು ವ್ಯವಹಾರಕ್ಕಾಗಿ ಜೀವನ ನಿರ್ವಹಣೆಗಾಗಿ ಕನ್ನಡ ಭಾಷಿಕರನ್ನು ಅವಲಂಬಿಸಿದ್ದಾರೆ. ಆದರೆ ಕನ್ನಡ ಭಾಷಿಕರು ಈ ಸಮುದಾಯದೊಡನೆ ಯಾಜಮಾನ್ಯದ ನೆಲೆಯಲ್ಲಿ ನೋಡುತ್ತಾರೆ. ಲಂಬಾಣಿ ಸಮುದಾಯಕ್ಕೆ ಕನ್ನಡ ಭಾಷೆಯನ್ನು ಕಲಿಯುವ ಒತ್ತಾಯ ಇದೆ. ಆದರೆ

---

೮. ಡಾ. ಕೆ.ವಿ. ನಾರಾಯಣ, ಕನ್ನಡ ಜಗತ್ತು ಅರ್ಧಶತಮಾನ, ಪು. ೮೮-೮೯

ಕನ್ನಡಿಗರಿಗೆ ಆ ಸಮುದಾಯದ ಭಾಷೆಯಾದ ಲಂಬಾಣಿಯನ್ನು ಕಲಿಯುವ ಒತ್ತಾಯ ಇಲ್ಲ. ಹೀಗಾಗಿ ಕನ್ನಡ ಭಾಷೆ ಲಂಬಾಣಿ ಭಾಷೆಯನ್ನು ಅಧೀನವಾಗಿಯೇ ಕಾಣುತ್ತದೆ.

ಬುಡಕಟ್ಟು ಸಮುದಾಯಗಳಲ್ಲಿ ಒಂದಾದ ಲಂಬಾಣಿ ಜನಾಂಗವು ಸರ್ಕಾರ ಕೈಗೊಂಡ ಹಲವಾರು ಕಲ್ಯಾಣ ಕಾರ್ಯಕ್ರಮಗಳಿಂದಾಗಿ ಅಲ್ಲಲ್ಲಿ ನೆಲೆಸುವಂತಾಗಿದ್ದರೂ ಇಂದಿಗೂ ವಲಸಿಗರಾಗಿಯೇ ಇದ್ದಾರೆ. ಇವರು ತಮ್ಮ ಜೀವನ ನಿರ್ವಹಣೆಗಾಗಿ, ಸಾಮಾಜಿಕ ಸಂಪರ್ಕಕ್ಕಾಗಿ ಅಗತ್ಯವಿದ್ದಷ್ಟು ಕನ್ನಡವನ್ನು ಕಲಿಯುತ್ತಾರೆ. ಉಳಿದಂತೆ ತಮ್ಮ ಸಮುದಾಯದ ಭಾಷೆಯನ್ನು ಬಳಸಿಕೊಳ್ಳುತ್ತಾರೆ. ಇತ್ತೀಚಿನ ದಶಕಗಳಲ್ಲಿ ಬುಡಕಟ್ಟುಗಳನ್ನು ಸಮಾಜದ ಮುಖ್ಯಧಾರೆಗೆ ಕರೆತರುವ ಯೋಜನೆಗಳು ಮಕ್ಕಳು ಕನ್ನಡವನ್ನು ಔಪಚಾರಿಕವಾಗಿ ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ಈ ಜನಸಮುದಾಯ ಆಧುನಿಕತೆಯ ಸಂಪರ್ಕದಿಂದಾಗಿ ಕನ್ನಡಿಗರ ಪ್ರಭಾವದಿಂದಾಗಿ ನಿಧಾನವಾಗಿ ತಮ್ಮ ಚಹರೆಗಳನ್ನು ಕನ್ನಡ ಭಾಷಾ ಸಮುದಾಯಕ್ಕೆ ಹೊಂದಿಸಿ ಕೊಂಡರೂ ಆಶ್ಚರ್ಯಪಡಬೇಕಾಗಿಲ್ಲ. ಲಂಬಾಣಿ ಭಾಷೆಯಲ್ಲಿ ಬರವಣಿಗೆ ಕಡಿಮೆ. ಇವರ ಕುರಿತ ಬರವಣಿಗೆಯು ಕನ್ನಡ ಲಿಪಿಯಲ್ಲಿ ಇದೆ. ಅಲ್ಲಿನ ಮೌಖಿಕ ಸಾಹಿತ್ಯವನ್ನು ಕನ್ನಡ ಲಿಪಿಯಲ್ಲಿಯೇ ದಾಖಲಿಸಲಾಗಿದೆ. ಕೆಲವು ವರ್ಷಗಳ ಹಿಂದೆ ಪ್ರಚಲಿತವಾಗುತ್ತಿದ್ದ ಕರ್ನಾಟಕ ಬಂಜಾರಿ ವಾರ ಪತ್ರಿಕೆಯು ಕನ್ನಡ ಲಿಪಿಯನ್ನೇ ಬಳಸುತ್ತಿತ್ತು.

ಅನೌಪಚಾರಿಕವಾಗಿ ಲಂಬಾಣಿ ಸಮುದಾಯ ಕನ್ನಡದ ದ್ವಿಭಾಷಿಕ ಸಮುದಾಯಗಳಲ್ಲಿ ಒಂದಾಗಿದೆ. ಇಲ್ಲಿ ದ್ವಿಭಾಷಿಕತೆ ಏಕ ಮುಖವಾಗಿದೆ. ಅಂದರೆ ಲಂಬಾಣಿ ಭಾಷಿಗರು ಮಾತ್ರ ಕನ್ನಡ ಸಮುದಾಯದ ಜನರೊಂದಿಗೆ ಕನ್ನಡವನ್ನು ತಮ್ಮ ಸಮುದಾಯದವರೊಂದಿಗೆ ಲಂಬಾಣಿ ಭಾಷೆಯನ್ನು ಮಾತನಾಡುತ್ತಾರೆ. ಆದರೆ ಕನ್ನಡಿಗರು ಅವರೊಂದಿಗೆ ಲಂಬಾಣಿ ಭಾಷೆಯಲ್ಲಿ ವ್ಯವಸಹರಿಸದೆ ಕನ್ನಡದಲ್ಲಿಯೇ ವ್ಯವಹರಿಸುತ್ತಾರೆ. ಲಂಬಾಣಿಗರ ಈ ದ್ವಿಭಾಷಿಕತೆ ಮನೆಯ ಹೊರಗೆ ಕಾಣಿಸುವ ಪ್ರಮಾಣದಲ್ಲಿ ಮನೆಯ ಒಳಗೆ ಕಾಣಿಸುವು ದಿಲ್ಲ. ಸಾರ್ವಜನಿಕ ವಲಯದ ವ್ಯಾಪ್ತಿಯಲ್ಲಿ ಮಾತ್ರ ಕಂಡುಬರುತ್ತದೆ. ಲಂಬಾಣಿ ಮತ್ತು ಕನ್ನಡ ದ್ವಿಭಾಷಿಕತೆಯ ಪ್ರದೇಶದಲ್ಲಿ ಲಂಬಾಣಿ ಮಾತನಾಡುವವರು ಕೆಳಸ್ತರದಲ್ಲಿದ್ದಾರೆ. ಇದಕ್ಕೆ ಮುಖ್ಯಕಾರಣ ಲಂಬಾಣಿ ಭಾಷಿಕ ಸಮುದಾಯವು ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವುದು. ಆದರೆ ಕನ್ನಡ ಭಾಷಿಕ ಸಮುದಾಯ ಲಂಬಾಣಿ ಭಾಷೆಗೆ ಹೋಲಿಸಿದರೆ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಭಾಷಿಕವಾಗಿಯೂ ಸಬಲವಾಗಿದೆ.

ಒಟ್ಟಾರೆಯಾಗಿ ಲಂಬಾಣಿ ಭಾಷಿಕ ಸಮುದಾಯವು ಪ್ರತಿಯೊಂದಕ್ಕೂ ಕನ್ನಡ ಭಾಷೆಯನ್ನೇ ಆಶ್ರಯಿಸ ಬೇಕಾಗಿದೆ. ಸಾಂಸ್ಕೃತಿಕ ಪದಕೋಶವನ್ನು ಬಿಟ್ಟು ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಮತ್ತು 'ಅನ್ಯ' ಭಾಷೆಯಾದ ಇಂಗ್ಲಿಷ್ ಭಾಷೆಯ ಪದಗಳನ್ನು ಸಹ ಕನ್ನಡ ಭಾಷೆಯ ಮುಖಾಂತರವೇ ಸ್ವೀಕರಣ ಮಾಡಿ ಕೊಳ್ಳುವುದನ್ನು ಕಾಣಬಹುದಾಗಿದೆ. ಹೀಗೆ ಪ್ರತಿಯೊಂದಕ್ಕೂ ಕನ್ನಡ ಭಾಷೆಯನ್ನು ಆಶ್ರಯಿಸಬೇಕಾಗಿ ರುವುದರಿಂದ, ಲಂಬಾಣಿ ಭಾಷೆಯ ಮೇಲೆ ಕನ್ನಡ ಭಾಷೆಯ ಪ್ರಭಾವ ದಟ್ಟವಾಗಿರುವುದು ಕಂಡುಬರುತ್ತದೆ.

ಲಂಬಾಣಿ ಭಾಷಿಕರು ಕೃಷಿ, ವ್ಯಾಪಾರ, ವೃತ್ತಿ, ಪ್ರಾಣಿ-ಪಕ್ಷಿ, ವಿದ್ಯಾಭ್ಯಾಸ ಹಾಗೂ ನಿತ್ಯ ಬಳಕೆಯ ಪದಗಳು ಮೊದಲಾದಗಳಿಗೆ ಸಂಬಂಧಿಸಿದ ಕನ್ನಡ ಪದಗಳನ್ನು ಸ್ವೀಕರಣ ಮಾಡಿಕೊಂಡಿದ್ದಾರೆ. ಇಲ್ಲಿ ಕೆಲವೊಂದು ಪದಗಳನ್ನು ನೇರ ಅಥವಾ ಯಥಾವತ್ತಾಗಿ ಸ್ವೀಕರಿಸಿದರೆ, ಬಹುತೇಕ ಸ್ವರಾಂತ್ಯ ಪದಗಳನ್ನು ದೀರ್ಘವಾಗಿ, ವ್ಯಂಜನಾಂತ್ಯವಾಗಿ ಹಾಗೂ ಅಲ್ಪಸ್ವಲ್ಪ ಬದಲಾಯಿಸಿಕೊಂಡು ತಮ್ಮ ಭಾಷೆಗೆ ಹೊಂದಿಕೆಯಾಗುವ ರೀತಿಯಲ್ಲಿ ಸ್ವೀಕರಣ ಮಾಡಿಕೊಂಡಿರುವುದನ್ನು ಗಮನಿಸಬಹುದು.

ಕೃಷಿಗೆ ಸಂಬಂಧಿಸಿದ ಪದಗಳು : ಕಣ, ಕುಡಾ, ಎಡೆಕುಂಟೆ, ಮಿಣಿ, ಗಾಲಿ, ಕೂರಗಿ, ಪಿಕಾಸಿ, ಸುಗ್ಗಿ ಬಣಮಿ, ಹಾರಿ, ಬಂಡಿ, ಉಳಿ, ರಾಡಿ, ಬಾಚಿ, ಪಿಕಾಸಿ, ರಾಸ್(ರಾಶಿ) ಖೀಲ್ (ಕೀಲು) ಬೀಜಾ (ಬೀಜ) ಹರ್‌ಗು (ಹರಗು) ಕುಂಟಿ (ಕುಂಟೆ) ನೋಗಾ ಅಥವಾ ನಗಾ (ನೊಗ) ಗುದ್ಲಿ (ಗುದ್ದಲಿ) ತೂರಿ (ತೊಗರಿ) ಗೋಬರ್ (ಗೊಬ್ಬರ) ಸೇರ್(ಸೇರು).

ವ್ಯಾಪಾರಕ್ಕೆ ಸಂಬಂಧಿಸಿದ ಪದಗಳು : ಬಡ್ಡಿ, ಚೌಕಾಸಿ, ಬಾಕಿ, ದಲಾಲಿ, ಕಾಟಾ, ಧಾರಣಿ, ಸಾಲಾ (ಸಾಲ) ಅಸಲ್ (ಅಸಲು) ಕಂತ್ (ಕಂತು) ತಾಕ್‌ಡಿ (ತಕ್ಕಡಿ) ಅಂಗ್‌ಡಿ (ಅಂಗಡಿ) ಸವಾಲ್ (ಸವಾಲು) ಮಾಪ್ (ಮಾಪು) ಇತ್ಯಾದಿ. ಈ ಪದಗಳು ಅಚ್ಚಗನ್ನಡ ಪದಗಳಾಗಿದ್ದರೂ ಕನ್ನಡೀಕರಣಗೊಂಡ ಈ ಪದಗಳನ್ನು ಕನ್ನಡ ಭಾಷೆಯಿಂದಲೇ ಲಂಬಾಣಿಗರು ಸ್ವೀಕರಿಸಿಕೊಂಡಿದ್ದಾರೆ.

ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದ ಪದಗಳು : ಗೂಳಿ, ನವಿಲ್ (ನವಿಲು) ಪಾರಿವಾಳ್ (ಪಾರಿವಾಳ) ನಾಗ್‌ಸಾಪ್ (ನಾಗರ ಹಾವು) ಚಿರತಾ (ಚಿರತೆ) ಇತ್ಯಾದಿ.

ಭಾವಸೂಚಕ ಪದಗಳು : ಪ್ರೇಮ್ (ಪ್ರೇಮ) ದುಃಖ್ (ದುಃಖ) ಸುಕ್ (ಸುಖ) ಅನ್‌ಮಾನ್ (ಅನುಮಾನ) (ಸ್ವಾರ್ಥ) ಕಾರಣ್ (ಕಾರಣ) ಉದ್ದೇಸ್ (ಉದ್ದೇಶ) ಇತ್ಯಾದಿ.

ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಪದಗಳು : ಸಾಲಿ (ಶಾಲೆ) ಪೆನ್ (ಪೆನ್ನು) ಓದ್ (ಓದು) ಮಗ್ಗಿ, ಕಾಗದ, ಲೆಕ್ಕ, ಮಾಸ್ತರ್, ಮೇಷ್ಟ್ರು, ಪಾಟಿ (ಪಾಠಿ) ತಿದ್ದು, ಕಾಟ್‌ಮಾರ್ (ಕಾಟು ಹೊಡೆ), ಮಸಿ, ಗುಣಸ್ (ಗುಣಿಸು) ಕೂಡಿಸ್ (ಕೂಡಿಸು) ಕಳಿ (ಕಳೆ) ಸೊನ್ನಿ (ಸೊನ್ನೆ), ಕಥಿ (ಕಥೆ) ಕಾದಂಬರಿ, ಬಳಪ್ ಅಥವಾ ಪೇಣಿ (ಬಳಪ), ಕಂಪಾಸ್, ಕಾಪಿ, ಪೂಸ್ತಕ್ ಅಥವಾ ಪೂಸ್ತ್ಕ (ಪುಸ್ತಕ) ಇತ್ಯಾದಿ ಕನ್ನಡದಲ್ಲಿ ಬಳಕೆಯಾಗುವ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಪದಗಳೆಲ್ಲವೂ ಕನ್ನಡ ಭಾಷೆಯಿಂದಲೇ ನೇರವಾಗಿ ಲಂಬಾಣಿ ಭಾಷೆಗೆ ಸ್ವೀಕರಣ ಮಾಡಿಕೊಳ್ಳಲಾಗಿದೆ. ಲಂಬಾಣಿಗರಿಗೆ ಓದು ಬರಹವು ಕನ್ನಡ ಭಾಷೆಯ ವಿದ್ಯಾಭ್ಯಾಸದ ಮೂಲಕ ದೊರಕಿದ ಕಾರಣದಿಂದಾಗಿ ನೇರವಾಗಿ ಸ್ವೀಕರಿಸುವುದು ಸ್ವಾಭಾವಿಕವಾಗಿದೆ.

ಹೀಗೆ ಕನ್ನಡ ಭಾಷೆಯಲ್ಲಿನ ಎಲ್ಲಾ ರೀತಿಯ ಪದಗಳು ಸ್ವೀಕರಣ ಮತ್ತು ಕನ್ನಡೀಕರಣಗೊಳ್ಳುತ್ತಿರುವ ಪದಗಳೆಲ್ಲವನ್ನು ಲಂಬಾಣಿ ಭಾಷೆಯು ಕನ್ನಡ ಭಾಷೆಯ ಮುಖಾಂತರವೇ ಸ್ವೀಕರಣ ಮಾಡಿಕೊಳ್ಳುವುದನ್ನು ಗಮನಿಸಿದರೆ ಲಂಬಾಣಿ ಭಾಷೆಗೆ ಕನ್ನಡ ಎಷ್ಟೊಂದು ಅನಿವಾರ್ಯ ಎಂಬುದು ತಿಳಿಯುತ್ತದೆ.

ಕನ್ನಡ ಬಳಕೆಯ ನೆಲೆಗಳು

ಲಂಬಾಣಿ ಸಮುದಾಯ ಪ್ರತ್ಯೇಕವಾದ ಲಿಪಿರಹಿತ ಆಡುಭಾಷೆಯನ್ನು ಹೊಂದಿದ್ದು ಅದನ್ನು ಸೀಮಿತ ಪರಿಸರದ ವ್ಯಾಪ್ತಿಯೊಳಗೆ ಮಾತ್ರ ಲಂಬಾಣಿಗರು ಬಳಕೆ ಮಾಡುತ್ತಿದ್ದಾರೆ. ಆದರೆ ಲಂಬಾಣಿ ಸಮುದಾಯ ವ್ಯವಹಾರಿಕ ಮತ್ತು ಶೈಕ್ಷಣಿಕವಾಗಿ ಕರ್ನಾಟಕದಲ್ಲಿ ಕನ್ನಡ ಭಾಷೆಯ ಕಲಿಕೆ ಮತ್ತು ಬಳಕೆಯನ್ನು ಮಾಡಬೇಕಾದ ಅನಿವಾರ್ಯತೆ ಇದೆ. ಲಂಬಾಣಿಗರು ತಮ್ಮ ಆಪ್ತವಲಯ ಮತ್ತು ಸಾಮಾಜಿಕ ವಲಯವನ್ನು ಬಿಟ್ಟು ಕನ್ನಡ ಭಾಷಿಕರ ಜೊತೆ ಮತ್ತು ಸಾರ್ವಜನಿಕ ವಲಯದಲ್ಲಿ ಹಾಗೂ ಮಕ್ಕಳು ಶೈಕ್ಷಣಿಕ ವಲಯ ದಲ್ಲಿ ಮಾತ್ರ ಕನ್ನಡ ಭಾಷೆಯ ಬಳಕೆ ಮತ್ತು ಕಲಿಕೆ ನಡೆಯುತ್ತಿರುತ್ತದೆ.

ಲಂಬಾಣಿ ಸಮುದಾಯ ಪುರುಷ ಪ್ರಧಾನ ವ್ಯವಸ್ಥೆಯಾದುದರಿಂದ ಹೆಚ್ಚಾಗಿ ಪುರುಷರು ಕಡಿಮೆ ಪ್ರಮಾಣದಲ್ಲಿ ಮಹಿಳೆಯರು ಸಾರ್ವಜನಿಕ ವಲಯದಲ್ಲಿ ಕನ್ನಡಿಗರು ಮತ್ತು ಇತರ ಭಾಷಿಕರ ಜೊತೆಯಲ್ಲಿ ವ್ಯವಹಾರಕ್ಕಾಗಿ ಕನ್ನಡ ಭಾಷೆಯನ್ನೇ ಹೆಚ್ಚಾಗಿ ಬಳಕೆ ಮಾಡುತ್ತಾರೆ. ಅಂದರೆ ಕೆಲಸ ಮಾಡುವ ಯಜಮಾನರ ಬಳಿ, ಹೋಟೆಲ್, ಕನ್ನಡ ಭಾಷೆಯ ಸ್ನೇಹಿತರ ಹತ್ತಿರ, ದೇವಸ್ಥಾನ, ಮಾರುಕಟ್ಟೆ ಮೊದಲಾದ ಪರಿಸರಗಳಲ್ಲಿ ಲಂಬಾಣಿ ಭಾಷಿಕರು ಕನ್ನಡ ಭಾಷೆಯನ್ನೇ ಬಳಕೆ ಮಾಡುತ್ತಾರೆ. ವ್ಯವಹರಿಸುವ ಎಲ್ಲಾ ಸ್ಥಳಗಳಲ್ಲಿಯೂ ತಮ್ಮ ಭಾಷಿಕರು ಇದ್ದರೆ ಅವರ ಜೊತೆ ಲಂಬಾಣಿಯಲ್ಲಿಯೇ ಮಾತನಾಡುತ್ತಾರೆ. ಇಲ್ಲಿ ಕನ್ನಡ ಭಾಷೆ ಯನ್ನು ಬಳಸುವುದಿಲ್ಲ. ಕನ್ನಡಿಗರ ಜೊತೆ ಮಾತನಾಡುವಾಗ ಅಥವಾ ಕನ್ನಡಿಗರೇ ಇವರನ್ನು ಮಾತನಾಡಿಸಿ ದಾಗ ಪೂರ್ಣ ಮಟ್ಟದಲ್ಲಿ ಕನ್ನಡ ಭಾಷೆಯನ್ನು ಮಾತನಾಡಲು ಆಗದಿದ್ದರೂ, ಅವರು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಕನ್ನಡ ಮಾತನಾಡಲು ಪ್ರಯತ್ನಿಸುತ್ತಾರೆ.

ಆದರೆ ತಮ್ಮ ಆಪ್ತ ವಲಯವಾದ ಮನೆಯಲ್ಲಿ, ಹೆಂಡತಿ, ಮಕ್ಕಳು, ಸಂಬಂಧಿಕರು, ಅಕ್ಕಪಕ್ಕ ಮನೆಯ ಲಂಬಾಣಿ ಕುಟುಂಬಗಳ ಜೊತೆ ಒಟ್ಟಾರೆ ಇಡೀ ತಾಂಡ ಸಮಾಜದ ಒಳಗಡೆ ಕನ್ನಡವನ್ನು ಬಳಸದೆ ಲಂಬಾಣಿ ಭಾಷೆಯಲ್ಲಿಯೇ ಮಾತನಾಡುತ್ತಾರೆ. ತಮ್ಮ ತಾಂಡದ ಒಳಗಡೆ ಕನ್ನಡ ಭಾಷಿಕರು ಪ್ರವೇಶಿಸಿದರೆ, ಕನ್ನಡಿಗರು ಲಂಬಾಣಿಗಳನ್ನು ಮಾತನಾಡಿಸಿದಾಗ, ಕನ್ನಡ ಭಾಷೆಯನ್ನು ಬಳಕೆ ಮಾಡುತ್ತಾರೆ. ಹೀಗೆ ಲಂಬಾಣಿಗರು ಕನ್ನಡ ಭಾಷಾ ಬಳಕೆಯನ್ನು ಸೀಮಿತ ವಲಯಗಳಲ್ಲಿ ಮಾತ್ರ ಬಳಕೆಮಾಡುತ್ತಾರೆ.

ಇನ್ನು ಲಂಬಾಣಿ ಮಕ್ಕಳು ಹುಟ್ಟಿದಾಗಿನಿಂದ ೫-೬ ವರ್ಷಗಳವರೆಗೆ ಮಾತೃ ಭಾಷೆಯಾದ ಲಂಬಾಣಿ ಭಾಷೆಯನ್ನೆ ಆಲಿಸುತ್ತಾ, ಭಾಷಾ ಕಲಿಕೆಯಲ್ಲಿ ತೊಡಗಿದ ಇವರಿಗೆ ಲಂಬಾಣಿ ಭಾಷೆಯ ಪದಕೋಶವನ್ನು ಮಾತ್ರ ತಲೆಯಲ್ಲಿ ಇಟ್ಟುಕೊಂಡಿರುತ್ತಾರೆ. ಈ ಮಕ್ಕಳಿಗೆ ಆಪ್ತ ವಲಯದಲ್ಲಿ ತಂದೆ-ತಾಯಿಗಳಿಗೆ ಕನ್ನಡ ಭಾಷೆಯ ಪರಿಚಯವಿದ್ದಾಗಲೂ ಕನ್ನಡ ಭಾಷೆಯನ್ನು ಬಳಸದೆ ಮಾತೃ ಭಾಷೆಯಾದ ಲಂಬಾಣಿಯನ್ನೇ ಬಳಸುವ ಕಾರಣ ಕನ್ನಡ ಭಾಷೆಯ ಪರಿಚಯ ಮಕ್ಕಳಿಗೆ ಆಗುವುದಿಲ್ಲ. ಇನ್ನು ಮಕ್ಕಳು ಹೊರಗಡೆ ಅಂದರೆ ಸಾರ್ವಜನಿಕ ಸ್ಥಳಗಳಲ್ಲಿ ಕನ್ನಡ ಕಲಿಯುವ ಅವಕಾಶಗಳು ಕಡಿಮೆ. ಏಕೆಂದರೆ ತಾಂಡಗಳು ಊರು ಅಥವಾ ಗ್ರಾಮಗಳಿಂದ ೫ ರಿಂದ ೧೨ ಕಿ.ಮೀ. ದೂರದಲ್ಲಿರುವುದರಿಂದ ಅಲ್ಲದೆ ಬಸ್ಸಿನ

ಜಿಗನ್ನ ಜ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸೌಕರ್ಯವೂ ಅತೀ ಕಡಿಮೆ ಪ್ರಮಾಣದಲ್ಲಿರುವುದರಿಂದ ತಂದೆ-ತಾಯಿಗಳು ತಮ್ಮ ಜೊತೆಗೆ ಮಕ್ಕಳನ್ನು ವ್ಯವಹಾರ ಮಾಡುವ ಕಡೆ ಕರೆದುಕೊಂಡು ಹೋಗುವುದು ತುಂಬಾ ಕಡಿಮೆ. ಅಲ್ಲದೆ ಮಕ್ಕಳು ತಾಂಡವನ್ನು ಬಿಟ್ಟು ಊರಿನ ಪರಿಸರದೊಳಗಡೆ ಬರುವುದೂ ತುಂಬಾ ಕಡಿಮೆ. ಹೀಗಿರುವಾಗ ಮಕ್ಕಳು ಶಾಲೆಗೆ ಅಥವಾ ಶಾಲಾ ಕೊಠಡಿಯ ಒಳಗಡೆ ಶಿಕ್ಷಕರಿಂದಾಗಿ ಕನ್ನಡ ಭಾಷೆಗೆ ತೆರೆದುಕೊಳ್ಳುತ್ತವೆ. ತಾಂಡಾದಲ್ಲಿನ ಎಲ್ಲಾ ಮಕ್ಕಳು ಶಾಲೆಗೆ ಬರುತ್ತವೆ ಎಂದಲ್ಲ. ಎಷ್ಟೋ ಮಕ್ಕಳು ಶಾಲೆಗೆ ಬರದಿರುವ ಪರಿಸ್ಥಿತಿಯೂ ಇದೆ. ಶಾಲೆಗೆ ಬರುವ ಮಕ್ಕಳು ಮಾತ್ರ ೬ನೇ ವರ್ಷಕ್ಕೆ ಕನ್ನಡ ಭಾಷೆಯ ಕಲಿಕೆಗೆ ಮುಂದಾದರೆ ಶಾಲೆಗೆ ಬಾರದಿರುವ ಮಕ್ಕಳು ೮-೧೦ ವರ್ಷವಾದರೂ ಕನ್ನಡ ಕಲಿಕೆಗೆ ತೆರೆದುಕೊಳ್ಳದಿರುವ ಪರಿಸ್ಥಿತಿಯೂ ಲಂಬಾಣಿ ತಾಂಡಾಗಳಲ್ಲಿ ಇದೆ.

049172

ಲಂಬಾಣಿ ಮಕ್ಕಳು ೬ನೇ ವಯಸ್ಸಿನಲ್ಲಿ ಶಾಲಾ ಕೊಠಡಿಯೊಳಗೆ ಕನ್ನಡ ಕಲಿಕೆ ಆರಂಭವಾದರೂ ಶಿಕ್ಷಕರು ಹೇಳಿಕೊಡುವ ಕನ್ನಡ ಭಾಷೆಯ ರ.ಗ.ಸ.ದ.ಅ ವರ್ಣಮಾಲೆಗಳಾಗಲೀ ಅಥವಾ ಅದರಿಂದ ಉಂಟಾಗುವ ಪದಗಳಾಗಲಿ ಯಾಂತ್ರಿಕವಾಗಿ ಕಂಠಪಾಟದ ಮೂಲಕ ಕನ್ನಡ ಕಲಿಕೆ ಆ ಮಕ್ಕಳಲ್ಲಿ ನಡೆಯುತ್ತದೆಯೇ ವಿನಃ ಕನ್ನಡ ಭಾಷೆಯ ಅರ್ಥವಾಗಲಿ, ಮಾತನಾಡುವುದಾಗಲಿ ಲಂಬಾಣಿ ಮಕ್ಕಳಿಗೆ ಬರುವುದಿಲ್ಲ. ಆ ಮಕ್ಕಳು ಶಾಲೆಗೆ ಬಂದರೂ ಸ್ವಲ್ಪ ಮಟ್ಟಿಗೆ ಅರ್ಥಮಾಡಿಕೊಂಡು ಅಲ್ಪಸ್ವಲ್ಪ ಮಾತನಾಡಬೇಕಾದರೆ ಎರಡರಿಂದ ಮೂರು ವರ್ಷಗಳೇ ಬೇಕಾಗುತ್ತದೆ. ಹೀಗಿರುವಾಗ ಮಕ್ಕಳು ಶಾಲಾ ಕೊಠಡಿಯ ಒಳಗೆ ಶಿಕ್ಷಕರು ಹೇಳುವ ಕನ್ನಡ ಭಾಷೆ ಮಾತ್ರ ಅವರ ಕಿವಿಯ ಮೇಲೆ ಬೀಳುವುದು. ಅಲ್ಲದೆ ಟಿ.ವಿ., ರೇಡಿಯೋ ಇದ್ದರೆ ಇದರಲ್ಲಿಯ ಕನ್ನಡ ಭಾಷೆಯ ಕಾರ್ಯಕ್ರಮಗಳನ್ನು ಕೇಳುವ ಮತ್ತು ನೋಡುವ ಸಾಧ್ಯತೆ ಇದ್ದರೂ ಅರ್ಥಮಾಡಿಕೊಳ್ಳುವುದು ಕಡಿಮೆ ಎಂದೇ ಹೇಳಬಹುದು. ಅದರ ಹೊರತಾಗಿ ಕನ್ನಡ ಭಾಷೆಯನ್ನು ಶಾಲೆಯ ಹೊರಗಿನ ಪರಿಸರದಲ್ಲಿ ಬಳಕೆ ಮಾಡುವುದಿಲ್ಲ. ಮಕ್ಕಳು ಶಿಕ್ಷಕರೊಂದಿಗೆ ಮಾತನಾಡುವಾಗ ಕನ್ನಡ ಪಠ್ಯಪುಸ್ತಕಗಳನ್ನು ಓದುವಾಗ, ಬರೆಯುವಾಗ ಮಾತ್ರ ಕನ್ನಡ ಭಾಷೆಯನ್ನು ಬಳಕೆ ಮಾಡುತ್ತವೆ. ತಮ್ಮ ತಮ್ಮಲೊಗೆ ಅಂದರೆ ಸಹಪಾಠಿಗಳು ಶಾಲಾ ಕೊಠಡಿಯ ಒಳಗೂ ಮತ್ತು ಹೊರಗೂ ಲಂಬಾಣಿ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಹೀಗೆ ಶಾಲಾ ಪರಿಸರದಲ್ಲೂ ಮಕ್ಕಳಿಗೆ ಶಿಕ್ಷಕರ ಬೋಧನೆ ಮತ್ತು ಅವರೊಂದಿಗೆ ಮಾತನಾಡುವಾಗ ಮಾತ್ರ ಅಲ್ಪಸ್ವಲ್ಪ ತೊದಲು ನುಡಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡವನ್ನು ಬಳಕೆ ಮಾಡುವ ಪ್ರಯತ್ನವನ್ನು ಮಾಡುತ್ತಾರೆ.

ಹೀಗೆ ಲಂಬಾಣಿ ಭಾಷಿಕ ಮಕ್ಕಳ ಕನ್ನಡ ಕಲಿಕೆ ಔಪಚಾರಿಕವಾಗಿ ನಾಲ್ಕು ಗೋಡೆಗಳ ಮಧ್ಯೆ ಯಾಂತ್ರಿಕವಾಗಿ ನಡೆಯುತ್ತದೆ. ಆದರೆ ಕನ್ನಡ ಮಾತೃ ಭಾಷೆಯುಳ್ಳ ಮಕ್ಕಳು ಈಗಾಗಲೇ ಸಹಜವಾಗಿ ಮನೆಯ ಮತ್ತು ಸಾಮಾಜಿಕ ಪರಿಸರದಲ್ಲಿ ಕನ್ನಡ ಭಾಷೆಯ ಕಲಿಕೆ ನಡೆಯುವುದರಿಂದ ಆಲಿಸುವಿಕೆ ಮತ್ತು ಮಾತನಾಡುವ ಕೌಶಲಗಳು ಶಾಲಾ ಕೊಠಡಿಯ ಒಳಗೆ ಬರುವುದಕ್ಕಿಂತ ಮುಂಚೆಯೇ ಪಡೆದು ಕೊಂಡಿರುತ್ತಾರೆ. ಆದರೆ ಲಂಬಾಣಿ ಮಕ್ಕಳ ಕನ್ನಡ ಕಲಿಕೆ ಇದಕ್ಕೆ ವಿರುದ್ಧ ಮುಖವಾಗಿ ನಡೆಯುತ್ತಿರು ವುದರಿಂದ ಕನ್ನಡ ಬಳಕೆಯ ನೆಲೆಗಳು ತುಂಬಾ ಕಡಿಮೆ ಎಂದೇ ಹೇಳಬೇಕಾಗುತ್ತದೆ.

ಲಂಬಾಣಿಗರು ಆಕಾಶವಾಣಿ, ದೂರದರ್ಶನ, ಸಿನಿಮಾ ಸಂವಹನ ಮಾಧ್ಯಮ ಮೊದಲಾದ ವಲಯಗಳಲ್ಲಿ ಹೆಚ್ಚಾಗಿ ಕನ್ನಡ ಕಾರ್ಯಕ್ರಮಗಳನ್ನು ಕೇಳಲು ನೋಡಲು ಇಷ್ಟಪಡುತ್ತಾರೆ. ವಿದ್ಯಾವಂತ ಲಂಬಾಣಿಗರು ಕನ್ನಡ ನಿಯತಕಾಲಿಕೆಗಳನ್ನು ಹೆಚ್ಚು ಓದುತ್ತಾರೆ. ಹಾಗೆಯೇ ಸಾರ್ವಜನಿಕ ಸಮಾರಂಭಗಳಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಕನ್ನಡ ಮಾಧ್ಯಮದಲ್ಲಿ ಕೇಳಲು ಇಷ್ಟಪಡುತ್ತಾರೆ.

ಒಟ್ಟಾರೆಯಾಗಿ ಲಂಬಾಣಿ ಸಮುದಾಯಕ್ಕೆ ಕನ್ನಡ ಭಾಷೆ ಅನಿವಾರ್ಯವಾದರೂ ಅದನ್ನು ಸೀಮಿತ ವಲಯಗಳಲ್ಲಿ ಮಾತ್ರ ಪಾಲಕರಾಗಲಿ, ಯುವಕರಾಗಲಿ, ಮಕ್ಕಳಾಗಲಿ ಕನ್ನಡ ಭಾಷೆಯನ್ನು ಬಳಕೆ ಮಾಡುತ್ತಿರುವುದನ್ನು ಕಾಣುತ್ತೇವೆ.

ಲಂಬಾಣಿ ಭಾಷೆಯ ಸಮಾಜೋಭಾಷಿಕ ಹಿನ್ನೆಲೆ

ಲಂಬಾಣಿಗರು ಕರ್ನಾಟಕದಲ್ಲಿರುವ ಒಂದು ಅಲ್ಪಸಂಖ್ಯಾತ ಬುಡಕಟ್ಟು ಸಮುದಾಯ. ಊರು ಗ್ರಾಮಗಳಿಂದ ದೂರದಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಾ ಮತ್ತು ತನ್ನದೇ ಆದ ಮಾತೃ ಭಾಷೆಯನ್ನು ಲಂಬಾಣಿ ಸಮುದಾಯ ಹೊಂದಿದೆ. ಇವರು ತಮ್ಮ ದಿನನಿತ್ಯದ ವ್ಯವಹಾರವನ್ನು ಕನ್ನಡ ಭಾಷೆಯ ಮೂಲಕ ವ್ಯವಹರಿಸಬೇಕಾದ ಅನಿವಾರ್ಯತೆ ಇದೆ. ಹಾಗೆ ಕನ್ನಡ ಭಾಷೆಯನ್ನು ಕಲಿಯಲೇಬೇಕಾದ ಒತ್ತಡವೂ ಇವರಿಗಿದೆ. ಏಕೆಂದರೆ ಲಂಬಾಣಿ ಭಾಷೆ ಲಿಪಿರಹಿತ ಆಡುಭಾಷೆಯಾಗಿದ್ದು, ಅಲ್ಪಸಂಖ್ಯಾತರಾದ ಲಂಬಾಣಿಗರು ಶೈಕ್ಷಣಿಕವಾಗಿಯೂ ಕನ್ನಡ ಮಾಧ್ಯಮವನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಇದೆ. ಹಾಗಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಕನ್ನಡವನ್ನು ತಮ್ಮ ಸಮಾಜದೊಳಗೆ ಲಂಬಾಣಿ ಭಾಷೆಯನ್ನು ಬಳಕೆ ಮಾಡುತ್ತಾರೆ. ಹಾಗೆ ಕನ್ನಡ ಭಾಷೆ ಬಳಕೆ ಮಾಡುವಾಗ ಅವರ ಭಾಷೆಯ ಅನನ್ಯತೆ ಲಂಬಾಣಿ ಭಾಷಿಕರ ಕನ್ನಡ ಎಂಬ ಒಂದು ಸಾಮಾಜಿಕ ಉಪಭಾಷೆಯಾಗಿ ಈಗ ನಿರ್ಮಾಣವಾಗುತ್ತಿದೆ. ಆದರೆ ಅದರ ಕುರಿತ ಅಧ್ಯಯನಗಳು ನಡೆಯಬೇಕಾಗಿದೆ. ಕರ್ನಾಟಕದಲ್ಲಿರುವ ಲಂಬಾಣಿ ಭಾಷಿಕರ ನಂಬಿಕೆ, ಆಚರಣೆ, ಸಂಪ್ರದಾಯ ಮತ್ತು ಸಾಂಸ್ಕೃತಿಕ ವಿಚಾರಗಳ ಮೇಲೆ ಕನ್ನಡಿಗರ ಪ್ರಭಾವ ಪೂರ್ಣಪ್ರಮಾಣದಲ್ಲಿ ಆಗದೆ ಉಡುಗೆ-ತೊಡುಗೆ, ದೇವರ ಆರಾಧನೆ ಮೊದಲಾದವುಗಳ ಮೇಲೆ ಸ್ವಲ್ಪ ಮಟ್ಟಿಗೆ ಆಗಿದೆ. ಆದರೆ ಭಾಷೆಯ ಬಳಕೆಯಲ್ಲಿ ಬಹಳಷ್ಟು ಪ್ರಭಾವ ಇರುವುದನ್ನು ನೋಡಬಹುದಾಗಿದೆ. ಲಂಬಾಣಿ ಭಾಷಿಕ ಮಕ್ಕಳು ಮನೆಯ ಆವರಣದಲ್ಲಿ ಲಂಬಾಣಿಯನ್ನು ಮತ್ತು ಸಾರ್ವಜನಿಕ ಆವರಣದಲ್ಲಿ ಕನ್ನಡ ಭಾಷೆಯನ್ನು ಬಳಕೆ ಮಾಡುವ ಅವಕಾಶಗಳು ಬಹಳಷ್ಟು ಮಟ್ಟಿಗೆ ಕಡಿಮೆ. ಏಕೆಂದರೆ ಲಂಬಾಣಿ ಭಾಷಿಕ ಮಕ್ಕಳು ಬದುಕುವ ಪರಿಸರ ಕನ್ನಡ ಭಾಷಿಕ ಪರಿಸರದಿಂದ ಹೊರತಾದುದು. ಆದ್ದರಿಂದ ದಿನನಿತ್ಯ ಬಳಸುವ, ಮಾತನಾಡುವ ಮತ್ತು ಕೇಳುವ ಭಾಷೆ ಲಂಬಾಣಿಯೇ ಆಗಿರುತ್ತದೆ. ಪಾಲಕರು ಸಹ ಆಪ್ತವಲಯ, ತಮ್ಮ ಸಮಾಜದೊಳಗೆ ಲಂಬಾಣಿಯನ್ನು, ಸಾರ್ವಜನಿಕ ವಲಯದಲ್ಲಿ ಕನ್ನಡಿಗರು ಮತ್ತು ಇತರ ಭಾಷಿಕರೊಂದಿಗೆ ಕನ್ನಡವನ್ನು ಬಳಕೆ ಮಾಡುತ್ತಾರೆ. ಹೀಗಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಗೆ ತೆರೆದುಕೊಳ್ಳುವುದು ಶಾಲಾ ಪರಿಸರದಲ್ಲಿ ಮಾತ್ರ.

ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷಿಕ ಮಕ್ಕಳಂತೆ ಒಂದನೇ ತರಗತಿಯಿಂದಲೇ ಕನ್ನಡವನ್ನು ಕಲಿಯುತ್ತಾರೆ. ಇಂತಹ ಸಂದರ್ಭದಲ್ಲಿ ಅವರ ಮಾತೃ ಭಾಷೆ ಕಲಿಯುವ ಭಾಷೆಯ ಮೇಲೆ ಪ್ರಭಾವ ಬೀರುವುದು ಸಹಜ. ಲಂಬಾಣಿ ಸಮುದಾಯವು ಕರ್ನಾಟಕದಲ್ಲಿ ಕನ್ನಡ ಭಾಷೆಯನ್ನು ಬಳಕೆಯ ನೆಲೆಯಲ್ಲಿ ಮಾತ್ರ ಸ್ವೀಕರಿಸಿದ್ದಾರೆ. ಅವರ ಮಕ್ಕಳು ಮಾತ್ರ ಶೈಕ್ಷಣಿಕವಾಗಿ ಕರ್ನಾಟಕದಲ್ಲಿ ಕನ್ನಡದಲ್ಲಿಯೇ ಕಲಿಯು ವಂತಹ ಪರಿಸ್ಥಿತಿ ಇದೆ. ಕನ್ನಡ ಲಿಪಿಸಹಿತ ಭಾಷೆಯಾಗಿದ್ದು, ಲಂಬಾಣಿ ಲಿಪಿರಹಿತ ಭಾಷೆಯಾಗಿದೆ. ಈ ಎರಡು ಭಾಷೆಗಳು ಬೇರೆ ಬೇರೆ ಭಾಷಾವರ್ಗಕ್ಕೆ ಸೇರಿದ್ದವುಗಳಾಗಿವೆ. ಕನ್ನಡ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದರೆ, ಲಂಬಾಣಿ ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರಿದುದಾಗಿದೆ.

೨.೨ ಲಂಬಾಣಿಗರ ಸ್ಥಿತಿಗತಿ

ಭಾರತದಲ್ಲಿ ಕೆಲವು ವಿಶಿಷ್ಟ ಬುಡಕಟ್ಟು ಸಮುದಾಯದ ಜನರು ಗ್ರಾಮ ಸಂಸ್ಕೃತಿಗೂ ಹಾಗೂ ನಗರ ಸಂಸ್ಕೃತಿಗೂ ಸೇರಿಕೊಳ್ಳದೆ ತಮ್ಮದೇ ಆದ ಪ್ರತ್ಯೇಕ ವಿಶಿಷ್ಟ ಸಾಂಸ್ಕೃತಿಕ ಚಹರೆಯನ್ನು ಉಳಿಸಿಕೊಂಡು ಬದುಕುತ್ತಿದ್ದಾರೆ. ಅಂತಹ ಕೆಲವು ಬುಡಕಟ್ಟು ಸಮುದಾಯಗಳಲ್ಲಿ ಲಂಬಾಣಿ ಸಮುದಾಯವೂ ಒಂದು. ಕರ್ನಾಟಕವನ್ನು ಒಳಗೊಂಡಂತೆ ಭಾರತದದ ಎಲ್ಲ ಪ್ರದೇಶಗಳಲ್ಲಿ ನೆಲೆಸಿರುವ ಸಮುದಾಯಗಳಲ್ಲಿ ಲಂಬಾಣಿಗರು ತಮ್ಮ ಬಾಹ್ಯಚಹರೆ ಹಾಗೂ ಭಾಷೆಯ ಮೂಲಕ ನಮ್ಮ ಗಮನವನ್ನು ಸೆಳೆಯುತ್ತಾರೆ. ಬಣ್ಣಬಣ್ಣದ ಬಟ್ಟೆಯುಟ್ಟ, ಮೈತುಂಬಾ ಆಭರಣಗಳನ್ನು ಧರಿಸುವ ಈ ಜನಾಂಗದ ಸ್ತ್ರೀಯರನ್ನು ಗಮನಿಸಿದರೆ ಸಾಕು ಅವರ ಸಂಸ್ಕೃತಿಯು ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ಇವರು ಗ್ರಾಮಗಳಲ್ಲಿ ಹಾಗೂ ನಗರಗಳಲ್ಲಿ ವಾಸಿಸದೆ ಪ್ರತ್ಯೇಕವಾಗಿ ಊರಿಂದ ೫ ರಿಂದ ೧೦ ಕಿ.ಮೀ. ದೂರದಲ್ಲಿ ಅಥವಾ ನೀರಿರುವ ಗುಡ್ಡಗಾಡು ಪ್ರದೇಶದಲ್ಲಿ ತಾಂಡಾಗಳನ್ನು ರಚಿಸಿಕೊಂಡು ತಮ್ಮ ವಿಶಿಷ್ಟವಾದ ಸಂಸ್ಕೃತಿಯನ್ನು ನಗರೀಕರಣದ ಪ್ರಭಾವದ ನಡುವೆಯೂ ಕಾಪಾಡಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ. ಇಂತಹ ವಿಶಿಷ್ಟ ಬುಡಕಟ್ಟು ಸಮುದಾಯವಾದ ಲಂಬಾಣಿಗರ ಒಟ್ಟಾರೆ ಸಂಸ್ಕೃತಿಯ ಬಗೆಗೆ ಸಂಕ್ಷಿಪ್ತವಾಗಿ ಪೂರ್ವ ತಿಳುವಳಿಕೆಯನ್ನು ಕೊಡುವ ಉದ್ದೇಶವನ್ನಿಟ್ಟುಕೊಂಡಿದೆ. ಈಗಾಗಲೇ ನಡೆದಿರುವ ಅಧ್ಯಾಯನಗಳ ಹಿನ್ನೆಲೆಯಲ್ಲಿ ಲಂಬಾಣಿಗರ ಮೂಲ, ವಾಸಸ್ಥಾನದ ಸ್ವರೂಪ, ಜೀವನಕ್ರಮ, ಸಾಮಾಜಿಕ ವ್ಯವಸ್ಥೆ, ಸಂಪ್ರದಾಯ, ಆಚರಣೆಗಳು, ನಂಬಿಕೆ, ಆಹಾರ ಪದ್ಧತಿ ಮತ್ತು ಸಾಂಸ್ಕೃತಿಕ ಅಂಶಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಲಂಬಾಣಿಗರ ಮೂಲ ಮತ್ತು ವಿಭಿನ್ನ ಹೆಸರುಗಳು

ಲಂಬಾಣಿಗರ ಮೂಲದ ಕುರಿತು ನಿಖರವಾದ ದಾಖಲೆಗಳಿಲ್ಲ ಆದರೂ ಕೆಲವೊಂದು ವರದಿ, ಅಧ್ಯಯನ ಹಾಗೂ ಅಧ್ಯಾಯನಕಾರರ ಬರೆಹಗಳನ್ನು ಗಮನಿಸಿ ಅವರ ಮೂಲವನ್ನು ಹಾಗೂ ಪ್ರಸಾರವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ವಿಶಿಷ್ಟ ಸಂಸ್ಕೃತಿ ಪರಂಪರೆಯನ್ನುಳ್ಳ ಲಂಬಾಣಿಗರು ರಾಜಪುತಾಣದ ರಜಪೂತರೊಡನೆ ಸಂಬಂಧವನ್ನು ಪಡೆದವರಾಗಿದ್ದಾರೆ. ವರ್ಣರಂಜಿತ ಬುಡಕಟ್ಟಿನ ಲಂಬಾಣಿಗರು ಅಥವಾ ಬಂಜಾರರು

ಯಾವ ಕಾರಣಕ್ಕೊ ಮೂಲಸ್ಥಾನವನ್ನು ಬಿಟ್ಟು ಸಂಚಾರಿ ವರ್ತಕರಾಗಿ ಪಶ್ಚಿಮ ಹಾಗೂ ದಕ್ಷಿಣ ಭಾರತದ ತುಂಬೆಲ್ಲ ಹರಡಿಕೊಂಡಿದ್ದಾರೆ. ಲಂಬಾಣಿಗರ ಮೂಲದ ಬಗೆಗೆ ಭಿನ್ನಾಭಿಪ್ರಾಯಗಳೇನಿದ್ದರೂ ಅವರು ರಜಪೂತ ಪರಂಪರೆಯವರೆಂಬುದು ಖಚಿತ. "ಲಂಬಾಣಿಗರು ಬಹುಶಃ ಉತ್ತರದ ರಾಜಸ್ಥಾನ ಇಲ್ಲವೆ ರಾಜಪುತಾಣದಿಂದ ದಕ್ಷಿಣಕ್ಕೆ ಬಂದು ನೆಲೆಸಿದವರೆಂದು ಹೇಳಬಹುದು. ಸುಮಾರು ಮುನ್ನೂರು ವರ್ಷಗಳ ಹಿಂದೆ ಮಹಮ್ಮದೀಯರ ಸೇನೆಯ ಜೊತೆಯಲ್ಲಿ ದಕ್ಷಿಣದ ಕಡೆಗೆ ಬಂದರೆಂದು ತಿಳಿಯುತ್ತದೆ".[೯] ಲಂಬಾಣಿ ಜನರು ಮೂಲತಃ ರಾಜಸ್ಥಾನದ ರಜಪೂತ ವಂಶಕ್ಕೆ ಸೇರಿದವರಾಗಿದ್ದು, ಕ್ಷತ್ರಿಯ ವರ್ಣಕ್ಕೆ ಸಂಬಂಧಿಸಿದವರೆಂದೂ, ಯುದ್ಧ ಮಾಡುವುದು, ಬೇಟೆಯಾಡುವುದು, ಕಾವಲು ಕಾಯುವ ಕೆಲಸದಲ್ಲಿ ಇವರು ಪ್ರಸಿದ್ಧರೆಂದೂ, ಬಂಜಾರಾ ಎಂಬ ಪದ ಜಾತಿಯನ್ನು ಸೂಚಿಸುವುದರ ಜೊತೆಗೆ ಪ್ರಾಣಿ ಸಾಕಾಣಿಕೆ, ಭಾರ ಎತ್ತುವುದು, ಗೋರಕ್ಷಣೆ, ವ್ಯಾಪಾರ ಮೊದಲಾದ ಉದ್ಯೋಗಗಳನ್ನು ಅವಲಂಬಿಸಿರುವುದು ತಿಳಿದುಬರುತ್ತದೆ.

"ಮೊಗಲ ಅರಸರು ದಕ್ಷಿಣ ಭಾರತದ ಮೇಲೆ ದಂಡೆತ್ತಿ ಬಂದಾಗ ಸಾರಿಗೆ ಸಾಗಾಣಿಕೆಗಳ ಸಮಸ್ಯೆಯನ್ನು ತೀವ್ರವಾಗಿ ಅನುಭವಿಸಿದರು. ಇಂತಹ ಸ್ಥಿತಿಯಲ್ಲಿ ಅಸಂಖ್ಯಾತ ದನಕರುಗಳನ್ನು ಹೊಂದಿದ್ದ ಲಂಬಾಣಿಗರು ಮೊಗಲ ಸೈನಿಕರಿಗೆ ಆಹಾರ ಧಾನ್ಯಗಳನ್ನು ಸಾಗಿಸಲು ನೆರವಾದರು. ಇವರ ಧೈರ್ಯ, ಸಾಹಸಗಳನ್ನು, ಘೋರ ಅರಣ್ಯವನ್ನು ದಾಟುವ ಕಲೆಯನ್ನು ಮೆಚ್ಚಿದ ಮೊಗಲರು ಇವರಿಗೆ ತಮ್ಮ ಸೈನಿಕರಿಗೆ ಆಹಾರ ಪೂರೈಸಲು ಕೆಲಸ ಒದಗಿಸಿದರು. ಈ ಕಾರಣಕ್ಕಾಗಿ ಲಂಬಾಣಿಗರು ದಕ್ಷಿಣ ಭಾರತಕ್ಕೆ ಬಂದು ನೆಲೆಸುವುದು ಅನಿವಾರ್ಯವಾಯಿತು".[೧೦] "ದಕ್ಷಿಣ ಭಾರತದ ಬುಡಕಟ್ಟುಗಳು ಮತ್ತು ಜಾತಿಪದ್ಧತಿಯನ್ನೆ ಅಧ್ಯಯನ ಮಾಡಿದ ನಂಜುಂಡಯ್ಯ ಮತ್ತು ಅಯ್ಯರ್ ಅವರು ಲಂಬಾಣಿಗಳು ಕ್ಷತ್ರಿಯ ವಂಶದ ರಜಪೂತ ಉತ್ತರಾಧಿಕಾರಿಗಳಾಗಿದ್ದು, ಇವರ ಮೂಲಸ್ಥಾನ 'ಮಾರವಾಡ' ಆಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ".[೧೧] ಲಂಬಾಣಿಗರು ಮೂಲತಃ ರಾಜಸ್ಥಾನ ಮೂಲದವರಾಗಿದ್ದು, ಮೊಗಲ್ ಸೈನಿಕರ ಜೊತೆ ವಲಸೆ ಬಂದು ಭಾರತದ ವಿವಿಧ ಭಾಗಗಳಲ್ಲಿ ಚದುರಿ ಹೋಗಿದ್ದಾರೆ. "ಅಲೆಮಾರಿ ವ್ಯಾಪಾರಿಗಳಾದ ಇವರು ಹಿಂದುಸ್ಥಾನದ ಸೈನಿಕರಿಗೆ ಆಹಾರ ಧ್ಯಾನ್ಯಗಳನ್ನು ಪೂರೈಸುವುದು ಇವರ ಉದ್ಯೋಗವಾಗಿತ್ತೆಂದು ಐರ್ವಿನ್‌ರವರು ವರದಿ ಮಾಡಿದ್ದಾರೆ".[೧೨]

ಬಂಜಾರರ ಮೂಲವನ್ನು ನಿಖರವಾಗಿ ಹೇಳುವುದು ತುಂಬಾ ಕಷ್ಟ ಹಾಗೂ ವಿದ್ವಾಂಸರಲ್ಲಿ ಭಿನ್ನ ಮತವಿದ್ದರೂ "ರಾಜಸ್ಥಾನದ ಮೇವಾರ ಪ್ರದೇಶದಿಂದ ದೇಶದ ಎಲ್ಲಾ ದಿಕ್ಕುಗಳಿಗೂ ಪಸರಿಸಿರಬಹುದೆಂದು

---

೯. ಎಂ. ಚಿದಾನಂದ ಮೂರ್ತಿ, ಸಂಶೋಧನ ತರಂಗ ೨ ಪು. ೯

೧೦. Kamala Mohahara Rao: The my thological origin and Clan System of Banjara`s of Hyderabad-Man in India P. 17

೧೧. Nanjundayya and Ananthayyar, The Mysore Tribes and Castes Bangalore, Mysore Govt press P. 136

೧೨. Russel and Hiralal. The Tribes and Castes of Central provinecs of India, Vol-II, P. 168

ಹೇಳಬಹುದು. ಉತ್ತರಕ್ಕೆ ಕಾಶ್ಮೀರದವರೆಗೂ, ದಕ್ಷಿಣದಲ್ಲಿ ದಖಿನ್ ಮತ್ತು ಅದರಾಚೆಗೂ, ಪೂರ್ವದಲ್ಲಿ ಉತ್ತರ ಪ್ರದೇಶದ ಪೂರ್ವದವರೆಗೂ ಪಸರಿಸಿದರೆಂದು ನಂಜುಂಡಯ್ಯ ಮತ್ತು ಅಯ್ಯರ್ ಅವರು ಹೇಳಿದ್ದಾರೆ".

ಭಾರತದದ್ಯಾಂತ ಹರಡಿರುವ ಲಂಬಾಣಿ ಸಮುದಾಯವನ್ನು ಬೇರೆ-ಬೇರೆ ಪ್ರಾಂತ್ಯಗಳಲ್ಲಿ ಸ್ಥಳಗಳಲ್ಲಿ ಹಲವಾರು ಹೆಸರುಗಳಿಂದ ಕರೆಯುತ್ತಿರುವುದನ್ನು ಗಮನಿಸಬಹುದಾಗಿದೆ. "ಲಂಬಾಣಿಗರನ್ನು ಬಂಜಾರ, ಲಮಾನಿ, ಲಂಬಾಡಾ ಹಾಗೂ ಲಂಬಾನಿಗಳೆಂದು ಗುರುತಿಸುತ್ತಾರೆ. ಲಂಬಾನಿ ಎನ್ನುವ ಪದ ಸಂಸ್ಕೃತದ ಲವಣ ಎಂಬ ಶಬ್ದದಿಂದ ಬಂದಿದೆ. ಲವಣ ಎಂದರೆ ಉಪ್ಪು ಎಂದು, ಇದು ಇವರ ವ್ಯಾಪಾರದ ಒಂದು ಮೂಲಭೂತ ಸರಕಾಗಿತ್ತು. ಬಂಜಾರ ಎಂಬ ಹೆಸರಿನಿಂದಲೂ ಇವರನ್ನು ಗುರುತ್ತಿಸುತ್ತಾರೆ". ಸಂಸ್ಕೃತದ 'ವನಜಾರಾ' (ಕಾಡಿನಲ್ಲಿ ಅಲೆದಾಡು) ಎಂಬ ಪದದಿಂದ ಬಂದಿರಬಹುದು

ಭಾರತದ ಎಲ್ಲಾ ಭಾಗಗಳಲ್ಲಿ ಸಾಮಾನ್ಯವಾಗಿ ಇವರನ್ನು 'ಗೋರ್ ಬಂಜಾರಾ' ಎಂದು ಕರೆಯುತ್ತಾರೆ. ಲಂಬಾಣಿಗರು ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದರಿಂದ ಹಾಗೂ ಸ್ಥಾನಿಕ ಭಾಷೆಗಳಿಂದ ಪ್ರಭಾವಿತ ರಾದದ್ದರಿಂದ ಇವರನ್ನು ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಕರ್ನಾಟಕದಲ್ಲಿ ಬಂಜಾರಾ ಹಾಗೂ ಲಂಬಾಣಿ ಎಂದೂ, ಓರಿಸ್ಸಾದಲ್ಲಿ ಲಮಾಣ ಹಾಗೂ ಬಂಜಾರಿ ಎಂದೂ ಬಿಹಾರ್‌ನಲ್ಲಿ ಬಂಜಾರ್ ಹಾಗೂ ತಮಿಳುನಾಡಿನಲ್ಲಿ ಸುಗಾಲಿ ಹಾಗೂ ಲಬಾಡಿಗಳೆಂದೂ, ಆಂಧ್ರದಲ್ಲಿ ಸುಕಾಲಿ, ಸುಗಾಲಿ, ಲಂಬಾಡಿಗಳೆಂದೂ, ರಾಜಸ್ಥಾನದಲ್ಲಿ ಲಂಜಾರ್, ಲಭಾಣ, ಗವರಿಯಾಗಳೆಂದೂ, ಗುಜರಾತಿನಲ್ಲಿ ಬಣಜಾರ, ಲವಣಿಯಾ ಎಂದೂ ಕರೆಯುತ್ತಾರೆ.

ಈ ಮೇಲಿನ ಎಲ್ಲಾ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಲಂಬಾಣಿಗರು ಮೂಲತಃ ಉತ್ತರ ಭಾರತದ ರಾಜಸ್ಥಾನದಿಂದ ಮೊಗಲರ ಸೈನ್ಯದ ಜೊತೆಗೆ ಬಂದರೆಂದೂ, ಲಂಬಾಣಿಗರಿಗೂ ಮತ್ತು ರಜಪೂತರಿಗೂ ಪರಸ್ಪರ ಸಂಬಂಧವಿದ್ದು, ಲಂಬಾಣಿಗರು ರಜಪೂತ ವಂಶದವರೆಂದು ಸ್ಪಷ್ಟವಾಗುತ್ತದೆ. ಉತ್ತರ ಭಾರತದಿಂದ ಮೊಗಲರ ಸೈನಿಕರಿಗೆ ಆಹಾರ ಸರಬರಾಜು ಮಾಡುತ್ತ ವಲಸೆ ಬಂದ ಲಂಬಾಣಿಗರು ಕಾಲಾಂತರದಲ್ಲಿ ಉತ್ತರ ಭಾರತಕ್ಕೆ ಮರಳಿ ಹೋಗದೆ ದಕ್ಷಿಣ ಭಾರತದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಅಲ್ಲದೆ ಭಾರತದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ನೆಲೆಸಿದರೂ, ವಿವಿಧ ಹೆಸರುಗಳಿಂದ ಗುರುತಿಸಿಕೊಂಡರೂ ವಿವಿಧ ಸಂಸ್ಕೃತಿಗಳಿಂದ ಪ್ರಭಾವಿತರಾದರೂ ಅವರ ವೇಷ-ಭೂಷಣ, ಭಾಷೆ, ಸಂಸ್ಕೃತಿ, ಪದ್ಧತಿಗಳು ಬಹುತೇಕ ಒಂದೇ ರೂಪದಲ್ಲಿ ಕಂಡು ಬರುವುದರಿಂದ ವಿವಿಧ ರಾಜ್ಯಗಳಲ್ಲಿ ವಾಸಿಸುವ ಬಂಜಾರಾ ಜನರು ಒಂದೇ ಮೂಲದವರೆಂದು ಖಚಿತವಾಗುತ್ತದೆ.

ಸಾಮಾಜಿಕ ಸ್ಥಿತಿಗತಿ

ಪ್ರತ್ಯೇಕ ಹಾಗೂ ವಿಶಿಷ್ಟ ಸಾಂಸ್ಕೃತಿಕ ಸಂಪತ್ತನ್ನು ಮತ್ತು ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡು ಬಂದ ಕರ್ನಾಟಕದ ಹಲವು ಬುಡಕಟ್ಟಿನ ಜನರ ಪಟ್ಟಿಗೆ ಲಂಬಾಣಿಗರು ಸೇರುತ್ತಾರೆ. ರಂಗು ರಂಗಿನ

ಥಳಥಳಿಸುವ ಉಡುಗೆಯನ್ನುಟ್ಟು ಸಂತೆಯ, ಪೇಟೆಯ ಬೀದಿ ಬೀದಿಗಳಲ್ಲಿ ಸೌದೆ ಹೊತ್ತು ಜೀವನ ಸಾಗಿಸುತ್ತಿರುವ ಇವರನ್ನು ಲಂಬಾಣಿಗರು ಎಂದು ಜನರು ಬಹುಬೇಗನೆ ಗುರುತಿಸುತ್ತಾರೆ. ಅಂತಹ ಲಂಬಾಣಿಗರ ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲಬೇಕಾಗಿದೆ.

"ಲಂಬಾಣಿಗರ ಸಮಾಜದಲ್ಲಿ ಹೆಚ್ಚಾಗಿ ಪಿತೃಪ್ರಧಾನ ಕುಟುಂಬ ಪದ್ಧತಿ ಇದ್ದರೂ ಮಾತೃಪ್ರಧಾನ ಕುಟುಂಬಗಳೂ ಅಲ್ಲಲ್ಲಿ ಕಂಡು ಬರುತ್ತವೆ. ಈ ಸಮಾಜದಲ್ಲಿ ಸ್ತ್ರೀಯರಿಗಿಂತ ಪುರುಷರ ಸ್ಥಾನಮಾನಗಳು ಗೌರವಯುತವಾಗಿರುತ್ತವೆ. ಇವರಲ್ಲಿ ಸಮಾಜದ ಬಹು ಮುಖ್ಯವಾದ ಸ್ಥಾನಗಳನ್ನು ಪುರುಷರೇ ಆಕ್ರಮಿಸಿ ಕೊಂಡಿದ್ದಾರೆ. ಕುಟುಂಬದ ಪ್ರತಿಯೊಂದು ಆಗುಹೋಗುಗಳನ್ನು ಪುರುಷರೆ ನಿರ್ವಹಿಸುತ್ತಾರೆ. ಹೀಗಾಗಿ ಈ ಸಮಾಜದಲ್ಲಿ ಸ್ತ್ರೀಯರು ಪುರುಷರಿಗೆ ಅಧೀನರಾಗಿ ಬಾಳುತ್ತಾರೆ. ತಂದೆಯ ಆಸ್ತಿಗೆ, ವಂಶದ ಕೀರ್ತಿಗೆ ಕುಟುಂಬದ ಹಿರಿಯ ಮಗನೇ ಹಕ್ಕುದಾರ. ಈ ಬಗೆಯಾದ ಹಕ್ಕು ತಂದೆಯಿಂದ ಮಗನಿಗೆ ಹಸ್ತಾಂತರ ವಾಗುತ್ತದೆ. ಕುಟುಂಬದಲ್ಲಿ ತಂದೆಯ ನಂತರ ಹಿರಿಯ ಮಗನಿಗೆ ಹೆಚ್ಚಿನ ಜವಾಬ್ದಾರಿ ತಂದೆಗೆ ವಯಸ್ಸಾದಲ್ಲಿ ಅಥವಾ ಕುಟುಂಬವನ್ನು ನೋಡಿಕೊಳ್ಳುವಲ್ಲಿ ತಂದೆಯು ಅಸಮರ್ಥನಾಗಿದ್ದರೆ ಹಿರಿಯ ಮಗನು ಕುಟುಂಬದ ಎಲ್ಲ ಆಗು-ಹೋಗುಗಳನ್ನು ನೋಡಿಕೊಳ್ಳಬೇಕಾಗುತ್ತದೆ".[೧೩]

ಕುಟುಂಬ

ಲಂಬಾಣಿಗರಲ್ಲಿ ಅವಿಭಕ್ತ ಕುಟುಂಬ ಜೀವನ ಕ್ರಮವು ಅಲ್ಲಲ್ಲಿ ಕಂಡುಬರುತ್ತಿದ್ದರೂ ಸಾಮಾನ್ಯವಾಗಿ ಅವರಲ್ಲಿ ವಿಭಕ್ತ ಕುಟುಂಬ ಜೀವನ ಕ್ರಮವೇ ಹೆಚ್ಚು. ಗಂಡು ಮಕ್ಕಳು ತಮ್ಮ ಮದುವೆಯಾಗುವವರೆಗೆ ಮಾತ್ರ ಕುಟುಂಬದಲ್ಲಿ ಒಟ್ಟಾಗಿ ಜೀವಿಸಿ ಮದುವೆಯ ನಂತರದಲ್ಲಿ ತಮ್ಮ ಹೆಂಡಿರನ್ನು ಅನುಸರಿಸಿ, ಆಸ್ತಿ ಯಲ್ಲಿ ಭಾಗ ತೆಗೆದುಕೊಂಡು ಸ್ವತಂತ್ರವಾದ ಜೀವನವನ್ನು ನಡೆಯಿಸಿಕೊಂಡು ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ವಿವಾಹ

ಪ್ರಾಚೀನ ಕಾಲದಿಂದಲೂ ಅವರಲ್ಲಿ ಬಾಲ್ಯವಿವಾಹ ಪದ್ಧತಿ ಪ್ರಚಲಿತವಿದ್ದು; ಇಂದು ಆ ಪದ್ಧತಿ ಕಡಿಮೆಯಾಗುತ್ತಿದೆ. ವಿಧವಾ ವಿವಾಹ ಹಾಗೂ ಅಣ್ಣನ ಹೆಂಡತಿಯನ್ನು ತಮ್ಮನಾದವನು ಮದುವೆ (ಕೂಡಾವಳಿ)ಯಾಗುವುದು ಇವು ಅವರಲ್ಲಿ ಕಂಡು ಬರುವ ವಿಶೇಷ ಪದ್ಧತಿಗಳಾಗಿವೆ. ಹಲ್ಕಿವರು ಹೆಣ್ಣು ಶಿಶು ಹತ್ಯೆಯನ್ನು ಮಾಡಲಾಗುತ್ತಿತ್ತು. ಹೀಗಾಗಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಯಿತು. ಅದರಿಂದಾಗಿ ವಿಧವಾ ವಿವಾಹ ಜಾರಿಯಲ್ಲಿ ಬಂದಿತು. "ಲಂಬಾಣಿಗರಲ್ಲಿ 'ಏಕಪತಿತ್ವ' ಹಾಗೂ 'ಏಕಪತ್ನಿತ್ವ' ಕುಟುಂಬಗಳೇ ಜಾಸ್ತಿ. ಬಹು ಪತ್ನಿತ್ವ ಕುಟುಂಬದ ಪದ್ಧತಿಯೇ ಅವರಲ್ಲಿ ಅಸ್ತಿತ್ವದಲ್ಲಿದೆ. ಹೆಂಡತಿಯು ಬಂಜೆಯೆಂದು ಕಂಡುಬಂದಲ್ಲಿ ಅಥವಾ ಗಂಡು ಸಂತಾನವಿಲ್ಲದಿದ್ದಲಿ ಪುನಃ ಅವನು ಒಂದಕ್ಕಿಂತ ಹೆಚ್ಚು ಜನ ಸ್ತ್ರೀಯರನ್ನು ಮದುವೆಯಾಗಬಹುದು. ಬಹುಪತ್ನಿತ್ವಕ್ಕೆ ಅವಕಾಶವಿದೆ ಎಂಬುದಕ್ಕೆ ಅವರಲ್ಲಿ ಬಳಕೆಯಲ್ಲಿರುವ ಅನೇಕ

---

೧೩. ಡಾ. ಪಿ.ಕೆ. ಖಂಡೋಬಾ ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪು.೪೭

ಗಾದೆಗಳೇ ಸಾಕ್ಷಿ. ಆದರೆ ಇಂತಹ ಮರುಮದುವೆಯಿಂದ ಯಾವುದೇ ರೀತಿಯಿಂದ ಸುಖವಿಲ್ಲವೆಂಬುದನ್ನೂ, ಮೊದಲಿನ ದಾಂಪತ್ಯ ಸುಖವೇ ಸರ್ವ ಶ್ರೇಷ್ಠವೆಂದೂ ಅದೇ ಸ್ಥಿರವಾದುದು ಎಂದೂ ನಂಬಿದರು"[೧೫] ಎಂದು ಡಾ. ಪಿ.ಕೆ. ಖಂಡೋಬಾ ಅವರು ಅಭಿಪ್ರಾಯ ಪಡುತ್ತಾರೆ.

ನಂಬಿಕೆಗಳು

ಲಂಬಾಣಿಗರಲ್ಲಿ ತಮ್ಮದೇ ಆದ ಕೆಲವು ವಿಶಿಷ್ಟ ಸಂಪ್ರದಾಯಗಳಿರುವಂತೆ ನಂಬಿಕೆಗಳು ಕೂಡ ಅವರಲ್ಲಿವೆ. ದೆವ್ವ, ಭೂತಗಳ ಬಗ್ಗೆ ಅವರಿಗೆ ತುಂಬಾ ಭರವಸೆಗಳಿವೆ. ಎಣ್ಣೆಜೋಗಿ, ಬುಡುಬುಡಿಕೆಯವರು ಹೇಳುವ ಮಾತುಗಳನ್ನು ಅವರು ಸತ್ಯವೆಂದು ನಂಬುತ್ತಾರೆ. ತೊನ್ನನಾಗಿದ್ದವನು ಸತ್ತರೆ ಮಳೆ ಬರುವುದಿಲ್ಲವೆಂದು ಅವರು ನಂಬುತ್ತಾರೆ. ಜಾತಿ ಕೆಟ್ಟವರಿಗೆ ಕಂಚಿನ ತಟ್ಟೆಯಲ್ಲಿ ಊಟಕ್ಕೆ ಹಾಕುವುದಿಲ್ಲ. ನಾಯಿಗಳು ಜೋರಾಗಿ ಬೊಗುಳಿದರೆ ಹಾಗೂ ಗೂಗೆ ಮನೆಯ ಮೇಲೆ ಕುಳಿತು ಕೊಂಡರೆ, ಕೂಗಿದರೆ ತಾಂಡಾದಲ್ಲಿ ಯಾರದರೂ ಸಾಯುತ್ತಾರೆ ಎಂದು ನಂಬುತ್ತಾರೆ. ಅಲೆಮಾರಿಗಳಾದ ಅವರು ದಾರಿ ಶಕುನಗಳನ್ನು ನಂಬುತ್ತಾರೆ. ಮಚ್ಚು, ಹಾರೆ, ಗುದ್ದಲಿ, ಕ್ಷೌರಿಕ, ಬೆಕ್ಕು, ಕತ್ತೆ, ಖಾಲಿಕೊಡ ಇವು ಎದುರಾದರೆ ಬಲದಿಂದ ಎಡಕ್ಕೆ ಹೋಗುವುದಾದರೆ ಹಿಡಿದ ಕೆಲಸ ಸರಿಯಾಗುವುದಿಲ್ಲವೆಂದು ಭಾವಿಸುತ್ತಾರೆ. ಅದೇ ರೀತಿಯಲ್ಲಿ ಕಾಗೆ, ನರಿ, ತುಂಬಿದ ಕೊಡ, ಗರ್ಭಿಣಿ ಸ್ತ್ರೀಯರು ಎಡದಿಂದ ಬಲಕ್ಕೆ ಹೋದರೆ ಶಕುನ ಒಳ್ಳೆಯದೆಂದು ಭಾವಿಸುತ್ತಾರೆ.

ಆರ್ಥಿಕ ವ್ಯವಸ್ಥೆ

ದೃಢಕಾಯದ ಲಂಬಾಣಿಗರು ಶ್ರಮ ಜೀವಿಗಳು ಅವರು ಕಷ್ಟಪಟ್ಟು ದುಡಿದು ತಿನ್ನಬೇಕೆಂಬ ಬಲವಾದ ನಂಬಿಕೆಯು ಅವರಲ್ಲಿದೆ. ಹೀಗಾಗಿ ಎಂಥ ಕಠಿಣ ಪ್ರಸಂಗ ಬಂದೊದಗಿದರೂ ಭಿಕ್ಷೆ ಬೇಡುವುದನ್ನು ಮತ್ತು ಸೋಮಾರಿತನದಿಂದ ಜೀವಿಸುವುದನ್ನು ಅವರು ವಿರೋಧಿಸುತ್ತಾರೆ. " 'ಸೇವಾ ಕರತೋ ಮೇವಾ ಮಳಚ' ಎಂದರೆ ಬೆವರು ಸುರಿಸಿದರೆ ಸುಖ ಸಿಗುತ್ತದೆ ಎಂಬುದನ್ನು ಹೇಳುತ್ತಾರೆ. ತಮ್ಮ ಮೂಲ ಉದ್ಯೋಗದಿಂದ ವಂಚಿತರಾದ ಇವರು ವ್ಯವಸಾಯಕ್ಕೆ ಅಂಟಿಕೊಳ್ಳದೆ ಬ್ರಿಟಿಷ್ ಸರ್ಕಾರದ ಕೋಪಕ್ಕೆ ತುತ್ತಾಗಿ ಅಡವಿಯ ಪಾಲಾಗಿ ಬಿಟ್ಟಿದ್ದರ ಪರಿಣಾಮ ಇವರು ಕೃಷಿಯಿಂದ ದೂರ ಉಳಿದು ಕೊಂಡರು. ಸ್ವಾತಂತ್ರನಂತರ ಅವರಿಗೆ ರಾಜಕೀಯ ಸ್ವಾತಂತ್ರ್ಯ ದೊರೆತರೂ ಆರ್ಥಿಕ ಸ್ವಾತಂತ್ರ್ಯ ದೂರವಾಗಿಯೇ ಉಳಿದಿದೆ. ಆರ್ಥಿಕ ಸ್ವಾತಂತ್ರವನ್ನು ಪಡೆಯದ ಇವರಿಗೆ ರಾಜಕೀಯ ಸ್ವಾತಂತ್ರ್ಯ ಫಲ ನೀಡಲಿಲ್ಲ. ಹೀಗಾಗಿ ಅವರಿಗೆ ಬೆವರು ಮಾತ್ರ ಆಧಾರ ವಾಗಿದೆ. ಭಾರವಾದ ಮಣ್ಣಿನ ಕೆಲಸ ಮಾಡುವಲ್ಲಿ ಇವರು ಹೇಳಿ ಮಾಡಿಸಿದಂತಿದೆ. ಕೆಲವು ಸ್ತ್ರೀಯರು ಪ್ರಕೃತಿ ದತ್ತವಾಗಿ ಬೆಟ್ಟ-ಗುಡ್ಡಗಳಲ್ಲಿ ಸಿಗುವ ಕಟ್ಟಿಗೆ, ಚಿಕ್ಕೆ ಹಣ್ಣು, ಬಾರೆಹಣ್ಣು, ಕವಳಿಹಣ್ಣು, ನೆಲ್ಲಿಕಾಯಿ ಮುಂತಾದ ಸರಕುಗಳನ್ನು ಮಾರಿ ಜೀವನ ಸಾಗಿಸುತ್ತಿದ್ದಾರೆ. ಇನ್ನು ಕೆಲವರು ಗದ್ದೆಯಲ್ಲಿ ಗೇಯುವುದು, ಕೂಲಿ-ನಾಲಿ ಮಾಡುವುದು, ಕಲ್ಲು ಹೊಡೆಯುವುದು ಕಂಡುಬರುತ್ತದೆ. ಸ್ತ್ರೀಯರು ಪುರುಷಗಿಂತಲೂ ಹೆಚ್ಚು ಗಟ್ಟಿಯಾಗಿರುವುದು ಕಂಡುಬರುತ್ತದೆ".[೧೬]

---

೧೫. ಪಿ.ಕೆ. ಖಂಡೋಬಾ: ಕರ್ನಾಟಕದ ಲಂಬಾಣಿಗರು; ಒಂದು ಸಾಂಸ್ಕೃತಿಕ ಅಧ್ಯಯನ, ಪು.೪೭-೪೮

೧೬. ಡಾ. ಡಿ.ಬಿ. ನಾಯಕ, ಲಂಬಾಣಿ ಸಂಸ್ಕೃತಿ, ಪು.೨೪

ಲಂಬಾಣಿಗರು ಕೃಷಿಯನ್ನೆ ಮೂಲವಾಗಿ ಅವಲಂಬಿಸುವುದು ಬಹಳ ಕಡಿಮೆ. ಬೇರೆಯವರ ಗದ್ದೆ-ತೋಟಗಳಲ್ಲಿ ಕೂಲಿ ಮಾಡಿಕೊಂಡು ಹಣ ಸಂಪಾದಿಸುವುದೇ ಹೆಚ್ಚು. ಇವರು ಸಂಪಾದನೆಗಾಗಿ ದೂರದೂರ ಪ್ರದೇಶಗಳಾದ ಮಾಹಾರಾಷ್ಟ್ರ, ಮೈಸೂರು, ಗೋವಾ, ಚಿಕ್ಕಮಗಳೂರು, ಭದ್ರಾವತಿ, ಮೊದಲಾದ ಕಡೆಗಳಲ್ಲಿ ಕುಟುಂಬ ಸಮೇತ ೪ ಅಥವಾ ೫ ತಿಂಗಳುಗಟ್ಟಲೆ ವಲಸೆ ಹೋಗಿ ಹಣ ಸಂಪಾದಿಸುತ್ತಾರಾದರೂ ಅವರ ಕುಡಿತ, ಮಾಂಸ ಸೇವನೆ ಇನ್ನಿತರೆ ದುಂದುಗಾರಿಕೆಯಿಂದ ಗಳಿಸಿದ ಹಣವನ್ನು ಖರ್ಚು ಮಾಡಿಕೊಂಡು ಮತ್ತೆ ಯಥಾಸ್ಥಿತಿಗೆ ಮರಳುವುದನ್ನು ಕಾಣಬಹುದಾಗಿದೆ.

ಸ್ವಾತಂತ್ರ್ಯನಂತರ ಲಂಬಾಣಿಗಳಿಗೆ ಶೈಕ್ಷಣಿಕ ಸೌಲಭ್ಯದ ಅವಕಾಶ ಸಿಕ್ಕದ್ದರಿಂದಾಗಿ ಶಾಲಾ-ಕಾಲೇಜುಗಳನ್ನು ಪ್ರವೇಶಿಸುತ್ತಿದ್ದಾರೆ. ಆದರೂ ಇವರ ಸಂಖ್ಯೆ ಕಡಿಮೆ ಎಂದೆ ಹೇಳಬೇಕು. ನಗರ ಪಟ್ಟಣಗಳಿಗೆ ಹೊಂದಿಕೊಂಡ ಲಂಬಾಣಿ ಕುಟುಂಬಗಳಲ್ಲಿನ ಪಾಲಕರು ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡುವುದನ್ನು ಕಂಡರೆ, ಊರುಗಳಿಂದ ದೂರವಿರುವ ತಾಂಡಾಗಳಲ್ಲಿ ಪಾಲಕರು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡದಿರುವುದನ್ನು ಕಾಣಬಹುದು. ಇದಕ್ಕೆ ಅವರ ಆರ್ಥಿಕಸ್ಥಿತಿಯೂ ಕಾರಣವಾಗಿದೆ. ಶಾಲೆ-ಕಾಲೇಜುಗಳನ್ನು ಕಂಡ ಯುವಕರು ಸರಕಾರಿ, ಅರೆ ಸರಕಾರಿ ಕ್ಷೇತ್ರದ ಕೆಲಸಗಳಲ್ಲಿ ಕಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ವಾಸಸ್ಥಳದ ಸ್ವರೂಪ ಅಥವಾ ತಾಂಡಾಗಳ ಸ್ವರೂಪ

ಲಂಬಾಣಿಗರು ಗ್ರಾಮಕ್ಕೂ, ನಗರ-ಪಟ್ಟಣಕ್ಕೂ ದೂರವಾಗಿ ನೀರಿನ ಸೌಕರ್ಯವಿರುವ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ತಮ್ಮದೇ ಆದ ಜನರೊಂದಿಗೆ ವಾಸಮಾಡುತ್ತಾರೆ. ಇಂಥ ಪ್ರದೇಶದಲ್ಲಿ ಹತ್ತಾರು ಮನೆಗಳಿಂದ ಸಾವಿರಾರು ಮನೆಗಳು ಇರುತ್ತದೆ. ಇವರ ವಾಸಸ್ಥಾನಗಳಿಗೆ 'ತಾಂಡಾ' ಎಂದು ಕರೆಯುತ್ತಾರೆ. ಗ್ರಾಮ ಮತ್ತು ಪಟ್ಟಣಗಳಿಗೆ ಹತ್ತಿರವಾಗಿದ್ದರೆ ಆ ಗ್ರಾಮ ಮತ್ತು ಪಟ್ಟಣಗಳ ಹೆಸರುಗಳಿಂದಲೆ ತಾಂಡಾಗಳೆಂದು ಕರೆಯುತ್ತಾರೆ. ಉದಾ. ಮರಿಯಮ್ಮನಹಳ್ಳಿ ಊರಿನ ಹತ್ತಿರದಲ್ಲಿರುವ ತಾಂಡಾಕ್ಕೆ ಮರಿಯಮ್ಮನಹಳ್ಳಿ ತಾಂಡಾ ಎಂದು ಕರೆಯುತ್ತಾರೆ. ಇವರು ವಿಶೇಷವಾಗಿ ಮನೆಗಳನ್ನು ಕಾಡಿನಲ್ಲಿ ಸಿಗುವ ಹುಲ್ಲು, ಕಾಸಿಹುಲ್ಲು, ಆಪು, ಮರದ ಟೊಂಗೆ, ಬಿದಿರಿನ ಬೊಂಬುಗಳು ಮೊದಲಾದವುಗಳ ಸಹಾಯದಿಂದ ಗುಡಿಸಲುಗಳನ್ನು, ಚಪ್ಪರಗಳನ್ನು ಕಟ್ಟಿಕೊಳ್ಳುತ್ತಾರೆ. ಇವುಗಳಿಗೆ ಅವರು 'ಝುಫಡಾ' ಎಂದು ಕರೆಯುತ್ತಾರೆ. ಸುತ್ತಲೂ ಮಣ್ಣಿನ ಇಲ್ಲವೆ ಕಲ್ಲಿನ ಗೋಡೆಗಳನ್ನು ಕಟ್ಟಿಕೊಂಡು ಮಧ್ಯದಲ್ಲಿ ಬೇವಿನ ಮರದ ಕಂಬ ಅಥವಾ ಈಚಲ ಮರದ ಕಂಬವನ್ನು ನೆಟ್ಟು, ಆ ಕಂಬಕ್ಕೂ ಗೋಡೆಗೂ ಅಡ್ಡಲಾಗಿ ಮರದ ಟೊಂಗೆಗಳನ್ನು ಜೋಡಿಸಿ ಹುಲ್ಲನ್ನು ಇಳಿಜಾರಾಗಿ ಒಂದು ಕಡೆಯಿಂದ ಹೊಂದಿಸಿ ಕೊಳ್ಳುತ್ತಾ ಬರುತ್ತಾರೆ. ಕಾರಣ ಮಳೆ ನೀರು ನಿಲ್ಲದೆ ಕೆಳಗೆ ಬಂದು ಬೀಳುವ ಉದ್ದೇಶದಿಂದ ಚಪ್ಪರಗಳನ್ನು ಇಳಿಜಾರಾಗಿ ಹಾಕಿಕೊಳ್ಳುತ್ತಾರೆ. ಜೊತೆಗೆ ಬೆಳಕು ಗಾಳಿಗಾಗಿ ಮತ್ತು ಹೊಗೆ ಹೋಗಲು ಒಂದು ಚಿಕ್ಕ ಚಪ್ಪರದ ಮೂಲೆಯಲ್ಲಿ ಕಿಂಡಿ/ಕಿಟಕಿಯನ್ನು ಬಿಡಲಾಗುತ್ತದೆ. ಹತ್ತಾರು ಅಡಿ ಉದ್ದದ ನಾಲ್ಕಾರು ಅಡಿ ಅಗಲದ ಈ ಚಪ್ಪರದ ಒಂದು ಮೂಲೆಯ ಭಾಗವು ಅಡಿಗೆಗಾಗಿ ಮೀಸಲಾಗಿದ್ದರೆ, ಇನ್ನೊಂದು ಭಾಗವು ಕುರಿ, ಕೋಳಿಗಳ ಪಾಲನೆಗೆ ಮೀಸಲಾಗಿರುತ್ತದೆ. ಉಳಿದ ಭಾಗದಲ್ಲಿ ಕುಟುಂಬದ ಸದಸ್ಯರು ಇರುತ್ತಾರೆ.

"ತಾಂಡಾಗಳಲ್ಲಿ ಮನೆಗಳನ್ನು ಕ್ರಮಬದ್ಧವಾಗಿ ನಿರ್ಮಿಸಿಕೊಳ್ಳದೆ ಹಿಂದು, ಮುಂದಾಗಿ, ದಾರಿಗೂ, ಚರಂಡಿ ವ್ಯವಸ್ಥೆಗೂ ದಾರಿ ಸರಿಯಾಗಿರದೆ ಚಿಕ್ಕಚಿಕ್ಕ ಓಣಿಗಳಂತೆ ಇರುತ್ತವೆ. ಲಂಬಾಣಿಗರಿಗೆ ಬಹುತೇಕ ಕುರಿ, ಕೋಳಿ ಇಲ್ಲವೆ ಪಶುಪಾಲನೆಯೇ ಪ್ರಮುಖವಾದ ಉದ್ಯೋಗವಾದ್ದರಿಂದ ಅವುಗಳಿಗಾಗಿ ಪ್ರತ್ಯೇಕವಾದ ವ್ಯವಸ್ಥೆಯಿರುತ್ತದೆ. ಪಶುಗಳಿಗೆ ಕೊಟ್ಟಿಗೆಯನ್ನು ಚಪ್ಪರದ ಮಾದರಿಯಲ್ಲಿಯೇ ಕಟ್ಟಲಾಗುತ್ತದೆ. ಕೋಳಿಗಾಗಿ ಗೂಡನ್ನು, ಕುರಿಗಳಿಗಾಗಿ ಹಟ್ಟಿಯನ್ನು ರಚಿಸಲಾಗಿರುತ್ತದೆ".[೧೬]

ಸಂಪ್ರದಾಯ ಮತ್ತು ಆಚರಣೆಗಳು

ಜಗತ್ತಿನ ಪ್ರತಿಯೊಂದು ಧರ್ಮಕ್ಕೂ, ಸಮುದಾಯಕ್ಕೂ ಅವುಗಳದೇ ಆದ ಸಂಪ್ರದಾಯ ಹಾಗೂ ಆಚರಣೆಗಳು ಇದ್ದೇ ಇರುತ್ತವೆ. ಹಾಗೆ ಬುಡಕಟ್ಟು ಸಮುದಾಯವಾದ ಲಂಬಾಣಿ ಜನಾಂಗದಲ್ಲಿ ಅವರದೇ ಆದ ಜನನ, ಆಹಾರ ಪದ್ಧತಿ, ವಿವಾಹ ಪದ್ಧತಿ, ಶವಸಂಸ್ಕಾರ, ಉಡುಗೆತೊಡುಗೆಗಳು, ಹಬ್ಬ-ಹರಿದಿನಗಳು ಮೊದಲಾದ ಸಂಪ್ರದಾಯ ಮತ್ತು ಆಚರಣೆಗಳನ್ನು ಗುರುತಿಸಬಹುದು.

ಜನನ

ಬೇರೆ ಬೇರೆ ಸಮುದಾಯಗಳಲ್ಲಿ ಕಾಣುವಂತೆ ಲಂಬಾಣಿ ಸಮುದಾಯದಲ್ಲಿಯೂ ಜನನಕ್ಕೆ ಸಂಬಂಧಿಸಿದ ಕೆಲ ವಿಧಿವಿಧಾನಗಳನ್ನು ಕಾಣಬಹುದಾಗಿದೆ. "ಮಗುವಿನ ಜನನವಾದಾಗ ಗಂಡು ಮಗುವಾದರೆ 'ನಗಾರಿ' ಬಾರಿಸಿ ಜನರೆಲ್ಲರಿಗೂ ಆ ವಿಷಯವನ್ನು ಸೂಚಿಸುತ್ತಾರೆ. ಹೆಣ್ಣು ಮಗುವಾದರೆ ಕಂಚಿನ ತಟ್ಟೆಯನ್ನು ಬಾರಿಸುತ್ತಾರೆ. ನಗಾರಿ ನಾದವನ್ನು ಕೇಳಿದ ತಾಂಡದವರೆಲ್ಲರೂ ಹೆರಿಗೆಯಾದ ಮನೆಯ ಮುಂದೆ ಸೇರಿ ತಮ್ಮ ಆನಂದವನ್ನು ವ್ಯಕ್ತಪಡಿಸಿ, ಸರಾಯಿ ಕುಡಿದು ಕುಣಿದು ಕುಪ್ಪಳಿಸುತ್ತಾರೆ. ಗಂಡು ಮಗುವಿನ ಹೆರಿಗೆ ಯಾದ ಸಂದರ್ಭದಲ್ಲಿ ಮಾಡುವ ಶಾಸ್ತ್ರಕ್ಕೆ "ಏಕಳ ಪೂಯೇರೊ" ಎನ್ನುತ್ತಾರೆ. ಈ ಸಂದರ್ಭದಲ್ಲಿ ಗಂಡು ಮಗುವಿನ ತಂದೆ ಸಂತೋಷಾರ್ಥವಾಗಿ ಕುಡಿಯಲು ನೆಂಟರಿಷ್ಟರಿಗೆ ಸರಾಯಿ ಕೊಡುತ್ತಾನೆ. ಈ ಶಾಸ್ತ್ರಕ್ಕಾಗಿ ಮನೆಯಲ್ಲಿ ಗೋವಿನ ಮಲಮೂತ್ರದಿಂದ ನೆಲಸಾರಿಸಿ, ರಂಗೋಲಿ ಹಾಕಿ, ತಮ್ಮ ಕುಲದೇವರುಗಳಿಗೆಲ್ಲ ಕಾಯಿ, ಕರ್ಪೂರ ಹಾಗೂ ನೈವೇದ್ಯವನ್ನು ಸಲ್ಲಿಸುತ್ತಾರೆ. ಪೂರ್ವಜರಿಗೆ ಸರಾಯಿ ಕೊಟ್ಟು, ಕುಲಸ್ಥರಿಗೆ ಕೊಬ್ಬರಿ ಬೆಲ್ಲ ಹಂಚುತ್ತಾರೆ. ಬಳಗದವರಿಗೆ ಊಟಕ್ಕೂ ಹಾಕುತ್ತಾರೆ. ಹೆಣ್ಣು ಕೂಸಿನ ಜನನವಾಗಿದ್ದರೆ ಈ ಶಾಸ್ತವನ್ನು ಮಾಡುವುದಿಲ್ಲ".[೧೭]

"ಮಗು ಹುಟ್ಟಿನ ಐದನೆಯ ದಿವಸಕ್ಕೆ ಸೂತಕ ನಿವಾರಣೆಯ ಸಂಸ್ಕಾರವನ್ನು ಆಚರಿಸಲಾಗುತ್ತದೆ. ಈ ಸಂಸ್ಕಾರಕ್ಕೆ "ದಳವಾ ಧೋಕಾಯೇರೋ" ಅಂದರೆ ಸೂತಕ ನಿವಾರಣೆ ಎಂದರ್ಥ. ಸಾಯಂಕಾಲ ಮನೆಯ ಅಂಗಳದಲ್ಲಿ ಒಂದು ಚಿಕ್ಕ ಗುಂಡಿ ತೋಡಿ ಸುತ್ತಲೂ ಗೋಮಯದಿಂದ ಸಾರಿಸಿ ಗುಂಡಿಯ ಒಳಗೆ ಒಂದಿಷ್ಟು ಗೋಮಯ ಹಾಗೂ ಹಿಟ್ಟಿನಿಂದ ತಯಾರಿಸಿದ ನಾಲ್ಕು ದೀಪಗಳನ್ನು ಹಚ್ಚಿಡುತ್ತಾರೆ. ಅಲ್ಲದೆ

---

೧೬. ಡಾ. ಡಿ.ಬಿ. ನಾಯಕ: ಲಂಬಾಣಿ ಸಂಸ್ಕೃತಿ, ಪು. ೧೭

೧೭. ಡಾ. ಪಿ.ಕೆ. ಖಂಡೋಬಾ: ಕರ್ನಾಟಕದ ಲಂಬಾಣಿಗರು : ಒಂದು ಸಾಂಸ್ಕೃತಿಕ ಅಧ್ಯಯನ, ಪು. ೧೧೭

ತೊಗರಿ, ಸೌದೆ, ಘುಂಡಿ ಕಟ್ಟಿಗೆ (ಸೀಂಕಳಿ)ಗಳನ್ನಿಟ್ಟು, ಹಿರಿಯ ಸ್ತ್ರೀಯರು ಮಗುವಿನ ಭವಿಷ್ಯಕ್ಕಾಗಿ ಛಟಿ ಮಾತಾಳಿಗೆ ಪೂಜೆ ಮತ್ತು ಪ್ರಾರ್ಥನೆಯನ್ನು ಮಾಡುತ್ತಾರೆ. ಅವರ ಪ್ರಾರ್ಥನೆಯಲ್ಲಿ ಮಗುವಿನ ಆಯುಷ್ಯ ಸುದೀರ್ಘವಾಗುವಂತೆಯೂ, ಅವನ ಜೀವನ ಮಂಗಲಮಯವಾಗುವಂತೆಯೂ, ಯಾವತ್ತೂ ಹಸನ್ಮುಖಿ ಯಾಗಿರುವಂತೆಯೂ ರೋಗ-ರುಜಿನಗಳು ಹತ್ತಿರ ಸುಳಿಯದಂತೆ ಬೇಡಿಕೊಳ್ಳುತ್ತಾರೆ. ಕೊನೆಗೆ ಅಲ್ಲಿ ಸೇರಿದ ಜನರಿಗೆ ಬೆಲ್ಲ ತುಪ್ಪ ಸೇರಿಸಿ ತಯಾರಿಸಿದ 'ಕುಲ್ಲರ್' ಸಿಹಿ ಪದಾರ್ಥ ಹಂಚುವುದರೊಂದಿಗೆ ಈ ಸಂಸ್ಕಾರ ಪೂರ್ಣವಾಗುತ್ತದೆ".[೧೮]

ಆಹಾರ ಪದ್ಧತಿ

ಲಂಬಾಣಿಗರು ಸಸ್ಯಹಾರಿಗಳೂ ಮತ್ತು ಮಾಂಸಾಹಾರಿಗಳೂ ಆಗಿದ್ದಾರೆ. ಇವರು ಆಯಾ ಪ್ರದೇಶದಲ್ಲಿ ಬಳಕೆಯಲ್ಲಿರುವ ಜೋಳ, ಗೋದಿ, ಸಜ್ಜೆ, ರಾಗಿ ಇವುಗಳನ್ನು ಉಪಯೋಗಿಸಿ ರೊಟ್ಟಿ, ನುಚ್ಚು, ಕಚಡಿ ಮುದ್ದೆ, ಚಪಾತಿ ಮೊದಲಾದ ಪದಾರ್ಥಗಳನ್ನು ಸೊಪ್ಪು, ತರಕಾರಿಗಳನ್ನು ಉಪಯೋಗಿಸಿ ಪಲ್ಲೆ, ಖಾರದ ಚಟ್ನಿ, ಸಾರು ಮೊದಲಾದ ಸಸ್ಯಹಾರ ಪದಾರ್ಥಗಳನ್ನು ತಯಾರಿಸಿ ಸೇವಿಸುತ್ತಾರೆ. ಜೊತೆಗೆ ಕುರಿ, ಕೋಳಿ, ಮೇಕೆ, ಮೀನು, ಏಡಿ, ಆಮೆ, ಮೊಲ, ಪಾರಿವಾಳ, ಗುಬ್ಬಿ ಹೀಗೆ ಮೊದಲಾದ ಮಾಂಸಾಹಾರವನ್ನು ಸೇವಿಸುತ್ತಾರೆ.

ಇದಲ್ಲದೆ ಲಂಬಾಣಿಗರಲ್ಲಿ ಕೆಲವೊಂದು ವಿಶೇಷವಾದ ಆಹಾರಗಳನ್ನು ತಯಾರಿಸಿ ಸೇವಿಸುವುದನ್ನು ಕಾಣಬಹುದು. 'ಬೋಟಿ-ಬಾಟಿ' ಅಂದರೆ ಮಾಂಸದ ಸಾರು ಮತ್ತು ರೊಟ್ಟಿ ಊಟ, 'ಸಂಗಟಿ' ಎಂದರೆ ಹುರುಳಿಯ ಹಿಟ್ಟಿನಿಂದ ತಯಾರಿಸಿದ ಪಾಯಸ, 'ತೋಟಿತಾಡಿ ಬಾಟೆ' ಎಂದರೆ ಗೋದಿಯ ಚಪಾತಿಯಲ್ಲಿ ಬೆಲ್ಲ ಸೇರಿಸಿ ತಯಾರಿಸಿದ ಪದಾರ್ಥ, 'ಭೋಜಿ ಭಾಂಜಿ ಲಾಪಸಿ' ಎಂದರೆ ಹುರಿದು ತಯಾರಿಸಿದ ಗೋದಿ ರವೆಯ ಪಾಯಸ, 'ರಾಬಡಿ' ಎಂದರೆ ಮೊಸರು-ಮಜ್ಜಿಗೆಗೆ ಒಗ್ಗರಣೆಯನ್ನು ಕೊಟ್ಟು ತಯಾರಿಸಿದ ಸಾಂಬರು, 'ಸಳೋಯಿ' ಎಂದರೆ ಕುರಿಕೋಳಿಗಳ ಹೊಟ್ಟೆಯಲ್ಲಿನ ಪದಾರ್ಥಗಳಾದ, ಕರುಳು, ಹೃದಯ ಮೊದಲಾದ ಮಾಂಸದಿಂದ ಮಾಡಿದ ಪದಾರ್ಥ, 'ಕಡಾವೊ' ಎಂದರೆ ಗೋದಿಯ ನುಚ್ಚನ್ನು ತುಪ್ಪದಲ್ಲಿ ಹುರಿದು ಬೇಯಿಸಿದ ಸಿಹಿ ಪದಾರ್ಥ, 'ಕಾಡೋ' ಎಂದರೆ ಕರಿ ಮೆಣಸು, ಸುಂಠಿ ಕೊಬ್ಬರಿಗಳ ಮಿಶ್ರಣಕ್ಕೆ ಒಗ್ಗರಣೆ ಯನ್ನು ಕೊಟ್ಟು ತಯಾರಿಸಿದ ಆಹಾರ, 'ಸಂವಾಳಿ' ಎಂದರೆ ಗೋದಿ ಹಿಟ್ಟಿನ ಪುರಿ ಇದನ್ನು ಹೋಳಿ ಹಬ್ಬದಲ್ಲಿ ತಯಾರಿಸುತ್ತಾರೆ. ಇದಲ್ಲದೆ ಮಾದಕ ಪಾನೀಯಗಳನ್ನು ಸೇವಿಸುತ್ತಾರೆ. 'ಭಾಂಗ್' ಎಂದರೆ ಅಫೀಮು ಹಾಗೂ ಕಸಕಸೆಯಿಂದ ತಯಾರಿಸಿದ ಪೇಯ, 'ಘೋಟಾ' ಎಂದರೆ ಕಸಕಸೆ, ಬೆಲ್ಲ ಸೇರಿಸಿ ತಯಾರಿಸಿದ ಪಾನೀಯ, ಈಚಲು ಮರದಿಂದ ತೆಗೆದ ರಸ (ಸಿಂಧೀ) ಸರಾಯಿ, ಬ್ರಾಂದಿ, ತೆಂಗಿನ ಮರದಿಂದ ತೆಗೆದ ನೀರಾ ಹೀಗೆ ದಿನನಿತ್ಯ ಹಾಗೂ ಹಬ್ಬ-ಹರಿದಿನಗಳಲ್ಲಿ ವಿಧವಿಧವಾದ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ.

---

೧೮. ಡಾ. ಡಿ.ಬಿ. ನಾಯಕ್: ಲಂಬಾಣಿ ಸಂಸ್ಕೃತಿ ಪು. ೮೯

ವಿವಾಹ ಪದ್ಧತಿ

ಲಂಬಾಣಿಗರು ಹಲವಾರು ವಿಧಿವಿಧಾನಗಳಲ್ಲಿ ವಿಶಿಷ್ಟತೆಯನ್ನು ಹೊಂದಿರುವಂತೆ ವಿವಾಹ ಪದ್ಧತಿಯಲ್ಲಿಯೂ ತಮ್ಮದೇ ಆದ ವಿಶೇಷತೆಯನ್ನು ಹೊಂದಿದ್ದಾರೆ. "ರಜಪೂತರದಲ್ಲಿ ಕಂಡುಬರುವ ರಾಠೋಡ, ಪವಾರ, ಚವ್ಹಾಣ ಹಾಗೂ ಜಾಧವ ಎಂಬ ಬೆಡಗುಗಳು ಲಂಬಾಣಿಗರಲ್ಲಿಯೂ ಕಂಡುಬರುತ್ತವೆ. ಈ ಬೆಡಗುಗಳಲ್ಲಿ 'ಜಾತ್' ಮತ್ತು 'ಭೂಕ್ಯಾ' ಎಂದು ಎರಡು ಪಂಗಡಗಳಿವೆ. ರಾಠೋಡ ಬೆಡಗಿನವರು 'ಭೂಕ್ಯಾ' ಎಂದು ಕರೆಯಿಸಿಕೊಂಡರೆ, ಉಳಿದ ಮೂರು ಪಂಗಡದವರನ್ನು 'ಜಾತ್' ಎಂಬ ಹೆಸರಿನಿಂದ ಗುರುತಿಸುತ್ತಾರೆ. ಸಗೋತ್ರ ವಿವಾಹ ನಿಷಿದ್ಧವಾಗಿದೆ. ತಾವು ಸಹೋದರರೆಂದು ಭಾವಿಸುತ್ತಾರೆ. ಆದ್ದರಿಂದ ಜಾತ್‌ದವರು ಭೂಕ್ಯಾದವರಲ್ಲಿ ಹಾಗೂ ಭೂಕ್ಯಾದವರು ಜಾತ್‌ದವರಲ್ಲಿ ಮದುವೆ ಸಂಬಂಧವನ್ನು ಬೆಳೆಸುತ್ತಾರೆ".[೧೯]

ಲಂಬಾಣಿಗರಲ್ಲಿ ಹಿಂದಿನಿಂದಲೂ ಹೆಣ್ಣಿನ ತಾಯ್ತಂದೆಗಳಿಗೆ 'ತೆರ' ಅಥವಾ 'ಕನ್ಯಾಶುಲ್ಕ'ವನ್ನು ಕೊಟ್ಟು ವಿವಾಹವಾಗುವ ಪದ್ಧತಿ ಇದೆ. ಇದಕ್ಕೆ ಅವರು 'ಕರಾರ್' ಎಂದು ಕರೆಯುತ್ತಾರೆ. ಇದು ಎರಡು ಬಗೆಯಾಗಿದೆ. ಗೋವುಗಳ ರೂಪದಿಂದ ಕೊಟ್ಟರೆ 'ರಾಂಸಡೀ ಕರಾರ್' ಎಂತಲೂ, ಹಣದ ರೂಪದಿಂದ ಕೊಟ್ಟರೆ 'ವಾಂಸಳೀಕರಾರ್' ಎಂತಲೂ ಕರೆಯುತ್ತಾರೆ. ಮೊದ ಮೊದಲು ವರದಕ್ಷಿಣೆಯ ಹಾವಳಿ ಇವರಲ್ಲಿ ಕಾಣುತ್ತಿರಲಿಲ್ಲ. ಆದರೆ ಇತ್ತೀಚೆಗೆ ಪರಿಸರ ಪ್ರಭಾವ ಹಾಗೂ ವಿದ್ಯಾವಂತರ ಯುವಕರಿಂದಾಗಿ ಇವರಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿದೆ. ಇವರಲ್ಲಿ ವಧು ವರಗಳ ಒಪ್ಪಿಗೆಗಿಂತ ಸಮಾಜ ಅಥವಾ ಕುಟುಂಬದ ನಾಲ್ಕು ಜನ ಹಿರಿಯರು ಒಪ್ಪಿದರೆ ವಿವಾಹ ನಿಶ್ಚಿತಾರ್ಥವಾದಂತೆಯೆ. "ಗುರುಹಿರಿಯರ ಈ ಒಪ್ಪಿಗೆ ಕಾರ್ಯಕ್ಕೆ ಅವರು 'ಕಾನಸಾಮಳಿ' (ಕಿವಿಮಾತು) ಎನ್ನುತ್ತಾರೆ. ಇದೇ ವಿವಾಹದ ಮೊದಲ ಹೆಜ್ಜೆಯಾಗಿದೆ. ಈ ಸಂದರ್ಭದಲ್ಲಿ ತಾಂಡ ನಾಯಕನಿಗೆ ಕನ್ಯಾನಿರ್ಧಾರಿತ ಶುಲ್ಕವನ್ನು ಕೊಡಬೇಕು ಇದಕ್ಕೆ 'ಸಾಕ್' ಎನ್ನುತ್ತಾರೆ. ನಂತರ 'ಸಕ್ರಿ' ಕಾರ್ಯವನ್ನು ಮಾಡುತ್ತಾರೆ. ಇದಕ್ಕೆ ಅವರು 'ಸಗಾಯಿ' ಅಥವಾ 'ಗೋಳ ಖಾಯೇರೊ' ಎನ್ನುತ್ತಾರೆ. ಈ ಸಂದರ್ಭದಲ್ಲಿ ಗಂಡಿನವರು ಕನ್ಯಾ ಪಿತೃವಿಗೆ ಅರ್ಧಶುಲ್ಕ(ಕರಾರ್)ವನ್ನು ಮುಟ್ಟಿಸಬೇಕು".[೨೦] ಲಂಬಾಣಿಗರು ಮದುವೆ ಸಮಾರಂಭಗಳನ್ನು ಹಗಲಿನಲ್ಲಿ ತಾಂಡಾದ ಜನರು ಹೆಚ್ಚಾಗಿ ಹೊಟ್ಟೆಪಾಡಿಗಾಗಿ ದುಡಿಯಲು ಹೋಗುವುದರ ಕಾರಣದಿಂದಾಗಿ ಬೆಳದಿಂಗಳ ರಾತ್ರಿಯಲ್ಲಿಯೆ ಈ ಜನರು ಹೆಚ್ಚಾಗಿ ಮದುವೆ ಸಮಾರಂಭವನ್ನು ಇಟ್ಟುಕೊಳ್ಳುತ್ತಾರೆ. ಲಂಬಾಣಿಗರಲ್ಲಿ ಮದುವೆಯ ಕಾರ್ಯ ಕನಿಷ್ಠ ಪಕ್ಷ ೪-೫ ದಿನಗಳ ಕಾಲ ನಡೆಯುತ್ತದೆ. ಸಾಮಾನ್ಯವಾಗಿ ಇವರ ಮದುವೆ ಸಮಾರಂಭ ವರನ ಮನೆಯಿಂದಲೇ ಪ್ರಾರಂಭಗೊಳ್ಳುತ್ತದೆ. ಮದುವೆ ಸಂದರ್ಭದಲ್ಲಿ ನೃತ್ಯ ಮತ್ತು ಕುಡಿತ ಸಾಮಾನ್ಯವಾಗಿರುತ್ತದೆ.

"ಮದುವೆ ಸಂದರ್ಭದಲ್ಲಿ ಮದುಮಗನಿಗೆ ವಿಶೇಷ ಪ್ರಕಾರದ ಉಡುಗೆ-ತೊಡುಗೆಗಳನ್ನು ಹಾಕಲಾಗುತ್ತದೆ.

---

೧೯. ಡಾ. ಡಿ.ಬಿ. ನಾಯಕ್, ಲಂಬಾಣಿ ಜನಪದ ಸಾಹಿತ್ಯ, ಪು. ೧೧

೨೦. ಪಿ.ಕೆ. ಖಂಡೋಬಾ, ೧೯೮೮, ಲಂಬಾಣಿ ಸಂಸ್ಕೃತಿ, ಪು. ೨೩

ಅಂಗಿ, ಧೋತರ, ಕೆಂಪು ಪೇಟಾ (ಮೋಳಿಯಾ), ಸೊಂಟಕ್ಕೆ 'ಫೇಂಟಾ' (ಪಟ್ಟಿ ಅಥವಾ ಬೆಲ್ಟ್) ಕಟ್ಟಿ ಅದಕ್ಕೆ ಕಠಾರಿಯನ್ನು (ಈಗ ಡಬ್ಬಣ) ಹಾಗೂ ಕಾಲುಗಳಲ್ಲಿ 'ಖಾಚಡಾ' (ಮೇಲ್ಮುಖವಾಗಿರುವ ಚೂಪಾದ ಬೂಟುಗಳು) ಎರಡೂ ಕೈಗಳಿಗೆ ಬೆಳ್ಳಿ ಕಡಗ, ಬೆರಳುಗಳಿಗೆ ಬೆಳ್ಳಿ ಬಂಗಾರದ ಉಂಗುರ, ಕಿವಿಯಲ್ಲಿ ಓಲೆ ಗಳನ್ನು ಹಾಕಿರುತ್ತಾರೆ. ಕೈಯಲ್ಲಿ ಎಲೆ ಅಡಿಕೆ ಹಾಕುವ ವಿಶೇಷ ಚೀಲವನ್ನು ಕೊಟ್ಟು ಮೈಮೇಲೊಂದು ಕೆಂಪು ಶಾಲನ್ನು ಹೊದಿಸಲಾಗುತ್ತದೆ. ಹಾಗೆ ಹೆಣ್ಣಿಗೂ ಕೂಡ ವಿಶೇಷ ವಸ್ತ್ರಗಳು, ಆಭರಣಗಳಿಂದ ಅಲಂಕರಿಸಲಾಗಿರುತ್ತದೆ. ವಧುವಿಗೆ ಮಾಂಗಲ್ಯಧಾರಣೆಯಾದ ನಂತರ ಮೂರನೇ ದಿನ ಸಂಜೆ ಮೊದಲಿನ ಬಟ್ಟೆಗಳನ್ನು ತೆಗೆದು ಲಂಗ, ರವಿಕೆ, ಓಡಣಿ, ಮೈತುಂಬಾ ಆಭರಣ ಹಾಕುತ್ತಾರೆ. ಗಂಡನ ಮನೆಯ 'ಚೂಡೊ' (ತೋಳುಬಂದಿ) 'ಘುಗರಿ' (ಕೂದಲುಗಳಿಗೆ ಇಳಿಬಿಟ್ಟಿರುವ ಆಭರಣ) ಮುಂತಾದ ಮಾಂಗಲ್ಯವನ್ನು ಧರಿಸುವಳು. ಮುತ್ತೈದೆಯವರು ಮಂಗಳ ಗೀತೆಯೊಂದಿಗೆ ಈ ಕಾರ್ಯವನ್ನು ನೆರವೇರಿಸಿ ಇದೇ ಸಂದರ್ಭದಲ್ಲಿ ವಧುವಿಗೆ ಸ್ವತಂತ್ರವಾಗಿ 'ಅಳುವ ಹಾಡು'(ಢಾವಲೊ)ಗಳನ್ನು ಕಲಿಸಿ ಕೊಡುತ್ತಾರೆ".[೨೧] ಹೀಗೆ ಲಂಬಾಣಿಗರಲ್ಲಿ ತಮ್ಮ ಸಂಪ್ರದಾಯ ಆಚರಣೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಹಿನ್ನೆಲೆಯಲ್ಲಿವಿವಾಹದ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದನ್ನು ಕಾಣಬಹುದಾಗಿದೆ.

ಶವಸಂಸ್ಕಾರ

ಲಂಬಾಣಿಗರಲ್ಲಿ ಜನನಕ್ಕೂ ಸಂಸ್ಕಾರವಿರುವಂತೆ ಮರಣದ ಸಂದರ್ಭದಲ್ಲಿ ಇವರಲ್ಲಿ ಕೆಲವು ವಿಶಿಷ್ಟ ರೀತಿಯ ಸಂಸ್ಕಾರವನ್ನು ಕಾಣಬಹುದಾಗಿದೆ. ಲಂಬಾಣಿಗರಲ್ಲಿ ಹೂಳುವ ಹಾಗೂ ಸುಡುವ ಎರಡೂ ಪದ್ಧತಿ ಗಳಲ್ಲಿ ಅಂತ್ಯಕ್ರಿಯೆ ನಡೆಯುತ್ತದೆ. ಅವಿವಾಹಿತರನ್ನು, ಚಿಕ್ಕಮಕ್ಕಳನ್ನು ಹೂಳಲಾಗುತ್ತದೆ. ಹಾಗೂ ಇನ್ನುಳಿದ ವರನ್ನು ಸುಡುತ್ತಾರೆ. ಸಾಮಾನ್ಯವಾಗಿ ಮೈಮೇಲೆ ತೊನ್ನಿರುವವರನ್ನು ಸುಡುವ ನಿಯಮವಿದೆ. ಒಂದು ವೇಳೆ ಹಾಗೇನಾದರೂ ಸುಡದೆ ಹೋದರೆ ಆ ವರ್ಷ ಮಳೆ ಬರುವುದಿಲ್ಲವೆಂದು ಅವರು ನಂಬುತ್ತಾರೆ. ಗಂಡ ಸತ್ತಾಗ ಹೆಂಡತಿಯ ಮಾಂಗಲ್ಯವನ್ನು ಮನೆಯ ಮುಂದೆ ಚಟ್ಟದ ಮೇಲೆಯೇ ಹರಿಸುತ್ತಾರೆ. "ಮಾಂಗಲ್ಯ ಸೂಚಕವಾದ ತೋಳಬಂಧಿ (ಚೂಡೊ) ಕೂದಲುಗಳಿಗೆ ಇಳಿಬಿಟ್ಟಿರುವ ಘುಗರಿ ಹಾಗೂ ಕುಪ್ಪಸಕ್ಕೆ ಹಚ್ಚ ಲಾಗಿರುವ ತೋಳಿನ ಮೇಲಿರುವ 'ಕಾಟಲಿಖವ್ಯಾ' ಇವುಗಳನ್ನು ಹೆಣದ ಮೇಲೆ ಬಿಚ್ಚಿಸಿ ಶವದ ಜೊತೆಗೆ ಸ್ಮಶಾನಕ್ಕೆ ಒಯ್ಯುತ್ತಾರೆ. ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ದಾರಿಯುದ್ದಕ್ಕೂ ರಾಗಿಕಾಳು ಇಲ್ಲವೆ ಅಕ್ಕಿಯನ್ನು ಚೆಲ್ಲುತ್ತಾ ಹೋಗುತ್ತಾರೆ. ದಾರಿಯಲ್ಲಿ ಶಕುನ ಪರೀಕ್ಷಿಸುತ್ತಾ ಹೋಗುತ್ತಾರೆ. ಕಾಗೆ, ನರಿ, ಮೊಲ, ಹಾವು ಇತ್ಯಾದಿಗಳು ಬಲದಿಂದ ಎಡಕ್ಕೆ ಹೋದರೆ ಮೃತನು ಅವುಗಳ ಜೀವ ಪಡೆದನೆಂದು ನಂಬುತ್ತಾರೆ. ಹೂಳಿದರೆ ಗುಡ್ಡೆಯ ಮೇಲೆ ಯಾವುದಾದರೊಂದು ಹಸಿರು ಗಿಡವನ್ನು ನೆಡುತ್ತಾರೆ. ಸುಡುವಾಗ ಉತ್ತರಕ್ಕೆ ತಲೆಮಾಡಿ, ಮುಖ ಕೆಳಗಾಗಿ ಮಲಗಿಸುತ್ತಾರೆ. ಮೃತನು ತಂದೆಯಾಗಿದ್ದರೆ ತಲೆಯ ಕಡೆಗೆ ಮೊದಲು ಬೆಂಕಿ ಇಡುತ್ತಾನೆ. ಸತ್ತ ತಂದೆಗೆ ಮಗನಾದವನು ಏಳು ಅಡಿ ಉದ್ದದ ಹಸಿ ಕೋಲಿನಿಂದ

---

೨೧. ಡಾ. ಪಿ.ಕೆ. ಖಂಡೋಬಾ, ಲಂಬಾಣಿ ಸಂಸ್ಕೃತಿ, ಪು.೨೪-೨೭

ಮೃತನ ತಲೆಗೆ ಹೊಡೆಯಬೇಕು. ಇದಕ್ಕೆ ಅವರು 'ಟೀಂಚೋದೇರೂ' ಎನ್ನುತ್ತಾರೆ. ಹೀಗೆ ಮಾಡುವುದರಿಂದ ಮೃತನಿಗೆ ಮುಕ್ತಿ ಲಭಿಸುತ್ತದೆಂದೂ ಸ್ವರ್ಗದಲ್ಲಿ ಸ್ಥಾನ ಸಿಗುತ್ತದೆ ಎಂಬುದು ಇವರ ನಂಬಿಕೆಯಾಗಿದೆ".[೨೨]

ಸ್ಮಶಾನದಿಂದ ಬರುವಾಗ ಹತ್ತಿರದ ಕೆರೆ, ಹಳ್ಳಗಳಿಗೆ ಹೋಗಿ ನೀರು ಮುಟ್ಟಿ ಬೊರೇಗಿಡದ ಪ್ರದಕ್ಷಿಣೆ ಹಾಕಿ, ಎಲೆ ಹರಿದು ನೆಲಕ್ಕೆ ಹಾಕುತ್ತಾರೆ. ಮುಳ್ಳಿನ ಮರ ಸುತ್ತು ಹಾಕುವುದೂ, ಹೆಣವನ್ನು ಮುಖ ಅಡಿಯಾಗಿ ಮಲಗಿಸುವುದೂ, ದಾರಿಯುದ್ದಕ್ಕೂ ರಾಗಿ ಇಲ್ಲವೆ ಅಕ್ಕಿ ಚೆಲ್ಲುತ್ತಾ ಹೋಗುವುದೂ ಇವೆಲ್ಲ ಅವರು ದೆವ್ವವಾಗಿ ಬಾರದಿರಲು ಎಂಬ ನಂಬಿಕೆಯಿಂದ ಮಾಡುತ್ತಾರೆ. ಮುಖಅಡೆ ಮಾಡಿ ಮಲಗಿದವನು ಏಳಲಿಕ್ಕಾಗದು, ಒಂದು ವೇಳೆ ಎದ್ದರೂ ರಾಗಿಕಾಳು ಆರಿಸುತ್ತಾ, ಮುಳ್ಳಿನಮರ ಸುತ್ತುತ್ತ ಬರಬೇಕಾದರೆ ಬೆಳಗಾಗುತ್ತದೆ ಎಂಬ ಸಮಾಧಾನವಿದ್ದಂತೆ ತೋರುತ್ತದೆ.

"ಸತ್ತ ಮೂರನೇ ದಿನಕ್ಕೆ ತಿಥಿ ಮಾಡುತ್ತಾರೆ. ಇದಕ್ಕೆ 'ದಾಡೋ ಕರೇರೊ' ಇಲ್ಲವೆ 'ಕಾಂದ್ಯಾಕರೇರೂ' ಎಂದು ಕರೆಯುತ್ತಾರೆ. ನಂತರ ಸತ್ತ ಹನ್ನೆರಡು ಮತ್ತು ಹದಿಮೂರನೆಯ ದಿನಗಳಂದು ಆಚರಣೆಗಳನ್ನು ಮಾಡುತ್ತಾರೆ. ಇದಕ್ಕೆ 'ಬಾರೋ ಕರೇರೊ' ಎಂದು ಕರೆಯುವುದುಂಟು. ಹನ್ನೆರಡನೆಯ ದಿನ ಮಾಡುವ ತಿಥಿಯು ಮನೆಯೊಳಗಡೆ ನಡೆಯುತ್ತದೆ. ಮೃತನ ಮನೆಯವರು ಮೃತನ ಹೆಸರಿನಲ್ಲಿ ಅನ್ನ ಮಾಡಿ ಮೃತನಿಗೆ ಸಲ್ಲಿಸಿ ಊಟ ಮಾಡುತ್ತಾರೆ. ಹದಿಮೂರನೆಯ ದಿನದ ತಿಥಿಯು ಮನೆಯ ಹೊರಗಡೆ ನಡೆಯುತ್ತದೆ. ಮನೆಯ ಹೊರಗಡೆ ಮೂರು ಕಲ್ಲಿನ ಗುಂಡುಗಳನ್ನಿಟ್ಟು ಒಲೆಮಾಡಿ ಅನ್ನ ಬೇಯಿಸುತ್ತಾರೆ. ಮೃತನಿಗೆ ಅರ್ಪಿಸಿದ ಮೇಲೆ ನಿಕಟ ಸಂಬಂಧಿಗಳು ಅದನ್ನು ಸೇವಿಸಬೇಕು. ಮಾರನೆಯ ದಿನ ಮುಚ್ಚಿಟ್ಟ ಬೂದಿಯ ಮೇಲೆ ಮಾಡಿದ ನಿಶಾನೆಗಳ ಮೇಲಿಂದ ಮೃತನ ಜನ್ಮಾಂತರಗಳನ್ನು ಗುರುತಿಸುತ್ತಾರೆ. ತುಂಬಿದ ಚೆರಿಗೆಯ ನೀರು ಕಡಿಮೆಯಾಗಿದ್ದಾರೆ ದೆವ್ವ, ಪಿಶಾಚಿಯಾಗಿದ್ದಾನೆಂದೂ, ಹಾಗೆಯೇ ತುಂಬಿದ್ದರೆ ಸ್ವರ್ಗ ಸೇರಿ ದೇವತೆ ಯಾಗಿದ್ದಾನೆಂದು ಭಾವಿಸುತ್ತಾರೆ".[೨೩] ಹೀಗೆ ಲಂಬಾಣಿಗರಲ್ಲಿ ಜನನದಿಂದ ಹಿಡಿದು ಸಾವಿನವರೆಗೂ ತಮ್ಮದೇ ಆದ ವಿಶಿಷ್ಟ ಸಂಪ್ರದಾಯ ಮತ್ತು ಆಚರಣೆಗಳನ್ನು ಹೊಂದಿದ್ದಾರೆ.

ಉಡುಗೆ - ತೊಡುಗೆಗಳು

ಪ್ರತಿಯೊಂದು ಸಂಸ್ಕೃತಿಯಲ್ಲಿ ವೇಷ-ಭೂಷಣಗಳಿಗೆ ಅವರದೇ ಆದ ಮಹತ್ವವಿರುತ್ತದೆ. ವಿಶಿಷ್ಟವಾದ ಉಡುಗೆ-ತೊಡುಗೆಗಳು ಲಂಬಾಣಿಗರಲ್ಲಿ ಕಂಡುಬರುತ್ತವೆ. ಲಂಬಾಣಿಗರಲ್ಲಿ ಹೆಚ್ಚು ಆಕರ್ಷಕ ಹಾಗೂ ವೈಶಿಷ್ಟ್ಯತೆಯಿಂದ ಕೂಡಿದ ಉಡುಗೆ ತೊಡುಗೆಗಳನ್ನು ಪುರುಷರಿಗಿಂತ ಹೆಚ್ಚಾಗಿ ಸ್ತ್ರೀಯರಲ್ಲೇ ಕಾಣುತ್ತೇವೆ. ಇವರ ಉಡುಗೆ ತೊಡುಗೆಗಳಿಂದ ರಾಜ್ಯದ ಯಾವುದೇ ಮೂಲೆಯಲ್ಲಿದ್ದರೂ ಇವರು ಲಂಬಾಣಿಗರೆಂದೇ ಗುರುತು ಹಿಡಿಯಬಹುದಾಗಿದೆ. ಲಂಬಾಣಿ ಸ್ತ್ರೀಯರು ಸಾಮಾನ್ಯವಾಗಿ ಲಂಗ, ಕುಪ್ಪಸ, ಮತ್ತು ಮೇಲ್ಮುಸುಕು ಇವುಗಳನ್ನು ಧರಿಸಿರುತ್ತಾರೆ. ಇವುಗಳನ್ನು ಸ್ವತಃ ಅವರೆ ತಯಾರಿಸಿಕೊಳ್ಳುತ್ತಾರೆ. ಆದರೆ ಈ ವಸ್ತ್ರಗಳನ್ನು

---

೨೨. ಓ.ಕೆ. ಖಂಡೋಬಾ, ಕರ್ನಾಟಕದ ಲಂಬಾಣಿಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಪು. ೧೨೩-೧೨೪

೨೩. ಡಾ. ಡಿ.ಬಿ. ನಾಯಕ್, ಲಂಬಾಣಿ ಸಂಸ್ಕೃತಿ, ಪು. ೧೦೧

ತಯಾರಿಸುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಲಂಬಾಣಿಗರೇ ವಿಧ-ವಿಧವಾದ ಬಟ್ಟೆ, ಕನ್ನಡಿ, ಬಣ್ಣ ಬಣ್ಣದ ದಾರ, ಹಳೆಯ ಕಾಲದ ನಾಣ್ಯಗಳನ್ನು ಮೊದಲಾದ ಸುಂದರ ಕಸೂತಿ ಕಲೆಯಿಂದ ತಯಾರಿಸಲು ತಿಂಗಳುಗಟ್ಟಲೆ ಶ್ರಮ ಪಡಬೇಕಾಗುತ್ತದೆ. ಹಾಗೂ ವೆಚ್ಚದಾಯಕವೂ ಆಗಿರುತ್ತದೆ. ಸಾಮಾನ್ಯ ದಿನಗಳಲ್ಲಿ ಉಡುವ ಉಡುಗೆಗಳು ಸಾಧಾರಣವಾಗಿದ್ದರೆ, ಹಬ್ಬ ಹರಿದಿನ, ಮದುವೆಗಳಲ್ಲಿ ಧರಿಸುವ ಬಟ್ಟೆಗಳು ವಿವಿಧ ರೀತಿಯ ಆಕಾರದ ಕನ್ನಡಿಯ ತುಣುಕಗಳು, ಬಣ್ಣ ಬಣ್ಣದ ವಿವಿಧ ರೀತಿಯಲ್ಲಿ ಜೋಡಿಸಿದ ತುಂಡು ಬಟ್ಟೆಗಳು ಹಾಗೂ ಅವುಗಳ ಮೇಲೆ ಸುಂದರ ಹಾಗೂ ಸೂಕ್ಷ್ಮವಾದ ಕರಕುಶಲತೆಯ ಕಸೂತಿ ಕಲೆ ಇವೆಲ್ಲವುಗಳಿಂದ ಥಳ ಥಳಿಸುವ ಹಾಗೂ ಸೌಂದರ್ಯಯುತವಾದ ಉಡುಗೆಯಾಗಿ ಕಾಣಿಸುತ್ತದೆ.

ಆಭರಣಗಳಿಗೆ ಸಂಬಂಧಿಸಿದಂತೆ ಲಂಬಾಣಿ ಸ್ತ್ರೀಯರು ತೊಡುವ ಆಭರಣಗಳು ವೈಶಿಷ್ಟ್ಯ ಪೂರ್ಣ ವಾಗಿದೆ. "ಲಂಬಾಣಿ ಸ್ತ್ರೀಯರು ತಮ್ಮ ಕಾಲುಗಳಿಗೆ ಬೆಳ್ಳಿಯ 'ಕಾಲ್ಗಡಗ', ಹಿತ್ತಾಳೆಯ 'ವಾಂಕಡಿ', 'ಕಸ್ಸೆ', ಬೆಳ್ಳಿಯ ಚೈನುಗಳು, ಬೆರಳುಗಳಿಗೆ ಬೆಳ್ಳಿಯ 'ಮಿಂಚುವಾ', ತಾಮ್ರದ 'ಚಟಕಿ', ಹಿತ್ತಾಳೆಯ 'ಅಂಗುತಳಾ', ಹೆಬ್ಬೆರಳಿಗೆ 'ಶರಭರಿ' ಹಾಗೂ ಕಾಲಿಗೆ ಗೆಜ್ಜೆ-ಸರಗಳನ್ನು ಕಟ್ಟಿಕೊಳ್ಳುತ್ತಾರೆ. ಕೊರಳಲ್ಲಿ 'ಪಟಿಯಾ', ಹಳೆಯ ನಾಣ್ಯದ ಸರ, 'ರಪಿಯಾರ ಹಾರ', ಬೆಳ್ಳಿಯ 'ಹಾಂಸಲಿ', 'ವಾಂಕ್ಯಾ' ಹಾಗೂ ವಿವಿಧ ಬಗೆಯ (ಹೆಚ್ಚಾಗಿ ಕೆಂಪು) ಮಣಿಯ ಸರಗಳನ್ನು ಹಾಕಿಕೊಳ್ಳುತ್ತಾರೆ. ಎರಡೂ ಬದಿಯ ಕೆನ್ನೆಗಳ ಮೇಲೆ ಇಳಿಬಿಟ್ಟಿರುವ ಕೂದಲಗಳಿಗೆ ಜೋಡಿಸಿರುವ ಬೆಳ್ಳಿ ಇಲ್ಲವೇ ಲೋಹದ 'ಘುಗರಿ', 'ಟೋಪ್ಲಿ', 'ಕಡ್ಡಿ', 'ಆಡಿಸಾಂಕಳಿ' ಇವುಗಳಿಗೆಲ್ಲಾ 'ಚೋಟ್ಲಾ' ಎಂದು ಹೆಸರು".[೨೪]

ಲಂಬಾಣಿ ಪುರುಷರು ಸಾಮಾನ್ಯವಾಗಿ ಅಂಗಿ, ಪಂಚೆ (ಧೋತ್ರ), ತಲೆಗೆ ಕೆಂಪು ರುಮಾಲು ಹಾಕಿ ಕೊಳ್ಳುತ್ತಾರೆ. ಅಲ್ಲದೆ ಕಿವಿಗೆ ಬೆಳ್ಳಿ ಅಥವಾ ಬಂಗಾರದ ಓಲೆ, ಕೈಯಲ್ಲಿ ಕಡಗ, ಸೊಂಟಕ್ಕೆ ಬೆಳ್ಳಿಯ ಉಡುದಾರಗಳನ್ನು ಹಾಕಿಕೊಳ್ಳುತ್ತಾರೆ. ಪುರುಷರ ವೇಷ-ಭೂಷಣಗಳಲ್ಲಿ ಸ್ತ್ರೀಯರಷ್ಟು ವಿಶೇಷ ಬದಲಾವಣೆಗಳು ಕಂಡುಬರುವುದಿಲ್ಲ.

ಹೀಗೆ ಪರಂಪರೆಯಿಂದ ಬಂದ ವೇಷಭೂಷಣಗಳನ್ನು ಲಂಬಾಣಿಗರು ಆಧುನಿಕತೆಯ ಪರಿಣಾಮವಾಗಿ ಅಲ್ಪಸ್ವಲ್ಪ ಬದಲಾವಣೆಯನ್ನು ಮಾಡಿಕೊಂಡರೂ ತಮ್ಮ ಮೂಲ ಸಂಸ್ಕೃತಿಯನ್ನು ಇನ್ನು ಜೀವಂತವಾಗಿ ಉಳಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

ಹಬ್ಬ-ಹರಿದಿನಗಳು

ಲಂಬಾಣಿಗರು ಸಾಮಾನ್ಯವಾಗಿ ಹಿಂದೂ ಹಬ್ಬಗಳನ್ನೆ ಆಚರಿಸಿದರೂ, ಹಿಂದುಗಳಂತೆ ಆಚರಿಸದೆ, ತಮ್ಮದೇ ಆದ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿಶಿಷ್ಟವಾಗಿ ಆಚರಿಸುತ್ತಾರೆ. ಲಂಬಾಣಿಗರು ಪ್ರಮುಖವಾಗಿ ದೀಪಾವಳಿ, ಹೋಳಿ, ದಸರಾ ಹಾಗೂ ಗೌರಿಹಬ್ಬ ಮೊದಲಾದವುಗಳನ್ನು ಆಚರಿಸುತ್ತಾರೆ.

---

೨೪. ಪಿ.ಕೆ. ಖಂಡೋಬಾ, ಲಂಬಾಣಿ ಸಂಸ್ಕೃತಿ, ಪು.೧೯

ದೀಪಾವಳಿ ಹಿಂದುಗಳಿಗೂ ಮಹತ್ವದ ಹಬ್ಬವಾಗಿರುವಂತೆ ಲಂಬಾಣಿಗರಿಗೂ ಮಹತ್ವದ ಹಬ್ಬವಾಗಿದೆ. ಈ ಸಂದರ್ಭದಲ್ಲಿ ಧನಲಕ್ಷ್ಮಿ ಹಾಗೂ ಧಾನ್ಯ ಲಕ್ಷ್ಮಿಗಳ ಪೂಜೆಯನ್ನು ವೈಭವದಿಂದ ಆಚರಿಸುತ್ತಾರೆ. "ಈ ಹಬ್ಬಕ್ಕೆ ಲಂಬಾಣಿಗರು 'ದವಾಲಿ' ಇಲ್ಲವೆ 'ಕಾಳಿಮಾಸ' ಎಂದು ಕರೆಯುತ್ತಾರೆ. ದೀಪಾವಳಿ ಅಮವಾಸ್ಯೆಯ ದಿನ ಲಕ್ಷ್ಮಿಪೂಜೆಗೆ ಮೊದಲು ಗೋವು ಪೂಜೆಯನ್ನು ಮಾಡುತ್ತಾರೆ. ಇದಕ್ಕೆ 'ಹನುಮಾನೇರ ರೋಟ' ಎಂದು ಕರೆಯುತ್ತಾರೆ. ಲಕ್ಷ್ಮಿ ಪೂಜೆಯ ನಂತರ ತಾಂಡಾದ ಕೋರು ಹುಡುಗಿಯರು ಶೃಂಗರಿಸಿಕೊಂಡು ಹರಳೆಣ್ಣೆ ದೀಪದ ಆರತಿಗಳನ್ನು ಹಚ್ಚಿಕೊಂಡು ತಾಂಡಾದ ನಾಯಕನ ಮನೆಗೆ ಹೋಗಿ ಆರತಿ ಬೆಳಗಲು ಅನುಮತಿ ಪಡೆದು ಅವರ ಮನೆಗೆ ಆರತಿ ಬೆಳಗಿ ನಂತರ ತಾಂಡಾದ ಎಲ್ಲರ ಮನೆಗಳಿಗೆ ಹೋಗಿ ಹಾಡು ಹಾಡುತ್ತಾ ಆರತಿ ಮಾಡುತ್ತಾರೆ. ಇದಕ್ಕೆ 'ಮೇರಾಕರೇರೂ' ಎಂದು ಕರೆಯುತ್ತಾರೆ. ನಂತರ 'ಧಬುಕಾರದೇರೊ' ಎನ್ನುವ ವಿಶಿಷ್ಟವಾದ ಪವಿತ್ರ ಕಾರ್ಯವು ವಿಶೇಷವಾಗಿ ತಮ್ಮ ಪೂರ್ವಜರನ್ನು ಸ್ಮರಿಸಿಕೊಳ್ಳುವುದಾಗಿದೆ. ಪ್ರತಿಯೊಂದು ಮನೆಗಳಲ್ಲಿ ಸೀಪರು ಅಡುಗೆ ಮಾಡಿ ಹೋಮದಲ್ಲಿ ತುಪ್ಪ ಸುರಿದು ಪೂರ್ವಜರಿಗೆ ನೈವೇದ್ಯ ಸಲ್ಲಿಸುತ್ತಾರೆ. ಹೀಗೆ ದೀಪಾವಳಿ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ".[೨೫]

ಲಂಬಾಣಿಗರಲ್ಲಿ ಹೋಳಿ ಹಬ್ಬಕ್ಕೆ ಹದಿನೈದು ದಿನ ಮೆದಲೇ ಪೂರ್ವಸಿದ್ಧತೆ ಆರಂಭವಾಗುತ್ತದೆ. ಫಲ್ಗುಣ ಮಾಸದ ಕೊರೆಯುವ ಚಂದ್ರನನ್ನು ಹೊಯ್ಕೊಳ್ಳುವುದರ ಮೂಲಕ ಸ್ವಾಗತ ಮಾಡುವರು. ಪ್ರತಿದಿನ ರಾತ್ರಿ ಪುರುಷರು ಒಂದೆಡೆ ಸೇರಿ ಶಂಖನಾದ ಮಾಡುತ್ತ ಲೇಂಗಿ (ಹೋಳಿಹಾಡು) ಹಾಡುತ್ತಾರೆ. ಹುಣ್ಣಿಮೆಯ ದಿನ ರಾತ್ರಿ ತಾಂಡದ ನಾಯಕನ ಸೂಚನೆಯಂತೆ ಇಬ್ಬರು ಗೇರಿಯಾ (ಕಾಮದಹನ ಕಾರ್ಯಕರ್ತರು) ಗಳನ್ನು ಆಯ್ಕೆ ಮಾಡುವುದು, ಅವರ ಹಿರಿತನದಲ್ಲಿ ಕಾಮದಹನದ ಕಾರ್ಯಗಳೆಲ್ಲ ನಡೆಯುತ್ತವೆ. ರಾತ್ರಿ ಕಾಮದಹನದ ನಂತರ ಸೂರ್ಯೋದಯದವರೆಗೆ ಹಾಡು, ಕುಣಿತ ಮಾಡುತ್ತಾರೆ. ಬೆಳಗಿನ ಜಾವ ಕೆಲವರು ಕಾಮನ ಬೂದಿಯನ್ನು ಮುಖ ಮೈಗೆ ಹಚ್ಚಿಕೊಂಡು ನಾಗಾ ಸ್ವಾಮಿ (ಭುಬುತಡಾ) ವೇಷಧರಿಸಿ ಕುಣಿತ ಮಾಡುವರು. ಅವನ ಹಿಂದೆ ಕುಡಿದು ಕುಣಿದು ಚೇಷ್ಟೆ ಮಾಡುವ ಬಣ್ಣ ಎರಚುವ ಪುರುಷರಿಗೆ ಸ್ತ್ರೀಯರು ಬಯ್ಯುತ್ತ, ಕಟ್ಟಿಗೆಯಿಂದ ಹೊಡೆಯುವುದು ಮೊದಲಾದ ಕಾರ್ಯ ನಡೆಯುತ್ತವೆ. ಹೋಳಿಯ ದಿನ ಸಂಜೆ ನಡೆಯುವ 'ಧೂಂಡ ಸಂಸ್ಕಾರ' ಈ ಹಬ್ಬದ ಮುಖ್ಯ ಆಚರಣೆಯಾಗಿದೆ. ಅಂದು ಆ ವರ್ಷದಲ್ಲಿ ಹುಟ್ಟಿದ ಎಲ್ಲ ಮಕ್ಕಳ ಹುಟ್ಟು ಹಬ್ಬವನ್ನು ಮಾಡಲಾಗುತ್ತದೆ. ತಾಯಿ ಮಗುವಿಗೆ ಹೊಸ ಬಟ್ಟೆಗಳನ್ನು ಹಾಕಿಕೊಂಡು ಗೌರವಿಸಿ, ಸಿಹಿ ಹಂಚಿ ಸಂತೋಷ ಪಡುವುದು ಇಲ್ಲಿನ ಮುಖ್ಯಕಾರ್ಯ. "ಪುತ್ರ ಸಂತಾನವೇ ಲಂಬಾಣಿಗರಲ್ಲಿ ಹೋಳಿಹಬ್ಬ ಆಚರಣೆಗೆ ಬರಲು ಕಾರಣವಾಗಿರುವುದರಿಂದ ಇದನ್ನೇ ಈ ಹಬ್ಬದ ಒಂದು ಪ್ರಮುಖ ಭಾಗವಾಗಿ ನಡೆಸಿಕೊಂಡು ಬಂದಿರುವುದರ ವಿಶೇಷ. ಹೋಳಿಹಬ್ಬದ ನಾಲ್ಕನೆಯ ದಿನ ಕರಿಯ ದಿನ, ಅಂದರೆ ನಾಯಕನ ಮನೆಯ ಮುಂದೆ ಕುರಿ ಕಡಿದು ತಾಂಡದ ಎಲ್ಲರಿಗೆ ಸಮವಾಗಿ ಪಾಲು ಹಾಕುತ್ತಾರೆ.

---

೨೫. ಡಾ. ಪಿ.ಕೆ. ಖಂಡೋಬಾ, ಕರ್ನಾಟಕದ ಲಂಬಾಣಿಗಳು. ಒಂದು ಸಾಂಸ್ಕೃತಿಕ ಅಧ್ಯಯನ, ಪು. ೭೦-೭೨

ಪ್ರತಿಯೊಂದು ಮನೆಯಲ್ಲಿ ಮಾಂಸದಡುಗೆಯನ್ನು ಮಾಡಿ ಊಟ ಮಾಡುವುದರೊಂದಿಗೆ ಹಬ್ಬ ಮುಕ್ತಾಯಗೊಳ್ಳುತ್ತದೆ".[೨೬]

" 'ಲೇಜ ಹಬ್ಬ'(ಗೋಧಿ ಸಸಿಹಬ್ಬ)ವನ್ನು ಕೆಲವು ಕಡೆ ಮಹಾನವಮಿಯ ಸಂದರ್ಭದಲ್ಲಿ ಆಚರಿಸಿದರೆ ಮತ್ತೆ ಕೆಲವು ಕಡೆಗಳಲ್ಲಿ ಯುಗಾದಿಯ ಸಂದರ್ಭದಲ್ಲಿ ಆಚರಿಸುತ್ತಾರೆ. ಇನ್ನು ಕೆಲವು ಕಡೆ ಶ್ರಾವಣ ಇಲ್ಲವೆ ಭಾದ್ರಪದ ಮಾಸಗಳಲ್ಲಿಯೂ ಆಚರಿಸುತ್ತಾರೆ. ಇಲ್ಲಿ ಕೃಷ್ಣನಿಗೆ ಪೂಜೆಯನ್ನು ಸಲ್ಲಿಸಲಾಗುತ್ತದೆ. ಹೋಳಿ ಹಬ್ಬ ಲಂಬಾಣಿಗರಿಗೆ ಅತ್ಯಂತ ಸಡಗರದ ಹಬ್ಬ. ಲಂಬಾಣಿ ಮುಖಂಡರು ಕೆಲ ಪದ್ಧತಿಗಳೊಂದಿಗೆ ಕಾಮದಹನವನ್ನು ಮಾಡುತ್ತಾರೆ. ಕಾಮದಹನದ ನಂತರ ಪುರುಷರು ಕೈಕೈ ಹಿಡಿದು ಸುತ್ತುಗಟ್ಟಿ 'ಲೆಂಗಿ' ಗೀತೆಗಳನ್ನು ಹಾಡುತ್ತಾರೆ. ತಮ್ಮ ಸಮಾಜದ ಸಾಂಸ್ಕೃತಿಕ ವೀರ ಪುರುಷ 'ಸೇವಾಭಾಯಾ' ಹಾಗೂ 'ಮರಿಯಮ್ಮ' ದೇವಿಗೆ ಕಾಮಭಸ್ಮ ಅರ್ಪಿಸಲು ಹೋಗುತ್ತಾರೆ. ಸ್ತ್ರೀಯರು ಸಹ ಹಲಗೆಯ ತಾಳಕ್ಕೆ ಹಾಡಿನ ರಾಗಕ್ಕೆ ಅನುಗುಣವಾಗಿ ಹೆಜ್ಜೆಹಾಕುತ್ತಾ ನೃತ್ಯವನ್ನು ಮಾಡುತ್ತಾರೆ".[೨೭] ಹೀಗೆ ಹಲವಾರು ವಿಶಿಷ್ಟ ಹಬ್ಬಗಳೊಂದಿಗೆ ಲಂಬಾಣಿಗಳ ಸಾಂಸ್ಕೃತಿಕ ಜೀವನ ಮತ್ತು ಆಚರಣೆಗಳು ವೈವಿಧ್ಯಪೂರ್ಣವಾಗಿವೆ.

ಸಾಂಸ್ಕೃತಿಕ ಸ್ಥಿತ್ಯಂತರ

ಲಂಬಾಣಿಗರು ಮೂಲತಃ ಬುಡಕಟ್ಟು ಜನಾಂಗದವರಾದರೂ ಈಗಿನ ಆಧುನಿಕ ಸಂದರ್ಭದಲ್ಲಿ ನಗರೀಕರಣದ ಪ್ರಭಾವದಿಂದಾಗಿ ಲಂಬಾಣಿಗರಲ್ಲಿ ಹಲವಾರು ಅಂಶಗಳಲ್ಲಿ ಅಂದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ಮತ್ತು ಉದ್ಯೋಗ, ಭಾಷಿಕವಾಗಿ ಹೀಗೆ ಹಲವಾರು ಅಂಶಗಳಲ್ಲಿ ಲಂಬಾಣಿಗರು ಸಾಂಸ್ಕೃತಿಕ ಸ್ಥಿತ್ಯಂತರ ಹೊಂದಿರುವುದನ್ನು ಕಾಣಬಹುದು.

ಸಾಮಾಜಿಕವಾಗಿ ಲಂಬಾಣಿಗರು ಆರಂಭದಲ್ಲಿ ಸಂತೆ, ಪೇಟೆ, ಬೀದಿ ಬೀದಿಗಳಲ್ಲಿ ಕಟ್ಟಿಗೆ, ಕವಳೆ ಹಣ್ಣು, ಬಾರಿಹಣ್ಣು, ಮೊದಲಾದ ಕಾಡುಜನ್ಯೋತ್ಪನಗಳನ್ನು ಹೊತ್ತು ಮಾರಾಟ ಮಾಡುವುದನ್ನು ಬಿಟ್ಟು ಬಹುತೇಕವಾಗಿ ಹೊಲ ಗದ್ದೆಗಳಲ್ಲಿ, ಕೃಷಿ ಕೂಲಿಯನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅಲ್ಲದೆ ಭೂಮಿಯನ್ನು ಕೊಂಡು ಅಥವಾ ಗೇಣಿ ತೆಗೆದುಕೊಂಡು ವ್ಯವಸಾಯ ವೃತ್ತಿಯನ್ನು ಕೈಗೊಳ್ಳುತ್ತಿದ್ದಾರೆ. ಆದರೆ ಬಹುತೇಕ ಭೂಮಿಗಳು ಹೊರಹೊಲಗಳಾಗಿದ್ದು ಮಳೆ ಬಂದರೆ ಬೆಳೆ ಎನ್ನುವಂತಹ ಸ್ಥಿತಿಯಲ್ಲಿರುವುದರಿಂದ ಹೊಟ್ಟೆಪಾಡಿಗಾಗಿ ವಲಸೆ ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಇವರ ಸಮಾಜದಲ್ಲಿ ಇಂದಿಗೂ ಪಿತೃಪ್ರಾಧನ ಕುಟುಂಬ ವ್ಯವಸ್ಥೆಯು ಕಂಡುಬರುತ್ತಿದ್ದು, ಶಿಕ್ಷಣದ ಪ್ರಭಾವದಿಂದಾಗಿ ಕೆಲವೊಂದು ಮಹತ್ವದ ನಿರ್ಧಾರಗಳನ್ನು ಸ್ತ್ರೀಯರು ತೆಗೆದುಕೊಳ್ಳುತ್ತಿದ್ದಾರೆ. ಆಧುನಿಕ ಪ್ರಭಾವದಿಂದ ಸ್ತ್ರೀಯರು ಸಹ ಕೌಟುಂಬಿಕ ವ್ಯವಸ್ಥೆಯಲ್ಲಿ ಪುರುಷನಂತೆ ಸಮಾನವಾದ ಸ್ಥಾನಮಾನವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೂ ಅನಕ್ಷರತೆ ಇರುವ ಕುಗ್ರಾಮದಂತಹ ತಾಂಡಗಳಲ್ಲಿ ಹಿಂದಿನ ವ್ಯವಸ್ಥೆಗಳು ಇಂದಿಗೂ ಮುಂದುವರಿದುಕೊಂಡು ಬರುತ್ತಿರುವುದನ್ನು ನೋಡಬಹುದು.

---

೨೬. ಡಾ. ಹರಿಲಾಲ್ ಪವಾರ್, ಡಾ. ಪಂಡಿತ, ಕೆ. ರಾಠೋಡ, ಲಂಬಾಣಿಗಳಲ್ಲಿ ಹೋಳಿ ಹಬ್ಬ, ಪು.೧೨-೧೩
೨೭. ಡಾ. ಡಿ.ಬಿ. ನಾಯಕ್, ಲಂಬಾಣಿ ಸಂಸ್ಕೃತಿ, ಪು. ೧೦೯-೧೧೦

ಇವರಲ್ಲಿ ಕೂಡಾವಳಿ ಪದ್ಧತಿಯು ಆಧುನಿಕ ಅಥವಾ ನಗರೀಕರಣದ ಪ್ರಭಾವದಿಂದಾಗಿ ಕಡಿಮೆಯಾಗುತ್ತಿರುವುದನ್ನು ಕಾಣಬಹುದು. ಏಕೆಂದರೆ ಅತ್ತಿಗೆ ತಾಯಿ ಸಮಾನ ಎನ್ನುವ ಮನೋಭಾವವು ಅದರಲ್ಲಿ ಮೂಡುತ್ತಿದೆ. ಬಹುಪತ್ನಿತ್ವ ಪದ್ಧತಿ ಕಡಿಮೆಯಾಗುತ್ತಿರುವುದನ್ನು ಕಾಣಬಹುದು. ಅಲ್ಲದೆ ವಿಧವಾ ಪುನರ್ ವಿವಾಹವೂ ಇವರಲ್ಲಿ ಕಾಣಬಹುದು. ಹಾಗೆ ದೆವ್ವ ಮತ್ತು ಭೂತಗಳ ಮೊದಲಾದ ಮೂಢನಂಬಿಕೆ, ಕೆಲವೊಂದು ಸಂಪ್ರದಾಯಗಳನ್ನು ಕೈಬಿಡುತ್ತಿದ್ದಾರೆ. ಹೀಗೆ ನಗರೀಕರಣ ಮತ್ತು ಅಕ್ಷರತೆಯ ಕಾರಣದಿಂದ ಇಂದು ಲಂಬಾಣಿಗರ ಸಾಮಾಜಿಕ ಜೀವನದಲ್ಲಿ ಬದಲಾವಣೆಗಳನ್ನು ಕಾಣಬಹುದಾಗಿದೆ.

ದೃಢಕಾಯದವರಾದ ಲಂಬಾಣಿಗರು ಇಂದಿಗೂ ಎಲ್ಲ ಸಮುದಾಯಗಳಿಗಿಂತ ಹೆಚ್ಚು ಶ್ರಮ ಜೀವಿಗಳಾಗಿದ್ದಾರೆ. ಇವರ ಆರ್ಥಿಕ ಸ್ಥಿತಿ ಹಿಂದಿಗಿಂತಲೂ ಈಗ ಸ್ವಲ್ಪ ಸುಧಾರಿಸಿರುವುದನ್ನು ಕಾಣಬಹುದಾಗಿದೆ. ತಮ್ಮ ಮೂಲಭೂತ ಕಸುಬುಗಳನ್ನು ಬಿಟ್ಟು ವ್ಯವಸಾಯಸ್ಥರೂ ಆಗಿದ್ದಾರೆ. ಅಲ್ಲದೆ ಹಣದ ಸಂಪಾದನೆಗಾಗಿ ದೂರ ದೂರದ ಪ್ರದೇಶಗಳಿಗೆ ಹೋಗಿ ತಿಂಗಳುಗಟ್ಟಲೆ ದುಡಿದು ಹಣವನ್ನು ಗಳಿಸಿಕೊಂಡು ಬರುತ್ತಿದ್ದು, ಅಂತಹ ಹಣವನ್ನು ಕೆಲವರು ಕುಡಿದು ದುಂದುವೆಚ್ಚ ಮಾಡಿ ಕಳೆದರೆ, ಇನ್ನು ಕೆಲವರು ತಮ್ಮ ಮನೆ, ಮಕ್ಕಳ ವಿದ್ಯಾಭ್ಯಾಸ ಹಾಗೂ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಬಳಸಿಕೊಳ್ಳುತ್ತಿರುವುದನ್ನು ಕಾಣಬಹುದು. ಅಲ್ಲದೆ ಆಧುನೀಕರಣದ ಪರಿಣಾಮದಿಂದಾಗಿ ಅಲ್ಪಮಟ್ಟಿಗೆ ಲಂಬಾಣಿಗರು ತಾಂಡಗಳನ್ನು ತೊರೆದು ಊರು, ಗ್ರಾಮ, ಪಟ್ಟಣ ಪ್ರದೇಶದೊಳಗೆ ಬಂದು ಜೀವಿಸಿ, ತಮ್ಮ ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವನ್ನು ಕಾಣಬಹುದು. ಇದರಿಂದಾಗಿ ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳು ಸುಧಾರಿಸಿದಂತಾಗಿದೆ. ಅಲ್ಲದೆ ಪಾಲಕರಲ್ಲಿ ಶಿಕ್ಷಣದ ಮಹತ್ವ ಹಾಗೂ ಸರ್ಕಾರದ ಹೊಸ ಹೊಸ ಯೋಜನೆಗಳಿಂದಾಗಿ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವ ನಿಟ್ಟಿನಲ್ಲಿ ಬಹುತೇಕ ಪಾಲಕರು ಯೋಚನೆಯಲ್ಲಿ ತೊಡಗಿದ್ದಾರೆ.

ಆಧುನೀಕರಣದ ಪ್ರಭಾವದಿಂದಾಗಿ ತಾಂಡಗಳ ಸ್ವರೂಪ ಮೊದಲಿನಂತೆ ಈಗ ಇಲ್ಲ. ಅಂದರೆ ಗುಡಿಸಲು ಹಾಗೂ ದೀಪದಲ್ಲಿಯೇ ಬದುಕುವಂತಹ ಸ್ಥಿತಿ ಇಲ್ಲವಾಗಿ ಹೆಂಚಿನ ಮನೆ, ಸಿಮೆಂಟಿನ ಮನೆ, ವಿದ್ಯುತ್ ಗಳಿಂದಾಗಿ ತಾಂಡದ ಸಾಮಾಜಿಕ ಪರಿಸರ ಸುಧಾರಿಸುವಂತಾಗಿದೆ. ಹಾಗೆ ಸ್ವಚ್ಛತೆಯ ಬಗ್ಗೆ ತಿಳುವಳಿಕೆ ಉಂಟಾಗಿದೆ. ಸರ್ಕಾರದ ಕೆಲವೊಂದು ಯೋಜನೆಗಳಿಂದಾಗಿ ಮನೆಯ, ಕುಡಿಯುವ ನೀರಿನ, ವಿದ್ಯುತ್ತಿನ ಸೌಲಭ್ಯಗಳಿಂದ ತಾಂಡಗಳಲ್ಲಿ ವಸತಿಗಳ ಅಚ್ಚುಕಟ್ಟನ್ನು ಕಾಣಬಹುದಾಗಿದೆ.

ಆಧುನಿಕರಣದ ಪರಿಣಾಮದಿಂದಾಗಿ ಲಂಬಾಣಿಗರಲ್ಲಿ ಆಹಾರ ಪದ್ಧತಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಬದಲಾವಣೆಯಾಗದಿದ್ದರೂ ಅಲ್ಪಮಟ್ಟಿಗೆ ಬದಲಾವಣೆಗಳನ್ನು ಕಾಣಬಹುದಾಗಿದೆ. ನಗರ ಪಟ್ಟಣಗಳಲ್ಲಿ ವಾಸಿಸುವ ಲಂಬಾಣಿ ಉದ್ಯೋಗಸ್ಥರಲ್ಲಿ ಬೆಳಗಿನ ಉಪಹಾರದಲ್ಲಿ ಇಡ್ಲಿ, ದೋಸೆ, ಮೊದಲಾದ ಹಾಗೂ ಕೆಲವೊಂದು ಸಿಹಿ ಪದಾರ್ಥಗಳನ್ನು ಹೊಸದಾಗಿ ಅಳವಡಿಸಿಕೊಳ್ಳುತ್ತಿರುವುದನ್ನು ಕಾಣಬಹುದು. ಶಿಕ್ಷಣವನ್ನು ಪಡೆದು ಹಾಗೂ ಉದ್ಯೋಗಸ್ಥ ಲಂಬಾಣಿ ಕುಟುಂಬಗಳಲ್ಲಿ ಊಟ ತಿಂಡಿಯ ವಿಚಾರದಲ್ಲಿ ಬದಲಾವಣೆಯನ್ನು ಕಾಣಬಹುದು.

ಲಂಬಾಣಿಗರಲ್ಲಿ ಉಡುಗೆ-ತೊಡುಗೆಗಳಲ್ಲಿ ಆಧುನೀಕರಣದ ಪ್ರಭಾವದಿಂದಾಗಿ ಸಾಕಷ್ಟು ಬದಲಾವಣೆಗಳನ್ನು ಕಂಡುಬರುತ್ತಿದೆ. ಲಂಬಾಣಿಗರು ಪುರಾತನದಿಂದಲೂ ಉಡುಗೆಯಾಗಿ ಧರಿಸುತ್ತಿದ್ದ ಲಂಗ, ಕುಪ್ಪಸ, ಹಾಗೂ ಮೇಲ್ಮುಸುಕು ಇವೆಲ್ಲವುಗಳ ಪ್ರಮಾಣ ಈಗ ಕಡಿಮೆಯಾಗಿ ಸೀರೆ, ಕುಪ್ಪಸ, ಚೂಡಿದಾರ, ಮೊದಲಾದ ಉಡುಗೆಗಳು ಕಾಣಬರುತ್ತಿದೆ. ಅಲ್ಲದೆ ಅವರ ಆಭರಣಗಳಲ್ಲಿಯೂ ಬದಲಾವಣೆ ಕಂಡುಬರುತ್ತಿದ್ದು, ಅವರ ಮಂಗಲಸೂತ್ರಗಳಾದ ಘುಗರಿ, ತೋಳುಬಂದಿ, ಕಡಗ, ಹಳೆಯ ಕಾಲದ ನಾಣ್ಯದ ಸರ ಮೊದಲಾದ ಆಭರಣಗಳನ್ನು ಬಿಟ್ಟು ತಾಳಿ, ತೆಳುವಾದ ಚೈನ, ಆಧುನಿಕ ಅಭರಣಗಳ ಸರಗಳನ್ನು ಹೆಚ್ಚು ಹೆಚ್ಚಾಗಿ ಧರಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೆ ಪುರುಷರ ವೇಷಭೂಷಣದಲ್ಲೂ ಆಧುನೀಕರಣದ ಪ್ರಭಾವ ಆಗಿದೆ.

ಹಾಗೆಯೇ ಶೈಕ್ಷಣಿಕ ವಿಚಾರಕ್ಕೆ ಬಂದರೆ ಒಂದು ಕಾಲಕ್ಕೆ ಶಿಕ್ಷಣದಿಂದ ದೂರ ಇದ್ದ ಲಂಬಾಣಿ ಜನಾಂಗ "ಅಪರಾಧಿ ಬುಡಕಟ್ಟು"ನಿಂದ ಹೊರಬಂದಾಗ ಸರ್ಕಾರ ಶಿಕ್ಷಣಕ್ಕೆ ಅವಕಾಶವನ್ನು ಕಲ್ಪಿಸಿತು. ಆರಂಭದಲ್ಲಿ ಕಡಿಮೆಯಾದರೂ ಇತ್ತೀಚಿನ ದಿನಗಳಲ್ಲಿ ಆಧುನಿಕರಣದ ಪ್ರಭಾವ ಹಾಗೂ ಸರ್ಕಾರದ ನಿಯಮಗಳಿಂದಾಗಿ ಪ್ರತಿಯೊಂದು ತಾಂಡಗಳಲ್ಲಿ ಕನ್ನಡ ಮಾಧ್ಯಮ ಸರ್ಕಾರಿ ಶಾಲೆಗಳನ್ನು ಪ್ರಾರಂಭ ಮಾಡಿದುದರಿಂದಾಗಿ ಶಿಕ್ಷಣವನ್ನು ಪಡೆದು ಮೌಢ್ಯನಂಬಿಕೆಗಳನ್ನು ತೊಡೆದು ಹಾಕಿ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಾನಮಾನಗಳನ್ನು ಪಡೆಯುವಂತಾಗಿ, ಸಮಾಜದಲ್ಲಿ ಗೌರವವನ್ನು ಹಾಗೂ ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಕಾಪಾಡಿಕೊಳ್ಳುವಂತ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಇಂದು ಶಿಕ್ಷಣದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಉನ್ನತ ಸ್ಥಾನಕ್ಕೆ ಏರಿದ ಹಾಗೂ ಹೆಸರು ಮತ್ತು ಗೌರವಕ್ಕೆ ಪಾತ್ರರಾದವರೂ ಇದ್ದಾರೆ.

ಆಧುನಿಕರಣ ಹಾಗೂ ನಗರೀಕರಣ ಪ್ರಭಾವದಿಂದಾಗಿ ಉದ್ಯೋಗದ ವಿಚಾರದಲ್ಲಿ ಲಂಬಾಣಿಗರಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದು. ಅನಕ್ಷರಸ್ಥ ಲಂಬಾಣಿ ಜನರಿಗೆ ದುಡಿಯಲು ಹಲವಾರು ಕಾರ್ಖಾನೆ, ಎಸ್ಟೇಟು, ಮೊದಲಾದ ಕಡೆಗಳಲ್ಲಿ ಉದ್ಯೋಗವನ್ನು ಕಂಡುಕೊಳ್ಳಬಹುದಾಗಿದೆ. ಲಂಬಾಣಿ ಸ್ತ್ರೀಯರಲ್ಲಿನ ಕಸೂತಿ ಕಲೆ ಪ್ರೋತ್ಸಾಹಿಸಿ ದೇಶ ವಿದೇಶಗಳಿಗೆ ಹರಡುವಂತೆ ಸೂಕ್ತ ತರಬೇತಿಗಳನ್ನು ನೀಡುತ್ತಿರುವುದರ ಪರಿಣಾಮವಾಗಿ ಲಂಬಾಣಿ ಮಹಿಳೆಯರಿಗೆ ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆಯನ್ನು ಕಲ್ಪಿಸಿ ಕೊಟ್ಟಂತಾಗಿದೆ. ಹಾಗೆ ವಿದ್ಯಾವಂತ ಜನರು ಸರ್ಕಾರದ ನಿಯಮದ ಅಡಿಯಲ್ಲಿ ಬರುವ ಪರಿಶಿಷ್ಟ ಜಾತಿ ಮೀಸಲಾತಿಯಲ್ಲಿ ಹಲವಾರು ಉದ್ಯೋಗಗಳಲ್ಲಿ ತೊಡಗಿರುವುದನ್ನು ಕಂಡುಬರುತ್ತದೆ. ಈಗ ಹೊಸ ಉದ್ಯೋಗಗಳನ್ನು ಹರಸುತ್ತಾ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವ ತವಕದಲ್ಲಿ ಲಂಬಾಣಿಗರು ಇದ್ದಾರೆ.

೨.೩ ಶಿಕ್ಷಣದ ಚಾರಿತ್ರಿಕ ಹಿನ್ನೆಲೆ

ಮನುಷ್ಯ ಪ್ರಾಣಿಯನ್ನು ಉಳಿದ ಇನ್ನಿತರ ಪ್ರಾಣಿ ಸಂಕುಲದಿಂದ ಪ್ರತ್ಯೇಕಿಸಿ ನೋಡಲು ನಮಗಿರುವ ಒಂದು ಬಲವಾದ ಕಾರಣವೆಂದರೆ ಅವನಲ್ಲಿರುವ ಯೋಚನಾ ಶಕ್ತಿ. ಈ ವಿಶಿಷ್ಟ ಶಕ್ತಿಯ ಕ್ರಮೇಣ ಆಧುನಿಕ ನಾಗರಿಕತೆಯ ಬೆಳವಣಿಗೆ ಮೂಲಾಧಾರವಾಯಿತು. ಆದ್ದರಿಂದಲೇ ಮಾನವನ ವಿಕಾಸವೆಂದರೆ ಆತನ ಬುದ್ಧಿಶಕ್ತಿಯನ್ನು ಮತ್ತಷ್ಟು ಮೊನಚಾಗಿಸುವ ಪ್ರಯತ್ನ. ಈ ಕಾರಣಕ್ಕಾಗಿಯೇ ಮಾನವನ ಬೌದ್ಧಿಕ ವಿಕಾಸಕ್ಕೆ ಕನಿಷ್ಟ ಶಿಕ್ಷಣ ಒಂದು ಮೂಲ ಅಗತ್ಯವೆಂದು ಗುರಿತಿಸಲಾಯಿತು. ಶಿಕ್ಷಣ ಮಾನವನಿಗೆ ಗಾಳಿ, ನೀರು, ಆಹಾರ, ಮತ್ತು ಬಟ್ಟೆಯಷ್ಟೆ ಅಗತ್ಯವಾದ ಒಂದು ಸಹಜ ಬೇಡಿಕೆ. ಶಿಕ್ಷಣವನ್ನು ಹೊರತುಪಡಿಸಿ ಮಾನವನ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಿಲ್ಲ. ಶಿಕ್ಷಣ ಪ್ರತಿಯೊಬ್ಬ ನಾಗರೀಕನಿಗೂ ಅತ್ಯಾವಶ್ಯಕ ಹಾಗಾಗಿ ಅದು ಸಾರ್ವತ್ರಿಕ.

ಶಿಕ್ಷಣವನ್ನು ಸಾರ್ವತ್ರೀಕರಣಗೊಳಪಡಬೇಕೆಂಬ ಕೂಗೂ ಮಾನವನ ಇತಿಹಾಸದಷ್ಟೆ ಹಳೆಯದು. ಶಿಕ್ಷಣ ಮಾನವನ ವಿಕಾಸದ ಜೊತೆ ಜೊತೆಗೆ ಬೆಳೆದು ಬಂದ ಜೀವನದ ಒಂದು ಅವಶ್ಯಕತೆ. ಆದ್ದರಿಂದ ಶಿಕ್ಷಣ ಮಾನವನ ಬದುಕಿನ ಒಂದು ಅವಿಭಾಜ್ಯ ಅಂಗ. ಹೇಳಬೇಕೆಂದರೆ ಶಿಕ್ಷಣ ಮಾನವನ ಜನ್ಮಸಿದ್ಧ ಹಕ್ಕು. ಭಾರತದಲ್ಲಿ ಶಿಕ್ಷಣ ಸಾರ್ವತ್ರೀಕರಣ ಬೆಳೆದು ಬಂದ ರೀತಿ ನಿಯಮವನ್ನು ಎರಡು ಭಾಗದಲ್ಲಿ ವಿವರಿಸಲಾಗಿದೆ. ಮೊದಲಿನೆಯದು ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ. ಎರಡನೆಯದು ಸ್ವತಂತ್ರ ನಂತರದ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದ ಬೆಳವಣಿಗೆ.

ಬ್ರಿಟಿಷ್ ಭಾರತದಲ್ಲಿ ಕಡ್ಡಾಯ ಶಿಕ್ಷಣ

ಬ್ರಿಟಿಷ್ ಆಳ್ವಿಕೆಯ ಇತಿಹಾಸವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಕಂಡುಬರುವ ಒಂದು ಪ್ರಮುಖ ಅಂಶವೆಂದರೆ ಕ್ರಿ.ಶ. ೧೬೦೦ರಿಂದ ೧೮೦೦ರವರೆಗೆ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಎಲ್ಲ ಜನತೆಗೆ ಶಿಕ್ಷಣವನ್ನು ನೀಡುವ ವಿಷಯದಲ್ಲಿ ಕಿಂಚಿತ್ತೂ ಆಧ್ಯತೆಯನ್ನು ನೀಡದಿರುವುದು ಸ್ಪಷ್ಟವಾಗಿ ಕಾಣುತ್ತದೆ. ಮೊದಲ ಬಾರಿಗೆ ೧೮೧೩ರ ಚಾರ್ಟರ್ ನೀಡುವ ಜವಾಬ್ದಾರಿಯನ್ನು ಗುರುತಿಸಿಕೊಂಡ ಬ್ರಿಟಿಷ್ ಸರ್ಕಾರ ಶಿಕ್ಷಣಕ್ಕಾಗಿ ವಾರ್ಷಿಕ ಒಂದು ಲಕ್ಷರೂಪಾಯಿಗಳನ್ನು ವ್ಯಯ ಮಾಡುವಂತೆ ಈಸ್ಟ್ ಇಂಡಿಯಾ ಕಂಪನಿಗೆ ಸೂಚಿಸಿತು. ಹೇಳಬೇಕೆಂದರೆ ಶಿಕ್ಷಣದಲ್ಲಿ ಹೊಸ ಅಧ್ಯಾಯ ಕೆಲಸ ಪ್ರಾರಂಭವಾಗಿದ್ದು ಈ ಅವಧಿಯಿಂದಲೇ. ಬ್ರಿಟಿಷ್ ಭಾರತದಲ್ಲಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟ್ಟಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

೧೮೧೭ರಲ್ಲಿ ಟ್ರಾವನ್ ಕೋರ್ ಪ್ರಾಂತ್ಯದ (ಈಗಿನ ಕೇರಳ ರಾಜ್ಯ) ಮಹಾರಾಣಿಯು ತನ್ನ ಎಲ್ಲ ಪ್ರಜೆಗಳಿಗೆ ಶಿಕ್ಷಣ ನೀಡುವ ಮಹತ್ವದ ಹೇಳಿಕೆಯನ್ನು ಮೊದಲ ಬಾರಿಗೆ ದೇಶಿಯಾಗಿ ಹೊರಡಿಸಿದರು. ಪ್ರಜೆಗಳು ಆಡಳಿತ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾದರೆ ಶಿಕ್ಷಣ ಅಗತ್ಯವೆಂದು ಅವರು ಭಾವಿಸಿದ್ದರು.

ಮೆಕಾಲೆ ವರದಿ ೧೮೩೫

೧೮೩೫ರಲ್ಲಿ ಭಾರತೀಯರಿಗೆ ಯಾವ ರೀತಿಯ ಶಿಕ್ಷಣಬೇಕೆಂಬ ಚರ್ಚೆಯು ವ್ಯಾಪಕವಾಗಿ ನಡೆಯುತ್ತಿದ್ದ ಈ ಕಾಲದಲ್ಲಿ ಮೆಕಾಲೆಯವರು ತಮ್ಮ ಪ್ರಸಿದ್ಧ ನಡವಳಿಕೆಯಲ್ಲಿ ನಿರ್ಣಾಯಕ ತೀರ್ಮಾನ ವನ್ನು ತೆಗೆದುಕೊಂಡರು. ಅವರು ಭಾರತದ ಜನತೆಗೆ ಆಂಗ್ಲ ಶಿಕ್ಷಣವನ್ನು ನೀಡುವ ಕ್ರಮವನ್ನು ಸಮರ್ಥಿಸಿಕೊಳ್ಳುತ್ತ ಹೀಗೆ ಹೇಳುವರು. "ಭಾರತ ಮತ್ತು ಅರೇಬಿಯಾದ ಒಟ್ಟು ಸಾಹಿತ್ಯ ಯೂರೋಪಿನ ಗ್ರಂಥಾಲಯದಲ್ಲಿರುವ ಯಾವುದಾದರೊಂದು ಕಪಾಟಿನಲ್ಲಿರುವ ಸಾಹಿತ್ಯಕ್ಕೆ ಸಮಾನ".

"ಶಿಕ್ಷಣ ನೀಡುವ ನಮ್ಮ ಮುಖ್ಯ ಉದ್ದೇಶವೆಂದರೆ ನಮ್ಮ ಮತ್ತು ನಾವು ಆಳುತ್ತಿರುವ ಮಿಲಿಯಾಂತರ ಜನರ ಮಧ್ಯೆ ಭಾಷಾಂತರಿಸಬಹುದಾದ ಅಥವಾ ವ್ಯವಹರಿಸಬಹುದಾದ ಒಂದು ವರ್ಗವನ್ನು ಸೃಷ್ಟಿಸುವುದು. ಈ ವರ್ಗವು ಬಣ್ಣ ಮತ್ತು ರಕ್ತದಲ್ಲಿ ಭಾರತೀಯರಾಗಿದ್ದು, ಅಭಿರುಚಿ, ಅಭಿಪ್ರಾಯ, ನೈತಿಕತೆ ಮತ್ತು ಬುದ್ಧಿಶಕ್ತಿಯಲ್ಲಿ ಆಂಗ್ಲರಾಗಿರಬೇಕು".

ವುಡ್ಸ್ ವರದಿ ೧೮೫೪

೧೮೫೪ರಲ್ಲಿ ಬ್ರಿಟಿಷ್ ಸರ್ಕಾರದಿಂದ ನೇಮಕಗೊಂಡ ವುಡ್ಸ್ ಆಯೋಗವು ಮೆಕಾಲೆಯವರ ವಿಚಾರ ಗಳನ್ನು ಪುಷ್ಟೀಕರಿಸುವುದರ ಮುಖಾಂತರ ಭಾರತದಲ್ಲಿ ಆಧುನಿಕ ಶಿಕ್ಷಣಕ್ಕೆ ಚಾಲನೆ ನೀಡಿತು.

೧೮೭೦ರಲ್ಲಿ ಬ್ರಿಟನ್ ದೇಶವು ಕಡ್ಡಾಯ ಶಿಕ್ಷಣ ಮಸೂದೆಯನ್ನು ಜಾರಿಗೊಳಿಸಿತು.

೧೮೮೨ರಲ್ಲಿ ದಾದಾಬಾಯಿ ನವರೋಜಿ ಮತ್ತು ಜ್ಯೋತಿಬಾಫುಲೆಯವರು ಭಾರತೀಯ ಶಿಕ್ಷಣ ಆಯೋಗದ (ಹಂಟರ್ ಆಯೋಗ)ಮುಂದೆ ಹಾಜರಾಗಿ ಕನಿಷ್ಠ ನಾಲ್ಕುವರ್ಷದ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬೇಡಿಕೆಯನ್ನು ಮುಂದಿಟ್ಟರು.

೧೮೯೩ರಲ್ಲಿ ಬರೋಡ ಪ್ರಾಂತ್ಯದ ಅಂದಿನ ಮಹಾರಾಜ ಗಾಯಕವಾಡರವರು ಪ್ರಥಮ ಬಾರಿಗೆ ಕಡ್ಡಾಯ ಶಿಕ್ಷಣವನ್ನು ತಮ್ಮ ಪ್ರಾಂತ್ಯದ ಅಮರಾಯಿಲಿ ವಿಭಾಗದಲ್ಲಿ ಜಾರಿಗೊಳಿಸಿದರು. ಫಲಿತಾಂಶದಿಂದ ಸ್ಫೂರ್ತಿಗೊಂಡ ಅವರು ೧೯೦೬ರಲ್ಲಿ ಕಡ್ಡಾಯ ಶಿಕ್ಷಣವನ್ನು ಪೂರ್ಣ ಪ್ರಾಂತ್ಯಕ್ಕೆ ವಿಸ್ತರಿಸಿದರು.

೧೯೧೧ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಇಂಪೀರಿಯಲ್ ಶಾಸನ ಸಭೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯಿಸಿ ಗೊತ್ತುವಳಿಯೊಂದನ್ನು ಮಂಡಿಸಿದರು.

೧೯೧೭ರಲ್ಲಿ ವಿಠಲ್‌ಬಾಯಿ ಪಟೇಲ್‌ರವರ ಪ್ರಯತ್ನದ ಫಲವಾಗಿ ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿ ಮೊದಲನೆಯ ಮಸೂದೆಯನ್ನು ಬಾಂಬೆ ಶಾಸನ ಪರಿಷತ್ತು ಅಂಗೀಕರಿಸಿತ್ತು.

೧೯೧೮-೧೯೩೧ರಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಕೂಗೂ ಬಲವಾಗಿ ಬೆಳೆಯುವುದರ ಜೊತೆಗೆ ಜೊತೆಗೆ ರಾಷ್ಟ್ರದ ಬಹುತೇಕ ಪ್ರಾಂತ್ಯಗಳಲ್ಲಿ ಕಡ್ಡಾಯ ಶಿಕ್ಷಣ ಮಸೂದೆಯನ್ನು ಹೊಸದಾಗಿ ಆಯ್ಕೆಗೊಂಡ ಆಯಾ ಸರ್ಕಾರಗಳು ಜಾರಿಗೊಳಿಸಿದವು.

೧೯೧೯ರಲ್ಲಿ ಭಾರತ ಸರ್ಕಾರದ ೧೯೧೯ರ ಕಾಯ್ದೆಯಂತೆ ಪ್ರಾಥಮಿಕ ಶಿಕ್ಷಣವನ್ನು ಬ್ರಿಟಿಷ್‌ರ ಆಡಳಿತದಿಂದ ಭಾರತೀಯರನ್ನುಳಗೊಂಡ ಮಂತ್ರಾಲಯದ ಆಡಳಿತ ವ್ಯಾಪ್ತಿಗೆ ವರ್ಗಾಯಿಸಲಾಯಿತು.

೧೯೩೭ರಲ್ಲಿ ಮಹಾತ್ಮ ಗಾಂಧೀಜಿಯವರು ತಮ್ಮ ಮೂಲ ಶಿಕ್ಷಣದ ಯೋಜನೆಯನ್ನು ರಾಷ್ಟ್ರದ ಮುಂದಿಟ್ಟರು. ಗುಜರಾತಿನ 'ವಾರ್ಧಾ' ಎಂಬ ಸ್ಥಳದಲ್ಲಿ ಕೂಲಂಕಷವಾಗಿ ಚರ್ಚಿಸಿ ರೂಪಿಸಲಾದ ಈ ಯೋಜನೆಯನ್ನು 'ವಾರ್ಧಾಯೋಜನೆ'ಯಂತಲೂ ಕರೆಯುತ್ತಾರೆ.

೧೯೪೪ರಲ್ಲಿ ಧೀರ್ಘ ಮತ್ತು ನಿರಂತರ ಹೋರಾಟದ ಫಲವಾಗಿ ಬ್ರಿಟಿಷ್ ಸರ್ಕಾರವು ಅಂತಿಮವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ತಾತ್ವಿಕ ಒಪ್ಪಿಗೆಯನ್ನು ನೀಡಿತು. ಎರಡನೆಯ ಜಾಗತಿಕ ಯುದ್ಧದ ನಂತರ ರೂಪಿಸಲಾದ ಶೈಕ್ಷಣಿಕ ಅಭಿವೃದ್ಧಿ ಯೋಜನೆಯಲ್ಲಿ (ಸರ್‌ಜಾನ್ ಸಾರ್ಜೆಂಟ್ ಯೋಜನೆ) ಈ ವಿಚಾರವನ್ನು ಪ್ರಸ್ತಾಪಿಸಿ ಮುಂದಿನ ೪೦ ವರ್ಷಗಳ ಅವಧಿಯಲ್ಲಿ ಅಂದರೆ, ೧೯೮೪ರ ವೇಳೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬೇಡಿಕೆಯನ್ನು ಈಡೇರಿಸುವುದಾಗಿ ತಿಳಿಸಿತು.

ಆದರೆ ಸುಧೀರ್ಘ ಮತ್ತು ನಿರಂತರ ಹೋರಾಟದ ಫಲವಾಗಿ ಈ ಬೇಡಿಕೆಯನ್ನು ಪೂರ್ಣಗೊಳಿಸಲು ೪೦ ವರ್ಷಗಳ ಅವಧಿಯ ಪ್ರಸ್ತಾವನೆಯನ್ನು ರಾಷ್ಟ್ರೀಯವಾದಿಗಳು ತಿರಸ್ಕರಿಸಿದರು. ನಂತರ ರಚನೆಯಾದ ಬಿ.ಜಿ. ಖೇರ್ ಸಮಿತಿಯು ತನ್ನ ವರದಿಯಲ್ಲಿ ಮುಂದಿನ ಹದಿನಾರು ವರ್ಷಗಳ ಒಳಗಾಗಿ ಅಂದರೆ ೧೯೬೦ರ ವೇಳೆಗೆ ಈ ಕೆಲಸವು ಪೂರ್ಣಗೊಳ್ಳಬೇಕೆಂಬ ಪ್ರಸ್ತಾವನೆಯನ್ನು ಮುಂದಿಟ್ಟಿತು. ಸ್ವಾತಂತ್ರ್ಯ ನಂತರ ಸಂವಿಧಾನದ ರಚನಾ ಸಂದರ್ಭದಲ್ಲಿ ಕಾಲಮಿತಿಯನ್ನು ನಿರ್ಧರಿಸುವಾಗ ಈ ಶಿಫಾರಸ್ಸನ್ನು ಮುಖ್ಯವಾಗಿ ಪರಿಗಣಿಸಲಾಯಿತು.

ಈ ಕಾಲಘಟ್ಟದಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಬೇಡಿಕೆಯು ಸ್ವಾತಂತ್ರ್ಯ ಚಳುವಳಿಯ ಒಂದು ಪ್ರಮುಖ ಬೇಡಿಕೆಯಾಗಿ ರೂಪ ಗೊಂಡಿತೆಂಬುದು ಭಾರತೀಯ ಸಮಾಜದಲ್ಲಿದ್ದ ಅಸಮಾನತೆ ಮತ್ತು ಅಸ್ಪೃಶ್ಯತೆ ಅದರಲ್ಲೂ ವಿಶೇಷವಾಗಿ ಬಹುಸಂಖ್ಯಾತ ಜನರನ್ನು ಶಿಕ್ಷಣದಿಂದ ಹೊರಗಿಡುವ ಹುನ್ನಾರವು ಒಂದು ವರ್ಗ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಒಡೆತನವನ್ನು ಸ್ಥಾಪಿಸುವ ಉದ್ದೇಶ ಹೊಂದಿತ್ತೆಂಬುದನ್ನು ಮನಗಾಣಬೇಕು.

ನಂತರ ಇದನ್ನೇ ಮುಂದುವರೆಸಿದ ಬ್ರಿಟಿಷ್ ಆಡಳಿತವು ಶಿಕ್ಷಣದ ಮೂಲಕ ತನ್ನ ರಾಜಕೀಯ ಆಳ್ವಿಕೆಯನ್ನು ಗಟ್ಟಿಗೊಳಿಸುವುದರ ಜತೆಗೆ ನಿರಂತರವಾಗಿ ಮುಂದುವರೆಸಿಕೊಂಡು ಹೋಗುವ ಉದ್ದೇಶದಿಂದ ಉಪಯೋಗಿಸಿಕೊಂಡಿತೆಂಬುದನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಕ್ರಮೇಣ ಬಲಿಷ್ಟ ರಾಷ್ಟ್ರೀಯ ನೇತಾರರ ಕಳಕಳಿ ಮತ್ತು ಬಿಗಿ ನಿಲುವಿನ ಪರಿಣಾಮವಾಗಿ ೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಬೇಡಿಕೆಯು ರಾಷ್ಟ್ರ ಮಟ್ಟದಲ್ಲಿ ಸರ್ವಸಮ್ಮತದ ಬೇಡಿಕೆಯಾಗಿ ಹೊರಹೊಮ್ಮಿತ್ತು. ಸ್ವಾತಂತ್ರ್ಯ ಭಾರತದಲ್ಲಿ ಇದೊಂದು ಕಾಲಮಿತಿಯ ಗುರಿಯಾಗ ಬೇಕೆಂಬುದು, ಸ್ವಾತಂತ್ರ ಚಳುವಳಿಯ ಪ್ರಮುಖ ಆಶಯವಾಗಿತೆಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು.

ತ್ಯಾಗ ಬಲಿದಾನಗಳ ಮತ್ತು ಸತತ ಹೋರಾಟದ ಫಲವಾಗಿ ಸಂವಿಧಾನದಲ್ಲಿ ಸೇರ್ಪಡೆಯಾದ ಈ ಗುರಿಯನ್ನು ಈಡೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ.

ಸ್ವಾತಂತ್ರ್ಯ ಚಳುವಳಿಯ ಅಂತಿಮ ಘಟ್ಟದಲ್ಲಿ ಈ ಬೇಡಿಕೆಯನ್ನು ಒಪ್ಪಿದ ಬ್ರಿಟಿಷ್ ಸರಕಾರವು ಈ ಗುರಿಯನ್ನು ಮುಟ್ಟಲು ೪೦ ವರ್ಷಗಳ ಕಾಲಾವಧಿಯನ್ನು ನಿಗಧಿಗೊಳಿಸಿದ್ದು ರಾಷ್ಟ್ರೀಯವಾದಿಗಳಿಗೆ ಒಪ್ಪಿಗೆಯಾಗಲಿಲ್ಲ. ನಂತರ ನೇಮಕವಾದ ಬಿ.ಜಿ. ಖೇರ್ ಸಮಿತಿಯ ಅಂತಿಮವಾಗಿ ಹದಿನಾರು ವರ್ಷಗಳ ಪ್ರೇಮಿಗಳಲ್ಲಿ ಕೊಂಚ ಆಶಾಭಾವನೆಯನ್ನು ಮೂಡಿಸುವುದರ ಮೂಲಕ ಹೋರಾಟದ ಘಟ್ಟ ಕೊನೆಗೊಂಡು ಅನುಷ್ಠಾನದ ಘಟ್ಟಕ್ಕೆ ನಾಂದಿಯಾಯಿತು.

ಸ್ವತಂತ್ರ ಭಾರತದಲ್ಲಿ ಕಡ್ಡಾಯ ಶಿಕ್ಷಣ

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಗುರಿಯ ಜತೆಗೆ ಹತ್ತು ಹಲವು ಆಶಯಗಳನ್ನು ಹೊಂದಿದ್ದ ಸ್ವತಂತ್ರ ಭಾರತವು ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳುವ ಪ್ರಕ್ರಿಯೆಯ ಮೂಲಕ ಸಮಾಜವಾದಿ ಮತ್ತು ಜಾತ್ಯತೀತ ಭಾರತವನ್ನು ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭಿಸಿತು.

ಸಂವಿಧಾನ ರಚನಾ ಸಮಿತಿಯಲ್ಲಿ ಸ್ವತಂತ್ರ ಭಾರತವು ಸಾಧಿಸಬೇಕಾದ ಗುರಿ ಮತ್ತು ಸಾಗಬೇಕಾದ ದಾರಿಯ ಸುದೀರ್ಘವಾದ ಚರ್ಚೆಗಳು ಅಂತಿಮ ಗುರಿಗಳನ್ನು ಸಂಕ್ಷಿಪ್ತವಾಗಿ ಸಂವಿಧಾನದಲ್ಲಿ ಸೇರಿಸುವುದರ ಮೂಲಕ ಭಾರತವು ಸಾರ್ವಭೌಮ, ಸಮಾಜವಾದಿ ಮತ್ತು ಜಾತ್ಯಾತೀತ ಗಣರಾಜ್ಯವಾಗಿ ಹೊರಹೊಮ್ಮ ಬೇಕೆಂಬ ವಿಶಾಲವಾದ ತಳಹದಿಯ ಮೇಲೆ ಸಂವಿಧಾನದ ರಚನೆಯಾಯಿತು. ಸಂವಿಧಾನ ರಚನಾ ಕಾಲದಿಂದ ಇಲ್ಲಿಯವರೆಗೆ ಶಿಕ್ಷಣದ ಸಾರ್ವತ್ರಿಕರಣ ಪ್ರಕ್ರಿಯೆಯು ಬೆಳೆದು ಬಂದ ದಾರಿಯನ್ನು ಇಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

೧೯೪೭-೧೯೪೮ರಲ್ಲಿ ಸಂವಿಧಾನ ರಚನಾ ಸಮಿತಿಯಲ್ಲಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ರಚನೆಯಾಗಿದ್ದ ಉಪಸಮಿತಿಯ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಿತು. ಅದರಂತೆ ಖಂಡ ೨೩ರ ಅನ್ವಯ ಪ್ರತಿಯೊಬ್ಬ ನಾಗರೀಕನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದ್ದು ಇದನ್ನು ನೀಡುವ ಜವಾಬ್ದಾರಿಯು ರಾಜ್ಯದ್ದಾಗಿರುತ್ತದೆ. ಸಂವಿಧಾನ ಜಾರಿಯಾದ ೧೦ ವರ್ಷದ ಒಳಗಾಗಿ ೧೪ ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲಾಗುವುದು.

ಶಿಕ್ಷಣ ಒಂದು ಮೂಲಭೂತ ಹಕ್ಕಾಗಬೇಕೆಂಬ ಮೂಲಭೂತ ಹಕ್ಕುಗಳ ಉಪಸಮಿತಿಯ ಬೇಡಿಕೆ ಯನ್ನು ಸಂವಿಧಾನ ರಚನಾ ಸಲಹಾ ಸಮಿತಿಯು ತಿರಸ್ಕರಿಸಿತು. ನಂತರ ಖಂಡ ೨೩ನ್ನು ನ್ಯಾಯಾಲಯದ ಮೂಲಕ ಜಾರಿಗೊಳಿಸಲಾಗದ ಮೂಲಭೂತ ಹಕ್ಕುಗಳ (ನಂತರ ನಿರ್ದೇಶಕ ತತ್ವಗಳೆಂದು ಕರೆಯಲಾಯಿತು). ಪಟ್ಟಿಗೆ ವರ್ಗೀಕರಿಸಲಾಯಿತು.

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ ಕರಡು ಅನುಚ್ಛೇದ ೩೬ರ (ಸಂವಿಧಾನವು ಅಂತಿಮವಾಗಿ ರೂಪಗೊಂಡ ಸಂದರ್ಭದಲ್ಲಿ ಅನುಚ್ಛೇದ ಸಂಖ್ಯೆ ೩೬ ಕ್ರಮವಾಗಿ ಅನುಚ್ಛೇದ ೪೫ ಆಗಿರುತ್ತದೆ). ಬಗ್ಗೆ ಸಂವಿಧಾನ ರಚನಾ ಸಮಿತಿಯಲ್ಲಿ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಪ್ರಮುಖವಾಗಿ ಎರಡು ತಿದ್ದುಪಡಿಗಳು ಪ್ರಸ್ತಾಪವಾದವು. ಅವುಗಳೆಂದರೆ.

ಮೊದಲನೆಯದಾಗಿ ಅನುಚ್ಛೇದ ೩೬ರಲ್ಲಿ ಪ್ರತಿಯೊಬ್ಬ ನಾಗರೀಕನೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಹೊಂದಿದ್ದಾನೆ ಎಂಬ ಭಾಗವನ್ನು ತೆಗೆದು ಹಾಕಬೇಕೆಂಬುದು.

ಎರಡನೆಯದಾಗಿ ಶಿಕ್ಷಣ ಎಂಬ ಪದಕ್ಕೆ ಬದಲಾಗಿ ಪ್ರಾಥಮಿಕ ಶಿಕ್ಷಣ ಎಂಬ ಪದವನ್ನು ಸೇರಿಸುವುದು.

ಈ ಎರಡು ತಿದ್ದುಪಡಿಗಳ ಬಗ್ಗೆ ನಡೆದ ಚರ್ಚೆಯ ಕೊನೆಯಲ್ಲಿ ಉತ್ತರಿಸಿ ಮಾತನಾಡಿದ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾದ ಡಾ. ಅಂಬೇಡ್ಕರ್ ಅವರು ಈ ಕೆಳಕಂಡಂತೆ ಉತ್ತರಿಸಿದರು.

ನನ್ನ ಸ್ನೇಹಿತರಾದ ಮಿತ್ರಾರವರು ಪ್ರಸ್ತಾಪಿಸಿದ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ. ಅಂದರೆ ಈ ಪರಿಚ್ಛೇದದಲ್ಲಿ ಪ್ರತಿಯೊಬ್ಬ ನಾಗರೀಕನು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಹೊಂದಿದ್ದಾನೆಂಬುದನ್ನು ತೆಗೆದುಹಾಕಲು ಸಮ್ಮತಿಸುತ್ತೇನೆ. ಆದರೆ ಸ್ನೇಹಿತ ನಜರುದ್ದೀನ್ ಅವರ ಪ್ರಸ್ತಾವನೆಯನ್ನು ಅಂಗೀಕರಿಸಲು ತಯಾರಿಲ್ಲ. ಅನುಚ್ಛೇದ ೩೬ರ ಉಳಿದ ಭಾಗದ ಉದ್ದೇಶ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾಗಿದೆಯೆಂದು ಅವರು ಭಾವಿಸಿದಂತಿದೆ. ಆದರೆ ಅದು ಹಾಗಲ್ಲ. ಮೊದಲನೆಯ ತಿದ್ದುಪಡಿ ನಂತರ ೩೬ನೆಯ ಪರಿಚ್ಛೇದದ ಉದ್ದೇಶವೆಂದರೆ ಪ್ರತಿಯೊಂದು ಮಗುವು ೧೪ ವರ್ಷದವರೆಗೆ ಯಾವುದಾದರೊಂದು ಶೈಕ್ಷಣಿಕ ಸಂಸ್ಥೆಯಲ್ಲಿ ಕಲಿಯುತ್ತಿರಬೇಕೆಂಬುದನ್ನು ಸೂಚಿಸುತ್ತದೆ. ಪರಿಚ್ಛೇದ ೧೮ರ (ಸಂವಿಧಾನ ಅಂತಿಮವಾಗಿ ರೂಪಗೊಂಡಾಗ ಪರಿಚ್ಛೇದ ಸಂಖ್ಯೆ ೨೪ ಆಗಿ ಬದಲಾಯಿತು). ಬಗ್ಗೆ ಪ್ರಸ್ತಾಪಿಸಿದ್ದು ಅದು ಮೂಲಭೂತ ಹಕ್ಕುಗಳ ಭಾಗವಾಗಿರುತ್ತದೆ. ಅಲ್ಲಿ ೧೪ ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡು ದುಡಿಸಿಕೊಳ್ಳುವುದನ್ನು ಪರಿಚ್ಛೇದ ೧೮ ನಿಷೇಧಿಸುತ್ತದೆ. ಸ್ಪಷ್ಟವಾಗಿ ಹೇಳಬೇಕೆಂದರೆ ೧೪ ವರ್ಷದೊಳಗಿನ ಮಗು ಕೆಲಸ ಮಾಡುವುದು ನಿಷಿದ್ಧವೆಂದರೆ ಅಂತಹ ಮಗು ಯಾವುದಾದರೊಂದು ಶೈಕ್ಷಣಿಕ ಸಂಸ್ಥೆಯಲ್ಲಿ ಕಲಿಕೆಯಲ್ಲಿ ತೊಡಗಿರಬೇಕು. ಪರಿಚ್ಛೇದ ೩೬ರ ಉದ್ದೇಶ ಇದಾಗಿದೆ. ಆದ್ದರಿಂದ "ಪ್ರಾಥಮಿಕ ಶಿಕ್ಷಣ" ಎಂಬ ಪದವು ಈ ಪರಿಚ್ಛೇದದಲ್ಲಿ ಅಸಮಂಜಸವಾಗುತ್ತದೆ. ಆದ್ದರಿಂದ ನಾನು ಈ ತಿದ್ದುಪಡಿಯನ್ನು ತಿರಸ್ಕರಿಸುತ್ತೇನೆ.

ಸಂವಿಧಾನ ರಚನಾ ಸಮಿತಿಯಲ್ಲಿನ ಚರ್ಚಾ ನಂತರ ಮೂಡಿದ ಒಮ್ಮತದ ಅಭಿಪ್ರಾಯವು ಸಂವಿಧಾನಕ್ಕೆ ಪರಿಷ್ಕೃತ ೪೫ನೆಯ ಪರಿಚ್ಛೇದವನ್ನು ಸೇರಿಸುವುದರ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಂವಿಧಾನದ ೪ನೆಯ ಅಧ್ಯಾಯವಾದ ನಿರ್ದೇಶಕ ತತ್ವಗಳ ಅಡಿಯಲ್ಲಿ ಸೇರಿಸಲಾಯಿತು. ಸಂವಿಧಾನದಲ್ಲಿನ ೪೫ನೆಯ ಪರಿಚ್ಛೇದದ ಸಾರಾಂಶವೆಂದರೆ ರಾಜ್ಯವು ಸಂವಿಧಾನ ಪ್ರಾರಂಭವಾದ ೧೦

ವರ್ಷದೊಳಗಾಗಿ ೧೪ ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಪ್ರಯತ್ನಿಸುತ್ತದೆ ಎಂಬುದಾಗಿದೆ.

೧೯೫೦ರಲ್ಲಿ ಸಂವಿಧಾನ ಜಾರಿಯಾಯಿತು. ೧೯೬೦ರಲ್ಲಿ ಸಂವಿಧಾನದ ವಾಗ್ದಾನದಂತೆ ೧೯೬೦ರ ಅಂತ್ಯಕ್ಕೆ ೧೪ವಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಗುರಿಯನ್ನು ಈಡೇರಿಸಲು ಸಾಧ್ಯವಾಗಲಿಲ್ಲ.

ಸಂವಿಧಾನದ ಗುರಿಯನ್ನು ಈಡೇರಿಸಲು ವಿಫಲವಾದ ಈ ಕಾಲಾವಧಿಯ ೧೦ ವರ್ಷಗಳ ಅಂದರೆ ೧೯೫೧ರಿಂದ ೧೯೬೧ರ ವರೆಗಿನ ಆಯವ್ಯಯ ಭಾಷಣಗಳನ್ನು ವಿಶ್ಲೇಷಿಸುತ್ತಾ ಹಿರಿಯ ಗಾಂಧೀವಾದಿ ವಿಲ್.ಸಿ ಜೈನ್‌ರವರು ಹೀಗೆನ್ನುತ್ತಾರೆ.

"೧೦ ವರ್ಷಗಳ ಈ ಅವಧಿಯಲ್ಲಿ ಸಂವಿಧಾನದ ಪರಿಚ್ಛೇದ ೪೫ರ ಬಗ್ಗೆ ಪ್ರಸ್ತಾಪಿಸುವುದು ಅಗಿರಲು, ಕನಿಷ್ಟ ಸೌಜನ್ಯಕ್ಕಾದರೂ ಶಿಕ್ಷಣದ ಬಗ್ಗೆ ಉಲ್ಲೇಖವಾಗಿರುವುದು ಭಾಷಣಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ. ನಮ್ಮ ಆಯ-ವ್ಯಯಗಳು ಶಿಕ್ಷಣವನ್ನು ಪ್ರಮುಖ ವಿಷಯವನ್ನಾಗಿ ಪರಿಗಣಿಸಲೇ ಇಲ್ಲ. ಆಯ-ವ್ಯಯಗಳ ದೃಷ್ಟಿಯಲ್ಲಿ ಶಿಕ್ಷಣ ಕೇವಲ ಕಾಕತಾಳೀಯ".

ಪ್ರಾಥಮಿಕ ಶಿಕ್ಷಣವನ್ನು ಒಳಗೊಂಡಂತೆ ಭಾರತದಲ್ಲಿ ಶಿಕ್ಷಣ ಕ್ಷೇತ್ರವನ್ನು ಸಮಗ್ರವಾಗಿ ಪರಿಶೀಲಿಸುವ ದೃಷ್ಟಿಯಿಂದ ಭಾರತ ಸರ್ಕಾರವು ಶಿಕ್ಷಣ ಆಯೋಗವನ್ನು ಕೋಥಾರಿ ಆಯೋಗದ ಅಧ್ಯಕ್ಷತೆಯಲ್ಲಿ ೧೯೬೪ರಲ್ಲಿ ನೇಮಿಸಿತು. ವೈದ್ಯಕೀಯ ಮತ್ತು ಕಾನೂನು ಶಿಕ್ಷಣವನ್ನು ಹೊರತುಪಡಿಸಿ ಇಡೀ ಶಿಕ್ಷಣ ಕ್ಷೇತ್ರವನ್ನು ಸಮಗ್ರವಾಗಿ ಅಧ್ಯಯನ ಮಾಡಿ ವರದಿ ಸಲ್ಲಿಸುವ ಹೊಣೆಗಾರಿಕೆಯನ್ನು ಸರ್ಕಾರ ಆಯೋಗಕ್ಕೆ ನೀಡಿತು.

ಶಿಕ್ಷಣದ ಎಲ್ಲ ವಿಚಾರಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಆಯೋಗವು ೧೪ ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಸಂವಿಧಾನದ ಗುರಿಯನ್ನು ಈಡೇರಿಸಬೇಕೆಂಬ ವಿಷಯವನ್ನು ಪುನರುಚ್ಚರಿಸಿತು. ಜತೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೇವಲ ಪರಿಮಾಣಾತ್ಮಕವಲ್ಲದೆ ಗುಣಾತ್ಮಕವಾಗಿಯೂ ಇರಬೇಕೆಂದು ಸೂಚಿಸಿತು. ಸಾರ್ವತ್ರೀಕರಣದ ಗುರಿಯು ಮುಂದಿನ ೨೦ ವರ್ಷಗಳಲ್ಲಿ ಪೂರ್ಣಗೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ ಆಯೋಗವು ೧೯೭೬ರ ವೇಳೆಗೆ ಎಲ್ಲ ಮಕ್ಕಳಿಗೆ ೫ ವರ್ಷಗಳ ಗುಣಾತ್ಮಕ ಹಾಗೂ ಪರಿಣಾಮಕಾರಿ ಪ್ರಾಥಮಿಕ ಶಿಕ್ಷಣವನ್ನು ಮತ್ತು ೧೯೮೬ ವೇಳೆಗೆ ಎಲ್ಲ ಮಕ್ಕಳಿಗೆ ೭ ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನೀಡುವ ಕೆಲಸ ಪೂರ್ಣಗೊಳ್ಳಬೇಕೆಂದು ಶಿಫಾರಸ್ಸು ಮಾಡಿತು.

೧೯೬೮ರಲ್ಲಿ ಕೋಥಾರಿ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಪ್ರಥಮ 'ರಾಷ್ಟ್ರೀಯ ಶಿಕ್ಷಣ' ನೀತಿಯನ್ನು ರೂಪಿಸಲಾಯಿತು. ಇದಕ್ಕೂ ಮುಂಚೆ ಸುಮಾರು ೧೮ ವರ್ಷಗಳ ಕಾಲ ಸಂವಿಧಾನದ

ನಿರ್ದೇಶನವನ್ನು ಜಾರಿಗೊಳಿಸಲು ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯೊಂದು ಇರಲಿಲ್ಲವೆಂಬುದು ಅತ್ಯಂತ ದುರದೃಷ್ಟಕರ ಸಂಗತಿ ಎಂದೇ ಹೇಳಬಹುದು.

ರಾಷ್ಟ್ರೀಯ ಶಿಕ್ಷಣ ನೀತಿಯು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿದಂತೆ ಸಂವಿಧಾನದ ಬದ್ಧತೆಯನ್ನು ಪುನರುಚ್ಚರಿಸಿತಲ್ಲದೆ ಗುರಿಯನ್ನು ಈಡೇರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿತು. ಈ ಗುರಿ ಸಾಧನೆಗಾಗಿ ಸಮಾನ ಶೈಕ್ಷಣಿಕ ಅವಕಾಶ, ಪ್ರಾದೇಶಿಕ ಅಸಮಾನತೆಗಳನ್ನು ತೊಡೆದು ಹಾಕಲು ಕ್ರಮ, ಸಾರ್ವತ್ರಿಕ ಅವಕಾಶ ಮತ್ತು ಕನಿಷ್ಟ ಶೈಕ್ಷಣಿಕ ಸೌಲಭ್ಯಗಳನ್ನು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಲು ತುರ್ತುಕ್ರಮಗಳ ಬಗ್ಗೆ ಪ್ರಸ್ತಾಪಿಸಲಾಯಿತು. ಶಿಕ್ಷಣ ನೀತಿಯು ಹೆಣ್ಣು ಮಕ್ಕಳ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣಕ್ಕೆ ಶಾಲೆಯಲ್ಲಿಯೇ ಉಳಿಸಿಕೊಂಡು ನಿಗದಿತ ಶಿಕ್ಷಣದ ಹಂತವನ್ನು ಯಶಸ್ವಿಯಾಗಿ ಪೂರೈಸುವ ಅಪವ್ಯಯ ಮತ್ತು ಕೊಳೆಯುವಿಕೆಯನ್ನು ತಡೆಗಟ್ಟಲು ಕೂಡಲೇ ಕಾರ್ಯಕ್ರಮಗಳನ್ನು ರೂಪಿಸಲು ಶಿಕ್ಷಣ ನೀತಿಯು ಒತ್ತು ನೀಡಿತು.

೧೯೭೨ರಲ್ಲಿ ಅತ್ಯಂತ ಹಿಂದುಳಿದ ಮತ್ತು ಅವಕಾಶ ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು (CABE) ಅರೆಕಾಲಿಕ ಅನೌಪಚಾರಿಕ ಶಿಕ್ಷಣವನ್ನು ನೀಡಬೇಕೆಂಬ ಶಿಫಾರಸ್ಸು ಮಾಡಿತು.

೧೯೭೬ರಲ್ಲಿ ಸಂವಿಧಾನಕ್ಕೆ ೪೨ನೆಯ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು. ಇದರಂತೆ ಶಿಕ್ಷಣ ನೀತಿಗಳನ್ನು ಪರಸ್ಪರ ಹೊಂದಾಣಿಕೆ ಮತ್ತು ಸಹಭಾಗಿತ್ವದಲ್ಲಿ ನಿರ್ವಹಿಸಬೇಕು.

೧೯೭೮ರಲ್ಲಿ ಶಿಕ್ಷಣ ಮಂತ್ರಾಲಯವು ರಚಿಸಿದ್ದ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಕಾರ್ಯನಿರತ ಗುಂಪು ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಒಂದು ಹೊಸ ಸೂತ್ರವನ್ನು ಶಿಫಾರಸ್ಸು ಮಾಡಿತು. ಅದರಂತೆ ೬ರಿಂದ ೧೪ ವಯಸ್ಸಿನ ಪ್ರತಿಯೊಂದು ಮಗುವು ಸಾಧ್ಯವಾದಷ್ಟು ಪೂರ್ಣಕಾಲ ಶಾಲೆಯಲ್ಲಿದ್ದು ಕಲಿಯಬೇಕು. ಸಾಧ್ಯವೇ ಇಲ್ಲ ಎಂಬ ಪರಿಸ್ಥಿಯಿದ್ದಾಗ ಮಾತ್ರ ಅರೆಕಾಲಿಕ ಶಿಕ್ಷಣದ ವ್ಯವಸ್ಥೆ ಮಾಡಬೇಕು. ಅಂತಹ ವ್ಯವಸ್ಥೆಯಲ್ಲಿಯೂ ಕೂಡ ಎಲ್ಲ ಮಕ್ಕಳು ಕನಿಷ್ಟ ಮೂಲ ಜ್ಞಾನವಾದ ಸಾಕ್ಷರತೆ, ಗಣಿತ, ಸಾಮಾಜಿಕ ಮತ್ತು ಪೌರತ್ವ ಮೌಲ್ಯಗಳನ್ನು ಕಲಿಯಲು ನೀಡುವ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ಕಲಿಸುವ ವಿಷಯವು ಅರ್ಥಪೂರ್ಣವಾಗಿದ್ದು ಸಾಮಾಜಿಕ ಮತ್ತು ಆರ್ಥಿಕ ಅಗತ್ಯಗಳಿಗೆ ಸ್ಪಂದಿಸುವಂತಿರಬೇಕು. ಯಾವುದೇ ಕಾರಣಕ್ಕೂ ಮೇಲ್ಮುಖ ಚಲನೆಯ ಅವಕಾಶಗಳನ್ನು ಕಸಿದುಕೊಳ್ಳುವಂತಾಗಬಾರದು ಎಂಬ ಮಹತ್ತರ ಶಿಫಾರಸ್ಸುಗಳನ್ನು ಶಿಕ್ಷಣ ಇಲಾಖೆಗೆ ಸಲ್ಲಿಸಿತು.

೧೯೮೬ರಲ್ಲಿ ಕೊಠಾರಿ ಆಯೋಗದ ಶಿಫಾರಸ್ಸಿನಂತೆ ಎಲ್ಲ ಮಕ್ಕಳು ಎಂಟು ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯಬೇಕೆಂಬ ಗುರಿಯು ೧೯೮೬ರ ಅಂತ್ಯಕ್ಕೆ ಈಡೇರಲಿಲ್ಲ. ಎರಡನೆಯ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಂತೆ ಶಿಕ್ಷಣದ ವಿವಿಧ ಸಾರ್ವತ್ರೀಕರಣಕ್ಕಾಗಿ ಹೊಸ ಕಾಲಮಿತಿಯ ಗುರಿಯನ್ನು ನಿಗಧಿಗೊಳಿಸಲಾಯಿತು. ಅದರಂತೆ ೧೯೯೦ರ ಅಂತ್ಯಕ್ಕೆ ಎಲ್ಲಾ ಮಕ್ಕಳಿಗೆ ೫ ವರ್ಷಗಳ ಶಾಲಾ ಶಿಕ್ಷಣ ಮತ್ತು ೧೯೯೦ರ ವೇಳೆಗೆ ಎಲ್ಲಾ ಮಕ್ಕಳು ೮ ವರ್ಷಗಳ ಶಾಲಾಶಿಕ್ಷಣವನ್ನು ಮುಗಿಸಬೇಕೆಂಬ ಇಂಗಿತವನ್ನು ಹೊಸ ನೀತಿಯಲ್ಲಿ ವ್ಯಕ್ತಪಡಿಸಲಾಯಿತು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣದ ವಿವಿಧ ಹಂತಗಳಲ್ಲಿ ಕನಿಷ್ಠ ಕಲಿಕಾ ಮಟ್ಟವನ್ನು ನಿಗಧಿಗೊಳಿಸಬೇಕೆಂಬ ಶಿಫಾರಸ್ಸನ್ನು ಮುಂದಿಟ್ಟಿತು. ಜೊತೆಗೆ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕನಿಷ್ಠ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಪ್ಪು ಹಲಗೆ ಯೋಜನೆ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಶಿಶುಕೇಂದ್ರಿತ ಬೋಧನಾ ವಿಧಾನ ಮತ್ತು ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕ ನಾಯಕತ್ವ ನೀಡುವುದರ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡಲು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿತು. ಈ ಸಂಸ್ಥೆಗಳು ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರಿಗೆ ಎಲ್ಲಾ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವ ಗುಣಮಟ್ಟದ ಕೇಂದ್ರಗಳಾಗಬೇಕೆಂಬ ದೂರ ದೃಷ್ಟಿಯನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹೊಂದಿತು.

೧೯೮೯ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಚಿಂತನೆ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಈ ಸಂದರ್ಭದಲ್ಲಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬದುಕು ಹಸನಾಗಬೇಕಾದರೆ ಎಲ್ಲ ಮಕ್ಕಳಿಗೂ ಕೆಲವು ಮೂಲಭೂತ ಅಗತ್ಯಗಳು ದೊರೆಯುಂತಾಗಬೇಕೆಂಬ ಉನ್ನತ ಮಟ್ಟದ ಚರ್ಚೆಗಳು ನಡೆಯುತ್ತಿದ್ದವು. ಈ ಎಲ್ಲಾ ಚರ್ಚೆಗಳು ಕ್ರೂಢೀಕರಣಗೊಂಡು ಅಂತಿಮವಾಗಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ೧೯೮೯ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಅಂಗೀಕರಿಸಿತು. ಭಾರತ ಸರ್ಕಾರವು ಈ ಒಡಂಬಡಿಕೆಯನ್ನು ೧೯೯೨ರಲ್ಲಿ ಸಹಿ ಮಾಡಿತು. ಮಗುವಿನ ಶಿಕ್ಷಣ ಒಂದು ಮೂಲಭೂತ ಹಕ್ಕೆಂದು ಗುರುತಿಸಿದ ಒಡಂಬಡಿಕೆಯು, ರಾಜ್ಯಗಳು ಈ ಹಕ್ಕನ್ನು ಗೌರವಿಸಿ ಸಮಾನ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಜಾರಿಗೊಳಿಸಬೇಕೆಂದು ಹೇಳಿತು. ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿ ಎಲ್ಲರಿಗೂ ಸಿಗುವಂತೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿತು (ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ ೨೮).

೧೯೯೦-೧೯೮೬ರಲ್ಲಿ ರೂಪಗೊಂಡ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಪುನರ್ ಪರಿಶೀಲಿಸುವ ಸಲುವಾಗಿ ಆಚಾರ್ಯ ರಾಮಮೂರ್ತಿಯವರು ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರೂಪಿಸಲಾಯಿತು. ಈ ಸಮಿತಿಯು ಮಕ್ಕಳ ಶಿಕ್ಷಣದ ಹಕ್ಕನ್ನು ಕುರಿತಂತೆ ಹೀಗೆ ಶಿಫಾರಸ್ಸು ಮಾಡಿತು.

"ಶಿಕ್ಷಣದ ಹಕ್ಕನ್ನು ಒಂದು ಮೂಲಭೂತ ಹಕ್ಕನ್ನಾಗಿಸುವ ಕಾಲ ಸನ್ನಿಹಿತವಾಗಿದೆ. ಇದಕ್ಕಾಗಿ ಭಾರತದ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡುವುದು ಅಗತ್ಯ ಮತ್ತು ಈ ಹಕ್ಕು ಎಲ್ಲ ಮಕ್ಕಳಿಗೆ ಸಿಗುವಂತಹ ವಾತಾವರಣವನ್ನು ಸಮಾಜದಲ್ಲಿ ನಿರ್ಮಾಣ ಮಾಡಬೇಕಾಗಿದೆ".

ಇದೇ ವರ್ಷದಲ್ಲಿ ಭಾರತವು ಥೈಲ್ಯಾಂಡಿನ ಜಾಮ್‌ಟಿಯೆನ್ ನಗರದಲ್ಲಿ ನಡೆದ ಎಲ್ಲರಿಗೂ ಶಿಕ್ಷಣ ಎಂಬ ಜಾಗತಿಕ ಸಮ್ಮೇಳನದಲ್ಲಿ ಭಾಗವಹಿಸಿ ೨೦೦೦ದ ವೇಳೆಗೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಈಡೇರಿಸುವುದಾಗಿ ಒಪ್ಪಿಕೊಂಡಿತು.

೧೯೯೨ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ ಮೋಹಿನಿ ಜೈನ್ ಕರ್ನಾಟಕ ರಾಜ್ಯ ಸರ್ಕಾರದ ವಿರುದ್ಧದ ಮೊಕದ್ದಮೆಯೊಂದರಲ್ಲಿ ಸರ್ವೋಚ್ಚ ನ್ಯಾಯಾಲಯವು ಶಿಕ್ಷಣ ಒಂದು ಹಕ್ಕು ಇದಕ್ಕಾಗಿ ರಾಜ್ಯ ಸರ್ಕಾರವು ಎಲ್ಲಾ ಹಂತಗಳಲ್ಲಿ ನಾಗರಿಕರ ಹಿತಕ್ಕಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಒದಗಿಸ ಬೇಕೆಂದು ತಿಳಿಸಿತು. ಶಿಕ್ಷಣ ಪಡೆಯುವ ಅವಕಾಶ ಕೇವಲ ಶ್ರೀಮಂತ ವರ್ಗಕ್ಕೆ ಮಾತ್ರ ಸೀಮಿತವಾಗಿರಲು ಸಾಧ್ಯವಿಲ್ಲವೆಂದು ನ್ಯಾಯಾಲಯ ಅಭಿಪ್ರಾಯ ಪಟ್ಟಿತು. ಸಂವಿಧಾನದ ೭೩-೭೪ನೆಯ ತಿದ್ದುಪಡಿಯ ಮಸೂದೆ ಅನ್ವಯ ಆಡಳಿತ ವಿಕೇಂದ್ರೀಕರಣ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣವನ್ನೊಳಗೊಂಡಂತೆ ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನೀಡಲು ಕ್ರಮಕೈಗೊಳ್ಳುವಂತೆ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಯ್ತು.

೧೯೯೩ರಲ್ಲಿ ಮತ್ತೊಂದು ಮಹತ್ವದ ಪ್ರಕರಣವು ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗಾಗಿ ಬಂತು. ಆಂಧ್ರಪ್ರದೇಶದ ಸರ್ಕಾರ ಮತ್ತು ಜೆ.ಪಿ. ಉನ್ನಿಕೃಷ್ಣನ್‌ರವರಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಶಿಕ್ಷಣ ಕ್ಷೇತ್ರದ ದಿಕ್ಕನ್ನೇ ಬದಲಾಯಿಸುವ ಐತಿಹಾಸಿಕ ತೀರ್ಪೊಂದನ್ನು ನೀಡಿತು. ಈ ತೀರ್ಪು ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮೂಲಭೂತ ಹಕ್ಕಿನ ಸ್ಥಾನ ಮಾನವನ್ನು ನೀಡಿತು.

೧೯೯೪ರಲ್ಲಿ ಕೇಂದ್ರದಲ್ಲಿದ್ದ ಸಂಯುಕ್ತ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿಸಲು ತೀರ್ಮಾನಿಸಿತು. ಈ ಪ್ರಸ್ತಾವನೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿತು. ಎಲ್ಲರಿಗೂ ಶಿಕ್ಷಣ ನೀಡುವ ಮಹತ್ವ ಯೋಜನೆಗಳಲೊಂದಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಪ್ರಾರಂಭಿಕವಾಗಿ ೭ ರಾಜ್ಯಗಳ ೪೨ ಜಿಲ್ಲೆಗಳಲ್ಲಿ ಪ್ರಾರಂಭವಾಯಿತು.

೧೯೯೫ರಲ್ಲಿ ೧೯೮೬ರ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ನಿಗಧಿಪಡಿಸಿದಂತೆ ಎಲ್ಲ ಮಕ್ಕಳು ೮ ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ಪಡೆಯುವ ಗುರಿಯನ್ನು ಈಡೇರಿಸಲು ಸಾಧ್ಯವಾಗಲಿಲ್ಲ.

೧೯೯೭ರಲ್ಲಿ ಸೈಕೆಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ರಾಜ್ಯ ಶಿಕ್ಷಣ ಮಂತ್ರಿಗಳ ಸಮಿತಿಯ ತನ್ನ ವರದಿಯನ್ನು ನೀಡಿತು. ವರದಿಯು ೧೪ ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ನೀಡುವ ಅವಕಾಶವನ್ನು ಕಲ್ಪಿಸುವುದು ನಾಗರಿಕನಾಗಿರುವ ಪ್ರತಿಯೊಬ್ಬ ಪಾಲಕನ ಕರ್ತವ್ಯ ಎಂಬ ಸ್ಪಷ್ಟ ಉಪಬಂಧವನ್ನು ಸೇರಿಸ ಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿತು. ಈ ವರದಿಯ ಆಧಾರದ ಮೇಲೆ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಸಂವಿಧಾನದ ೮೩ನೆಯ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು.

೨೦೦೦ದ ವೇಳೆಗೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಭಾರತ ಸರ್ಕಾರವು ಈಡೇರಿಸದಿರುವ ಹಿನ್ನೆಲೆಯಲ್ಲಿ ಪುನಃ ಸೆನಗಲ್‌ನ ಡಾಕರ್‌ನಲ್ಲಿ ಸಭೆ ಸೇರಿದ ಅನೇಕ ರಾಷ್ಟ್ರಗಳು ೨೦೧೫ರ ವೇಳಗಾದರೂ ಈ ಗುರಿಯನ್ನು ತಲುಪಲೇಬೇಕೆಂದು ನಿರ್ಧರಿಸಿದವು.

೨೦೦೧ರಲ್ಲಿ ಈ ಹಿಂದೆ ಸಂಸತ್ತಿನಲ್ಲಿ ಮಂಡಿಸಿದ್ದ ಸಂವಿಧಾನದ ೮೩ನೆಯ ತಿದ್ದುಪಡಿಯನ್ನು ಮಾರ್ಪಡಿಸಿ ಸಂವಿಧಾನಕ್ಕೆ ೯೩ನೆಯ ತಿದ್ದುಪಡಿ ಮಾಡುವುದರ ಮೂಲಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಮಸೂದೆಯನ್ನು ಸಂಸತ್ತಿನಲ್ಲಿ ಪುನರ್ ಮಂಡಿಸಲಾಯಿತು. ಲೋಕಸಭೆಯು ನವೆಂಬರ್ ೨೭, ೨೦೦೧ರಂದು ಈ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ರಾಜ್ಯಸಭೆಯಲ್ಲಿ ಮಸೂದೆಯು ಮೇ ೧೪, ೨೦೦೨ ರಂದು ಅಂಗೀಕರಿಸಲಾಯಿತು.

ಇವೆಲ್ಲವುಗಳ ಜೊತೆಗೆ ಕೇಂದ್ರ ಸರ್ಕಾರವು ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣವನ್ನು ಸಮುದಾಯದ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಯಶಸ್ವಿಯಾಗಿ ಈಡೇರಿಸಲು "ಸರ್ವಶಿಕ್ಷಣ ಅಭಿಯಾನ" ಎಂಬ ಯೋಜನೆಯನ್ನು ದೇಶಾದ್ಯಂತ ೨೦೦೧-೦೨ನೇ ಇಸವಿಯಲ್ಲಿ ಜಾರಿಗೊಳಿಸಲಾಯಿತು. ಮೊಟ್ಟ ಮೊದಲ ಬಾರಿಗೆ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಅವಶ್ಯಕವಾದ ಸೌಲಭ್ಯಗಳನ್ನು ಕಲ್ಪಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಘೋಷಿಸಲಾಯಿತು. ಈ ಯೋಜನೆಯ ಪ್ರಮುಖ ಗುರಿಗಳು ಈ ರೀತಿಯಾಗಿವೆ.

೧. ೨೦೦೩ ರ ವೇಳೆಗೆ ೬ರಿಂದ ೧೪ ವರ್ಷದ ಎಲ್ಲ ಮಕ್ಕಳು ಶಾಲೆಯಲ್ಲಿರುತ್ತಾರೆ.

೨. ೨೦೦೭ ನೇ ಇಸವಿಯೊಳಗೆ ೧೪ ವರ್ಷದ ಒಳಗಿನ ಎಲ್ಲಾಮಕ್ಕಳಿಗೆ ೧ರಿಂದ ೮ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣದ ಅವಕಾಶದ ಸಾರ್ವತ್ರೀಕರಣ.

೩. ೨೦೧೦ ನೇ ಇಸವಿಯೊಳಗೆ ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯ ಸಾರ್ವತ್ರೀಕರಣ ಹಾಗೂ ಎಲ್ಲಾ ಮಕ್ಕಳೂ ೮ನೇ ತರಗತಿಯನ್ನು ಪೂರ್ಣಗೊಳಿಸುವಿಕೆ. ವಯೋಮಾನ ನಿರ್ದಿಷ್ಟ ತರಗತಿಗಳಲ್ಲಿ ಮಕ್ಕಳ ದಾಖಲಾತಿ ಹಾಗೂ ಪೂರ್ಣ ಪ್ರಮಾಣದ ಉಳಿಯುವಿಕೆ.

೪. ಅರ್ಥಪೂರ್ಣ ಜೀವನದ ಮೇಲೆ ಒತ್ತುಕೊಟ್ಟು ತೃಪ್ತಿಕರ ಗುಣಮಟ್ಟದ ಶಿಕ್ಷಣದ ಪೂರೈಕೆ.

೫. ಶಿಕ್ಷಣಾವಕಾಶಗಳು ಸಹಭಾಗಿತ್ವ ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸುವಲ್ಲಿ ಸಾಮಾಜಿಕ ಗುಂಪುಗಳು ಲಿಂಗ ಹಾಗೂ ಪ್ರದೇಶಗಳ ಮಧ್ಯೆ ಇರುವ ಕಂದಕಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದು.

೬. ಶಾಲಾ ನಿರ್ವಹಣೆಯಲ್ಲಿ ಗ್ರಾಮಮಟ್ಟದವರೆಗೂ ಸಮುದಾಯಗಳು ಹಾಗೂ ವಿಶೇಷವಾಗಿ ಸರ್ಕಾರಿ ಸ್ಥಳೀಯ ಸಂಸ್ಥೆಗಳನ್ನು ಸಂಪೂರ್ಣ ಸಹಭಾಗಿಗಳನ್ನಾಗಿ ಮಾಡಿಕೊಂಡು ಸ್ವಯಂ ನಿರ್ವಹಿತ ಶಾಲೆಗಳ ಗುರಿಯತ್ತ ಸಾಗುವುದು.

ಭಾರತದ ಸರಕಾರದ ಇತರ ಶೈಕ್ಷಣಿಕ ಯೋಜನೆಗಳು

ಶಿಕ್ಷಣವನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದ್ದು ಹೆಚ್ಚಿನ ಜವಾಬ್ದಾರಿಯನ್ನು ರಾಜ್ಯ ಸರ್ಕಾರವು ನೋಡಿಕೊಳ್ಳುತ್ತಿದ್ದು ಕೇಂದ್ರ ಸರ್ಕಾರ ಸಲಹೆ ಮಾರ್ಗದರ್ಶನದೊಂದಿಗೆ ಧನಸಹಾಯ ಒದಗಿಸುತ್ತದೆ. ಶಿಕ್ಷಣದ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ.

೧. ಪ್ರಾಥಮಿಕ ಶಿಕ್ಷಣ ಉನ್ನತೀಕರಣ ಕಾರ್ಯಕ್ರಮ

ಈ ಯೋಜನೆಯನ್ನು ಪ್ರಾಥಮಿಕ ಶಿಕ್ಷಣದಲ್ಲಿ ದಾಖಲಾತಿ ಮತ್ತು ಹಾಜರಾತಿಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ೧೯೬೭ರಲ್ಲಿ ಪ್ರಾರಂಭಿಸಲಾಯಿತು. ಇದರ ಮುಖ್ಯ ಉದ್ದೇಶವೆಂದರೆ ೬ರಿಂದ ೧೪ ವರ್ಷದ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವುದರೊಂದಿಗೆ ಅವರು ಶಾಲೆಗೆ ಗೈರು ಹಾಜರು ಹಾಗೂ ಮಧ್ಯದಲ್ಲಿಯೇ ಶಾಲೆ ಬಿಡದಂತೆ ನೋಡಿಕೊಳ್ಳುವುದು. ಈ ಯೋಜನೆಗೆ ಆಸ್ಟ್ರೇಲಿಯಾ ಸರ್ಕಾರ ಹಾಗೂ ಯುನಿಸೆಫ್ ಸಹಾಯ ಒದಗಿಸುತ್ತದೆ.

೨. ಶಿಕ್ಷಣಕ್ಕಾಗಿ ಜಿಲ್ಲಾಮಾಹಿತಿ ವ್ಯವಸ್ಥೆ

ಇದು D.P.E.P. ಯೋಜನೆಯ ಒಂದು ಕಾರ್ಯವಾಗಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಸಂಬಂಧಿಸಿದ ಶಾಲಾ ಆಧಾರಿತ ಅಂಕಿ ಅಂಶಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಬಳಸುವ ಗಣಕೀಕೃತ ವ್ಯವಸ್ಥೆಯಾಗಿದೆ. ಸಂಗ್ರಹಿಸಿದ ಶಾಲಾ ಅಂಕಿ-ಅಂಶಗಳನ್ನು ಸಂಸ್ಕರಿಸುವ ತಂತ್ರಾಂಶವನ್ನು ಹೊಂದಿದೆ. ಕೇಂದ್ರ ಸರ್ಕಾರ ಈ ಯೋಜನೆಯನ್ನು ದೇಶದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಸ್ತರಿಸಿ ಮಾಹಿತಿ ಸಂಗ್ರಹಿಸುವ ಗುರಿಯನ್ನು ಹೊಂದಿದೆ.

೩. ಶಿಕ್ಷಣ ಗ್ಯಾರಂಟಿ ಯೋಜನೆ ಮತ್ತು ಪರ್ಯಾಯ ನವೀನತೆಯ ಶಿಕ್ಷಣ ಕೇಂದ್ರಗಳು

ಶಾಲೆಯಿಂದ ಹೊರಗುಳಿದ ೬ರಿಂದ ೧೪ ವರ್ಷದ ಮಕ್ಕಳಿಗೆ ಔಪಚಾರಿಕವಲ್ಲದ ಶಿಕ್ಷಣ ಒದಗಿಸಲು ರೂಪಿಸಿದ ಕ್ರಮವೇ ಶಿಕ್ಷಣ ಗ್ಯಾರಂಟಿ ಯೋಜನೆ ಈ ಯೋಜನೆ ಮೂರು ಘಟಕಗಳನ್ನು ಹೊಂದಿದೆ.

೧. ರಾಜ್ಯ ಸರ್ಕಾರಗಳು ನಡೆಸುವ ಕೇಂದ್ರಗಳು.

೨. ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ಕಲಿಕಾ ಕೇಂದ್ರಗಳು ಪರ್ಯಾಯ ಶಾಲೆಗಳು.

೩. ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ನವೀನ ಹಾಗೂ ಪ್ರಯೋಗಿಕ ಯೋಜನೆಗಳು ಮತ್ತು ಜಿಲ್ಲಾ ಸಂಪನ್ಮೂಲ ಘಟಕಗಳು.

೪. ಮಧ್ಯಾಹ್ನದ ಊಟದ ಯೋಜನೆ

ಪ್ರಾಥಮಿಕ ಹಂತದ ಮಕ್ಕಳು ಗೈರು ಹಾಜರಾಗದಂತೆ ನೋಡಿಕೊಳ್ಳಲು ವಿಶೇಷವಾಗಿ ಹಮ್ಮಿಕೊಂಡ ಕಾರ್ಯಕ್ರಮವೇ ಮಧ್ಯಾಹ್ನ ಊಟದ ಯೋಜನೆ.

ಅದರ ಪ್ರಮುಖ ಉದ್ದೇಶಗಳು ಈ ಕೆಳಗಿನಂತಿವೆ.

೧. ಮಗುವಿಗೆ ಕನಿಷ್ಠಪಕ್ಷದ ಆಹಾರವನ್ನು ಒದಗಿಸಿ ಮಗುವಿನ ಬೆಳವಣಿಗೆ ಮತ್ತು ಆರೋಗ್ಯ ಸುಧಾರಿಸುವುದು.

೨. ಗೈರು ಹಾಜರಾಗದಂತೆ ನೋಡಿಕೊಳ್ಳುವುದು.

೩. ಮಕ್ಕಳ ದಾಖಲಾತಿ ಹೆಚ್ಚಿಸಿ, ಶಾಲೆ ಬಿಡುವುದನ್ನು ತಡೆಗಟ್ಟುವುದು.

೪. ಪಾಲಕ ಪೋಷಕರ ಆರ್ಥಿಕ ಹೊರೆಯನ್ನು ಸ್ವಲ್ಪಮಟ್ಟಿಗಾದರೂ ಕಡಿಮೆಗೊಳಿಸುವುದು.

೫. ಚೆನ್ನಾಗಿ ಅಭ್ಯಾಸ ಮಾಡುವ ಸಾಮರ್ಥ್ಯವನ್ನು ಬೆಳೆಸುವುದು.

೬. ಬಾಲ ಕಾರ್ಮಿಕತೆಗೆ ತಡೆಯುಂಟು ಮಾಡುವುದು.

೫. ಶಿಕ್ಷಾಕರ್ಮಿ

ಈ ಯೋಜನೆಯನ್ನು ೧೯೮೭ರಲ್ಲಿ ರಾಜಸ್ಥಾನ ಸರ್ಕಾರವು ಎಸ್.ಆಯ್.ಡಿ.ಎ. (SIDA) ನೆರವಿನೊಂದಿಗೆ ಪ್ರಾರಂಭಿಸಲಾಯಿತು. ಇದು ಶಿಕ್ಷಕರ ಗೈರು ಹಾಜರಿ ಸಮಸ್ಯೆಯನ್ನು ತಡೆಗಟ್ಟಲು ಸ್ಥಳೀಯ ಸಮುದಾಯಕ್ಕೆ ಸೇರಿದ ಬರಿಗಾಲಿನ ಶಿಕ್ಷಕರು ಸಮುದಾಯದ ಪ್ರತಿ ಮಗುವಿನೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸಬಲ್ಲರು ಒಬ್ಬ ವ್ಯಕ್ತಿ ಸಮಾಜ ಸೇವಕನಾಗಿ ಕೆಲಸ ಮಾಡಲು ಇಚ್ಛಿಸಿದಲ್ಲಿ ಔಪಚಾರಿಕ ತರಬೇತಿ ಅಗತ್ಯತೆಯನ್ನು ಅಲ್ಪಕಾಲಿಕ ತೀವ್ರತರ ಶಿಕ್ಷಣ ಮತ್ತು ತರಬೇತಿಯ ಮೂಲಕ ಸರಿದೂಗಿಸಬಹುದು ಹಾಗೂ ಗ್ರಾಮೀಣ ಪ್ರದೇಶದ ಸೌಲಭ್ಯ ವಂಚಿತರ ಅವಶ್ಯಕತೆಗಳನ್ನು ಪೂರೈಸಲು ಶಿಕ್ಷಣಕ್ಕೆ ಸಮುದಾಯದ ಬೆಂಬಲ ಹಾಗೂ ಒಡೆತನ ಅವಶ್ಯ.

೬. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET)

೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸ್ಸಿನ ಅನ್ವಯ ಶಿಕ್ಷಣದಲ್ಲಿ ಗುಣಾತ್ಮಕ ಶೈಕ್ಷಣಿಕ ಮಟ್ಟದ ಉದ್ದೇಶದಿಂದ ೧೯೯೧ರಲ್ಲಿ ರಾಷ್ಟ್ರದ್ಯಂತ N.C.E.R.T. ನಿರ್ದೇಶನದಂತೆ DIET ಎಂಬ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು.

ಉದ್ದೇಶಗಳು

೧. ಸೇವಾ ಪೂರ್ವ ಹಾಗೂ ಸೇವಾನಿರತ ಶಿಕ್ಷಕರಿಗೆ ತರಬೇತಿ ನೀಡುವುದು.

೨. ಹೊಸ ಬೋಧನಾ ವಿಧಾನಗಳ, ತಂತ್ರಗಳ ಬಗ್ಗೆ ತರಬೇತಿ ನೀಡುವುದು.

೩. ಪ್ರಯೋಗ ಮತ್ತು ಸಂಶೋಧನೆಗಳನ್ನು ನಡೆಸಲು ಯೋಗ್ಯ ಸನ್ನಿವೇಶ ನಿರ್ಮಾಣ ಮಾಡುವುದು.

೪. ಶೈಕ್ಷಣಿಕ ತಂತ್ರಜ್ಞಾನದ ಬಗ್ಗೆ ಮಾಹಿತಿ ಸಂಗ್ರಹಿಸುವ ಬಗ್ಗೆ ನಿರುಪಯುಕ್ತ ವಸ್ತುಗಳಿಂದ ಪಾಠೋಪಕರಣಗಳ ತಯಾರಿಕೆಯ ಬಗ್ಗೆ ಮತ್ತು ಬಳಕೆಯ ಬಗ್ಗೆ ತರಬೇತಿ ನೀಡುವುದು.

೫. ವಯಸ್ಕರ ಶಿಕ್ಷಣ ಹಾಗೂ ಜನಸಂಖ್ಯಾ ಶಿಕ್ಷಣ ಕುರಿತು ಮಾರ್ಗದರ್ಶನ ನೀಡುವುದು.

ಇವುಗಳಲ್ಲದೇ ಇನ್ನೂ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಲವಾರು ಅಭಿವೃದ್ಧಿಪರ ಯೋಜನೆಗಳನ್ನು, ಕಾರ್ಯಗಳನ್ನು ಜಿಲ್ಲಾ ಮಟ್ಟದಲ್ಲಿ ಮಾಡುವ ಸಂಸ್ಥೆಯೆ ಡಯಟ್.

ಕಪ್ಪು ಹಲಗೆಯ ಕಾರ್ಯಕ್ರಮಗಳು

ಕೇಂದ್ರ ಸರ್ಕಾರದ ಈ ಯೋಜನೆಯಡಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳೂ ಮೂರು ಹಂತದ ನೆರವನ್ನು ಪಡೆದಿವೆ.

೧. ಎಲ್ಲಾ ಏಕೋಪಾಧ್ಯಾಯ ಶಾಲೆಗಳಿಗೆ ೨ನೆಯ ಶಿಕ್ಷಕ, ೨ನೆಯ ಕೊಠಡಿ ಹಾಗೂ ಕಲಿಕಾ ಪರಿಕರಗಳಿಗಾಗಿ ರೂ. ೭೦೦೦ ಮಂಜೂರಾತಿ.

೨. ೧೦೦ ಮಕ್ಕಳಿಗಿಂತ ಹೆಚ್ಚು ಹಾಜರಾತಿ ಇರುವ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಿಗೆ ೩ನೇ ಶಿಕ್ಷಕ ಮತ್ತು ೩ನೆಯ ಕೊಠಡಿ ಮಂಜೂರಾತಿ.

೩. ರಾಜ್ಯದ ಎಲ್ಲಾ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಒಂದು ಶಿಕ್ಷಕ ಹುದ್ದೆ ಮಂಜೂರಾತಿ, ಒಂದು ಕೊಠಡಿ ನಿರ್ಮಾಣ ಹಾಗೂ ಕಲಿಕಾ ಸಾಮಗ್ರಿಗಳಿಗೆ ರೂ. ೪೦.೦೦೦ ಮಂಜೂರಾತಿ ಮಾಡಿದೆ.

೨. ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ

ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ, ಮಕ್ಕಳ ಕಲಿಕೆಯ ಗುಣಮಟ್ಟವನ್ನು ಉತ್ತಮ ಪಡಿಸುವ ಗುರಿಸಾಧನೆಗಾಗಿ ಕೇಂದ್ರ ಸರ್ಕಾರವು ವಿಶ್ವಬ್ಯಾಂಕ್ ನೆರವಿನಿಂದ ಕೈಗೊಂಡ ಕಾರ್ಯಕ್ರಮವೇ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ. ಈ ಕಾರ್ಯಕ್ರಮದ ಉದ್ದೇಶಗಳು ಈ ಕೆಳಗಿನಂತಿವೆ.

೧. ಸಾಮಾಜಿಕ ವರ್ಗೀಕರಣ ಹಾಗೂ ಲಿಂಗಭೇದ ಕಾರಣಗಳಿಂದಾಗಿ ಶಾಲಾದಾಖಲಾತಿ ಮತ್ತು ಕಲಿಕಾ ಸಾಧನೆಯಲ್ಲಿ ವಿವಿಧ ಮಕ್ಕಳ ನಡುವೆ ಇರುವ ಅಂತರವನ್ನು ಹಾಗೂ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಶೇಕಡಾ ೫ಕ್ಕಿಂತ ಕಡಿಮೆಗೊಳಿಸುವುದು.

೨. ಭಾಷೆ ಹಾಗೂ ಗಣಿತ ವಿಷಯಗಳಲ್ಲಿ ಕಲಿಕಾ ಮಟ್ಟದಲ್ಲಿ ಮೌಲ್ಯಾಧಾರಿತ ಮಟ್ಟದಿಂದ ಶೇ ೨೫ರಷ್ಟು ಹೆಚ್ಚಿಸುವುದು. ಇತರೆ ವಿಷಯಗಳಲ್ಲಿ ಪ್ರಾಥಮಿಕ ಶಾಲೆಯ ಎಲ್ಲಾ ಮಕ್ಕಳ ಕನಿಷ್ಟ ಕಲಿಕಾ ಸಾಮರ್ಥ್ಯವನ್ನು ಶೇಕಡಾ ೪೦ಕ್ಕಿಂತ ಹೆಚ್ಚು ಮಾಡುವುದು.

೩. ಪ್ರಾಥಮಿಕ ಹಂತದಲ್ಲಿ ಶಾಲೆ ತೊರೆಯುವ ಮಕ್ಕಳ ಒಟ್ಟಾರೆ ಪ್ರಮಾಣವನ್ನು ಶೇ ೧೦ಕ್ಕಿಂತ ಕಡಿಮೆಗೊಳಿಸುವುದು. ರಾಷ್ಟ್ರೀಯ ನಿಗದಿತ ಪ್ರಮಾಣದಲ್ಲಿ ಎಲ್ಲಾ ಮಕ್ಕಳಿಗೂ ೧ರಿಂದ ೫ನೆಯ ತರಗತಿಯ ವರೆಗೆ ಉತ್ತಮ ಶಾಲಾ ಸೌಲಭ್ಯಗಳನ್ನು ಒದಗಿಸುವುದು.

೩. ಜನಶಾಲಾ ಕಾರ್ಯಕ್ರಮ

ಯು.ಎನ್.ಡಿ.ಪಿ. ನೆರವಿನಿಂದ ರಾಜ್ಯದ ೧೦ ತಾಲ್ಲೂಕುಗಳಲ್ಲಿ ಪ್ರಾಥಮಿಕ ಶಿಕ್ಷಣದ

ಸಾರ್ವತ್ರೀಕರಣದ ಗುರಿಯೊಂದಿಗೆ ಹಮ್ಮಿಕೊಂಡಿರುವ ಶೈಕ್ಷಣಿಕ ಯೋಜನೆ. ಶೈಕ್ಷಣಿಕ ತರಬೇತಿ ಮತ್ತು ಮಾರ್ಗದರ್ಶನಕ್ಕೆ ಈ ಯೋಜನೆಯಲ್ಲಿ ಒತ್ತು ನೀಡಲಾಗಿದೆ.

ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಯೋಜನೆಗಳು ಮತ್ತು ಕಾರ್ಯಕ್ರಮಗಳು

೧. ಸಾರ್ವತ್ರಿಕ ದಾಖಲಾತಿಗಾಗಿ ಕಾರ್ಯಕ್ರಮಗಳು

೬-೧೪ ವರ್ಷದ ಪ್ರತಿ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೊಡುವುದು ಸರ್ಕಾರದ ಮತ್ತು ಪಾಲಕರ ಕರ್ತವ್ಯ. ೮ ವರ್ಷಗಳ ಶಿಕ್ಷಣ ಮಗುವಿನ ಸಂವಿಧಾನ ಹಕ್ಕು ಕೂಡ ಆಗಿದೆ. ಈ ದೆಸೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಗಮನಾರ್ಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳು ಈ ಕೆಳಗಿನಂತಿವೆ.

೧. ಗಣತಿ : ೧೯೬೧ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ವಯ ೧೯೬೩ರಿಂದಲೂ ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಕೇವಲ ೫ ವರ್ಷ ತುಂಬಿದ ಮುಂದಿನ ಜೂನ್‌ನಲ್ಲಿ ಶಾಲೆಗೆ ದಾಖಲಾಗಬಹುದಾದ ಮಕ್ಕಳ ಗಣತಿ ಮಾಡುವ ಕಾರ್ಯಕ್ರಮ.

೨. ದಾಖಲಾತಿ ಆಂದೋಲನ : ಪ್ರತಿವರ್ಷ ಜುಲೈ ತಿಂಗಳಲ್ಲಿ ಮಕ್ಕಳ ಗಣತಿಗಾಗಿ ಜೂನ್ ತಿಂಗಳಲ್ಲಿ ದಾಖಲಾಗದೇ ಉಳಿದ ಮಕ್ಕಳನ್ನು ಗುರುತಿಸಿ ಮಕ್ಕಳ ಪಾಲಕರನ್ನು, ಶಿಕ್ಷಣಾಧಿಕಾರಿಗಳನ್ನು, ಮಕ್ಕಳು, ಶಿಕ್ಷಕರು, ಸಾರ್ವಜನಿಕರು, ಜನಪ್ರತಿನಿಧಿಗಳು, ಎಸ್.ಡಿ.ಎಂ.ಸಿ. ಸದಸ್ಯರ ಸಹಕಾರದೊಂದಿಗೆ ವೈಯಕ್ತಿಕವಾಗಿ ಸಂಪರ್ಕಿಸಿ ಅವರ ಸಮಸ್ಯೆ ತಿಳಿದ ಪೋಷಕರಿಗೆ ಸರ್ಕಾರದ ಸೌಲಭ್ಯಗಳು, ಶಿಕ್ಷಣದ ಮಹತ್ವ ತಿಳಿಸಿ ಶಾಲೆಗೆ ದಾಖಲಿಸುವಂತೆ ಅವರ ಮನವೊಲಿಸುವ ದಾಖಲಾತಿ ಆಂದೋಲನ ಕಾರ್ಯಕ್ರಮ.

ಇನ್ನೂ ತಲುಪದವರನ್ನು ತಲುಪುವ ಕಾರ್ಯಕ್ರಮಗಳು

೧. ಚಿಣ್ಣರ ಅಂಗಳ : ಶಾಲೆ ಬಿಟ್ಟ ಮತ್ತು ಶಾಲೆಗೆ ದಾಖಲಾಗದ ಶಾಲಾ ವಯಸ್ಸಿನ ಮಕ್ಕಳಿಗಾಗಿ ಶಾಲೆಯ ಬೇಸಿಗೆಯ ಬಿಡುವಿನ ಏಪ್ರಿಲ್, ಮೇ ತಿಂಗಳಲ್ಲಿ ೬೦ ದಿನಗಳ ಸೇತುಬಂಧ ಕಾರ್ಯಕ್ರಮ ನಡೆಸಿ ನಂತರ ಮೌಲ್ಯಮಾಪನ ಮಾಡಿ, ಮಕ್ಕಳ ಅರ್ಹತೆಗೆ ತಕ್ಕಂತೆ ವಿವಿಧ ವರ್ಗಗಳಿಗೆ ದಾಖಲು ಮಾಡಿಸಿ ಮುಖ್ಯವಾಹಿನಿಗೆ ಸೇರಿಸಲಾಗುತ್ತದೆ. ಸರ್ಕಾರವು ಇಂತಹ ಮಕ್ಕಳಿಗೆ ಮಧ್ಯಾಹ್ನದ ಉಪಹಾರ ಒದಗಿಸುವುದಲ್ಲದೆ, ಪಾಠೋಪಕರಣ ತಯಾರಿಸಲು ಆರ್ಥಿಕ ನೆರವು ನೀಡುತ್ತದೆ. ಒಟ್ಟು ಶಿಕ್ಷಕರ ಜೊತೆಯಲ್ಲಿ ಸಮುದಾಯದಿಂದ ಒಬ್ಬ ವಿದ್ಯಾವಂತ ಸ್ವಯಂ ಸೇವಕರನ್ನು ಬೋಧಕರನ್ನಾಗಿ ನೇಮಿಸಿ ಅವರಿಗೆ ಗೌರವ ಧನವನ್ನು ನೀಡಲಾಗುತ್ತದೆ. ಸಮುದಾಯವು ಇಂತಹ ಮಕ್ಕಳನ್ನು ದತ್ತು ಸ್ವೀಕರಿಸುವ ಮೂಲಕ ಶಾಲಾ ಬ್ಯಾಗು, ಪುಸ್ತಕ, ಲೇಖನ ಸಾಮಗ್ರಗಳು, ಸಮವಸ್ತ್ರ ಮುಂತಾದವುಗಳನ್ನು ನೀಡುವುದರ ಮೂಲಕ ಸಹಾಯ ಮಾಡಲು ಅವಕಾಶವಿದೆ. ಅನೇಕ ಕಡೆ ಸಮುದಾಯವು ಈ ದಿಸೆಯಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳು ಉಚಿತ ವಸತಿ, ಹಾಗೂ ರಾತ್ರಿಯ ಊಟದ ವ್ಯವಸ್ಥೆಯನ್ನು ಮಾಡಿ ಪ್ರೋತ್ಸಾಹಿಸುತ್ತಿವೆ.

೨. **ಬಾ ಮರಳಿ ಶಾಲೆಗೆ :** ಶಾಲಾ ವಯಸ್ಸಿನ ಹಾಗೂ ಶಾಲೆಗೆ ನಿರಂತರವಾಗಿ ಗೈರು ಹಾಜರಾಗುತ್ತಿರುವ ಮಕ್ಕಳನ್ನು ೨೦೦೨ ನವ್ಹಂಬರ್ ತಿಂಗಳಿನಿಂದ ಎಲ್ಲಾ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಬೇಕೆಂಬ ದೃಷ್ಟಿಯಿಂದ ಸರಕಾರ ಈಗಾಗಲೇ ಜಾರಿಯಲ್ಲಿರುವ ಕಾರ್ಯಕ್ರಮದ ಜೊತೆಗೆ ಪ್ರತಿ ಸೋಮವಾರ ಶಾಲಾ ಅವಧಿಗೆ ಮುಂಚೆ ಬೆಳಿಗ್ಗೆ ೮ ರಿಂದ ೧೦ ಗಂಟೆಯವರೆಗೆ ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರ ಸಹಕಾರದಿಂದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ದಿಶೆಯಲ್ಲಿ 'ಬಾ ಮರಳಿ ಶಾಲೆಗೆ' ಎಂಬ ಆಂದೋಲನ ರೂಪಿಸಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶಗಳು

೧. ೬-೧೪ ವರ್ಷ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವಂತೆ ಶಾಲೆಗೆ ಬರುವಂತೆ ಮಾಡುವುದು.

೨. ಬಹಳ ದಿನಗಳಿಂದ ಗೈರು ಹಾಜರಾಗಿರುವ ಮಕ್ಕಳನ್ನು ಶಾಲೆಗೆ ಮತ್ತೆ ಕರೆತರುವುದು.

೩. ಕಲಿಕಾ ವಾತಾವರಣಕ್ಕೆ ಹೊಂದಿಕೊಳ್ಳಲು ಸೇತುಬಂಧ ಮತ್ತು ಪರಿಹಾರ ಬೋಧನೆ ಕಾರ್ಯಕ್ರಮ ಕೈಗೊಳ್ಳುವುದು.

೩. **ಕೂಲಿಯಿಂದ ಶಾಲೆಗೆ :** ಭಾರತ ಸಂವಿಧಾನದ ಅನುಚ್ಛೇದ ೨೪ರನ್ವಯ ೧೪ ವರ್ಷ ವಯಸ್ಸಿನ ಕಡಿಮೆ ಇರುವ ಮಕ್ಕಳು ಕಾರ್ಮಿಕರಾಗುವುದು ನಿಷಿದ್ಧ. ಅಂತೆಯೇ ಅವರು ಶಾಲೆಗಳಲ್ಲಿ ವ್ಯಾಸಂಗದಲ್ಲಿ ತೊಡಗಬೇಕು. ಈ ಹಿನ್ನಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವುಗಳ ಪರಸ್ಪರ ಸಹಕಾರ ಹಾಗೂ ಸಮನ್ವಯದಿಂದ ರೂಪಿಸಿದ ಕಾರ್ಯಕ್ರಮ "ಕೂಲಿಯಿಂದ ಶಾಲೆಗೆ" ಅದರಲ್ಲೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿರುವ ಜನಾಂದೋಲನ ಕಾರ್ಯಕ್ರಮ ಇದಾಗಿದೆ.

೧೪ ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಅಪರಾಧ. ಈ ಕಾಯ್ದೆ ಉಲ್ಲಂಘಿಸಿದವರಿಗೆ ಜೈಲು ಶಿಕ್ಷೆ ದಂಡ ಎರಡೂ ವಿಧಿಸಲಾಗುತ್ತದೆ.

೪. **ವಿದ್ಯಾಚೇತನ :** ಚಿಣ್ಣರ ಅಂಗಳ ಕಾರ್ಯಕ್ರಮದ ನಂತರವೂ ಶಾಲೆಗೆ ದಾಖಲಾಗದ ಮಕ್ಕಳನ್ನು ಪ್ರೇರೇಪಿಸಲು ಕೈಗೊಂಡ ಕಾರ್ಯಕ್ರಮ 'ವಿದ್ಯಾಚೇತನ'.

ವಿದ್ಯಾಚೇತನವು ಶಾಲೆಯಿಂದ ಹೊರಗುಳಿದಿರುವ ಮಕ್ಕಳು ಎರಡು ವರ್ಗಗಳಿಗೆ ಸೇರುತ್ತಾರೆ.

೧. ಶಾಲೆಗೆ ದಾಖಲು ಆಗದಿರುವವರು.

೨. ಶಾಲೆ ಸೇರಿ ನಡವೆ ಬಿಟ್ಟವರು.

ಮಕ್ಕಳ ಅನುಕೂಲತೆಯನ್ನು ಗಮನದಲ್ಲಿಟ್ಟುಕೊಂಡು "ವಿದ್ಯಾಚೇತನ" ಕೇಂದ್ರಗಳ ಸನ್ನಿವೇಶವನ್ನು ಆಯ್ಕೆ ಮಾಡಲಾಗುವುದು. ಬೋಧನೆ ಕಲಿಕೆಯ ಕಾಲಾವಧಿಯ ಸಡಿಲತೆಯಿಂದ ಕೂಡಿರುವುದು. ಚಿಣ್ಣರ ಅಂಗಳಕ್ಕಾಗಿ ತಯಾರಿಸಿದ ಪುಸ್ತಕಗಳೊಂದಿಗೆ ತರಗತಿಯ ಸಂವಹನ ಆರಂಭವಾಗುವುದು. ಇದರ ಪ್ರಭುತ್ವ

ಸಾಧಿಸಿದ ಕೂಡಲೇ ಮಕ್ಕಳಿಗೆ ಪರೀಕ್ಷೆ ನಡೆಸಿ, ಅವರ ಸಾಧನೆಯ ಮಟ್ಟಕ್ಕೆ ಅನುಗುಣವಾಗಿ ಇಲಾಖೆಯಿಂದ ನಿಗದಿತವಾದ ಪಠ್ಯಪುಸ್ತಕಗಳನ್ನು ನೀಡಲಾಗುವುದು. ಲೇಖನ ಪುಸ್ತಕಗಳು, ಪೆನ್ಸಿಲ್, ಪೆನ್ನು, ರೇಖಾಗಣಿತದ ಉಪಕರಣಗಳ ಪಟ್ಟಿಗೆ ಮತ್ತು ಪಠ್ಯಪುಸ್ತಕಗಳನ್ನು ಒದಗಿಸಲಾಗುವುದು. ದುಡಿಯುವ ಮಕ್ಕಳು ತಂಗಿ-ತಮ್ಮಂದಿರನ್ನು ನೋಡಿಕೊಳ್ಳಬೇಕಾಗಿರುವ ಹೆಣ್ಣು ಮಕ್ಕಳು ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಮಕ್ಕಳು, ವಲಸೆ ಬಂದ ಕುಟುಂಬಗಳ ಮಕ್ಕಳು, ಅವಕಾಶ ವಂಚಿತರಾದವರ ಮಕ್ಕಳು, ವಿಶೇಷ ಅವಶ್ಯಕತೆಯುಳ್ಳ ಮಕ್ಕಳು ಇದರ ವ್ಯಾಪ್ತಿಗೆ ಬರುವರು.

೫. ಅಕ್ಷರ : ೨೦೦೩ರ ವರೆಗೆ ಬೆಂಗಳೂರು ನಗರದಲ್ಲಿ ಸಾರ್ವತ್ರಿಕ ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಿಕ್ಷಣ ಸಾಧಿಸುವುದಕ್ಕಾಗಿ 'ಅಕ್ಷರ' ಎಂಬ ಹೊಸ ಕಾರ್ಯಕ್ರಮ ಪ್ರಾರಂಭವಾಯಿತು. ಸರ್ಕಾರ ಕಾರ್ಪೊರೇಟ್ ವಲಯ ಹಾಗೂ ಸ್ವಯಂ ಸೇವಾ ಕ್ಷೇತ್ರಗಳ ತ್ರಿಕೋನ ಪಾಲುದಾರಿಕೆಯಿಂದ ನಗರದದ್ಯಾಂತ ಬೃಹತ್ ಪ್ರಮಾಣದ ಸಂಘಟನೆಗಾಗಿ ತೆರೆದ ವೇದಿಕೆಯಂತೆ ಕಾರ್ಯ ನಿರ್ವಹಿಸುತ್ತದೆ.

ಮುಂಬಯಿ ನಗರದ ಪ್ರಥಮ ಅನುಭವ "ಅಕ್ಷರ"ಕ್ಕೆ ಸ್ಫೂರ್ತಿ. ಪ್ರಾರಂಭದಲ್ಲಿ ಈ ಕಾರ್ಯಕ್ರಮ ಎರಡು ಗುಂಪಿನ ವಯೋಮಾನದವರನ್ನು ಕುರಿತಾಗಿತ್ತು.

೧. ೩-೫ ವರ್ಷದ ಮಕ್ಕಳಿಗಾಗಿ ಬಾಲವಾಡಿ (ಶಾಲಾಪೂರ್ವ) ಕಾರ್ಯಕ್ರಮ

೨. ೬-೧೦ ವರ್ಷ ವಯೋಮಿತಿಯ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಸೇತುಬಂಧ ಕಾರ್ಯಕ್ರಮದ ಮೂಲಕ ಔಪಚಾರಿಕ ಶಿಕ್ಷಣದ ಮುಖ್ಯವಾಹಿನಿಗೆ ತರುವುದು.

ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ಕಲಿಕೆಯಲ್ಲಿ ನಿರೀಕ್ಷಿತ ಮಟ್ಟ ಮುಟ್ಟಲು ಹೆಚ್ಚಿನ ಗಮನ ಮತ್ತು ನೆರವು ಅಗತ್ಯವಿರುವವರಿಗೆ ನೆರವು ನೀಡುವುದು.

೬. ಸಮನ್ವಯ ಶಿಕ್ಷಣ : ಜನಶಾಲಾ ಬ್ಲಾಕ್‌ಗಳಲ್ಲಿ ಸಮನ್ವಯ ಶಿಕ್ಷಣವು ಸರ್ವರಿಗೂ ಶಿಕ್ಷಣ ಮತ್ತು ಮಗುವಿಗೂ ಶಿಕ್ಷಣದ ಅವಕಾಶ ಒದಗಿಸುವುದಾಗಿದೆ. ಊನಾಶಕ್ತಿ ಮಕ್ಕಳನ್ನು ಗುರ್ತಿಸಿ ಸಾಮಾನ್ಯ ಶಾಲೆಗಳಿಗೆ ದಾಖಲು ಮಾಡಿ, ಶೈಕ್ಷಣಿಕ ನೆರವು ಒದಗಿಸುವುದೇ ಈ ಕಾರ್ಯಕ್ರಮದ ಉದ್ದೇಶ. ಪಠ್ಯ ಕ್ರಮ ಹೊಂದಾಣಿಕೆ ಮತ್ತು ಬೋಧನಾ ಸಾಮಗ್ರಿಗಳಿಗೂ ನೆರವು ಒದಗಿಸುತ್ತದೆ. ೨೦೦೦-೦೧ರಲ್ಲಿ ಕಾರ್ಯಕ್ರಮದ ಅನುಷ್ಠಾನ ಪ್ರಾರಂಭವಾಯಿತು.

೭. ಸೂಕ್ಷ್ಮಯೋಜನೆ ಮೈಕ್ರೊ (ಯೋಜನೆ) : ಶಿಕ್ಷಕರ ೫ ಜನರ ಗುಂಪು ಒಂದೊಂದು ಗ್ರಾಮಕ್ಕೆ ಸಾಗಿ ಅಲ್ಲಿಯ ನಕ್ಷೆ, ಮಗುವಿನ ಹಾಜರಾತಿ, ಗೈರುಹಾಜರಾಗುವ ದಿನಮಾನಗಳ ಸಮೀಕ್ಷೆ, ಯಾವ ಕಾಲದಲ್ಲಿ ಮಗು ಶಾಲೆಯಿಂದ ಹೊರಗುಳಿಯುತ್ತದೆ ಎಂಬುದನ್ನು ಅರಿತುಕೊಂಡು ಯೋಜನೆ ರೂಪಿಸುವುದಾಗಿದೆ. ಅದರೊಂದಿಗೆ ಸಾಯಂಕಾಲದಲ್ಲಿ ಪ್ರಭಾತ ಫೇರಿ ಮಾಡಿ ಊರಿನ ಪ್ರಮುಖ ಸ್ಥಳದಲ್ಲಿ ಹಾಡು, ಏಕಪಾತ್ರಾಭಿನಯ, ನಾಟಕಗಳ, ಮೂಲಕ ಜನರಲ್ಲಿ ಶೈಕ್ಷಣಿಕ ಜಾಗೃತ ಮೂಡಿಸುವುದಾಗಿದೆ.

ಈ ರೀತಿಯಲ್ಲಿ ಭಾರತದ ಆಡಳಿತ ಸಂದರ್ಭಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಯೋಜನೆಗಳು, ಆಯೋಗಗಳು, ಚಿಂತನೆಗಳು, ವಿವಿಧ ರೀತಿಯ ಸಲಹೆ, ಸೂಚನೆ ಮತ್ತು ಪರಿಹಾರೋಪಾಯಗಳನ್ನು ನೀಡಿವೆ. ಆದರೂ ದೇಶದ ಎಲ್ಲಾ ಜಾತಿ ಸಮುದಾಯಗಳ ಮಕ್ಕಳಿಗೆ ಭಾಷಾ ಕಲಿಕೆಯ ದೃಷ್ಟಿಯಿಂದ ಪರಿಣಾಮಕಾರಿಯಾದ ವರದಿಗಳು ಬಂದಿಲ್ಲದಿರುವುದು ವಿಷಾದನೀಯ ಸಂಗತಿ.

ಅಧ್ಯಾಯ ಮೂರು

ಓದಿನ ಸಮಸ್ಯೆಗಳು

೩.೧. ಸ್ವರಗಳು

೩.೨. ವ್ಯಂಜನಗಳು

೩.೩. ಅರ್ಧಸ್ವರಗಳು

೩.೪. ಭಾಷಿಕೇತರ ಕಾರಣಗಳು

೩.೫. ಪರಿಹಾರೋಪಾಯಗಳು

ಅಧ್ಯಾಯ ೩

ಓದಿನ ಸಮಸ್ಯೆಗಳು

ಲಂಬಾಣಿ ಮಾತೃಭಾಷಿಕರ ಮಕ್ಕಳು ಶೈಕ್ಷಣಿಕ ಹಂತದಲ್ಲಿ ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ಕಲಿಯುತ್ತಿದ್ದಾರೆ. ಲಂಬಾಣಿಯನ್ನು ಮಾತೃಭಾಷೆಯನ್ನಾಗಿ ಹೊಂದಿದ ಮಕ್ಕಳು ಕನ್ನಡ ಭಾಷೆಗೆ ತೆರೆದು ಕೊಳ್ಳುವುದೇ ಶಾಲಾ ಪರಿಸರದಲ್ಲಿ. ಔಪಚಾರಿಕ ಶಿಕ್ಷಣದಲ್ಲಿ ಆಲಿಸುವುದು ಮತ್ತು ಮಾತನಾಡುವುದಕ್ಕಿಂತ ಓದುವ ಮತ್ತು ಬರೆಯುವ ಕೌಶಲಗಳನ್ನು ಪ್ರಧಾನವಾಗಿ ಕಲಿಸಲಾಗುತ್ತದೆ. ಏಕೆಂದರೆ ಆಲಿಸುವಿಕೆ ಮತ್ತು ಮಾತನಾಡುವ ಕೌಶಲಗಳನ್ನು ಪರಿಸರದ ಪ್ರಭಾವದಿಂದ, ಅನುಕರಣೆಯಿಂದ ಸ್ವಂತವಾಗಿ ಮಕ್ಕಳು ಕಲಿಯಲು ಸಾಧ್ಯ. ಇದು ಕನ್ನಡ ಮಾತೃಭಾಷೆಯನ್ನುಳ್ಳ ಮಕ್ಕಳ ಮತ್ತು ಕನ್ನಡದ ಸಾಮಾಜಿಕ ಪರಿಸರದಲ್ಲಿ ಬದುಕುವ ಇತರ ಭಾಷಿಕ (ತೆಲುಗು, ತುಳು, ಕೊಂಕಣಿ, ಉರ್ದು) ಮಕ್ಕಳ ವಿಚಾರದಲ್ಲಿ ಸರಿ. ಆದರೆ ಲಂಬಾಣಿ ಮಾತೃಭಾಷಿಕ ಮಕ್ಕಳು ಭೌಗೋಳಿಕ ಅಥವಾ ಪ್ರಾದೇಶಿಕವಾಗಿ ಕನ್ನಡ ಪರಿಸರದಲ್ಲಿ ಬದುಕುತ್ತಿದ್ದರೂ ಭಾಷಿಕವಾಗಿ ಕನ್ನಡ ಸಾಮಾಜಿಕ ಪರಿಸರದಿಂದ ದೂರವಾಗಿ ಪ್ರತ್ಯೇಕವಾಗಿ ಲಂಬಾಣಿ ಸಾಮಾಜಿಕ/ಭಾಷಿಕ ಪರಿಸರದಲ್ಲಿ ಬದುಕುತ್ತಿದ್ದಾರೆ. ಇಂಥ ಮಕ್ಕಳು ಶಾಲಾ ಆವರಣದಲ್ಲಷ್ಟೇ ಭಾಷೆಯ ನಾಲ್ಕೂ ಕೌಶಲಗಳನ್ನು ಕಲಿಯಬೇಕಾಗುತ್ತದೆ. ಹೀಗೆ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಕಲಿಯುವಲ್ಲಿ ಇತರ ಭಾಷಿಕ ಮಕ್ಕಳಿಗಿಂತ ದ್ವಿಗುಣವಾಗಿ ಹಲವಾರು ವಿಭಿನ್ನ ಸಮಸ್ಯೆಗಳನ್ನು ವಿವಿಧ ಹಂತಗಳಲ್ಲಿ ಎದುರಿಸುತ್ತಿದ್ದಾರೆ. ಅಂತಹ ವಿಭಿನ್ನ ಸಮಸ್ಯೆಗಳಲ್ಲಿ ಓದುವ ಹಂತದಲ್ಲಿನ ಸಮಸ್ಯೆಗಳು ಇವೆ.

ಅಧ್ಯಯನದ ವಿಶ್ಲೇಷಣೆ

ಲಂಬಾಣಿ ಭಾಷಿಕ ಮಕ್ಕಳು ಈಗಾಗಲೆ ಪ್ರಸ್ತಾವನೆಯಲ್ಲಿ ಹೇಳಿದ ಹಾಗೆ ಕನ್ನಡ ಭಾಷೆಯನ್ನು ಓದುವಾಗ ಹಲವಾರು ವಿಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪದಾದಿ, ಪದಮಧ್ಯ, ಮತ್ತು ಪದಾಂತ್ಯ ಪರಿಸರಗಳಲ್ಲಿ ಮಾಡುವ ವ್ಯತ್ಯಾಸಗಳನ್ನು ಎರಡು ರೀತಿಯ ವಿಧಾನಗಳನ್ನು ಅನುಸರಿಸಿ ಪತ್ತೆ ಹಚ್ಚಲಾಗಿದೆ.

ಮೊದಲಯದಾಗಿ ೧, ೨, ೩ ಮತ್ತು ೪ನೇ ತರಗತಿಯ ಆಯಾ ತರಗತಿಯ ಪಠ್ಯ ಪುಸ್ತಕಗಳಲ್ಲಿನ ಪದಕೋಶಿಯನ್ನು ಮೂಲಾಕ್ಷರಗಳು, ಗುಣಿತಾಕ್ಷರಗಳು, ಸಜಾತಿ ಒತ್ತಕ್ಷರಗಳು ಮತ್ತು ವಿಜಾತಿ ಒತ್ತಕ್ಷರಗಳು ಎಂದು ಅಕಾರಾದಿಯಾಗಿ ಪದಗಳ ಪಟ್ಟಿಯನ್ನು ತಯಾರಿಸಿಕೊಂಡು ಅವುಗಳನ್ನು ಒಂದರಿಂದ ನಾಲ್ಕೂ ತರಗತಿಯ ಮಕ್ಕಳ ಕಡೆಯಿಂದ ಓದಿಸುವ ಮೂಲಕ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮಾಡುವ ವ್ಯತ್ಯಾಸಗಳನ್ನು ಪತ್ತೆಹಚ್ಚಲಾಗಿದೆ.

ಎರಡನೆಯದಾಗಿ ೧, ೨, ೩ ಮತ್ತು ೪ನೇ ತರಗಳಿಗೆ ನಿಗಧಿಪಡಿಸಿದ ಪಠ್ಯ ಪುಸ್ತಕಗಳಲ್ಲಿನ ಗದ್ಯ ಮತ್ತು ಪದ್ಯಪಾಠಗಳನ್ನು ಓದಿಸಲಾಗಿದೆ. ಅಲ್ಲಿ ಮಾಡುವ ವಿಭಿನ್ನ ವ್ಯತ್ಯಾಸಗಳನ್ನು ಮತ್ತು ಎದುರಿಸುವ ಸಮಸ್ಯೆಗಳನ್ನು ಗುರುತಿಸಲಾಗಿದೆ. ಹೀಗೆ ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯತ್ಯಾಸಗಳನ್ನು ಬರಹದ ಕನ್ನಡ ಜೊತೆ ತುಲನೆ ಮಾಡಿ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಎದುರಿಸುವ ಕನ್ನಡ ಭಾಷೆಯ ಪದಗಳ ಓದುವಿಕೆಯಲ್ಲಿ ಮಾಡುವ ವ್ಯತ್ಯಾಸಗಳಿಗೆ ಕಾರಣಗಳನ್ನು ಭಾಷಿಕ ಮತ್ತು ಭಾಷಿಕೇತರವಾಗಿ ವಿಭಾಗಿಸಿಕೊಂಡು ಭಾಷಿಕ ಕಾರಣಗಳನ್ನು ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯತ್ಯಾಸಗಳನ್ನು ಉದಾಹರಣೆ ಸಹಿತ ಚರ್ಚಿಸಲಾಗಿದೆ. ಲಂಬಾಣಿ ಭಾಷಿಕ ಮಕ್ಕಳು ಮಾಡುವ ಈ ಎಲ್ಲಾ ಓದುವಿಕೆಯಲ್ಲಿನ ವ್ಯತ್ಯಾಸಗಳನ್ನು ಪತ್ತೆಹಚ್ಚಲು ಕನ್ನಡ ಮತ್ತು ಲಂಬಾಣಿ ಭಾಷೆಯ ವರ್ಣಮಾಲೆಯ ಪಟ್ಟಿಯನ್ನು ನೀಡಲಾಗಿದೆ. ಹಾಗೂ ಲಂಬಾಣಿ ಭಾಷೆಯ ಧ್ವನಿಮಾಗಳ ಬಳಕೆಯ ಸ್ವರೂಪದ ಆಧಾರದ ಮೇಲೆ ಕಾರಣಗಳನ್ನು ಖಚಿತವಾಗಿ ಹಾಗೂ ಸಂಭಾವನಾತ್ಮಕವಾಗಿ ನೀಡಲು ಪ್ರಯತ್ನಿಸಲಾಗಿದೆ. ನಂತರ ಓದುವಿಕೆಗೆ ಸಂಬಂಧಿಸಿದ ಒಟ್ಟಾರೆ ಭಾಷಿಕೇತರ ಕಾರಣಗಳನ್ನು ನೀಡಲಾಗಿದೆ. ಹಾಗೆ ಲಂಬಾಣಿ ಭಾಷಿಕ ಮಕ್ಕಳು ಓದುವಿಕೆಯಲ್ಲಿ ಮಾಡುವ ವ್ಯತ್ಯಾಸಗಳಿಗೆ ಕೈಗೊಳ್ಳಬೇಕಾದ ಮತ್ತು ಅನುಸರಿಸಬೇಕಾದ ಪರಿಹಾರೋಪಾಯಗಳನ್ನು ನೀಡಲಾಗಿದೆ.

೩.೧. ಸ್ವರಗಳನ್ನು ಓದುವಲ್ಲಿನ ಸಮಸ್ಯೆಗಳು

೩.೨. ವ್ಯಂಜನಗಳನ್ನು ಓದುವಲ್ಲಿನ ಸಮಸ್ಯೆಗಳು

೩.೩. ಅರ್ಧಸ್ವರಗಳನ್ನು ಓದುವಲ್ಲಿನ ಸಮಸ್ಯೆಗಳು

೩.೪. ಭಾಷಿಕೇತರ ಕಾರಣಗಳು

೩.೫. ಪರಿಹಾರೋಪಾಯಗಳು.

ಕನ್ನಡ ಭಾಷೆಯ ಧ್ವನಿಗಳ ಪಟ್ಟಿ

ಅ ಆ ಇ ಈ ಉ ಊ ಋ ಎ ಏ ಒ ಓ ಔ ಅಂ ಅಃ
ಕ ಖ ಗ ಘ ಙ
ಚ ಛ ಜ ಝ ಞ
ಟ ಠ ಡ ಢ ಣ
ತ ಥ ದ ಧ ನ
ಪ ಫ ಬ ಭ ಮ
ಯ ರ ಲ ವ ಶ ಷ ಸ ಹ ಳ

ಲಂಬಾಣಿ ಭಾಷೆಯಲ್ಲಿ ೧೦ ಸ್ವರಗಳು, ೩೦ ವ್ಯಂಜನಗಳು ಬಳಕೆಯಲ್ಲಿವೆ

ಸ್ವರ ಧ್ವನಿಮಾಗಳ ಪಟ್ಟಿ

	ಪೂರ್ವ ಆವೃತ್ತ	ಮಧ್ಯ ಆವೃತ್ತ	ಪಶ್ಚ ಸಂವೃತ್ತ
ಉನ್ನತ	ಇ, ಈ	--	ಉ, ಊ
ಮಧ್ಯ	ಎ, ಏ	--	ಒ, ಓ
ಅವನತ	--	ಅ, ಆ	--

ವ್ಯಂಜನಗಳ ಪಟ್ಟಿ

ಉಚ್ಚಾರಣಾ ಸ್ಥಾನ		ಉಭಯೋಷ್ಠ್ಯ ಓಷ್ಠ್ಯ		ದಂತ್ಯ		ದಂತ ಮೂಲೀಯ ತಾಲವ್ಯ		ಮೂರ್ಧನ್ಯ		ಕಂಠ್ಯ		ಗಲೀಯ
		ಅಲ್ಪ ಪ್ರಾಣ	ಮಹಾ ಪ್ರಾಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅಲ್ಪ ಪ್ರಾಣ	ಮಹಾ ಪ್ರಾಣ	ಅಲ್ಪ ಪ್ರಾಣ	ಮಹಾ ಪ್ರಾಣ	
ಸ್ಪರ್ಶ	ಅಘೋಷ	ಫ್	ಪ್	ತ್	ಥ	ಚ್	ಛ್	ಟ್	ಠ್	ಕ್	ಖ್	
	ಘೋಷ	ಬ್	ಭ್	ದ್	ಧ್	ಜ್	ಝ್	ಡ್	ಢ್	ಗ್	ಘ್	
ಘರ್ಷ	ಅಘೋಷ						ಸ್					ಹ್
	ಘೋಷ											
ಅನುನಾಸಿಕ	ಅಘೋಷ											
	ಘೋಷ	ಮ್		ನ್				ಣ್				
ಪಾರ್ಶ್ವಿಕ	ಅಘೋಷ											
	ಘೋಷ					ಲ್		ಳ್				
ಕಂಪಿತ	ಅಘೋಷ											
	ಘೋಷ					ರ್						
ಅರ್ಧವ್ಯಂಜನ	ಘೋಷ	ವ್				ಯ್						

Note: Barikeri V.H. - A Descriptive analyses of Lambani Language Spoken in Bijapur District, 1982, P. 11-12

೩.೧. ಸ್ವರಗಳನ್ನು ಓದುವಾಗ ಎದುರಿಸುವ ಸಮಸ್ಯೆಗಳು

ಲಂಬಾಣಿ ಭಾಷಿಕರ ಮಕ್ಕಳು ಶಾಲಾ ತರಗತಿಗಳಲ್ಲಿ ಕನ್ನಡ ಸ್ವರಗಳನ್ನು ಓದುವಾಗ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಯಾವ ರೀತಿಯಾಗಿ ಉಚ್ಚಾರಣೆ ಮಾಡಿ ಓದುತ್ತಾರೆ ಎನ್ನುವುದನ್ನು ಈ ಕೆಳಗಿನಂತೆ ವಿಶ್ಲೇಷಣೆ ಮಾಡಲಾಗಿದೆ.

೧ ಅ > ಆ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿ ಬದಲು ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಅಯ	ಆಯಾ
	ಅದು	ಆದೂ
	ಅರ	ಆರಾ
	ಅಗಲ	ಆಗಾಲಾ
	ಅವನು	ಆವಾನೂ
	ಅಗರ	ಆಗಾರಾ
	ಅದರ	ಆದಾರಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಅವನು	ಆವಾನೂ
	ಇವಳ	ಈವಾಳಾ/ಲಾ
	ಈಚಲ	ಈಚಾಲಾ
	ಗಲಿವರ	ಗಲೀವಾರಾ
	ಅವಸರ	ಆವಸಾರಾ
	ಗರಗಸ	ಗಾರಗಾಸಾ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಅರ	ಆರಾ
	ಆಲ	ಆಲಾ
	ಈಶ	ಈಶಾ
	ದಯ	ದಯಾ
	ಓಟ	ಓಟಾ
	ಈಚಲ	ಈಚಾಲಾ
	ದರಗ	ದಾರಾಗಾ
	ಸರಸರ	ಸಾರಸಾರಾ

ಶೈಕ್ಷಣಿಕ ಹಂತದಲ್ಲಿ ಕನ್ನಡವನ್ನು ಪ್ರಥಮಭಾಷೆಯಾಗಿ ಕಲಿಯುವ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ತಮ್ಮ ಮಾತೃಭಾಷೆಯಾದ ಲಂಬಾಣಿ ಭಾಷೆಯ ಮೂಲಕವೇ ಗ್ರಹಿಕೆ ಮತ್ತು ಕಲಿಕೆ ನಡೆಯುತ್ತಿರುತ್ತದೆ. ಈ ರೀತಿಯ ಕಲಿಕೆಯ ಸಂದರ್ಭದಲ್ಲಿ ಕನ್ನಡದ ಧ್ವನಿ ಉಚ್ಚಾರಣೆ ಮಾಡುವಾಗ ದೀರ್ಘವಾಗಿ ಓದುವುದು ಕಂಡುಬರುತ್ತದೆ.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಅಗ್ರವಿವೃತ, ಅಗೋಳದೀರ್ಘಸ್ವರ 'ಆ' ಧ್ವನಿಯಾ ಪದಗಳು ಎಲ್ಲಾ ಪರಿಸರಗಳಲ್ಲಿಯೂ ಹೆಚ್ಚಾಗಿ ಕಂಡುಬರುವುದರಿಂದ ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿಮಾದ ಪದಗಳನ್ನು ದೀರ್ಘಮಾಡಿ ಉಚ್ಚಾರಣೆ ಮಾಡುತ್ತಾರೆ. ಉದಾಹರಣೆಗೆ ಅಂಗೂಟ > ಆಂಗೂಟ (ಹೆಬ್ಬೆರಳು), ಕರಾರ್ > ಕಾರಾರ್ (ಕನ್ಯಾಶುಲ್ಕ), ಕಪಾಳೋ > ಕಾಪಾಳೋ (ಹಣೆ), ಮ > ಮಾ (ನಾನು), ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡದ ಎಲ್ಲಾ ಪರಿಸರಗಳಲ್ಲಿಯೂ ದೀರ್ಘವಾಗಿ ಓದುತ್ತಾರೆ. ಈ ಮಾದರಿಯ ವ್ಯತ್ಯಾಸಕ್ಕೆ ಕನ್ನಡ ಭಾಷೆ ಕಾರಣವಲ್ಲ. ಅವರ ಮಾತೃಭಾಷೆಯಾದ ಲಂಬಾಣಿ ಭಾಷೆಯ ಪ್ರಭಾವ ಕಾರಣವಾಗಿದೆ.

೬. ಆ > ಅ

ಪದಾದಿ, ಪದಮಧ್ಯ ಪರಿಸರಗಳಲ್ಲಿ ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಧ್ವನಿಮಾದ ಬದಲು ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿಯನ್ನು ಓದುತ್ತಾರೆ. ಈ ಒಂದು ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಆಲ	ಅಲಾ
	ಆಳ	ಅಲಾ/ಳಾ
	ಆಗಸ	ಅಗಸಾ
	ಆಕಾಶ	ಅಕಸಾ
	ಆಕಳು	ಅಕಲೂ

ಪದಮಧ್ಯ ಪರಿಸರ

	ಬರಹದ ಕೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕಾಲು	ಕಲೂ
	ಬಾಲ	ಬಲಾ
	ಕಾಡು	ಕಡೂ
	ದಾರಿ	ದರೀ
	ನಗಾರಿ	ನಗರೀ
	ನಾಯಕ	ನಯಕಾ
	ಮಾಲೀಕ	ಮಲಿಕಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಮತ್ತು ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಈ ಎರಡು ಧ್ವನಿಮಾಗಳಲ್ಲಿನ ಅಲ್ಪ ಧ್ವನಿ ವ್ಯತ್ಯಾಸವನ್ನು ಗುರುತಿಸದ ಲಂಬಾಣಿ ಭಾಷಿಕ ಮಕ್ಕಳು ಗೊಂದಲದ ಕಾರಣದಿಂದಾಗಿ ಈ ರೀತಿಯಾಗಿ ಓದುತ್ತಾರೆ.

೬ ಇ > ಈ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಧ್ವನಿಮಾದ ಬದಲು ಅಗ್ರಸಂವೃತ ಅಗೋಳದೀರ್ಘಸ್ವರ 'ಈ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ	ಇಲಿ	ಈಲೀ
	ಇನ	ಈನಾ
	ಇಡು	ಈಡೂ
	ಇವನು	ಈವಾನೂ
	ಇದರ	ಈದಾರಾ
	ಇರುವೆ	ಈರೂವೇ
	ಇವರು	ಈವಾರೂ
	ಇತರ	ಈತಾರಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಗಿಡ	ಗೀಡಾ
ಜಿಗಿ	ಜೀಗಿ
ನಿಧಿ	ನೀದೀ
ಕಿವಿ	ಕೀವೀ
ಅರಿವು	ಅರೀವೂ
ಚಿರತೆ	ಚೀರತಾ
ಮಿರಿಮಿರಿ	ಮೀರಿಮೀರೀ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಅರಿ	ಅರೀ
ಮಾಡಿ	ಮಾಡೀ
ಜಿಗಿ	ಜೀಗೀ
ಕಿವಿ	ಕೀವೀ
ನದಿ	ನಾದೀ
ಸರಿ	ಸಾರೀ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಅಗ್ರಸಂವೃತ ದೀರ್ಘಸ್ವರ 'ಈ' ಧ್ವನಿಮಾ ಎಲ್ಲಾ ಪರಿಸರಗಳಲ್ಲೂ ಹೆಚ್ಚಾಗಿ ಕಂಡುಬರುವುದರಿಂದ, ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಧ್ವನಿ ಆದಿಯಲ್ಲಿ ಕಂಡುಬರುವುದಿಲ್ಲ. ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಕಂಡು ಬಂದರೂ ದೀರ್ಘವಾಗಿಯೇ ಬಳಕೆ ಮಾಡುತ್ತಾರೆ. ಉದಾಹರಣೆಗೆ ಸಿಜಾಡ್ > ಸೀಜಾಡ್ (ಕುದಿಸು), ಚಿತೋ > ಚೀತೋ (ಚಿರತೆ), ಕುಕ್‌ಡಿ > ಕೂಕಡೀ (ಕೋಳಿ), ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡದ ಎಲ್ಲಾ ಪರಿಸರಗಳಲ್ಲಿಯೂ 'ಇ' ಧ್ವನಿ ಬದಲು 'ಈ' ಧ್ವನಿ ಓದುತ್ತಾರೆ.

೬ ಈ > ಇ

ಪದಾದಿ ಮತ್ತು ಪದಮಧ್ಯ ಪರಿಸರಗಳಲ್ಲಿ ಅಗ್ರಸಂವೃತ ಅಗೋಳದೀರ್ಘಸ್ವರ 'ಈ' ಧ್ವನಿಮಾದ ಬದಲು ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಧ್ವನಿಮಾವನ್ನು ಮೂರು ಮತ್ತು ನಾಲ್ಕನೇ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಈಟಿ	ಇಟೀ
	ಈರ	ಇರಾ
	ಈಗ	ಇಗಾ
	ಈವೆ	ಇವೇ
	ಈಚಲ	ಇಚಲಾ
	ಈಡೇರು	ಇಡೆರೂ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಚೀರು	ಚಿರೂ
	ಬೀಗು	ಬಿಗೂ
	ಕೀಟ	ಕಿಟಾ
	ಕೀರಲು	ಕಿರಲೂ
	ಕಿರೀಟ	ಕಿರಿಟಾ

ಈ ಮೇಲಿನ ಉದಾಹರಣಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಅಗ್ರಸಂವೃತ ಅಗೋಳದೀರ್ಘಸ್ವರ 'ಈ' ಮತ್ತು ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಎರಡೂ ಧ್ವನಿಗಳಲ್ಲಿನ ಅಲ್ಪ ಧ್ವನಿ ವ್ಯತ್ಯಾಸವನ್ನು ಸರಿಯಾಗಿ ಗುರುತಿಸದೆ ಗೊಂದಲದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯಾಗಿ ಓದುತ್ತಾರೆ.

☯ ಉ > ಊ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಪಶ್ಚಸಂವೃತಗೋಳ ಹ್ರಸ್ವಸ್ವರ 'ಉ' ಧ್ವನಿಮಾದ ಬದಲು ಪಶ್ಚಸಂವೃತಗೋಳ ದೀರ್ಘಸ್ವರ 'ಊ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಉರಿ	ಊರಿ
	ಉಡು	ಊಡೂ
	ಉಡ	ಊಡಾ
	ಉದಯ	ಊದಾಯಾ
	ಉರಗ	ಊರಾಗಾ
	ಉದರ	ಊದಾರಾ
	ಉಸಿರು	ಊಸೀರೂ
	ಉಪಕಾರ	ಊಪಕಾರಾ
	ಉಳಿತಾಯ	ಊಳೀತಾಯಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕುಲ	ಕೂಲಾ
	ಗುರು	ಗೂರೂ
	ಕುದುರೆ	ಕೂದರೆ
	ಬಿರುದು	ಬೀರೂದೂ
	ಉಸುಕು	ಊಸೂಕು
	ಚುರುಚುರು	ಚೂರುಚೂರು
	ತಿರುಗಾಡು	ತೀರೂಗಾಡು

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಊರು	ಊರೂ
ಏಳು	ಏಳೂ
ಒದರು	ಓದಾರೂ
ಬಯಸು	ಬಾಯಾಸೂ
ಹಿಡಿದು	ಈಡೀದೂ
ಬಲಿಯಾಗು	ಬಲಿಯಾಗೂ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಪಶ್ಚಸಂವೃತಗೋಳ ದೀರ್ಘಸ್ವರ 'ಊ' ಧ್ವನಿ ಎಲ್ಲಾ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಪಶ್ಚಸಂವೃತಗೋಳ ಹ್ರಸ್ವಸ್ವರ 'ಉ' ಧ್ವನಿಯನ್ನು ದೀರ್ಘವಾಗಿಯೆ ಬಳಕೆ ಮಾಡುತ್ತಾರೆ. ಉದಾಹರಣೆಗೆ ಉಂದರ್ > ಊಂದರ್ (ಇಲಿ), ಮುಂಡೋ > ಮೂಂಡೋ (ಮುಖ), ದಾರು > ದಾರೂ (ಸರಾಯಿ), ಅದ್ದರಿಂದ ಮಾತೃಭಾಷೆಯ ಪ್ರಭಾವದಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡದ ಎಲ್ಲಾ ಪರಿಸರದಲ್ಲಿಯೂ 'ಉ' ಧ್ವನಿ ಬದಲು 'ಊ' ಧ್ವನಿಯನ್ನು ಓದುತ್ತಾರೆ.

೬ ಊ > ಉ

ಪದಾದಿ, ಪದಮಧ್ಯ ಪರಿಸರದಲ್ಲಿ ಪಶ್ಚಸಂವೃತಗೋಳ ದೀರ್ಘಸ್ವರ 'ಊ' ಧ್ವನಿಯ ಬದಲು ಪಶ್ಚಸಂವೃತಗೋಳ ಹ್ರಸ್ವಸ್ವರ 'ಉ' ಧ್ವನಿಯನ್ನು ಮೂರು ಮತ್ತು ನಾಲ್ಕನೆ ತರಗತಿ ಮಕ್ಕಳು ಓದುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಮೂಡು	ಮುಡೂ
	ಕೂಸು	ಕುಸೂ
	ಗೂಡಾಸೆ	ಗುಡಾಸೇ
	ರೂವಾರಿ	ರುವಾರೀ
	ಕೂಡಿಸು	ಕುಡೀಸೂ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡದಲ್ಲಿ ಪಶ್ಚಸಂವೃತಗೋಳ ಹ್ರಸ್ವಸ್ವರ 'ಉ' ಮತ್ತು ಪಶ್ಚಸಂವೃತಗೋಳ ದೀರ್ಘಸ್ವರ, 'ಊ' ಈ ಎರಡು ಧ್ವನಿಯ ಅಲ್ಪ ವ್ಯತ್ಯಾಸವನ್ನು ಗಮನಿಸದೆ ಗೊಂದಲದ ಕಾರಣದಿಂದ ಈ ರೀತಿಯ ವ್ಯತ್ಯಾಸವನ್ನು ಮಾಡುತ್ತಾರೆ.

೬ ಋ > ರು

ಪದಾದಿ, ಪದಮಧ್ಯ ಪರಿಸರದಲ್ಲಿ ಸ್ವರಧ್ವನಿ 'ಋ' ದ ಬದಲು ವರ್ತ್ಸ್ಯಕಂಪಿತ ವ್ಯಂಜನ 'ರು' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಋಷಿ	ರೂಸೀ
	ಋಜು	ರೂಜು
	ಋತು	ರೂತು
	ಋಣ	ರೂಣ/ನಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ವೃತ್ತ	ರೂತಾ
	ವೃತ್ತಿ	ರೂತೀ
	ವೃಷಭ	ರೂಸಬಾ
	ಕೃತಕ	ಕುತಕಾ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ 'ಋ' ಕಾರ ಕಂಡುಬರುವುದಿಲ್ಲ. ಅಲ್ಲದೆ ಸ್ವರಧ್ವನಿ 'ಋ' ಮತ್ತು ವರ್ತ್ಸ್ಯಕಂಪಿತ ವ್ಯಂಜನ 'ರು' ಧ್ವನಿ ಎರಡೂ ಉಚ್ಚಾರಣಾ ಸಾಮ್ಯತೆಯನ್ನು ಹೊಂದಿರುವುದರಿಂದ ಗೊಂದಲದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೬ ಎ > ಏ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಅಗ್ರಅರ್ಧಸಂವೃತ ಅಗೋಳಹ್ರಸ್ವಸ್ವರ 'ಎ' ಧ್ವನಿಯ ಬದಲು ಅಗ್ರಅರ್ಧಸಂವೃತ ಅಗೋಳದೀರ್ಘಸ್ವರ 'ಏ' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಎಲೆ	ಏಲೇ
	ಎಡ	ಏಡಾ
	ಎರಕ	ಏರಕಾ
	ಎದೆಯ	ಏದೇಯಾ
	ಎರಡು	ಏರಾಡೂ
	ಎದುರು	ಏದೂರೂ
	ಎರವಲು	ಏರವಲೂ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕೆಡು	ಕೇಡೂ
	ನೆಲ	ನೇಲಾ
	ಕೆಲ	ಕೇಲಾ
	ತೆರ	ತೇರಾ
	ಚೆಲುವು	ಚೇಲುಊ
	ನೆರವು	ನೇರಊ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಆನೆ	ಆನೇ
	ಮನೆ	ಮನೇ
	ಬರೆ	ಬರೇ
	ಮರೆ	ಮಾರೇ
	ಒನಕೆ	ಓನಕೇ
	ಅಟಿಕೆ	ಅಟಿಕೇ
	ಬೆದರಿಕೆ	ಬೇದರಿಕೇ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಅಗ್ರಅರ್ಧಸಂವೃತ ಅಗೋಳದೀರ್ಘಸ್ವರ 'ಏ' ಧ್ವನಿ ಎಲ್ಲಾ ಪರಿಸರಗಳಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಅಗ್ರಅರ್ಧಸಂವೃತ ಅಗೋಳಹ್ರಸ್ವಸ್ವರ 'ಎ' ಧ್ವನಿ ಪದಾದಿಯಲ್ಲಿ ಕಂಡುಬರುವುದಿಲ್ಲ. ಪದಮಧ್ಯ ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಕಂಡು ಬಂದರೂ ದೀರ್ಘವಾಗಿಯೇ ಬಳಕೆ ಮಾಡುತ್ತಾರೆ. ಉದಾಹರಣೆಗೆ ವೆಂಗಣ > ವೇಂಗಣ್ (ಬದನೆಕಾಯಿ), ಪೆಟ್‌ಗಿ > ಪೇಟ್‌ಗಿ (ಪೆಟ್ಟಿಗೆ), ಬೇನೆ > ಬೇನೇ (ಸಹೋದರಿಯರು) ಆದ್ದರಿಂದ ಮಾತೃಭಾಷೆಯ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದ ಎಲ್ಲಾ ಪರಿಸರದಲ್ಲಿಯೂ 'ಎ' ಧ್ವನಿಯ ಬದಲು 'ಏ' ಧ್ವನಿಯನ್ನು ಓದುತ್ತಾರೆ.

☯ ಏ > ಎ

ಪದಾದಿ, ಪದಮಧ್ಯ ಪರಿಸರದಲ್ಲಿ ಅಗ್ರಅರ್ಧಸಂವೃತ ಅಗೋಳದೀರ್ಘಸ್ವರ 'ಏ' ಧ್ವನಿಯ ಬದಲು ಅಗ್ರಅರ್ಧಸಂವೃತ ಅಗೋಳಹ್ರಸ್ವಸ್ವರ 'ಎ' ಧ್ವನಿಯನ್ನು ನಾಲ್ಕನೆ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಏರು	ಎರೂ
	ಏವ	ಎವಾ
	ಏಡ	ಎಡಾ
	ಏತಕ್ಕೆ	ಎತಕೇ
	ಏಕರೂಪ	ಎಕಾರೂಪಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ತೇರು	ತೆರೂ
	ವೇಗ	ವೆಗಾ
	ದೇಗುಲ	ದೆಗುಲಾ
	ಬೇಯಿಸಿ	ಬೆಇಸೀ
	ನೇತಾಡು	ನೆತಾಡೂ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡದಲ್ಲಿ ಅಗ್ರಅರ್ಧಸಂವೃತ ಅಗೋಳದೀರ್ಘಸ್ವರ 'ಏ' ಮತ್ತು ಅಗ್ರಅರ್ಧಸಂವೃತ ಅಗೋಳಹ್ರಸ್ವಸ್ವರ 'ಎ' ಈ ಎರಡೂ ಧ್ವನಿಗಳ ಅಲ್ಪ ವ್ಯತ್ಯಾಸದ ಉಚ್ಚಾರಣೆಯನ್ನು ಗುರುತಿಸದೆ ಹಾಗೂ ರೂಪ ಸಾಮ್ಯತೆಯ ಗೊಂದಲದ ಕಾರಣದಿಂದ ಈ ರೀತಿಯಾಗಿ ಓದುತ್ತಾರೆ.

೬ ಒ > ಓ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಮಾದ ಬದಲು ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಒಲೆ	ಓಲೇ
	ಒಬ್ಬ	ಓಬಾ
	ಒಮ್ಮೆ	ಓಮೆ
	ಒಗರು	ಓಗರೂ
	ಒಣಗು	ಓನಗೂ
	ಒದರು	ಓದರೂ
	ಒಡನಾಡಿ	ಓಡನಾಡಿ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಕೊಡು	ಕೋಡು
ಗೊನೆ	ಗೋನೇ
ದೊರೆ	ದೋರೆ
ಕೊಲೆ	ಕೋಲೇ
ಕೊಠಡಿ	ಕೋಟಡಿ
ತೊಲಗು	ತೋಲಾಗು
ಕೊರಡು	ಕೋರಡೂ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಬಾರೊ	ಬಾರೋ
	ಇರೊ	ಈರೋ
	ತೋರೊ	ತೋರೋ
	ಯಾವನೊ	ಯಾವನೋ
	ಯಾರದೊ	ಯಾರದೋ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಧ್ವನಿ ಎಲ್ಲಾ ಪರಿಸರದಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಪದಾದಿಯಲ್ಲಿ ಕಂಡುಬರುವುದಿಲ್ಲ. ಪದಮಧ್ಯ ಮತ್ತು ಪದ್ಯಾಂತ ಪರಿಸರದಲ್ಲಿ ಕಂಡುಬಂದರೂ ದೀರ್ಘವಾಗಿಯೇ ಬಳಕೆ ಮಾಡುವರು. ಉದಾಹರಣೆಗೆ ಕೊನಾ > ಕೋನಾ (ಮೂಲೆ), ಕೊಕಡಿ > ಕೋಕಡಿ (ಗೋಡಂಬಿ), ತಾಂಡ್ಯೊ > ತಾಂಡ್ಯೋ (ಪುರುಷ), ಖವೊ > ಖಾವೋ (ಭುಜ) ಆದ್ದರಿಂದ ಲಂಬಾಣಿ ಭಾಷಿಕ ಮಕ್ಕಳು ಮಾತೃಭಾಷೆಯ ಪ್ರಭಾವದಿಂದಾಗಿ ಕನ್ನಡದ ಎಲ್ಲಾ ಪರಿಸರಗಳಲ್ಲಿ 'ಒ' ಧ್ವನಿಯ ಬದಲು 'ಓ' ಧ್ವನಿಯನ್ನು ಓದುತ್ತಾರೆ.

೬ ಒ > ಬ

ಪದಾದಿ ಪರಿಸರದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಮಾದ ಬದಲು ಧ್ವಯೋಷ್ಠ್ಯ ಘೋಷಸ್ಪರ್ಶವ್ಯಂಜನ 'ಬ' ಧ್ವನಿಯನ್ನು ಒಂದರಿಂದ ಮೂರನೆ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಒಲೆ	ಬಲೇ
	ಒಳ	ಬಳಾ/ಲಾ
	ಒಂದು	ಬದು
	ಒರಗೆ	ಬರಗೇ
	ಒಣಮರ	ಬನಮರಾ
	ಒಡನಾಡಿ	ಬಡನಾಡೀ

ಈ ಮೇಲಿನ ವ್ಯತ್ಯಾಸಕ್ಕೆ ಕನ್ನಡದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಮತ್ತು 'ಬ'

ದ್ವಯೋಷ್ಠ್ಯ ಘೋಷಸ್ಪರ್ಶವ್ಯಂಜನ ಧ್ವನಿ ಇವೆರಡರ ರಚನೆಯ ಅಲ್ಪ ಸೌಮ್ಯತೆಯನ್ನು ಗುರುತಿಸದೆ ಗೊಂದಲದ ಕಾರಣದಿಂದಾಗಿ ಈ ರೀತಿಯಾಗಿ ಓದುತ್ತಾರೆ.

೬ ಒ > ವ

ಪದಾದಿ ಪರಿಸರದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಯ ಬದಲು ದಂತೋಷ್ಠ್ಯ ಅರ್ಧಸ್ವರ 'ವ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಒಲೆ	ವಲೇ
	ಒಂಟೆ	ವಂಟೇ
	ಒಂದು	ವಂದೂ
	ಒನಕೆ	ವನಕೇ
	ಒರಗು	ವರಗೂ

ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಪದಾದಿ ಪರಿಸರದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಕಂಡುಬರುವುದಿಲ್ಲ. ಕನ್ನಡದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಮತ್ತು ದಂತೋಷ್ಠ್ಯ ಅರ್ಧಸ್ವರ 'ವ' ಧ್ವನಿ ಇವರೆಡು ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯಾಗಿ ಓದುತ್ತಾರೆ.

೬ ಓ > ಒ

ಪದಾದಿ, ಪದಮಧ್ಯ ಪರಿಸರದಲ್ಲಿ ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಧ್ವನಿಯ ಬದಲು ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಯನ್ನು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಓದು	ಒದೂ
	ಓಡು	ಒಡೂ
	ಓರೆ	ಒರೇ
	ಓಲಗ	ಒಲಗಾ
	ಓಗರ	ಒಗರಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ತೋಪು	ತೊಪೂ
	ತೋಟ	ತೊಟಾ
	ಕೋಲು	ಕೊಲೂ
	ಹತೋಟಿ	ಅತೊಟೀ
	ಬೋಧನೆ	ಬೊದನೇ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡದಲ್ಲಿ ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಮತ್ತು ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗುರುತಿಸದೆ, ರೂಪ ಸಾಮ್ಯತೆಯ ಗೊಂದಲದ ಕಾರಣದಿಂದಾಗಿ ಈ ರೀತಿಯಾಗಿ ಓದುತ್ತಾರೆ.

ಸಂಧ್ಯಾಕ್ಷರ

೬ ಐ > ಆಯ್ ಪದಾದಿ

ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಸಂಧ್ಯಾಕ್ಷರವಾದ 'ಐ' ಧ್ವನಿಯ ಬದಲು 'ಆಯ್' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಐದು	ಆಯ್‌ದು
	ಐಬು	ಆಯ್‌ಬು
	ಐರಾವತ	ಆಯ್‌ರಾವತಾ
	ಐನೂರು	ಆಯ್‌ನೂರೂ
	ಐವತ್ತು	ಆಯ್‌ವತ್ತು

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ವೈರಿ	ವಾಯ್ರೀ
	ದೈವ	ದಾಯ್ವಾ
	ಕೈದಿ	ಕಾಯ್ದೀ
	ಮೈಮರೆ	ಮಾಯ್ಮರೇ
	ಐಕ್ಯೆಕ	ಐಕಾಯ್ಕಾ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕೈ	ಕಾಯ್
	ಮೈ	ಮಾಯ್

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಸಂಧ್ಯಾಕ್ಷರ 'ಐ' ಧ್ವನಿ ಕಂಡುಬರುವುದಿಲ್ಲ. ಕನ್ನಡದಲ್ಲಿ 'ಐ' ಧ್ವನಿಯನ್ನು ಉಚ್ಚಾರಣ ರೀತಿ ತಿಳಿಯದ ಮತ್ತು ಶಿಕ್ಷಕರು ಸ್ಪಷ್ಟವಾಗಿ ಹೇಳಿ ಕಲಿಸದೆ ಇರುವ ಕಾರಣದಿಂದಾಗಿ ಈ ರೀತಿಯ ವ್ಯತ್ಯಾಸದಿಂದ ಓದುತ್ತಾರೆ.

೬ ಔ >ಅವ್ ಪದಾದಿ

ಪದಮಧ್ಯ ಪರಿಸರಗಳಲ್ಲಿ ಸಂಧ್ಯಾಕ್ಷರ 'ಔ' ಧ್ವನಿಯ ಬದಲು 'ಅವ್' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಔಷಧ	ಅವ್ಸದಾ
	ಔಡಲ	ಅವ್ಡಲಾ
	ಔರಸ	ಅವ್ರಸಾ
	ಔತಣ	ಅವ್ತಣಾ
	ಔಪಚಾರಿಕ	ಅವ್ಪಚಾರೀಕಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಹೌದು	ಆವ್‌ದೂ
	ಪೌರ	ಪಾವ್‌ರಾ
	ಕೌರವ	ಕಾವ್‌ರವಾ
	ಕೌಮುದಿ	ಕಾವ್‌ಮುದಿ
	ಗೌರವ	ಗಾವ್‌ರವಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಸಂಧ್ಯಾಕ್ಷರ 'ಔ' ಧ್ವನಿಯು ಕಂಡು ಬರುವುದಿಲ್ಲ. ಅಲ್ಲದೆ ಕನ್ನಡದಲ್ಲಿ ಲಂಬಾಣಿ ಮಕ್ಕಳು 'ಔ' ಧ್ವನಿಯನ್ನು ಸರಿಯಾಗಿ ಗ್ರಹಿಸದೆ ಅದನ್ನು ಬಿಡಿಯಾಗಿ ಓದುತ್ತಾರೆ.

೬ ಔ > ಜಾ

ಪದಾದಿ ಪರಿಸರದಲ್ಲಿ ಸಂಧ್ಯಾಕ್ಷರ 'ಔ' ಧ್ವನಿಯ ಬದಲು ತಾಲವ್ಯಘೋಷ ಈಷತ್‌ಸ್ಪರ್ಶ ವ್ಯಂಜನ 'ಜಾ' ಧ್ವನಿಯನ್ನು ಒಂದರಿಂದ ಮೂರನೆ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಔಷಧ	ಜಾಸದ
	ಔಡಲ	ಜಾಡಲಾ
	ಔತಣ	ಜಾತಣ
	ಔಪಚಾರಿಕ	ಜಾಪಚಾರಿಕಾ

ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡದಲ್ಲಿ ಸಂಧ್ಯಾಕ್ಷರ 'ಔ' ಮತ್ತು ತಾಲವ್ಯಘೋಷ ಈಷತ್‌ಸ್ಪರ್ಶ ದೀರ್ಘವ್ಯಂಜನ 'ಜಾ' ಇವೆರಡು ಧ್ವನಿಗಳ ರೂಪ ಸಾದೃಶ್ಯದಲ್ಲಿನ ಅಲ್ಪವ್ಯತ್ಯಾಸವನ್ನು ಗುರುತಿಸದೆ ಗೊಂದಲದ ಕಾರಣದಿಂದಾಗಿ ಈ ರೀತಿ ವ್ಯತ್ಯಾಸ ಮಾಡಿ ಓದುತ್ತಾರೆ.

೩.೨ ವ್ಯಂಜನಗಳನ್ನು ಓದುವಲ್ಲಿನ ಸಮಸ್ಯೆಗಳು

೬ ಖ > ಕಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಕಂಠ್ಯಅಘೋಷ ಸ್ಪರ್ಶಮಹಾಪ್ರಾಣ ವ್ಯಂಜನ 'ಖ' ಧ್ವನಿಮಾ ಬದಲು ಕಂಠ್ಯಅಘೋಷ ಸ್ಪರ್ಶದೀರ್ಘವ್ಯಂಜನ 'ಕಾ' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಖಗ	ಕಾಗಾ
	ಖರ	ಕಾರಾ
	ಖಜಾನೆ	ಕಾಜಾನೆ
	ಖಚಿತ	ಕಾಚಿತಾ
	ಖಂಡಿತ	ಕಾಡಿತಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಶಿಖರ	ಸಿಕಾರಾ
ಲೇಖನಿ	ಲೇಕಾನೀ
ನಿಖರ	ನೀಕಾರಾ
ದಾಖಲೆ	ದಾಕಾಲೆ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಮುಖ	ಮೂಕಾ
ಸಖ	ಸಕಾ
ಸುಖ	ಸುಕಾ
ಇಲಾಖ	ಈಲಾಕಾ
ಪ್ರಮುಖ	ಪಾಮುಕಾ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣಗಳು ಇಂತಿವೆ.

೧. ಲಂಬಾಣಿ ಭಾಷೆಯಲ್ಲಿ ಕಂಡುಬರುವ ಧ್ವನಿಗಳ ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿನ ವ್ಯಂಜನಗಳನ್ನು ದೀರ್ಘವಾಗಿ ಓದಲು ಕಾರಣವಿರಬಹುದು.

೨. ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಓದುವಾಗ ಕಂಠ್ಯಅಘೋಷ ಸ್ಪರ್ಶಮಹಾಪ್ರಾಣ

ವ್ಯಂಜನ 'ಖ' ಧ್ವನಿ ಮತ್ತು ಕಂಠ್ಯಅಘೋಷ ಸ್ಪರ್ಶಅಲ್ಪಪ್ರಾಣ ವ್ಯಂಜನ 'ಕ' ಧ್ವನಿ ಇವುಗಳ ನಡುವಿನ ಸ್ಪಷ್ಟವಾದ ಉಚ್ಚಾರಣೆಯಲ್ಲಿನ ವ್ಯತ್ಯಾಸ ತಿಳಿಯದೆ ಗೊಂದಲದಿಂದ ಈ ರೀತಿಯ ವ್ಯತ್ಯಾಸದಿಂದ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

೬ ಕ > ಖಾ

ಪದಾದಿ, ಪದಮಧ್ಯ ಪರಿಸರದಲ್ಲಿ ಕಂಠ್ಯಅಘೋಷ ಸ್ಪರ್ಶಅಲ್ಪಪ್ರಾಣ ವ್ಯಂಜನ 'ಕ' ಧ್ವನಿಯ ಬದಲು ಕಂಠ್ಯಅಘೋಷ ಸ್ಪರ್ಶಮಹಾಪ್ರಾಣ ದೀರ್ಘವ್ಯಂಜನ 'ಖಾ' ಧ್ವನಿಯನ್ನು ಒಂದರಿಂದ ಎರಡನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಕದ	ಖಾದಾ/ಖದಾ
	ಕರ	ಖಾರಾ
	ಕುರ್ಚಿ	ಖೂರ್ಜಿ
	ಕಡಗ	ಖಾಡಗಾ
	ಕುದುರೆ	ಖೂದುರೆ
	ಕರಗ	ಖಾರಗ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಮಾತೃ ಭಾಷೆಯ ಪ್ರಭಾವದಿಂದ ಹೊರಬರದ ಲಂಬಾಣಿ ಭಾಷಿಕ ಮಕ್ಕಳು ಲಂಬಾಣಿ ಭಾಷೆಯಲ್ಲಿರುವ 'ಖ' ಕಂಠ್ಯಅಘೋಷ ಸ್ಪರ್ಶಮಹಾಪ್ರಾಣ ವ್ಯಂಜನ ಧ್ವನಿಯ ಪ್ರಭಾವ ಇರುವುದರಿಂದ ಈ ತೆರನಾದ ಧ್ವನಿ ವ್ಯತ್ಯಾಸದಿಂದ ಓದಲು ಕಾರಣವಿರಬಹುದು.

೬ ಘು > ಗಾ

ಪದಾದಿ, ಪದಮಧ್ಯ ಮತ್ತು ಪರಿಸರಗಳಲ್ಲಿ ಕಂಠ್ಯಘೋಷ ಸ್ಪರ್ಶಮಹಾಪ್ರಾಣ ವ್ಯಂಜನ 'ಘು' ಧ್ವನಿಯ ಬದಲು ಕಂಠ್ಯಘೋಷ ಸ್ಪರ್ಶದೀರ್ಘವ್ಯಂಜನ 'ಗಾ' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

[illegible]

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಘನ	ಗಾನಾ
	ಘಟ	ಗಾಟಾ
	ಘಂಟೆ	ಗಾಂಟೆ
	ಘಟಿಕ	ಗಾಟಿಕಾ
	ಘಟನೆ	ಗಾಟನೇ
	ಘನರವ	ಗಾನರಾವಾ
	ಘಮಘಮ	ಗಾಮಾಗಾಮಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಅಘಾತ	ಆಗಾತಾ
ರಾಘವ	ರಾಗಾವಾ
ಅಪಘಾತ	ಆಪಗಾತಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಮೇಘ	ಮೇಗಾ/ಮಾಗಾ
ಸಂಘ	ಸಗಾ
ರಘು	ರಗೂ
ಲಘು	ಲಗೂ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡ ಭಾಷೆಯ ಕಂಠ್ಯಘೋಷ ಸ್ಪರ್ಶವ್ಯಂಜನ 'ಗ' ಧ್ವನಿ ಮತ್ತು ಕಂಠ್ಯಘೋಷ ಸ್ಪರ್ಶಮಹಾಪ್ರಾಣ ವ್ಯಂಜನ 'ಘ' ಧ್ವನಿಗಳ ನಡುವಿನ ಸ್ಪಷ್ಟವಾದ ಉಚ್ಚರಣಾ ವ್ಯತ್ಯಾಸವನ್ನು ಗುರುತಿಸದೆ ಹಾಗೂ ಲಂಬಾಣಿ ಭಾಷೆಯ ದೀರ್ಘೀಕರಣ ಪ್ರಭಾವದಿಂದಾಗಿ ಈ ತೆರನಾದ ವ್ಯತ್ಯಾಸವನ್ನು ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಓದುವಾಗ ಮಾಡುತ್ತಾರೆ.

೩ ಗ > ಘಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಕಂಠ್ಯಘೋಷ ಸ್ಪರ್ಶವ್ಯಂಜನ 'ಗ' ಧ್ವನಿಯ ಬದಲು ಕಂಠ್ಯಘೋಷ ಸ್ಪರ್ಶದೀರ್ಘಮಹಾಪ್ರಾಣ ವ್ಯಂಜನ 'ಘಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಗರ	ಘಾರಾ
	ಗಜ	ಘಾಜಾ
	ಗತಿ	ಘಾತೀ
	ಗಣಪ	ಘಾಣಾಪಾ
	ಗಾಯ	ಘಾಯಾ
	ಗಾಬರಿ	ಘಾಬರೀ
	ಗಲಿವರ	ಘಾಲೀವಾರಾ
	ಗಮನಿಸು	ಘಾಮನಿಸೂ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಅಗಲ	ಅಘಾಲಾ
	ಆಗರ	ಆಘಾರಾ
	ಓಗರ	ಓಘಾರಾ
	ಕರಗತ	ಕಾರಘಾತಾ
	ನಿಗದಿತ	ನೀಘಾದಿತಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಆಗ	ಆಘಾ
ಮಗ	ಮಾಘಾ
ದರಗ	ದಾರಾಘಾ
ಕಡಗ	ಕಾಡಾಘಾ
ಕರಗ	ಕರಘಾ
ಸಲಗ	ಸಲಾಘಾ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಕಂಠ್ಯಘೋಷ ಸ್ಪರ್ಶದೀರ್ಘಮಹಾಪ್ರಾಣ ವ್ಯಂಜನ 'ಘಾ' ಧ್ವನಿಯ ಬಳಕೆ ಎಲ್ಲಾ ಪರಿಸರ ಗಳಲ್ಲಿ ಯಥೇಚ್ಛವಾಗಿ ಕಂಡುಬರುತ್ತದೆ. ಇದರ ಪ್ರಭಾವದಿಂದ ಹೊರಬರದ ಒಂದು ಮತ್ತು ಎರಡನೆ ತರಗತಿ ಲಂಬಾಣಿ ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸದಿಂದ ಓದುತ್ತಾರೆ.

೬ ಛ > ವಾ

ಪದಾದಿ ಮತ್ತು ಪದಮಧ್ಯ ಪರಿಸರದಲ್ಲಿ ತಾಲವ್ಯಅಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಛ' ಧ್ವನಿಯ ಬದಲು ದಂತೋಷ್ಠ್ಯ ಅರ್ಧಸ್ವರ 'ವಾ' ಧ್ವನಿಯನ್ನು ಒಂದನೆ ತರಗತಿಯಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಛಲ	ವಾಲಾ
	ಛಗ	ವಾಗಾ
	ಛದ	ವಾದಾ
	ಛಾಯ	ವಾಯಾ
	ಛತ್ರಿ	ವಾತಿ
	ಛಂಗನೆ	ವಾಗನೆ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕಛೇರಿ	ಕಾವೇರಿ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡ ಭಾಷೆಯಲ್ಲಿನ ತಾಲವ್ಯಅಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ ಛ ಧ್ವನಿ ಮತ್ತು ದಂತೋಷ್ಠ್ಯ ಅರ್ಧಸ್ವರ 'ವ' ಧ್ವನಿಗಳ ನಡುವಿನ ರೂಪ ಸಾಮ್ಯತೆಯ ಅಲ್ಪ ವ್ಯತ್ಯಾಸವನ್ನು ಗುರುತಿಸದೆ ಗೊಂದಲದಿಂದಾಗಿ ಈ ತೆರನಾಗಿ ಓದುವರು.

೬ ಛ > ಚಾ

ಪದಾದಿ ಮತ್ತು ಪದಮಧ್ಯ ಪರಿಸರಗಳಲ್ಲಿ ತಾಲವ್ಯಅಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಛ' ಧ್ವನಿಯ ಬದಲು ತಾಲವ್ಯಅಘೋಷ ಈಷತ್‌ಸ್ಪರ್ಶ ದೀರ್ಘವ್ಯಂಜನ 'ಚಾ' ಧ್ವನಿಯನ್ನು ನಾಲ್ಕನೆ ತರಗತಿ ಮಕ್ಕಳು ಮಾತ್ರ ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಛಲ	ಚಾಲಾ
	ಛಗ	ಚಾಗಾ
	ಛದ	ಚಾದಾ
	ಛಾಯ	ಚಾಯಾ
	ಛಂಗನೆ	ಚಾಗನೇ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕಛೇರಿ	ಕಾಚೇರಿ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ತಾಲವ್ಯಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಛ' ಧ್ವನಿ ಮತ್ತು ತಾಲವ್ಯಅಘೋಷ ಈಷತ್‌ಸ್ಪರ್ಶ ದೀರ್ಘವ್ಯಂಜನ 'ಚಾ' ಧ್ವನಿ ಇವೆರಡು ಧ್ವನಿಗಳ ನಡುವಿನ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ವ್ಯತ್ಯಾಸವನ್ನು ಗುರುತಿಸದ ಕಾರಣದಿಂದ ಈ ರೀತಿಯಾಗಿ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

೬ ಚ > ಛಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ತಾಲವ್ಯಅಘೋಷ ಈಷತ್‌ಸ್ಪರ್ಶವ್ಯಂಜನ 'ಚ' ಧ್ವನಿಯ ಬದಲು ತಾಲವ್ಯಅಘೋಷ ಈಷತ್‌ಸ್ಪರ್ಶ ದೀರ್ಘಮಹಾಪ್ರಾಣ ವ್ಯಂಜನ 'ಛಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಚಹ	ಛಾಆ
	ಚಮರ	ಛಾಮರಾ
	ಚರಕ	ಛಾರಾಕಾ
	ಚದರ	ಛಾದಾರಾ
	ಚಲಿಸು	ಛಾಲೀಸೂ
	ಚಕಚಕ	ಛಾಕಛಾಕಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಪಚನ	ಪಛಾನಾ
ವಚನ	ವಛಾನಾ
ಈಚಲ	ಈಛಾಲಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಚಮಚ	ಛಾಮಛಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ತಾಲವ್ಯಅಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಛ' ಧ್ವನಿಯ ಬಳಕೆ ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ಚ' ಧ್ವನಿಯ ಬದಲು 'ಛಾ'ಧ್ವನಿಯನ್ನು ಬಳಸಿ ಓದುತ್ತಾರೆ.

- ಝು > ಜಾ

ಪದಾದಿ ಪರಿಸರದಲ್ಲಿ ತಾಲವ್ಯಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಝು' ಧ್ವನಿಯ ಬದಲು ತಾಲವ್ಯಘೋಷ ಈಷತ್‌ಸ್ಪರ್ಶ ದೀರ್ಘವ್ಯಂಜನ 'ಜಾ' ಧ್ವನಿಯನ್ನು ನಾಲ್ಕನೆಯ ತರಗತಿ ಮಕ್ಕಳು ಮಾತ್ರ ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಝುಳ	ಜಾಲಾ
	ಝುರಿ	ಜಾರೀ
	ಝುಳಕ	ಜಾಲಕಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯ ದೀರ್ಘೀಕರಣ ಪ್ರಭಾವ ಮತ್ತು ಕನ್ನಡದಲ್ಲಿ ತಾಲವ್ಯಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಝು' ಧ್ವನಿ ಮತ್ತು ತಾಲವ್ಯಘೋಷ ಈಷತ್‌ಸ್ಪರ್ಶ ವ್ಯಂಜನ 'ಜ' ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಧ್ವನಿ ವ್ಯತ್ಯಾಸವನ್ನು ಗುರುತಿಸದೆ ಗೊಂದಲದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯಾಗಿ ಓದುತ್ತಾರೆ.

- ಜ > ಝಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ತಾಲವ್ಯಘೋಷ ಈಷತ್‌ಸ್ಪರ್ಶ ವ್ಯಂಜನ 'ಜ' ಧ್ವನಿಯ ಬದಲು ತಾಲವ್ಯಘೋಷ ಈಷತ್‌ಸ್ಪರ್ಶ ಮಹಾಪ್ರಾಣ ದೀರ್ಘವ್ಯಂಜನ 'ಝಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಜಯ	ಝಾಯಾ
	ಜಮ	ಝಾಮಾ
	ಜಗಳ	ಝಾಗಲಾ
	ಜಠರ	ಝಾಠಾರಾ
	ಜಳಕ	ಝಾಲಕಾ
	ಜಟಕ	ಝಾಟಾಕಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಬಜನೆ	ಭಾಝಾನೇ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಮಜ	ಮಾಝಾ
	ಓಜ	ಓಝಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ತಾಲವ್ಯಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಝ' ಧ್ವನಿಯ ಬಳಕೆ ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ಜ' ಧ್ವನಿಯ ಬದಲು 'ಝಾ' ಧ್ವನಿಯನ್ನು ಓದುತ್ತಾರೆ.

೬ ಝ > ಯಾ

ಪದಾದಿ ಪರಿಸರದಲ್ಲಿ ತಾಲವ್ಯಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಝ' ಧ್ವನಿಯ ಬದಲು ತಾಲವ್ಯ ಅರ್ಧಸ್ವರ 'ಯಾ' ಧ್ವನಿಯನ್ನು ಒಂದರಿಂದ ಮೂರನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

ಪದಾದಿ ಪರಿಸರ	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಝಳ	ಯಾಲಾ
	ಝರಿ	ಯಾರೀ
	ಝಳಕ	ಯಾಲಕಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯ ದೀರ್ಘೀಕರಣದ ಪ್ರಭಾವ ಹಾಗೂ ತಾಲವ್ಯಘೋಷ ಈಷತ್‌ಸ್ಪರ್ಶಮಹಾಪ್ರಾಣ ವ್ಯಂಜನ 'ಝ' ಧ್ವನಿ ಮತ್ತು ತಾಲವ್ಯ ಅರ್ಧಸ್ವರ 'ಯ' ಧ್ವನಿ ಇವರೆಡು ಧ್ವನಿಗಳ ರೂಪ ಸಾಮ್ಯತೆಯ ಅಲ್ಪ ವ್ಯತ್ಯಾಸವನ್ನು ಗಮನಿಸದ ಲಂಬಾಣಿ ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸದಿಂದ ಓದುತ್ತಾರೆ.

೬ ಠ > ಟಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಮೂರ್ಧನ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಠ' ಧ್ವನಿಯ ಬದಲು ಮೂರ್ಧನ್ಯಅಘೋಷಸ್ಪರ್ಶ ದೀರ್ಘವ್ಯಂಜನ 'ಟಾ' ಧ್ವನಿಯನ್ನು ಒಂದನೆ ತರಗತಿಯಿಂದ ನಾಲ್ಕನೆಯ ತರಗತಿಯ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಠಕ್ಕ	ಟಾಕಾ
	ಠಸ್ಸೆ	ಟಾಸೇ
	ಠಾವು	ಟಾವು
	ಠರಾವು	ಟಾರಾವೂ
	ಠಣಠಣ	ಟಾನಟನಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಜಠರ	ಜಾಟಾರಾ
	ಪಠಣ	ಪಾಟಾನಾ
	ಕಠಾರಿ	ಕಾಟಾರಿ
	ವಠಾರ	ವಾಟಾರ
	ಕೊಠಡಿ	ಕೋಟಾಡಿ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಮಠ	ಮಟಾ
	ಹಠ	ಆಟಾ
	ಪೀಠ	ಪೀಟಾ
	ಪಾಠ	ಪಾಟಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡ ಭಾಷೆಯಲ್ಲಿನ ಮೂರ್ಧನ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಠ' ಮತ್ತು ಮೂರ್ಧನ್ಯಅಘೋಷಸ್ಪರ್ಶ ವ್ಯಂಜನ 'ಟ' ಧ್ವನಿ ಇವರೆಡು ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗುರುತಿಸದೆ ಹಾಗೂ ಲಂಬಾಣಿ ಭಾಷೆಯ ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಓದುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಾರೆ.

☯ ಟ > ಠಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಅಘೋಷಸ್ಪರ್ಶ ವ್ಯಂಜನ 'ಟ' ಧ್ವನಿಯ ಬದಲು ಮೂರ್ಧನ್ಯಘೋಷಸ್ಪರ್ಶ ಮಹಾಪ್ರಾಣದೀರ್ಘವ್ಯಂಜನ 'ಠಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	**ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ**
ಉದಾ.	ಟಗರು	ಠಾಗರೂ
	ಟಪಟಪ	ಠಾಪಠಾಪಾ

ಪದಮಧ್ಯ ಪರಿಸರ

	ಬರಹದ ರೂಪ	**ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ**
	ಜಟಕ	ಝಾಠಾಕಾ

ಪದಾಂತ್ಯ ಪರಿಸರ

ಪದಾಂತ್ಯ ಪರಿಸರ	**ಬರಹದ ರೂಪ**	**ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ**
	ಓಟ	ಓಠಾ
	ಆಟ	ಆಠಾ
	ಪಟ	ಪಾಠಾ
	ಗಾಳಿಪಟ	ಗಾಲೀಪಠಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಮಾತೃಭಾಷೆಯ ದಟ್ಟ ಪ್ರಭಾವದಿಂದ ಹೊರಬರದ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಲಂಬಾಣಿ ಭಾಷೆಯಲ್ಲಿ ಮೂರ್ಧನ್ಯಅಘೋಷ ಸ್ಪರ್ಶ ಮಹಾಪ್ರಾಣವ್ಯಂಜನ 'ಠ' ಧ್ವನಿಯ ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ಟ' ಧ್ವನಿಯ ಬದಲು 'ಠಾ' ಧ್ವನಿಯನ್ನು ಓದುತ್ತಾರೆ.

◉ ಢ > ಡಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಮೂರ್ಧನ್ಯಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಢ' ಧ್ವನಿಯ ಬದಲು ಮೂರ್ಧನ್ಯಘೋಷಸ್ಪರ್ಶ ದೀರ್ಘವ್ಯಂಜನ 'ಡಾ' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಢಕ್ಕೆ	ಡಾಕೇ
	ಢಾಳ	ಡಾಲಾ
	ಢಕಾಯಿತ	ಡಾಕಾಯಿತಾ
	ಢಣಢಣ	ಡಾನಡಾನಾ
	ಢಮರುಗ	ಡಾಮರುಗಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ದಢಾರ	ದಾಡಾರ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ರೂಢ	ರೂಡಾ
	ಮೂಢ	ಮೂಡಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ದೀರ್ಘಕರಣದ ಪ್ರಭಾವ ಮತ್ತು ರೂಪ ಸಾದೃಶ್ಯ ಹಾಗೂ ಉಚ್ಚಾರಣೆಯ ಅಲ್ಪ ಧ್ವನಿ ವ್ಯತ್ಯಾಸವನ್ನು ಗುರುತಿಸದೆ ಇರುವುದರಿಂದಾಗಿ ಈ ತೆರನಾದ ವ್ಯತ್ಯಾಸವನ್ನು ಲಂಬಾಣಿ ಭಾಷಿಕ ಮಕ್ಕಳು ಮಾಡುತ್ತಾರೆ.

◉ ಡ > ಢಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಘೋಷಸ್ಪರ್ಶ ವ್ಯಂಜನ 'ಡ' ಧ್ವನಿಯ ಬದಲು ಮೂರ್ಧನ್ಯ ಘೋಷ ಸ್ಪರ್ಶಮಹಾಪ್ರಾಣ ದೀರ್ಘವ್ಯಂಜನ 'ಢಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಡಮರು	ಢಾಮರೂ
	ಡವಡವ	ಢಾವಢಾವ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಕಡಜ	ಕಾಢಾಜಾ
	ಕಡಗ	ಕಾಢಾಗಾ
	ಒಡನೆ	ಓಢಾನೆ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಉಡ	ಊಢಾ
	ಜಡ	ಜಾಢಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಮಾತೃಭಾಷೆಯ ದಟ್ಟ ಪ್ರಭಾವದಿಂದ ಹೊರಬರದ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಲಂಬಾಣಿ ಭಾಷೆಯಲ್ಲಿ ಮೂರ್ಧನ್ಯಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಢ' ಧ್ವನಿಯ ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವ ದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ಡ' ಧ್ವನಿಯ ಬದಲು 'ಢಾ' ಧ್ವನಿಯನ್ನು ಓದುತ್ತಾರೆ.

೬ ಣ > ನಾ

ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಮೂರ್ಧನ್ಯಅನುನಾಸಿಕ ವ್ಯಂಜನ 'ಣ' ಧ್ವನಿಯ ಬದಲು ದಂತ್ಯಅನುನಾಸಿಕ ದೀರ್ಘವ್ಯಂಜನ 'ನಾ' ಧ್ವನಿಯನ್ನು ಒಂದನೆ ತರಗತಿಯಿಂದ ನಾಲ್ಕನೆಯ ತರಗತಿಯ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಬಣವೆ	ಬನಾವೆ
	ಕಣಜ	ಕನಾಜಾ
	ಕಣವೆ	ಕನಾವೆ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಹಣ	ಅನಾ
ಬಾಣ	ಬಾನಾ
ಮಣ	ಮನಾ
ಗಾಣ	ಗಾನಾ
ಕಾರಣ	ಕಾರನಾ
ಮರಣ	ಮಾರನಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯಅನುನಾಸಿಕ ವ್ಯಂಜನ 'ಣ' ಧ್ವನಿ ಮತ್ತು ದಂತ್ಯ ಅನುನಾಸಿಕ ವ್ಯಂಜನ 'ನ' ಧ್ವನಿ ಇವೆರಡು ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಸಾಮ್ಯತೆಯ ವ್ಯತ್ಯಾಸದ ಗೊಂದಲದಿಂದಾಗಿ ಈ ತೆರನಾದ ವ್ಯತ್ಯಾಸವನ್ನು ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

೬ ಥ > ದಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ದಂತ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಥ' ಧ್ವನಿಯ ಬದಲು ದಂತ್ಯಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ದಾ' ಧ್ವನಿಯನ್ನು ಒಂದನೆ ತರಗತಿಯಿಂದ ನಾಲ್ಕನೆಯ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಥಡಿ	ದಾಡೀ
	ಥಳಿಸು	ದಾಲಿಸೂ
	ಥಳಕು	ದಾಲಕೂ
	ಥರಥರ	ದಾರದಾರಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಅಥವಾ	ಅದಾವಾ
	ಮಥನ	ಮದಾನಾ
	ಮಥಿಸು	ಮದೀಸೂ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ರಥ	ರದಾ
	ಪಥ	ಪದಾ
	ಅರ್ಥ	ಅದಾ
	ಶಪಥ	ಸಾಪದಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡ ಭಾಷೆಯಲ್ಲಿ ದಂತ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಥ' ಧ್ವನಿ ಮತ್ತು ದಂತ್ಯಘೋಷಸ್ಪರ್ಶ ವ್ಯಂಜನ 'ದ' ಧ್ವನಿ ಇವೆರಡು ಧ್ವನಿಗಳ ರೂಪ ಸಾದೃಶ್ಯದಲ್ಲಿನ ಅಲ್ಪ ವ್ಯತ್ಯಾಸವನ್ನು ಗುರುತಿಸದ ಕಾರಣ ಮತ್ತು ಲಂಬಾಣಿ ಭಾಷೆಯಲ್ಲಿ ದೀರ್ಘ ಧ್ವನಿಯನ್ನು ಹೆಚ್ಚು ಬಳಕೆ ಮಾಡುವರು. ಇದರ ಪ್ರಭಾವದಿಂದಲೂ ಈ ತೆರನಾದ ವ್ಯತ್ಯಾಸದಿಂದ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

೬ ತ > ಥಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ದಂತ್ಯಅಘೋಷಸ್ಪರ್ಶ ವ್ಯಂಜನ 'ತ' ಧ್ವನಿಯ ಬದಲು ದಂತ್ಯಅಘೋಷಸ್ಪರ್ಶ ದೀರ್ಘವ್ಯಂಜನ ಮಹಾಪ್ರಾಣ 'ಥಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ತನಯ	ಥಾನಯಾ
	ತವರ	ಥಾವರಾ
	ತವಕ	ಥಾವಕಾ
	ತಬಲ	ಥಾಬಲಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಶತಕ	ಸಥಾಕಾ

ಪದಾಂತ್ಯ ಪರಿಸರ

ಪದಾಂತ್ಯ ಪರಿಸರ	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಮತ	ಮಾಥಾ
	ಹೊಡೆತ	ಓಡೇಥಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಮಾತೃಭಾಷೆಯ ದಟ್ಟ ಪ್ರಭಾವದಿಂದ ಹೊರಬರದ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಲಂಬಾಣಿ ಭಾಷೆಯಲ್ಲಿ ದಂತ್ಯಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಥ' ಧ್ವನಿ ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ತ' ಧ್ವನಿಯ ಬದಲು 'ಥಾ' ಧ್ವನಿಯನ್ನು ಓದುತ್ತಾರೆ.

೬ ಧ > ದಾ

ಪದಾದಿ, ಪದಮಧ್ಯ ಮತ್ತು ಪದ್ಯಾಂತ ಪರಿಸರದಲ್ಲಿ ದಂತ್ಯಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಧ' ಧ್ವನಿಯ ಬದಲು ದಂತ್ಯಘೋಷಸ್ಪರ್ಶ ದೀರ್ಘವ್ಯಂಜನ 'ದಾ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಧನ	ದಾನಾ
	ಧರೆ	ದಾರೇ
	ಧವಳ	ದಾವಾಲಾ
	ಧನಿಕ	ದಾನಿಕಾ
	ಧರಣಿ	ದಾರನಿ
	ಧನಸ್ಸು	ದಾನಸೂ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಅಧರ	ಆದಾರಾ
	ಗಂಧಕ	ಗದಾಕಾ
	ಆಧಾರ	ಆದಾರಾ
	ಅಂಧಕಾರ	ಆದಾಕಾರಾ
	ಮಾಧವ	ಮಾದಾವಾ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ರಾಧ	ರಾದಾ
	ಸೌಧ	ಸಾವುದಾ
	ವಿರೋಧ	ವೀರೋದಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡ ಭಾಷೆಯಲ್ಲಿ ದಂತ್ಯ ಘೋಷ ಸ್ಪರ್ಶಮಹಾಪ್ರಾಣ ವ್ಯಂಜನ 'ಧ' ಧ್ವನಿ ಮತ್ತು ದಂತ್ಯ ಘೋಷಸ್ಪರ್ಶವ್ಯಂಜನ 'ದ' ಧ್ವನಿ ಇವೆರಡು ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪಧ್ವನಿ ವ್ಯತ್ಯಾಸವನ್ನು ಗ್ರಹಿಸದೆ ಮತ್ತು ರೂಪ ಸಾಮ್ಯದ ಗೊಂದಲದಿಂದ ಹಾಗೂ ಮಾತೃಭಾಷೆಯ ದೀರ್ಘೀಕರಣದ ಪ್ರಭಾವ ಈ ಎಲ್ಲಾ ಕಾರಣಗಳಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯ ವ್ಯತ್ಯಾಸದಿಂದ ಓದುತ್ತಾರೆ.

೬ ದ > ಧಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ದಂತ್ಯಘೋಷಸ್ಪರ್ಶ ವ್ಯಂಜನ 'ದ' ಧ್ವನಿಯ ಬದಲು ದಂತ್ಯಘೋಷಸ್ಪರ್ಶ ದೀರ್ಘಮಹಾಪ್ರಾಣವ್ಯಂಜನ 'ಧಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ದಯ	ಧಾಯಾ
	ದನ	ಧಾನಾ
	ದರ	ಧಾರಾ
	ದರಗ	ಧಾರಾಗಾ
	ದಸರ	ಧಾಸಾರ
	ದವನ	ಧಾವಾನಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದರ	ಊಧಾರಾ
ಉದಯ	ಊಧಾಯ
ಚದರ	ಚಾಧಾರಾ
ಕದನ	ಖಧಾನಾ
ಸದರ	ಸಾಧಾರಾ
ಪದಕ	ಪಾಧಾಕಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಕದ	ಖಾಧಾ
ಹೋದ	ಓಧಾ
ದುಡಿದ	ದೂಡಿಧಾ
ಹಸಿದ	ಆಸಿಧಾ
ಆನಂದ	ಆನಂಧಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಮಾತೃಭಾಷೆಯ ದಟ್ಟ ಪ್ರಭಾವದಿಂದ ಹೊರಬರದ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಲಂಬಾಣಿ ಭಾಷೆಯಲ್ಲಿ ದಂತ್ಯಘೋಷ

ಸ್ಪರ್ಶಮಹಾಪ್ರಾಣ ವ್ಯಂಜನ 'ಧ' ಧ್ವನಿಯು ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ದ' ಧ್ವನಿಯ ಬದಲು 'ಧಾ' ಧ್ವನಿಯನ್ನು ಓದುತ್ತಾರೆ.

೬ ಫ > ಪಾ

ಪದಾದಿ, ಪದಮಧ್ಯ ಮತ್ತು ಪದ್ಯಾಂತ ಪರಿಸರದಲ್ಲಿ ದ್ವಯೋಷ್ಠ್ಯಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಫ' ಧ್ವನಿಯ ಬದಲು ದ್ವಯೋಷ್ಠ್ಯಅಘೋಷಸ್ಪರ್ಶ ದೀರ್ಘವ್ಯಂಜನ 'ಪಾ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಫಲ	ಪಾಲಾ
	ಫಲಕ	ಪಾಲಾಕಾ
	ಫಸಲು	ಪಾಸಲೂ
	ಫಲಿಸು	ಪಾಲಿಸೂ
	ಫಕೀರ	ಪಾಕೀರಾ
	ಫಲಹಾರ	ಪಾಲಾಆರಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಸಫಲ	ಸಾಪಾಲಾ
ವಿಫಲ	ವೀಪಾಲಾ
ಸುಫಲ	ಸೂಪಾಲಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಕಫ	ಕಾಪಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ದ್ವಯೋಷ್ಠ್ಯಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಫ' ಧ್ವನಿ ಮತ್ತು ದ್ವಯೋಷ್ಠ್ಯಅಘೋಷಸ್ಪರ್ಶ ವ್ಯಂಜನ 'ಪ' ಧ್ವನಿ ಇವೆರಡು ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ

ಸಾಮ್ಯತೆಯ ವ್ಯತ್ಯಾಸವನ್ನು ಗುರುತಿಸದ ಕಾರಣ ಮತ್ತು ರೂಪ ಸಾದೃಶ್ಯದ ಗೊಂದಲದಿಂದ, ಮಾತೃಭಾಷೆಯ ದೀರ್ಘೀಕರಣದ ಪ್ರಭಾವ ಈ ಎಲ್ಲಾ ಕಾರಣಗಳಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯಾಗಿ ವ್ಯತ್ಯಾಸದಿಂದ ಓದುತ್ತಾರೆ.

೬ ಪ > ಫಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಧ್ವಯೋಷ್ಠ್ಯಅಘೋಷಸ್ಪರ್ಶ ವ್ಯಂಜನ 'ಪ' ಧ್ವನಿಯ ಬದಲು ಧ್ವಯೋಷ್ಠ್ಯಅಘೋಷಸ್ಪರ್ಶ ದೀರ್ಘಮಹಾಪ್ರಾಣವ್ಯಂಜನ 'ಫಾ' ಧ್ವನಿಯನ್ನು ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಪದ	ಫಾದಾ
ಪಚನ	ಫಾಚನಾ
ಪವನ	ಫಾವನಾ
ಪರಿಚಯ	ಫಾರಿಚಾಯಾ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉಪಕಾರ	ಊಫಾಕಾರಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಬಳಪ	ಬಾಲಫಾ
ಅನುಕಂಪ	ಆನುಕಫಾ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಮಾತೃಭಾಷೆಯ ದಟ್ಟ ಪ್ರಭಾವದಿಂದ ಹೊರಬರದ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಲಂಬಾಣಿ ಭಾಷೆಯಲ್ಲಿ ಧ್ವಯೋಷ್ಠ್ಯಅಘೋಷ ಸ್ಪರ್ಶ ಮಹಾಪ್ರಾಣವ್ಯಂಜನ 'ಫ' ಧ್ವನಿಯು ಹೆಚ್ಚಾಗಿ ಕಂಡುಬರುವುದರಿಂದ ಮತ್ತು ದೀರ್ಘೀಕರಣದ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿ 'ಪ' ಧ್ವನಿಯ ಬದಲು 'ಫಾ' ಎಂದು ಓದುತ್ತಾರೆ.

೬ ಭ > ಬಾ

ಪದಾದಿ, ಪದಮಧ್ಯ ಮತ್ತು ಪದ್ಯಾಂತ ಪರಿಸರದಲ್ಲಿ ಧ್ವಯೋಷ್ಠ್ಯಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಭ' ಧ್ವನಿಯ ಬದಲು ಧ್ವಯೋಷ್ಠ್ಯಘೋಷಸ್ಪರ್ಶ ದೀರ್ಘವ್ಯಂಜನ 'ಬಾ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಭಯ	ಬಾಯಾ
	ಭರಣಿ	ಬಾರನೀ
	ಭರತ	ಬಾರತಾ
	ಭಂಗ	ಬಾಗಾ
	ಭಟ್ಟ	ಬಾಟಾ
	ಭವಿಷ್ಯ	ಬಾವಿಸಾ
	ಭಯಾನಕ	ಬಾಯಾನಕಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಅಭಯ	ಆಬಾಯಾ
	ಪ್ರಭಲ	ಪಾಬಾಲಾ
	ವಿಭಾಗ	ಇಬಾಗಾ
	ಆಭರಣ	ಆಬಾರನ
	ಒಂಭತ್ತು	ಒಬಾತೂ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಲಾಭ	ಲಾಬಾ
	ಸುಲಭ	ಸೂಲಬಾ
	ಕುಂಭ	ಕೂಬಾ

ಈ ಮೇಲಿನ ವ್ಯತ್ಯಾಸವನ್ನು ಗಮನಿಸಿದಾಗ ಧ್ವಯೋಷ್ಠ್ಯಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಭ' ಧ್ವನಿ ಮತ್ತು ಧ್ವಯೋಷ್ಠ್ಯಅಘೋಷಸ್ಪರ್ಶ ದೀರ್ಘವ್ಯಂಜನ 'ಬಾ' ಧ್ವನಿ ಇವೆರಡರಲ್ಲಿನ ರೂಪ ಸಾಮ್ಯತೆಯ ಗೊಂದಲ ಮತ್ತು ಉಚ್ಚಾರಣೆಯಲ್ಲಿನ ಅಲ್ಪ ಧ್ವನಿವ್ಯತ್ಯಾಸವನ್ನು ಗ್ರಹಿಸದ ಕಾರಣದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯ ವ್ಯತ್ಯಾಸದಿಂದ ಓದುತ್ತಾರೆ.

೬ ಶ > ಸಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ತಾಲವ್ಯಊಷ್ಮ ವ್ಯಂಜನ 'ಶ' ಧ್ವನಿಯ ಬದಲು ದಂತ್ಯಊಷ್ಮ ದೀರ್ಘವ್ಯಂಜನ 'ಸಾ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಶವ	ಸಾವಾ
	ಶಾಲೆ	ಸಾಲೇ
	ಶಮನ	ಸಾಮನಾ
	ಶತಕ	ಸಾತಕಾ
	ಶರಣು	ಸಾರನೂ
	ಶಯನ	ಸಾಯನಾ
	ಶಂಕರ	ಸಂಕರಾ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಆಶಯ	ಆಸಾಯಾ
	ಶಶಕ	ಸಾಸಾಕಾ

ಪದಾಂತ್ಯ ಪರಿಸರ

ಪದಾಂತ್ಯ ಪರಿಸರ	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ನಾಶ	ನಾಸಾ
	ದೇಶ	ದೇಸಾ
	ವಂಶ	ವಸಾ
	ಆದೇಶ	ಆದೇಸಾ
	ಅವಕಾಶ	ಆವಕಾಸಾ
	ಕಳಶ	ಕಲಸಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ತಾಲವ್ಯಊಷ್ಮ ವ್ಯಂಜನ 'ಶ' ಧ್ವನಿ ಕಂಡುಬರುವುದಿಲ್ಲ. ಅದಕ್ಕೆ ಬದಲಾಗಿ ದಂತ್ಯಊಷ್ಮ ದೀರ್ಘವ್ಯಂಜನ 'ಸಾ' ಅಧಿಕವಾಗಿ ಕಂಡುಬರುವ ಕಾರಣ ಮತ್ತು ಇವೆರಡೂ ಧ್ವನಿಗಳ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗ್ರಹಿಸಿದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯ ವ್ಯತ್ಯಾಸದಿಂದ ಓದುತ್ತಾರೆ.

೬ ಷ > ಸಾ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಊಷ್ಮ ವ್ಯಂಜನ 'ಷ' ಧ್ವನಿಯ ಬದಲು ದಂತ್ಯಊಷ್ಮ ದೀರ್ಘವ್ಯಂಜನ 'ಸಾ' ಧ್ವನಿಯನ್ನು ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಷರ	ಸಾರಾ
	ಷರಾಯಿ	ಸಾರಾಯೀ
	ಷರತ್ತು	ಸಾರತೂ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ವಿಷಯ	ವಿಸಾಯಾ
	ವಿಷಾದ	ವಿಸಾದಾ
	ವಿಷಮ	ವಿಸಾಮಾ

ಪದಾಂತ್ಯ ಪರಿಸರ

ಪದಾಂತ್ಯ ಪರಿಸರ	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ವಿಷ	ವಿಸಾ
	ದೋಷ	ದೊಸಾ
	ವಿಶೇಷ	ವಿಸೇಸಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ಮೂರ್ಧನ್ಯಊಷ್ಮ ವ್ಯಂಜನ ಷ ಧ್ವನಿಯು ಕಂಡುಬರುವುದಿಲ್ಲ. ಇದರ ಕೆಲಸವನ್ನು ದಂತ್ಯಊಷ್ಮ ವ್ಯಂಜನ 'ಸ' ಧ್ವನಿಯೆ ನಿರ್ವಹಿಸುತ್ತದೆ. ಇದರ ಪ್ರಭಾವದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯಾಗಿ ವ್ಯತ್ಯಾಸ ಮಾಡಿ ಓದುತ್ತಾರೆ.

☯ **ಷ > ಪಾ**

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಊಷ್ಮ ವ್ಯಂಜನ 'ಷ' ಧ್ವನಿಯ ಬದಲು ಧ್ವಯೋಷ್ಠ್ಯಅಘೋಷಸ್ಪರ್ಶ ದೀರ್ಘವ್ಯಂಜನ 'ಪಾ' ಧ್ವನಿಯನ್ನು ಒಂದರಿಂದ ಮೂರನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ಷರ	ಪಾರಾ
	ಷರಾಯಿ	ಪಾರಾಯಿ
	ಷರತ್ತು	ಪಾರತೂ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ವಿಷಯ	ವಿಪಾಯಾ
	ವಿಷಾದ	ವಿಪಾದಾ
	ವಿಷಮ	ವಿಪಾಮಾ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ವಿಷ	ವಿಪಾ
ದೋಷ	ದೂಪಾ
ವಿಶೇಷ	ವಿಸಪಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯಊಷ್ಮ ವ್ಯಂಜನ 'ಷ' ಧ್ವನಿ ಮತ್ತು ಧ್ವಯೋಷ್ಠ್ಯ ಅಘೋಷಸ್ಪರ್ಶ ವ್ಯಂಜನ 'ಪ' ಧ್ವನಿ ಇವರೆಡು ಧ್ವನಿಗಳ ರೂಪ ಸಾಮ್ಯದ ಅಲ್ಪ ವ್ಯತ್ಯಾಸವನ್ನು ಗುರುತಿಸದೆ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯಾಗಿ ವ್ಯತ್ಯಾಸ ಮಾಡಿ ಓದುತ್ತಾರೆ.

೬ ಹ > ಆ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಕಾಕಲ್ಯಸಂಘರ್ಷ ವ್ಯಂಜನ 'ಹ' ಧ್ವನಿಯ ಬದಲು ಅಗ್ರವಿವೃತಅಗೋಳ ದೀರ್ಘಸ್ವರ 'ಆ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಹಗೆ	ಆಗೇ
ಹಣ	ಆನಾ
ಹಡಗು	ಆಡಗೂ
ಹಗಲು	ಆಗಲೂ
ಹರಟೆ	ಆರಟೇ
ಹಲವು	ಆಲವೂ
ಹಂಬಲಿಸು	ಆಬಲಿಸೂ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಆಹಾರ	ಆಆರಾ
ವಿಹಾರ	ವಿಆರಾ
ಕುತೂಹಲ	ಕೂತೂಆಲಾ

ಪದಾಂತ್ಯ ಪರಿಸರ

ಪದಾಂತ್ಯ ಪರಿಸರ	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ದೇಹ	ದೇಆ
	ಕಲಹ	ಕಾಲಆ
	ವಿರಹ	ವಿರಆ
	ಸನಿಹ	ಸನಿಆ
	ಪ್ರವಾಹ	ಪವಾಆ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕಾಕಲ್ಯಸಂಘರ್ಷ ವ್ಯಂಜನ 'ಹ' ಧ್ವನಿ ಮತ್ತು ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಧ್ವನಿ ಇವರೆಡು ಧ್ವನಿಗಳ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಈ ರೀತಿಯಾಗಿ ಓದುತ್ತಾರೆ.

೬ ಳ > ಲ

ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಪಾರ್ಶ್ವಿಕ ವ್ಯಂಜನ 'ಳ' ಧ್ವನಿಯ ಬದಲು ದಂತ್ಯಪಾರ್ಶ್ವಿಕ ವ್ಯಂಜನ 'ಲ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಅಳತೆ	ಆಲತೇ
	ಕಳಸ	ಕಾಲಸಾ
	ಜಳಕ	ಜಾಲಕಾ
	ಬಳಕು	ಬಲಕಾ
	ಥಳಕ	ತಾಲಕಾ
	ಪುಳಕ	ಪೂಲಕಾ
	ಕಳವಳ	ಕಲವಲಾ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
	ಆಳ	ಆಲಾ
	ನಳ	ನಲಾ
	ಕೊಳ	ಕೊಲಾ
	ತೋಳ	ತೋಲಾ
	ಬಹಳ	ಬಆಲಾ
	ಹೆಚ್ಚಳ	ಏಚಲಾ
	ಹೇರಳ	ಏರಲಾ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯಪಾರ್ಶ್ವಿಕ ವ್ಯಂಜನ 'ಳ' ಧ್ವನಿಯ ಬದಲು ದಂತ್ಯ ಪಾರ್ಶ್ವಿಕ ವ್ಯಂಜನ 'ಲ' ಧ್ವನಿ ಇವರೆಡು ಧ್ವನಿಗಳ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗುರುತಿಸದೆ ಗೊಂದಲದಿಂದ ಈ ರೀತಿಯ ವ್ಯತ್ಯಾಸ ಮಾಡಿ ಓದುತ್ತಾರೆ.

೬ ವಿಸರ್ಗ : > Q

ಪದಮಧ್ಯ ಪರಿಸರದಲ್ಲಿನ ವಿಸರ್ಗ 'ಃ' ಧ್ವನಿಯನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಲೋಪಮಾಡಿ ಓದುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಉದಾ.	ದುಃಖ	ದೂಕಾ
	ಅಂತಃಪುರ	ಆತಪುರಾ
	ಅಂತಃಕಲಹ	ಆತಕಲಹ
	ಅಂತಃಕರಣ	ಆತಕರನ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷೆಯಲ್ಲಿ ವಿಸರ್ಗ ಧ್ವನಿ ಕಂಡುಬರುವುದಿಲ್ಲ. ಕನ್ನಡ ಭಾಷೆಯನ್ನು ಓದುವ ಸಂದರ್ಭದಲ್ಲಿ ವಿಸರ್ಗ 'ಃ' ಧ್ವನಿಯ ಉಚ್ಚಾರಣಾ ವಿಧಾನವನ್ನು ಸ್ಪಷ್ಟತೆ ಇಲ್ಲದ ಕಾರಣದಿಂದ ಓದುತ್ತಾರೆ.

೩.೩ ಅರ್ಧಸ್ವರಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೬ ಯ > ಏ

ಪದಾದಿ ಪರಿಸರದಲ್ಲಿ ತಾಲವ್ಯಅರ್ಧಸ್ವರ 'ಯ' ಧ್ವನಿಯ ಬದಲು ಅಗ್ರಅರ್ಧ ಸಂವೃತಅಗೋಳ ದೀರ್ಘಸ್ವರ 'ಏ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಯಮ	ಏಮಾ
ಯತಿ	ಏತೀ
ಯಜಮಾನ	ಏಜಮಾನಾ
ಯಕ್ಷಗಾನ	ಏಕ್ಸಗಾನಾ
ಯಥಾವತ್ತು	ಏತಾವತೂ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ತಾಲವ್ಯಅರ್ಧಸ್ವರ 'ಯ' ಧ್ವನಿ ಮತ್ತು ಅಗ್ರಅರ್ಧ ಸಂವೃತಅಗೋಳ ದೀರ್ಘಸ್ವರ 'ಏ' ಧ್ವನಿ ಇವೆರಡೂ ಧ್ವನಿಗ ನಡುವಿನ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗುರುತಿಸದೆ ಗೊಂದಲದಿಂದ ಈ ತೆರನಾಗಿ ವ್ಯತ್ಯಾಸದಿಂದ ಓದುತ್ತಾರೆ.

೬ ವ > ಓ

ಪದಾದಿ ಪರಿಸರದಲ್ಲಿ ದಂತೋಷ್ಠ್ಯಅರ್ಧಸ್ವರ 'ವ' ಧ್ವನಿಯ ಬದಲು ಪಶ್ಚಅರ್ಧ ಸಂವೃತಗೋಳ ದೀರ್ಘಸ್ವರ 'ಓ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಓದುತ್ತಾರೆ.

ಪದಾದಿ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ವನ	ಓನಾ
ವಚನ	ಓಚನಾ
ವರುಷ	ಓರುಸಾ
ವಸತಿ	ಓಸತೀ
ವರಮಾನ	ಓರಮಾನಾ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ಕಾರಣ ದಂತೋಷ್ಠ್ಯ ಅರ್ಧಸ್ವರ 'ವ' ಧ್ವನಿ ಮತ್ತು ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಧ್ವನಿ ಇವೆರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಧ್ವನಿ ವ್ಯತ್ಯಾಸವನ್ನು ಗುರುತಿಸದೆ ಈ ತೆರನಾಗಿ ಲಂಬಾಣಿ ಭಾಷಿಕ ಮಕ್ಕಳು ಓದುತ್ತಾರೆ.

೩.೪ ಭಾಷಿಕೇತರ ಕಾರಣಗಳು

೧. ಲಂಬಾಣಿ ಜನಾಂಗದ ಬಹುಮುಖ್ಯ ಸಮಸ್ಯೆ ಎಂದರೆ ಬಡತನ. ಈ ಕಾರಣದಿಂದ ದುಡಿಮೆಗಾಗಿ ಹಗಲಿರಳು ಯೋಚಿಸುವ ಇವರು ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸದೆ, ಮನೆಕೆಲಸಕ್ಕೆ ಹಾಗೂ ದುಡಿಯುವಲ್ಲಿ ಬಹುತೇಕ ಪಾಲಕರು ಆಸಕ್ತಿ ತೋರಿಸುವ ಕಾರಣದಿಂದ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗಿದೆ.

೨. ಪಾಲಕರ ಅನಕ್ಷರತೆಯ ಕಾರಣದಿಂದಾಗಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಅವರು ಹೆಚ್ಚು ಗಮನ ಕೊಡದಿರುವುದು.

೩. ಲಂಬಾಣಿಗರು ಊರು ಗ್ರಾಮಗಳಿಂದ ಪ್ರತ್ಯೇಕವಾಗಿ ದೂರದಲ್ಲಿ ವಾಸ ಮಾಡುವುತ್ತಾರೆ. ಆದ್ದರಿಂದ ತಾಂಡಾಗಳು ಭಾಷಿಕ ದ್ವೀಪಗಳಾಗಿ ರೂಪಗೊಂಡಿರುತ್ತವೆ. ಅಂತಹ ಮಕ್ಕಳಿಗೆ ಲಂಬಾಣಿ ಭಾಷೆಯ ಹೊರತು ಬೇರೊಂದು ಭಾಷೆಯ ಬಳಕೆ ಇರುವುದಿಲ್ಲ.

೪. ಪಾಲಕರು ಮನೆಯಲ್ಲಿ ಮಕ್ಕಳೊಂದಿಗೆ ಲಂಬಾಣಿ ಭಾಷೆಯನ್ನೆ ಮಾತನಾಡುವುದು ಮತ್ತು ಸಮುದಾಯದಲ್ಲಿಯೂ ಲಂಬಾಣಿ ಭಾಷೆಯನ್ನೆ ಬಳಸುವುದರಿಂದ ಮಕ್ಕಳಿಗೆ ಕನ್ನಡ ಭಾಷೆಯ ಪದ ಪರಿಚಯವೂ ಆಗಿರುವುದಿಲ್ಲ.

೫. ಲಂಬಾಣಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯಲು ಮತ್ತೊಂದು ಪ್ರಮುಖ ಕಾರಣವೆಂದರೆ ಪಾಲಕರ ವಲಸೆ ಪ್ರವೃತ್ತಿ. ಲಂಬಾಣಿ ಜನಾಂಗದಲ್ಲಿ ದುಡಿಯುವುದಕ್ಕಾಗಿ ಕುಟುಂಬ ಸಮೇತವಾಗಿ ನಾಲ್ಕು ತಿಂಗಳಿಂದ ಆರು ತಿಂಗಳುಗಳವರೆಗೆ ದೂರದ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಇದರಿಂದಾಗಿ ಮಕ್ಕಳಿಗೆ ನಿರಂತರ ಬೋಧನೆ ದೊರಕದೆ ಕಲಿಕೆಯಲ್ಲಿ ಹಿಂದುಳಿಯುತ್ತಾರೆ.

೬. ತಾಂಡಾಗಳಲ್ಲೇ ಇರುವ ಪಾಲಕರು ಮಕ್ಕಳನ್ನು ನಿರಂತರವಾಗಿ ಶಾಲೆಗೆ ಕಳುಹಿಸದೆ ಮನೆಗೆಲಸದಲ್ಲಿ, ಮಕ್ಕಳನ್ನು ಆಡಿಸುವುದಕ್ಕೆ ತೊಡಗಿಸುವುದರಿಂದ ಮಕ್ಕಳಲ್ಲಿ ನಿರಂತರ ಕಲಿಕೆ ದೊರೆಯದೆ ಕಲಿಯುವಿಕೆ ಯಲ್ಲಿ ಹಿಂದುಳಿಯಲು ಇದು ಒಂದು ಕಾರಣವಾಗಿದೆ.

೭. ಲಂಬಾಣಿ ಮಕ್ಕಳಿಗೆ ಕನ್ನಡ ಭಾಷೆಯ ಕೊರತೆಯಿಂದಾಗಿ ತರಗತಿಯ ಬೋಧನಾ ತರಗತಿಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯ ಪಾತ್ರ ವಹಿಸದಿರುವುದು.

೮. ಶಿಕ್ಷಕರು ಲಂಬಾಣಿ ಮಕ್ಕಳ ಕಲಿಕೆಯಲ್ಲಿ ಹೆಚ್ಚು ಹೆಚ್ಚು ಆಸಕ್ತಿಯನ್ನು ತೋರಿಸದಿರುವುದು.

೯. ಶಿಕ್ಷಕರ ಬೋಧನಾ ವಿಧಾನ ಮಕ್ಕಳ ಮಾನಸಿಕ ಮಟ್ಟವನ್ನು ಮುಟ್ಟದಿರುವುದು.

೧೦. ಶಿಕ್ಷಕರು ಉಚ್ಚಾರಣೆ ಮತ್ತು ಉಕ್ತ ಲೇಖನದ ಬಗ್ಗೆ ಹೆಚ್ಚಿನ ತರಬೇತಿ ನೀಡದಿರುವುದು (ಡ್ರಿಲಿಂಗ್ ವರ್ಕ್ ಮಾಡದಿರುವುದು).

೧೧. ತರಗತಿಗಳಲ್ಲಿ ಶಿಕ್ಷಕರು ಲಂಬಾಣಿ ಭಾಷೆಯಲ್ಲಿಯೇ ವಿದ್ಯಾರ್ಥಿಗಳೊಂದಿಗೆ ಮಾತಿನ ಚಟುವಟಿಕೆಯನ್ನು ಹೆಚ್ಚಾಗಿ ನಡೆಸುವುದರಿಂದಲೂ ಭಾಷೆಯ ಜ್ಞಾನ ಕುಂಠಿತವಾಗುತ್ತದೆ.

೧೨. ಲಂಬಾಣಿ ಮಕ್ಕಳ ಗೈರುಹಾಜರಿಯ ಕಾರಣದಿಂದ ಶಿಕ್ಷಕರು ಮತ್ತು ಮಕ್ಕಳು ಎಷ್ಟೇ ಹೇಳಿದರೂ ತಿಳಿದುಕೊಳ್ಳುವುದಿಲ್ಲ ಎಂಬ ಕಾರಣದಿಂದ ಶಿಕ್ಷಕರು ಕಲಿಸುವಲ್ಲಿ ನಿರಾಸಕ್ತಿಯನ್ನು ತಳೆಯುವುದು.

೧೩. ಲಂಬಾಣಿ ಮಕ್ಕಳು ಶಾಲೆಯಲ್ಲಿ ಶಿಕ್ಷಕರು ನೀಡಿದ ಮನೆಗೆಲಸವನ್ನು ಮನೆಯಲ್ಲಿ ಮಾಡದೆ ಮತ್ತು ತರಗತಿಯಲ್ಲಿ ಹೇಳಿದ ಪಾಠವನ್ನು ಮನನ ಮಾಡಿಕೊಳ್ಳದೆ ಇರುವುದರಿಂದ ಮಕ್ಕಳ ಸ್ಮರಣೆಯಲ್ಲಿ ಶಿಕ್ಷಕರು ಹೇಳಿದ ಯಾವುದೇ ವಿಷಯ ಉಳಿಯುವುದಿಲ್ಲ. ಈ ಕಾರಣದಿಂದಲೂ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಾರೆ.

೧೪. ಮಕ್ಕಳಲ್ಲಿ ಭಾಷೆಯ ಕೊರತೆಯಿಂದಾಗಿ ಓದುವಲ್ಲಿ ಹಿಂಜರಿಕೆ ಮತ್ತು ಮಾನಸಿಕ ಖಿನ್ನತೆಯ ಕಾರಣದಿಂದಲೂ ಕಲಿಕೆಯಲ್ಲಿ ಹಿಂದುಳಿಯುತ್ತಾರೆ.

೧೫. ಲಂಬಾಣಿ ಮಕ್ಕಳಲ್ಲಿ ಮಾತೃಭಾಷೆಯ ದಟ್ಟ ಪ್ರಭಾವದಿಂದಾಗಿ ಕನ್ನಡ ಭಾಷೆಯನ್ನು ಮಾತನಾಡುವಲ್ಲಿ ಮತ್ತು ಓದುವಲ್ಲಿ ಲಂಬಾಣಿ ಭಾಷೆಯ ರೀತಿಯಲ್ಲಿಯೇ ಉಚ್ಚಾರಣೆಯನ್ನು ಮಕ್ಕಳು ಮಾಡುತ್ತಾರೆ. ಅವರ ದೋಷಕ್ಕೆ ಇದೊಂದು ಪ್ರಮುಖ ಕಾರಣವಾಗಿದೆ.

೧೬. ಬಹುತೇಕ ತಾಂಡ ಶಾಲೆಗಳಲ್ಲಿನ ಕನ್ನಡ ಶಿಕ್ಷಕರು ಲಂಬಾಣಿ ಮಕ್ಕಳಿಗೆ ಕನ್ನಡ ಭಾಷೆಯ ಮುಖಾಂತರವೇ ಕನ್ನಡ ಕಲಿಸುವಲ್ಲಿ ವಿಫಲರಾಗುತ್ತಿದ್ದಾರೆ. ಅಂದರೆ ಕನ್ನಡವನ್ನು ಅಥವಾ ಕನ್ನಡ ಪದಗಳನ್ನು ವಿವರಿಸುವಾಗ ಲಂಬಾಣಿ ಭಾಷೆಯ ಪದವನ್ನು ಹೇಳಿ ಕನ್ನಡದಲ್ಲಿ ಹೀಗೆ ಹೇಳುತ್ತಾರೆ ಎಂದು ಲಂಬಾಣಿ ಭಾಷೆಯ ಮೂಲಕ ಕನ್ನಡ ಕಲಿಕೆ ನಡೆಯುತ್ತಿರುವ ಕಾರಣದಿಂದಾಗಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ.

೧೭. ಶಿಕ್ಷಕರ ಕೊರತೆ, ಕೊಠಡಿಗಳ ಕೊರತೆ ಮತ್ತು ಬಹುವರ್ಗ ಬೋಧನೆ ಇವುಗಳ ಕಾರಣದಿಂದ ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ.

೧೮. ಶಿಕ್ಷಕ ಕಾರ್ಯ ಚಟುವಟಿಕೆಗಳನ್ನು ಪಾಲಕರಾಗಲಿ, ಶಿಕ್ಷಣ ಇಲಾಖೆಯವರೂ ಪರಿಶೀಲಿಸದಿರುವುದು.

೩.೫ ಪರಿಹಾರೋಪಾಯಗಳು

೧. ಲಂಬಾಣಿ ಮಕ್ಕಳಿಗೆ ಈಗಿರುವ ಕನ್ನಡ ಪಠ್ಯಪುಸ್ತಕಗಳಲ್ಲಿನ ಕನ್ನಡ ಕಲಿಕೆ ಹೊರೆಯಾಗುತ್ತಿದೆ. ಏಕೆಂದರೆ ಪಠ್ಯಪುಸ್ತಕ ರಚನಾಸಮಿತಿಯು ಕನ್ನಡ ಮಾತೃಭಾಷೆಯುಳ್ಳ ಮಕ್ಕಳು ಈಗಾಗಲೆ ಮಾತನಾಡುವ ಮತ್ತು ಅರ್ಥ ಮಾಡಿಕೊಳ್ಳುವ ಕೌಶಲವನ್ನು ಗಳಿಸಿಕೊಂಡಿರುವ ಮಕ್ಕಳಿಗೆ ಓದುವ ಮತ್ತು ಬರೆಯಿಸುವ ಕೌಶಲಗಳು ಪಠ್ಯಪುಸ್ತಕಗಳ ಮೂಲಕ ಶಾಲಾ ಆವರಣದಲ್ಲಿ ಕಲಿಯಬೇಕು ಅಥವಾ ಶಿಕ್ಷಕರು ಔಪಚಾರಿಕವಾಗಿ ಕಲಿಸಬೇಕು ಎಂಬ ಪ್ರಮುಖ ಉದ್ದೇಶವನ್ನಿಟ್ಟುಕೊಂಡು ಕನ್ನಡ ಪಠ್ಯಪುಸ್ತಕವನ್ನು

ರಚಿಸಲಾಗಿದೆ. ಆದರೆ ಇತರ ಭಾಷೆಯನ್ನು ಮಾತೃಭಾಷೆಯಾಗಿ ಹೊಂದಿದ್ದು, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಮಕ್ಕಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಅಂತಹ ಅನ್ಯ ಭಾಷಿಕರಾದ ಲಂಬಾಣಿ ಜನಾಂಗದ ಮಕ್ಕಳು ಲಂಬಾಣಿ ಅಥವಾ ಗೋರಬೋಲಿ ಭಾಷೆಯನ್ನು ಮಾತೃಭಾಷೆಯಾಗಿ ಹೊಂದಿದ್ದು, ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯಬೇಕಾಗಿದೆ. ಇಂತಹ ಮಕ್ಕಳು ಅವರ ಮನೆಯ ಮತ್ತು ಸಾಮಾಜಿಕ ಪರಿಸರದಿಂದಾಗಿ ಲಂಬಾಣಿ ಭಾಷೆಯ ಹೊರತು ಇತರ ಭಾಷೆಯನ್ನು ಐದು ಮತ್ತು ಆರು ವರ್ಷದವರೆಗೆ ಕಲಿತಿರುವುದಿಲ್ಲ. ಲಂಬಾಣಿ ಮಗು ತನ್ನ ೬ನೇ ವರ್ಷಕ್ಕೆ ಕನ್ನಡ ಮಾಧ್ಯಮ ಶಾಲೆಗೆ ಕಾಲಿಟ್ಟಾಗ ಕನ್ನಡ ಭಾಷೆ ಪರಿಚಿತವಾಗುತ್ತದೆ. ಇಂತಹ ಮಕ್ಕಳು ಕನ್ನಡ ಭಾಷೆಯನ್ನು ಅರ್ಥ ಮಾಡಿಕೊಳ್ಳುವ ಮತ್ತು ಮಾತನಾಡುವ ಸಾಮರ್ಥ್ಯವನ್ನು ಗಳಿಸಿಕೊಳ್ಳದ ಮಕ್ಕಳಿಗೆ ಕನ್ನಡ ಪಠ್ಯಪುಸ್ತಕಗಳಲ್ಲಿನ ಕನ್ನಡ ಕಲಿಕೆ ಹೊರೆಯಾಗುತ್ತದೆ ಎಂದೆನಿಸುತ್ತದೆ. ಈ ಕಾರಣ ದಿಂದ ಇಂಥ ಮಕ್ಕಳಿಗೆ ಪ್ರತ್ಯೇಕ ಪಠ್ಯಪುಸ್ತಕ ರಚನೆಯ ಅವಶ್ಯಕತೆ ಇದೆ.

೨. ಲಂಬಾಣಿ ಮಕ್ಕಳಿಗೆ ಮೊದಲು ಕನ್ನಡ ಭಾಷೆಯನ್ನು ಸರಳವಾಗಿ ಮಾತನಾಡುವ ಮತ್ತು ಅರ್ಥಮಾಡಿಕೊಳ್ಳುವ ಕೌಶಲಗಳನ್ನು ಶಿಕ್ಷಕರು ಕಲಿಸಬೇಕು ಮತ್ತು ಪಾಲಕರಿಗೆ ಮನೆಯಲ್ಲಿ ಮಕ್ಕಳೊಂದಿಗೆ ಕನ್ನಡದಲ್ಲಿಯೇ ಮಾತನಾಡುವಂತೆ ಪ್ರೋತ್ಸಾಹಿಸಬೇಕು. ಹೀಗೆ ಭಾಷೆಯೇ ಅರ್ಥವಾಗದೆ ಮಕ್ಕಳಿಗೆ ಅಕ್ಷರಗಳನ್ನು ಕಲಿಸುವುದರಿಂದ ಮಕ್ಕಳು ಏನೆಂದೂ ತಿಳಿಯದೆ ಶಾಲೆಗೆ ಬಾರದೆ ಇರುವುದು, ಇನ್ನು ಕೆಲವು ಮಕ್ಕಳಿಗೆ ಯಾಂತ್ರಿಕ ಅಥವಾ ಗಿಳಿ ಪಾಠದಂತೆ ಕಲಿಯುತ್ತಾರೆ. ಇಂತಹ ಕಲಿಕೆ ದೀರ್ಘಕಾಲ ಉಳಿಯದೆ ಮತ್ತೆ ಆ ಮಕ್ಕಳಲ್ಲಿ ಖಿನ್ನತೆ ಉಂಟಾಗುವಂತೆ ಮಾಡುತ್ತದೆ. ಅಲ್ಲದೆ ಕಲಿಕೆಯಲ್ಲಿ ಹಿಂದುಳಿಯುವಂತೆ ಮಾಡುತ್ತದೆ. ಆದ್ದರಿಂದ ಮೊದಲು ಅರ್ಥ ಮಾಡಿಕೊಳ್ಳುವ ಮತ್ತು ಮಾತನಾಡುವ ಕಲೆಯನ್ನು ಕಲಿಸಿದ ನಂತರ ಓದುವ ಕಲೆಯನ್ನು ಕಲಿಸಬೇಕು.

೩. ಲಂಬಾಣಿ ಮಕ್ಕಳು ಕನ್ನಡ ಕಲಿಯುವಲ್ಲಿ ಶಿಕ್ಷಕರು ಆತ್ಮವಿಶ್ವಾಸವನ್ನು ನೀಡಬೇಕು. ಏನು ಹೇಳಿದರೂ ಈ ಮಕ್ಕಳು ಕಲಿಯುವುದಿಲ್ಲ ಎಂದು ನಿರಾಶರಾಗದೆ, ಆಸಕ್ತಿಯಿಂದ ಗಮನವಹಿಸಿ ಶಿಕ್ಷಣದ ಮಹತ್ವವನ್ನು ಹೇಳಿ, ಅರ್ಥ ಮಾಡಿಸಿ ಆತ್ಮವಿಶ್ವಾಸ ತುಂಬುವಲ್ಲಿ ಶಿಕ್ಷಕರು ಶ್ರಮ ಪಡಬೇಕು.

೪. ಶಿಕ್ಷಕರು ಮೊದಲು ತಮ್ಮ ವೃತ್ತಿಯನ್ನು ಗೌರವದಿಂದ ಕಾಣುವುದಲ್ಲದೆ ಅದನ್ನು ಪ್ರೀತಿಸಬೇಕು. ಜೊತೆಗೆ ತಮಗೆ ನೀಡುವ ವೇತನಕ್ಕಾದರೂ ತಮ್ಮ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಬೇಕು.

೫. ಶಿಕ್ಷಕನು ಪರಿಣಾಮಕಾರಿಯಾಗಿ ಬೋಧಿಸಬೇಕಾದರೆ ಭಾಷೆಯ ಮೇಲೆ ಹಿಡಿತ ಇರಬೇಕು. ಅವರ ಮಾತು, ಉಚ್ಚಾರ, ವಾಕ್ಯ ರಚನೆ ಸರಿಯಾಗಿದ್ದರೆ ಮಾತ್ರ ಮಕ್ಕಳ ಕಲಿಕೆ ಸಾಧ್ಯವಾಗುತ್ತದೆ. ಇಂತಹ ಭಾಷೆ ಮೇಲೆ ಹಿಡಿತ ಇರುವ ಶಿಕ್ಷಕರನ್ನೆ ಇಂತಹ ಮಕ್ಕಳಿಗೆ ನೇಮಿಸಬೇಕು.

೬. ಪಾಲಕರು ಮಕ್ಕಳನ್ನು ನಿರ್ಲಕ್ಷಿಸದೆ, ಸರಿಯಾಗಿ, ನಿರಂತರವಾಗಿ ಶಾಲೆಗೆ ಕಳುಹಿಸುವುದು. ಅಲ್ಲದೆ ಅವರ ಶಾಲೆಯಲ್ಲಿನ ಶೈಕ್ಷಣಿಕ ಚಟುವಟಿಕೆಯ ಕಡೆಗೆ ಗಮನ ವಹಿಸಬೇಕು. ಜೊತೆಗೆ ಓದು

ಬರೆಯುವಲ್ಲಿ ಪ್ರೋತ್ಸಾಹ ನೀಡಬೇಕು ಎಂದು ಶಿಕ್ಷಕರು ಪಾಲಕರಿಗೆ ಪದೇ ಪದೇ ಮನವರಿಕೆ ಮಾಡಬೇಕು.

೭. ಶಿಕ್ಷಕರು ಲಂಬಾಣಿ ಭಾಷೆಯನ್ನು ಬಳಸದೆ ಹೆಚ್ಚು ಹೆಚ್ಚು ಕನ್ನಡವನ್ನೆ ಬಳಸಬೇಕು. ತರಗತಿಯಲ್ಲಿ ಕನ್ನಡದಲ್ಲಿಯೇ ಮಾತನಾಡಬೇಕು. ತರಗತಿಯ ಹೊರಗು ಕನ್ನಡದಲ್ಲಿ ಮಾತನಾಡಬೇಕು ಎಂದು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕು.

೮. ಯಾವುದೇ ಅರ್ಥವಾಗದ ಶಬ್ದ ಅಥವಾ ಸಂಗತಿಯನ್ನು ವಿದ್ಯಾರ್ಥಿಗಳು ನಿಸ್ಸಂಕೋಚವಾಗಿ ಅಥವಾ ಭಯವಿಲ್ಲದೆ ಕೇಳಲು ಹೇಳಬೇಕು. ಹಾಗೆಯೇ ಸಮಾಧಾನದಿಂದ ಅರ್ಥವಾಗುವ ಹಾಗೆ ವಿದ್ಯಾರ್ಥಿಗಳಿಗೆ ಶಿಕ್ಷಕರು ತಿಳಿಯಪಡಿಸಬೇಕು.

೯. ಶಿಕ್ಷಕರು ಹ್ರಸ್ವಸ್ವರ ಮತ್ತು ದೀರ್ಘಸ್ವರಗಳಲ್ಲಿನ ವ್ಯತ್ಯಾಸವನ್ನು ಹಾಗೂ ಅಲ್ಪಪ್ರಾಣ ಮತ್ತು ಮಹಾಪ್ರಾಣ ಅಕ್ಷರಗಳಲ್ಲಿನ ವ್ಯತ್ಯಾಸವನ್ನು ಸೂಕ್ಷ್ಮವಾಗಿ ವಿದ್ಯಾರ್ಥಿಗಳಿಗೆ ಅರ್ಥ ಆಗುವ ಹಾಗೆ ಅಥವಾ ಮನವರಿಕೆ ಆಗುವ ಹಾಗೆ ಬೋಧಿಸಬೇಕು. ಧ್ವನಿಮಾ ವ್ಯತ್ಯಾಸವಿರುವ ಪದಗಳನ್ನೇ ಹೆಚ್ಚು ಹೆಚ್ಚು ಹೇಳುವುದರ ಜೊತೆಗೆ ಅರ್ಥವ್ಯತ್ಯಾಸವನ್ನು ತಿಳಿಯಪಡಿಸಬೇಕು.

೧೦. ಲಂಬಾಣಿ ಮಕ್ಕಳು ಅವರ ಭಾಷೆಯ ಪ್ರಭಾವ ಎಲ್ಲೆಲ್ಲಿ ಮಾಡುತ್ತಾರೆ ಎಂಬುದನ್ನು ಶಿಕ್ಷಕರು ಗುರುತಿಸಿ, ಅದರಿಂದಾಗುವ ದೋಷ ಏನು ಎಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿ ಸಾಧ್ಯವಾದಷ್ಟು ಅವರ ಭಾಷೆಯ ಪ್ರಭಾವವನ್ನು ಗುರುತಿಸಿ ಕನ್ನಡ ಭಾಷೆಯ ರಚನೆಯನ್ನು ತಿಳಿಸಬೇಕು.

೧೧. ಶಿಕ್ಷಕರು ತರಗತಿಗಳಲ್ಲಿ ಪಾಠ ಹೇಳುವಾಗ ರಂಗಕಲೆಯ ಎಲ್ಲ ಅಂಶಗಳನ್ನು ಬಳಸಿಕೊಂಡು ಮಕ್ಕಳ ಕಲಿಕೆ ಪರಿಣಾಮಕಾರಿ ಆಗುವಂತೆ, ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸುವುದು ಮತ್ತು ಮಕ್ಕಳಲ್ಲಿ ಅಭಿವ್ಯಕ್ತಿ ಕೌಶಲವನ್ನು ಹೆಚ್ಚಿಸುವುದು ಶಿಕ್ಷಕರ ಜವಾಬ್ದಾರಿಯಾಗಿದೆ.

೧೨. ಶಿಕ್ಷಕರು ಕಥೆ ಹೇಳುವುದು, ವಸ್ತುಗಳ ವಿವಿಧ ರೀತಿಯ ಬಳಕೆ, ಪ್ರಶ್ನೋತ್ತರ ಮಾದರಿ, ಹಾಡುಗಳ ಮೂಲಕ, ಸ್ವರದ ಏರಿಳಿತಗಳ ಮೂಲಕ ಗಟ್ಟಿಯಾಗಿ ಓದುವುದರಿಂದ ಮಕ್ಕಳಲ್ಲಿ ಆಲಿಸುವ ಮತ್ತು ಮಾತನಾಡುವ ಕೌಶಲವನ್ನು ಅಭಿವೃದ್ಧಿ ಪಡಿಸುವಲ್ಲಿ ಶಿಕ್ಷಕರು ಶ್ರಮವಹಿಸಬೇಕು.

೧೩. ಶಿಕ್ಷಕರು ಮಕ್ಕಳಿಗೆ ಉಚ್ಚಾರಣೆಯಲ್ಲಿ ಅಲ್ಪ ವ್ಯತ್ಯಾಸವಿರುವ ಧ್ವನಿಮಾ, ಪದಗಳನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಪದೇ ಪದೇ ಹೇಳಿ ಮತ್ತು ಮಕ್ಕಳಿಂದಲೂ ಪದೇ ಪದೇ ಸ್ಪಷ್ಟವಾಗಿ ಹೇಳಿಸಿ ಅವುಗಳ ಸ್ಪಷ್ಟ ತಿಳುವಳಿಕೆ ಬರುವಂತೆ ವಿವಿಧ ರೀತಿಯ ಡ್ರಿಲ್ಲಿಂಗ್ ಮೆಥೆಡ್‌ಗಳನ್ನು ಶಿಕ್ಷಕರು ಬಳಸಬೇಕು.

೧೪. ಕರ್ನಾಟಕ ಸರ್ಕಾರ ಕನ್ನಡೇತರ ಮಕ್ಕಳಾದ ಲಂಬಾಣಿ ಮಕ್ಕಳಿಗೆ ಕನ್ನಡ ಬೋಧಿಸುವ ಶಿಕ್ಷಕರಿಗೆ ಯಾವುದೇ ವಿಶೇಷ ತರಬೇತಿಯನ್ನು ಇದುವರೆಗೂ ನೀಡದೆ, ಕನ್ನಡ ಮಕ್ಕಳಿಗೆ ಬೋಧಿಸುವ

ತರಬೇತಿಯನ್ನೇ ನೀಡುತ್ತಿದ್ದಾರೆ. ಆದರೆ ಈ ತರಬೇತಿಯಿಂದ ಲಂಬಾಣಿ ಮಕ್ಕಳಿಗೆ ಉಪಯೋಗ ವಾಗುತ್ತಿಲ್ಲ. ಆದರ ಬದಲು ಇಂಥ ಮಕ್ಕಳ ಸಮಸ್ಯೆಗಳನ್ನು ಶಿಕ್ಷಕರಿಂದ ಸಂಗ್ರಹಿಸಿ ಅಂತಹ ಸಮಸ್ಯೆಗಳನ್ನು ನಿವಾರಿಸುವಲ್ಲಿ ಉತ್ತಮ ತರಬೇತಿಗಳನ್ನು ತಾಂಡ ಶಾಲಾ ಶಿಕ್ಷಕರಿಗೆ ನೀಡುವುದು ಉತ್ತಮ ಮತ್ತು ಪ್ರಯೋಜನಕಾರಿ. ಇದರಿಂದ ಕನ್ನಡ ಕಲಿಕೆಯಲ್ಲಿನ ದೋಷಗಳಿಗೆ ಸ್ವಲ್ಪವಾದರೂ ಪರಿಹಾರ ಸಿಕ್ಕಿದಂತೆ ಆಗುತ್ತದೆ.

೧೫. ಲಂಬಾಣಿ ಭಾಷಿಕ ಮಕ್ಕಳನ್ನು ಹತ್ತಿರದ ಊರುಗಳಲ್ಲಿ ಇರುವ ಕನ್ನಡ ಮಾತೃಭಾಷೆಯುಳ್ಳ ಮಕ್ಕಳೊಂದಿಗೆ ಕನಿಷ್ಠ ಒಂದು ಅಥವಾ ಒಂದೂವರೆ ಗಂಟೆಯಾದರೂ ಸಂಭಾಷಣೆಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಲಂಬಾಣಿ ಭಾಷಿಕ ಮಕ್ಕಳು ಮನೆಯ ಆವರಣದಲ್ಲಿ, ಸುತ್ತಮುತ್ತಲಿನ ಅವರ ಸಾಮಾಜಿಕ ಪರಿಸರದಲ್ಲಿ ಮತ್ತು ತಮ್ಮ ತಮ್ಮೊಳಗೆ ಶಾಲೆಯ ಒಳಗೆ ಮತ್ತು ಹೊರಗೆ ಲಂಬಾಣಿಯಲ್ಲಿಯೇ ಮಾತನಾಡುತ್ತಿರುತ್ತವೆ. ಆದರೆ ಈ ಮಕ್ಕಳು ಶಾಲಾ ಆವರಣದಲ್ಲಿ ಶಿಕ್ಷಕರು ಕನ್ನಡದಲ್ಲಿ ಹೇಳುವ ಬೋಧನೆ ಮತ್ತು ಅವರೊಂದಿಗೆ ಮಾತ್ರ ಕನ್ನಡವನ್ನು ತಡವರಿಸಿ ಮಾತನಾಡುವಲ್ಲಿ ಮಾತ್ರ ಕನ್ನಡ ಭಾಷೆಯನ್ನು ಕಲಿಯಲು ಅವಕಾಶವಿರುತ್ತದೆ. ಈ ಕಾರಣಗಳಿಂದ ಕನ್ನಡ ಕಲಿಕೆ ಕಷ್ಟ ವಾಗುತ್ತಿದೆ.

೧೬. ಲಂಬಾಣಿ ಮಕ್ಕಳಿಗೆ ಸುಲಭವಾಗಿ ಆಲಿಸುವ, ಮಾತನಾಡುವಂತೆ ಅನುಕೂಲವಾಗುವಂತಹ ಮತ್ತು ಇನ್ನು ಸರಳವಾಗಿ ಬಹುತೇಕ ಚಿತ್ರಗಳ ಸಮೇತ ಓದಲು ಮತ್ತು ಬರೆಯುವಂತಹ ಪಠ್ಯಪುಸ್ತಕ ರಚನೆ ಆಗಬೇಕಿದೆ.

೧೭. ಮನೆಯಿಂದ ಮೊದಲ ಬಾರಿ ಶಾಲೆಗೆ ಬರುವ ಲಂಬಾಣಿ ಭಾಷಿಕ ಮಕ್ಕಳಿಗೆ ಆರಂಭದಲ್ಲಿ ಶಾಲೆಯು ಮನೆಯಂತೆಯೇ ಮುಕ್ತವಾದ ಸನ್ನಿವೇಶವನ್ನೊದಗಿಸಿಕೊಡಬೇಕು. ಮಕ್ಕಳ ಮಾತು, ವರ್ತನೆ ಮತ್ತು ಚಟುವಟಿಕೆಗಳ ಬಗೆಗೆ ಯಾವುದೇ ರೀತಿಯ ನಿರ್ಬಂಧಗಳನ್ನು ಹೇರಬಾರದು. ಶಾಲೆಗೆ ಬರುವ ಮಗುವನ್ನು ಪ್ರೀತಿ, ವಿಶ್ವಾಸ, ಸೌಜನ್ಯತೆಗಳಿಂದ ಮಾತನಾಡಿಸಿ ಅವರಿಗೆ ಶಾಲೆಯ ಚಟುವಟಿಕೆಗಳ ಬಗೆಗೆ ಆತ್ಮವಿಶ್ವಾಸ ಮೂಡಿಸಬೇಕು.

ಅಧ್ಯಾಯ ನಾಲ್ಕು

ಬರವಣಿಗೆ ಸಮಸ್ಯೆಗಳು

೪.೧. ಸ್ವರಗಳು

೪.೨. ವ್ಯಂಜನಗಳು

೪.೩. ಅರ್ಧಸ್ವರಗಳು

೪.೪. ಭಾಷಿಕೇತರ ಕಾರಣಗಳು

೪.೫. ಪರಿಹಾರೋಪಾಯಗಳು

ಅಧ್ಯಾಯ ೪

ಬರವಣಿಗೆ ಸಮಸ್ಯೆಗಳು

ಲಂಬಾಣಿ ಭಾಷಿಕ ಮಕ್ಕಳು ಶೈಕ್ಷಣಿಕವಾಗಿ ಕನ್ನಡವನ್ನು ಶಾಲಾ ತರಗತಿಗಳಲ್ಲಿ ಓದುವ ಮತ್ತು ಬರೆಯುವ ಚಟುವಟಿಕೆಗಳು ಶಿಕ್ಷಕರ ಬೋಧನೆ ಮತ್ತು ಬರವಣಿಗೆಯನ್ನು ಅವಲಂಬಿಸಿರುತ್ತದೆ. ಏಕೆಂದರೆ ಶಾಲಾ ತರಗತಿಗಳಲ್ಲಿ ಶಿಕ್ಷಕರು ಎಷ್ಟು ಸಮಯದಲ್ಲಿ ಯಾವ ರೀತಿಯಾಗಿ ಬೋಧನೆ ಮಾಡುತ್ತಾರೋ ಅಂದರೆ ಉಚ್ಚಾರಣ ವಿಧಾನ, ಮಾತನಾಡುವ ಶೈಲಿ ಮೊದಲಾದವು ಮಕ್ಕಳ ಓದುವಿಕೆಯ ಮೇಲೆ ಪ್ರಭಾವ ಬೀರಿದರೆ, ಶಿಕ್ಷಕರು ಶಾಲಾ ತರಗತಿಗಳಲ್ಲಿ ಎಷ್ಟು ಸಮಯ ಕಪ್ಪು ಹಲಗೆಯ ಮೇಲೆ ಬರವಣಿಗೆಯನ್ನು ಮಾಡುತ್ತಾರೊ, ಅವರ ಬೋಧನಾ ಶೈಲಿ ಅಷ್ಟೇ ಆ ಮಕ್ಕಳ ಮೇಲೆ ಪ್ರಭಾವ ಬೀರುತ್ತಿರುತ್ತದೆ. ಅದಲ್ಲದೆ ಶಿಕ್ಷಕರು ಮಕ್ಕಳನ್ನು ಎಷ್ಟು ಸಮಯ ಬರವಣಿಗೆಯಲ್ಲಿ ತೊಡಗಿಸುತ್ತಾರೆ? ಎಂಬುದು ಸಹ ಮಕ್ಕಳ ಬರವಣಿಗೆಯ ಕೌಶಲದ ಮೇಲೆ ಪ್ರಭಾವ ಬೀರುತ್ತಿರುತ್ತದೆ. ಲಂಬಾಣಿ ಭಾಷಿಕ ಮಕ್ಕಳ ಓದುವಿಕೆ ಮತ್ತು ಬರವಣಿಗೆಯ ಚಟುವಟಿಕೆಗಳಲ್ಲಿ ಶಾಲಾ ತರಗತಿ ಹಾಗೂ ಶಿಕ್ಷಕರೇ ಪ್ರಮುಖರಾಗಿರುತ್ತಾರೆ. ಏಕೆಂದರೆ ಲಂಬಾಣಿ ಭಾಷಿಕ ಮಕ್ಕಳು ಶಾಲಾ ತರಗತಿಗಳಲ್ಲಿ ಶಿಕ್ಷಕರು ಬರೆದ ಮತ್ತು ಬರೆಯಿಸಿದ ಬರವಣಿಗೆ ಚಟುವಟಿಕೆಯನ್ನು ಬಿಟ್ಟರೆ ಮನೆಯ ಪರಿಸರದಲ್ಲಾಗಲಿ ಅಥವಾ ಬಿಡುವಿನ ಸಮಯದಲ್ಲಾಗಲಿ ಮಕ್ಕಳು ಬರವಣಿಗೆಯಲ್ಲಿ ತೊಡಗಿಕೊಳ್ಳುವುದು ತುಂಬಾ ಕಡಿಮೆ. ಇದರಿಂದ ಲಂಬಾಣಿ ಭಾಷಿಕ ಮಕ್ಕಳ ಬರವಣಿಗೆ ಚಟುವಟಿಕೆ ಶಾಲಾ ತರಗತಿಗಳಲ್ಲಿ ಮಾತ್ರ ನಡೆಯುತ್ತಿರುತ್ತದೆ. ಹೀಗೆ ಲಂಬಾಣಿ ಭಾಷಿಕ ಮಕ್ಕಳಲ್ಲಿ ಬರವಣಿಗೆ ಚಟುವಟಿಕೆಗಳೇ ತುಂಬಾ ಕಡಿಮೆ ಇರುವುದರಿಂದ ಕನ್ನಡ ಭಾಷೆಯ ಪದ ಸಂಪತ್ತಿನ ಜ್ಞಾನದ ಕೊರತೆ ಮತ್ತು ಅರ್ಥ ವ್ಯತ್ಯಾಸದ ತಿಳುವಳಿಕೆಯ ಅಭಾವ ಹಾಗೂ ಆಲಿಸುವಿಕೆಯಲ್ಲಿನ ಗೊಂದಲದಿಂದಾಗಿ ಬರವಣಿಗೆಯಲ್ಲಿ ಹಲವಾರು ಸಮಸ್ಯೆಗಳನ್ನು ದ್ವಿಗುಣವಾಗಿ ಎದುರಿಸುತ್ತಿದ್ದಾರೆ.

[illegible]

[illegible]

[illegible]

[illegible]

[illegible]

ಅಧ್ಯಯನದ ವಿಶ್ಲೇಷಣೆ

ಲಂಬಾಣಿ ಭಾಷಿಕ ಮಕ್ಕಳು ಈಗಾಗಲೇ ಪ್ರಸ್ತಾವನೆಯಲ್ಲಿ ಹೇಳಿದ ಹಾಗೆ ಕನ್ನಡ ಬರೆಯುವಾಗ ಹಲವಾರು ವ್ಯತ್ಯಾಸಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮಕ್ಕಳು ಬರವಣಿಗೆಯಲ್ಲಿ ಮಾಡುವ ವ್ಯತ್ಯಾಸಗಳನ್ನು ಪತ್ತೆಹಚ್ಚಲು ಎರಡು ರೀತಿಯ ವಿಧಾನಗಳನ್ನು ಅನುಸರಿಸಲಾಗಿದೆ.

ಮೊದಲನೆಯದಾಗಿ ೧, ೨, ೩ ಮತ್ತು ೪ನೇ ತರಗತಿಯ ಪಠ್ಯಪುಸ್ತಕಗಳಲ್ಲಿನ ಪದಕೋಶಿಯನ್ನು ಮೂಲಾಕ್ಷರಗಳು, ಗುಣಿತಾಕ್ಷರಗಳು, ಸಜಾತಿ ಒತ್ತಕ್ಷರ ಮತ್ತು ವಿಜಾತಿ ಒತ್ತಕ್ಷರಗಳು ಎಂದು ಅಕಾರಾದಿ ಯಾಗಿ ಪದಗಳ ಪಟ್ಟಿಯನ್ನು ತಯಾರಿಸಿಕೊಂಡು ಅವುಗಳನ್ನು ಆಯಾ ತರಗತಿಯ ಮಕ್ಕಳ ಕಡೆಯಿಂದ ಬರೆಸುವ ಮೂಲಕ ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮಾಡುವ ಬರವಣಿಗೆ ವ್ಯತ್ಯಾಸಗಳನ್ನು ಪತ್ತೆಹಚ್ಚಲಾಗಿದೆ.

ಎರಡನೆಯದಾಗಿ ೧, ೨, ೩ ಮತ್ತು ೪ನೇ ತರಗತಿಗಳಿಗೆ ನಿಗದಿಪಡಿಸಿದ ಪಠ್ಯಪುಸ್ತಕಗಳಲ್ಲಿನ ಗದ್ಯ ಮತ್ತು ಪದ್ಯ ಪಾಠಗಳ ಉಕ್ತಲೇಖನವನ್ನು ಬರೆಯಿಸುವುದು. ಅಲ್ಲದೆ ಯಾವುದಾದರೊಂದು ವಿಷಯದ ಶೀರ್ಷಿಕೆ ಕೊಟ್ಟು ಮಕ್ಕಳ ಕಡೆಯಿಂದ ಅವರಿಗೆ ಅದರ ಕುರಿತು ಗೊತ್ತಿರುವಷ್ಟು ಬರೆಯಿಸುವುದು. ಹಾಗೆ ಮಕ್ಕಳು ಬರೆದ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ಇವೆಲ್ಲವುಗಳನ್ನು ಅಧ್ಯಯನ ಮಾಡಿ, ಮಕ್ಕಳು ಮಾಡುವ ವ್ಯತ್ಯಾಸ ಮತ್ತು ಸಮಸ್ಯೆಗಳನ್ನು ಗುರುತಿಸಲಾಗಿದೆ. ಹೀಗೆ ಲಂಬಾಣಿ ಭಾಷಿಕ ಮಕ್ಕಳು ಮಾಡುವ ಬರವಣಿಗೆ ವ್ಯತ್ಯಾಸಗಳನ್ನು ಬರಹದ ಕನ್ನಡ ರೂಪಗಳೊಂದಿಗೆ ತುಲನೆ ಮಾಡಿ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯ ಬರವಣಿಗೆಯಲ್ಲಿ ಮಾಡುವ ವ್ಯತ್ಯಾಸಗಳನ್ನು ವಿಶ್ಲೇಷಿಸುವುದರ ಜೊತೆಗೆ ಆ ವ್ಯತ್ಯಾಸಗಳಿಗೆ ಕಾರಣಗಳನ್ನು ಭಾಷಿಕ ಮತ್ತು ಭಾಷಿಕೇತರ ವಾಗಿ ವಿಭಾಗಿಸಿಕೊಂಡು, ಭಾಷಿಕ ಕಾರಣಗಳನ್ನು ಮಕ್ಕಳು ಮಾಡುವ ಬರವಣಿಗೆ ವ್ಯತ್ಯಾಸಗಳೊಂದಿಗೆ ಚರ್ಚಿಸಲಾಗಿದೆ. ನಂತರ ಭಾಷಿಕೇತರ ಕಾರಣಗಳನ್ನು ಒಟ್ಟಾರೆಯಾಗಿ ಚರ್ಚಿಸಲಾಗಿದೆ. ಹಾಗೆಯೇ ಬರವಣಿಗೆ ಸಮಸ್ಯೆಗಳನ್ನು ನಿವಾರಿಸಲು ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನು ಚರ್ಚಿಸಲಾಗಿದೆ.

೪.೧. ಸ್ವರಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೪.೨. ವ್ಯಂಜನಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೪.೩. ಅರ್ಧಸ್ವರಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೪.೪. ಭಾಷಿಕೇತರ ಕಾರಣಗಳು

೪.೫. ಪರಿಹಾರೋಪಾಯಗಳು

೧. ಸ್ವರಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೬ ಆ > ಅ

ಪದಾದಿ ಮತ್ತು ಪದಮಧ್ಯ ಪರಿಸರಗಳಲ್ಲಿ ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಧ್ವನಿಮಾದ ಬದಲು ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ಕನ್ನಡ
ಉದಾ:	ಆಲ	ಅಲಾ
	ಆಳ	ಅಲಾ
	ಆಗರ	ಅಗರಾ
	ಆಲಯ	ಅಲಯಾ
	ಆಗಸ	ಅಗಸ
	ಆರಾಮ	ಅರಮ
	ಆಕಾಶ	ಅಕಸ

ಪದಮಧ್ಯ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ಕನ್ನಡ
	ಕಾಲು	ಕಲು
	ಕಾಳು	ಕಲು
	ಆಕಾಶ	ಅಕಸ
	ಬಾಲ	ಬಲ
	ಉಪಾಯ	ಉಪಯ
	ಜಾಣ	ಜನ
	ನಾಯಕ	ನಯಕ
	ನಗಾರಿ	ನಗರಿ
	ಕಾಡು	ಕಡು
	ಜಾರಿ	ಜರಿ
	ದಾರಿ	ದರಿ
	ರಾಗ	ರಗ
	ದಾನ	ದನ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ಬಾ	ಬ
	ಅಬ್ಬಾ	ಅಬ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳು ದಿಢೀರನೆ ಶಾಲಾ ತರಗತಿಯಲ್ಲಿ ಕನ್ನಡ ಭಾಷೆಯ ಬರವಣಿಗೆಯನ್ನು ಮಾಡುವುದರಿಂದ ಮತ್ತು ಕನ್ನಡ ಧ್ವನಿಮಾಗಳ ಸ್ಪಷ್ಟತೆ ಇಲ್ಲದಿರುವುದ ರಿಂದಾಗಿ ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಧ್ವನಿ ಮತ್ತು ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿ ಈ ಎರಡೂ ಧ್ವನಿಗಳಲ್ಲಿನ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗ್ರಹಿಸದೆ ಮತ್ತು ರೂಪ ಸಾಮ್ಯತೆಯ ಗೊಂದಲದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೬ ಅ > ಆ

ಪದಾಂತ್ಯ ಪರಿಸರದಲ್ಲಿ ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿಮಾದ ಬದಲು ಅಗ್ರವಿವೃತ ಅಗೋಳದೀರ್ಘಸ್ವರ 'ಆ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಅರ	ಅರಾ
	ಆಲ	ಅಲಾ
	ಎರಕ	ಎರಕಾ
	ಆಗರ	ಅಗರಾ
	ಗರ	ಗರಾ
	ಕದ	ಕದಾ
	ಗಿಡ	ಗಿಡಾ
	ಖಗ	ಕಗಾ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳು ಪದಾಂತ್ಯ ಪರಿಸರದಲ್ಲಿ ಅಗ್ರವಿವೃತ ಅಗೋಳಹ್ರಸ್ವಸ್ವರ 'ಅ' ಧ್ವನಿಯನ್ನು ದೀರ್ಘವಾಗಿ ಗ್ರಹಿಸುವುದರಿಂದ ಬರೆಯುವಾಗ ಈ ರೀತಿಯ ವ್ಯತ್ಯಾಸವನ್ನು ಮಾಡುತ್ತಾರೆ.

☯ ಈ > ಇ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಅಗ್ರಸಂವೃತ ಅಗೋಳದೀರ್ಘಸ್ವರ 'ಈ' ಧ್ವನಿಮಾದ ಬದಲು ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಈ	ಇ
	ಈಟಿ	ಇಟಿ
	ಈತ	ಇತ
	ಈಶ	ಇಸ
	ಈಚಲ	ಇಚಲ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ವೀರ	ವಿರ
	ಮೀನು	ಮಿನು
	ನೀರು	ನಿರು
	ಕೀಳು	ಕಿಳು/ಕಿಲು
	ಚೀರು	ಚಿರು
	ಜೀವ	ಜಿವ
	ಹೀರು	ಹಿರು/ಇರು
	ಪೀಠ	ಪಿಟ
	ತೀರ	ತಿರ
	ಬೀಜ	ಬಿಜ
	ಬೀಗ	ಬಿಗ
	ಮಸೀದಿ	ಮಸಿದಿ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಇಡೀ	ಇಡಿ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಪದ ಸಂಪತ್ತಿನ ಕೊರತೆಯಿಂದಾಗಿ ಅಗ್ರಸಂವೃತ ಅಗೋಳದೀರ್ಘಸ್ವರ 'ಈ' ಧ್ವನಿ ಮತ್ತು ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಧ್ವನಿ ಇವರೆಡು ಧ್ವನಿಗಳ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡವನ್ನು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೬ ಊ > ಉ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಪಶ್ಚಸಂವೃತಗೋಳ ದೀರ್ಘಸ್ವರ 'ಊ' ಧ್ವನಿಮಾದ ಬದಲು ಪಶ್ಚಸಂವೃತಗೋಳಹ್ರಸ್ವಸ್ವರ 'ಉ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಊರು	ಉರು
	ಊಳು	ಉಲು
	ಊಟ	ಉಟ
	ಊದು	ಉದು
	ಊಷರ	ಉಸರ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ದೂರ	ದುರ
	ಗೂಡು	ಗುಡು
	ಮೂಟೆ	ಮುಟೆ
	ಜೂಟಾಟ	ಜುಟಟ
	ಸೂಚನೆ	ಸುಚನೆ
	ಮೂಡಲು	ಮುಡಲು
	ದೂರು	ದುರು
	ಗೂಡಾಸೆ	ಗುಡಸ
	ತೂರು	ತುರು
	ಕೂಡಲೆ	ಕುಡಲ
	ಕೂಗು	ಕುಗು

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಅವನೂ	ಅವನು
	ಆದರೂ	ಅದರು
	ಮಾಡಿದರೂ	ಮಡಿದರು

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಪಶ್ಚಸಂವೃತಗೋಳ ದೀರ್ಘಸ್ವರ 'ಊ' ಧ್ವನಿ ಮತ್ತು ಪಶ್ಚಸಂವೃತಗೋಳ ಹ್ರಸ್ವಸ್ವರ 'ಉ' ಧ್ವನಿ ಈ ಎರಡೂ ಧ್ವನಿಗಳ ರಚನೆಯಲ್ಲಿರುವ ಅಲ್ಪ ಸಾಮ್ಯತೆಯನ್ನು ಗುರುತಿಸದೆ ಹಾಗೂ ಧ್ವನಿಗಳ ಉಚ್ಚಾರಣಾ ವ್ಯತ್ಯಾಸವನ್ನು ಗ್ರಹಿಸದ ಕಾರಣ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೬ ಉ > ವು

ಪದಾದಿ ಪರಿಸರದಲ್ಲಿ ಪಶ್ಚಸಂವೃತಗೋಳ ಹ್ರಸ್ವಸ್ವರ 'ಉ' ಧ್ವನಿಮಾದ ಬದಲು ದಂತೋಷ್ಠ್ಯ ಅರ್ಧಸ್ವರ ಗುಣಿತಾಕ್ಷರ 'ವು' ಧ್ವನಿಮಾವನ್ನು ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಉಡುಗೆ	ವುಡುಗೆ
	ಉಸಿರು	ವುಸಿರು
	ಉಳಿಸು	ವುಲಿಸು
	ಉಡುಗೊರೆ	ವುಡುಗರೆ
	ಉಪವಾಸ	ವುಪವಸ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಕನ್ನಡದಲ್ಲಿ ಪಶ್ಚಸಂವೃತಗೋಳ ಹ್ರಸ್ವಸ್ವರ 'ಎ' ಧ್ವನಿ ಮತ್ತು ದಂತೋಷ್ಠ್ಯ ಅರ್ಧಸ್ವರ ಗುಣಿತಾಕ್ಷರ 'ವು' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣಾ ಸಾಮ್ಯತೆಯ ಗೊಂದಲ ಮತ್ತು ಅರ್ಥವ್ಯತ್ಯಾಸದ ಕೊರತೆಯಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯ ವ್ಯತ್ಯಾಸದಿಂದ ಬರೆಯುತ್ತಾರೆ.

೬ ಏ > ಎ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಅಗ್ರಅರ್ಧಸಂವೃತ ಅಗೋಳದೀರ್ಘಸ್ವರ 'ಏ' ಧ್ವನಿಮಾದ ಬದಲು ಅಗ್ರಅರ್ಧಸಂವೃತ ಅಗೋಳಹ್ರಸ್ವಸ್ವರ 'ಎ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಏಳು	ಎಳು
	ಏರು	ಎರು
	ಏತ	ಎತ
	ಏವ	ಎವ
	ಏಕೆ	ಎಕೆ
	ಏಡಿ	ಎಡಿ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಬೇಡ	ಬೆಡ
	ಮೇಲೆ	ಮೆಲೆ/ಮಲ
	ತೇಲು	ತೆಲು/ತಲು
	ದೇಶ	ದೆಸ
	ವೇಷ	ವೆಸ/ಎಶ
	ಕೇಕೆ	ಕೆಕೆ
	ಮೇಟಿ	ಮೆಟಿ
	ದೇವ	ದೆವ
	ಜೇಡ	ಜೆಡ
	ಸೇವಕ	ಸೆವಕ
	ವೇದಿಕೆ	ವೆದಿಕ/ಎದಿಕಾ
	ನೇಗಿಲು	ನೆಗಿಲು/ನಗಿಲು
	ಚೇತರಿಸು	ಚತರಿಸು

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಅದೇ	ಅದೆ
	ಯಾರೇ	ಯರೆ
	ಮೊದಲೇ	ಮದಲೆ
	ಈಗಲೇ	ಇಗಲೆ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಅಗ್ರಅರ್ಧಸಂವೃತ ಅಗೋಳದೀರ್ಘಸ್ವರ 'ಏ' ಧ್ವನಿ ಮತ್ತು ಅಗ್ರಅರ್ಧಸಂವೃತ ಅಗೋಳಹ್ರಸ್ವಸ್ವರ 'ಎ' ಧ್ವನಿ ಈ ಎರಡೂ ಧ್ವನಿಗಳ ರಚನೆಯಲ್ಲಿನ ಅಲ್ಪವ್ಯತ್ಯಾಸವನ್ನು ಗುರುತಿಸದ ಮತ್ತು ಉಚ್ಚಾರಣಾ ಅಲ್ಪ ಧ್ವನಿ ವ್ಯತ್ಯಾಸವನ್ನು ಗ್ರಹಿಸದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

☯ ಓ > ಒ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಧ್ವನಿಮಾದ ಬದಲು ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಓಟ	ಒಟ
	ಓಜ	ಒಜ
	ಓಗರ	ಒಗರ
	ಓಲಗ	ಒಲಗ
	ಓಲೆ	ಒಲೆ
	ಓರಣ	ಒರನ/ಣ
	ಓಡು	ಒಡು

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಕೋಲು	ಕೊಲು
ಕೋಟೆ	ಕೊಟ
ನೋಟ	ನೊಟ
ಕೋರಿಕೆ	ಕೊರಿಕ
ತೋರಿಸು	ತೊರಿಸು

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಹೀಗೋ	ಇಗೊ
ಇಗೋ	ಇಗೊ
ಹಿಡೀರೋ	ಇಡಿರೊ
ಯಾರದೋ	ಯರದೊ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಧ್ವನಿಗಳ ಅರ್ಥಸ್ಪಷ್ಟತೆಯ ಕೊರತೆಯಿಂದಾಗಿ ಪಶ್ಚಅರ್ಧಸಂವೃತಗೋಳ ದೀರ್ಘಸ್ವರ 'ಓ' ಧ್ವನಿ ಮತ್ತು ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಈ ಎರಡೂ ಧ್ವನಿಗಳಲ್ಲಿನ ರಚನೆಯಲ್ಲಿ ಅಲ್ಪ ಸಾಮ್ಯತೆಯ ಗೊಂದಲ ಹಾಗೂ ಉಚ್ಚಾರಣಾ ಅಲ್ಪ ವ್ಯತ್ಯಾಸವನ್ನು ಗ್ರಹಿಸದಿರುವ ಕಾರಣದಿಂದ ಬರೆಯುವಲ್ಲಿ ಈ ರೀತಿಯ ವ್ಯತ್ಯಾಸವನ್ನು ಮಾಡುತ್ತಾರೆ.

೬ ಒ > ವ

ಪದಾದಿ ಪರಿಸರದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಮಾದ ಬದಲು ದಂತೋಷ್ಠ ಅರ್ಧಸ್ವರ ಗುಣಿತಾಕ್ಷರ 'ವ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಒಳ	ವಳಾ
	ಒಲೆ	ವಲೆ
	ಒಪ್ಪು	ವಪು
	ಒಳಗೆ	ವಳಗೆ
	ಒಪ್ಪಿಗೆ	ವಪಿಗೆ
	ಒರಟು	ವರಟು
	ಒಣಮರ	ವಣಮರ/ವನಾಮರ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವ್ಯತ್ಯಾಸಕ್ಕೆ ಕಾರಣ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಮತ್ತು ದಂತೋಷ್ಠ್ಯ ಅರ್ಧಸ್ವರ 'ವ' ಧ್ವನಿ ಈ ಎರಡು ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಮತ್ತು ಅರ್ಥ ವ್ಯತ್ಯಾಸದ ಕೊರತೆಯಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೬ ವಿಸರ್ಗ (ಃ) > Q

ಪದಮಧ್ಯ ಪರಿಸರದಲ್ಲಿನ ವಿಸರ್ಗ (ಃ) ವನ್ನು ಲೋಪ ಮಾಡಿ ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ದುಃಖ	ದುಕ
	ಅಂತಃಪುರ	ಅತಪುರ
	ಅಂತಃಕರಣ	ಅತಕರನ
	ಅಂತಃಕಲಹ	ಅತಕಲಅ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡದಲ್ಲಿರುವ ವಿಸರ್ಗದ ಉಚ್ಚಾರಣೆಯನ್ನು ಗ್ರಹಿಸದ ಮತ್ತು ಸ್ಪಷ್ಟತೆ ಇಲ್ಲದರಿಂದಾಗಿ ಈ ರೀತಿಯ ವ್ಯತ್ಯಾಸದಿಂದ ಬರೆಯುತ್ತಾರೆ.

೪.೨ ವ್ಯಂಜನಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೧ ಖ > ಕ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಕಂಠ್ಯಅಘೋಷ ಸ್ಪರ್ಶಮಹಾಪ್ರಾಣ ವ್ಯಂಜನ 'ಖ' ಧ್ವನಿಮಾದ ಬದಲು ಕಂಠ್ಯಅಘೋಷ ಸ್ಪರ್ಶವ್ಯಂಜನ 'ಕ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ.	ಖಗ	ಕಗ
	ಖರ	ಕರ
	ಖಚಿತ	ಕಚಿತ
	ಖಣ	ಕನ/ಣ
	ಖರ್ಚು	ಕರಚು

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ಶಿಖರ	ಸಿಕರ
	ಲೇಖನಿ	ಲೆಕನಿ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ಸಖ	ಸಕ
	ಸುಖ	ಸುಕ
	ಮುಖ	ಮುಕ
	ದುಃಖ	ದುಕ
	ಶುಭಲೇಖ	ಸುಬಲಕ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವ್ಯತ್ಯಾಸಕ್ಕೆ ಕಾರಣ ಕಂಠ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಖ' ಧ್ವನಿ ಮತ್ತು ಕಂಠ್ಯಅಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಕ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪವ್ಯತ್ಯಾಸವನ್ನು ಗ್ರಹಿಸದೆ ಮತ್ತು ಕನ್ನಡ ಪದಗಳ ಅರ್ಥ ವ್ಯತ್ಯಾಸದ ಕೊರತೆಯಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೬ ಘ > ಗ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಕಂಠ್ಯಘೋಷಸ್ಪರ್ಶ ಮಹಾಪ್ರಾಣ 'ಘ' ಧ್ವನಿಮಾದ ಬದಲು ಕಂಠ್ಯಘೋಷಸ್ಪರ್ಶ ವ್ಯಂಜನ 'ಗ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಘಟ	ಗಟ
	ಘಟಕ	ಗಟಕ
	ಘಟನೆ	ಗಟನೆ
	ಘನರವ	ಗನರವ
	ಘಮಘಮ	ಗಮಗಮ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ರಾಘವ	ರಗವ
	ಆಘಾತ	ಅಗತ
	ಮೇಘನ	ಮೆಗನ
	ಅಪಘಾತ	ಅಪಗತ
	ವಿಘಟನೆ	ವಿಗಟನೆ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಮೇಘ	ಮೆಗ
	ಲಘು	ಲಗು
	ಅಮೋಘ	ಅಮಾಗ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವ್ಯತ್ಯಾಸಕ್ಕೆ ಕಾರಣ ಕಂಠ್ಯಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಘ' ಧ್ವನಿ ಮತ್ತು ಕಂಠ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಗ' ಧ್ವನಿ ಈ ಎರಡೂ

ಧ್ವನಿಗಳ ಉಚ್ಚಾರಣೆಯ ಅಲ್ಪ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

◉ ಛ > ಚ

ಪದಾದಿ ಪರಿಸರದಲ್ಲಿ ತಾಲವ್ಯಅಘೋಷ ಈಷತ್‌ಸ್ಪರ್ಶ ಮಹಾಪ್ರಾಣವ್ಯಂಜನ 'ಛ' ಧ್ವನಿಮಾದ ಬದಲು ತಾಲವ್ಯಅಘೋಷ ಈಷತ್‌ಸ್ಪರ್ಶ ಅಲ್ಪಪ್ರಾಣವ್ಯಂಜನ 'ಚ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಛಲ	ಚಲ
	ಛಗ	ಚಗ
	ಛದ	ಚದ
	ಛಡಿ	ಚಡಿ
	ಛತ್ರಿ	ಚತರಿ
	ಛಂಗನೆ	ಚಗನೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ತಾಲವ್ಯಅಘೋಷ ಈಷತ್‌ಸ್ಪರ್ಶ ಮಹಾಪ್ರಾಣವ್ಯಂಜನ 'ಛ' ಧ್ವನಿ ಮತ್ತು ತಾಲವ್ಯಅಘೋಷ ಈಷತ್‌ಸ್ಪರ್ಶ ಅಲ್ಪಪ್ರಾಣ ವ್ಯಂಜನ 'ಚ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪ ವ್ಯತ್ಯಾಸವನ್ನು ಗ್ರಹಿಸದ ಹಾಗೂ ಕನ್ನಡ ಭಾಷೆಯ ಧ್ವನಿಗಳ ಸ್ಪಷ್ಟತೆ ಇಲ್ಲದ ಕಾರಣ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

◉ ಝ > ಜ

ಪದಾದಿ ಪರಿಸರದಲ್ಲಿ ತಾಲವ್ಯಘೋಷ ಈಷತ್‌ಸ್ಪರ್ಶ ಮಹಾಪ್ರಾಣವ್ಯಂಜನ 'ಝ' ಧ್ವನಿಮಾದ ಬದಲು ತಾಲವ್ಯಘೋಷ ಈಷತ್‌ಸ್ಪರ್ಶಅಲ್ಪಪ್ರಾಣ ವ್ಯಂಜನ 'ಜ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಝಳ	ಜಲ/ಳ
	ಝರಿ	ಜರಿ
	ಝಳಕ	ಜಲಕ/ಜಳಕ
	ಝಣಝಣ	ಜನಜನ/ಜಣಜಣ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಕನ್ನಡ ಭಾಷೆಯ ಜ್ಞಾನದ ಕೊರತೆಯಿಂದಾಗಿ ಪದಗಳ ಅರ್ಥವ್ಯತ್ಯಾಸವನ್ನು ತಿಳಿಯದ ಲಂಬಾಣಿ ಭಾಷಿಕ ಮಕ್ಕಳು ತಾಲವ್ಯಘೋಷ ಈಷತ್‌ಸ್ಪರ್ಶ ಮಹಾಪ್ರಾಣವ್ಯಂಜನ 'ಝ' ಧ್ವನಿ ಮತ್ತು ತಾಲವ್ಯಘೋಷ ಈಷತ್‌ಸ್ಪರ್ಶ ಅಲ್ಪಪ್ರಾಣವ್ಯಂಜನ 'ಜ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪಧ್ವನಿ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಈ ತೆರನಾದ ವ್ಯತ್ಯಾಸವನ್ನು ಬರೆಯುವಾಗ ಮಾಡುತ್ತಾರೆ.

೬ ಠ > ಟ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಠ' ಧ್ವನಿಮಾದ ಬದಲು ಮೂರ್ಧನ್ಯಅಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಟ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ.	ಠಕ್ಕ	ಟಕ
	ಠಸ್ಸೆ	ಟಸೆ
	ಠರಾವು	ಟರಲು
	ಠಣ ಠಣ	ಟನಟನ/ಟಣಟಣ

ಪದಮಧ್ಯ ಪರಿಸರ

ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಪಠಣ	ಪಟನ
ಜಠರ	ಜಟರ
ಕಠಾರಿ	ಕಟರಿ
ವಿಠಲ	ವಿಟಲ
ಕೊಠಡಿ	ಕೊಟಡಿ

ಪದಾಂತ್ಯ ಪರಿಸರ

ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಮಠ	ಮಟ
ಹಠ	ಅಟ
ಪೀಠ	ಪಿಟ
ಕಂಠ	ಕಟ
ಪೇಠ	ಪಟ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಠ' ಧ್ವನಿ ಮತ್ತು ಮೂರ್ಧನ್ಯಅಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಟ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪ ಧ್ವನಿ ವ್ಯತ್ಯಾಸವನ್ನು ಗ್ರಹಿಸದ ಮತ್ತು ಧ್ವನಿಗಳ ರಚನೆಯ ಸ್ಪಷ್ಟತೆ ಇಲ್ಲದೆ ಇರುವ ಕಾರಣ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೬ ಢ > ಡ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಢ' ಧ್ವನಿಮಾದ ಬದಲು ಮೂರ್ಧನ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಡ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಢಕ್ಕೆ	ಡಕೆ
	ಢಗೆ	ಡಗೆ
	ಢಮರುಗ	ಡಮರುಗ
	ಢಕಾಯಿತ	ಡಕಾಯಿತ
	ಢಣ ಢಣ	ಡಣಡಣ

ಪದಮಧ್ಯ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ದಢಾರ	ದಡರ
	ಭಂಢಾರ	ಬಡರ

ಪದಾಂತ್ಯ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ರೂಢ	ರುಡ
	ಗಾಢ	ಗಡ
	ಮೂಢ	ಮುಡ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಢ' ಧ್ವನಿ ಮತ್ತು ಮೂರ್ಧನ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಡ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಧ್ವನಿ ವ್ಯತ್ಯಾಸವನ್ನು ಗ್ರಹಿಸದ ಮತ್ತು ರಚನೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗುರುತಿಸಿಕೊಳ್ಳದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ರೀತಿಯ ವ್ಯತ್ಯಾಸ ಮಾಡುತ್ತಿರುವುದು ಕಂಡುಬರುತ್ತದೆ.

೪ ಣ > ನ

ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯ ಅನುನಾಸಿಕ ವ್ಯಂಜನ 'ಣ' ಧ್ವನಿಮಾದ ಬದಲು ದಂತ್ಯಅನುನಾಸಿಕ ವ್ಯಂಜನ 'ನ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಕಣ	ಕನ
	ಹಣ	ಹನ
	ಪಠಣ	ಪಟನ
	ಕರಣ	ಕರನ
	ನೋಣ	ನೂನ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಕಣಜ	ಕನಜ
ಕಣವೆ	ಕನವ
ಬಣವೆ	ಬನವ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಅನುನಾಸಿಕ ವ್ಯಂಜನ 'ಣ' ಧ್ವನಿ ಮತ್ತು ದಂತ್ಯಅನುನಾಸಿಕ ವ್ಯಂಜನ 'ನ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪ ಧ್ವನಿವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

☯ ಥ > ತ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ದಂತ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಥ' ಧ್ವನಿಮಾದ ಬದಲು ದಂತ್ಯಅಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ತ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಥಡಿ	ತಡಿ
	ಥಳಿಸು	ತಲಿಸು
	ಥಳಕು	ತಲಕು
	ಥಳ ಥಳ	ತಲತಲ
	ಥರ ಥರ	ತರತರ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಅಥವಾ	ಅತವ
ಮಥನ	ಮತನ
ಕಥನ	ಕತನ
ಸಂಕಥನ	ಸಕತನ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ರಥ	ರತ
ಪಥ	ಪತ
ಅಗಾಥ	ಅಗತ
ಅನಾಥ	ಅನತ
ಅಂಥ	ಅತ/ಅತ್ತ
ಇಂಥ	ಇತ
ಎಂಥ	ಎತ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ದಂತ್ಯಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಥ' ಧ್ವನಿ ಮತ್ತು ದಂತ್ಯಅಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ತ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪ ವ್ಯತ್ಯಾಸವನ್ನು ಗ್ರಹಿಸದೆ ಮತ್ತು ಪದಗಳ ನಡುವಿನ ಅರ್ಥ ವ್ಯತ್ಯಾಸದ ಕೊರತೆಯಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

☯ ಧ > ದ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ದಂತ್ಯಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಧ' ಧ್ವನಿಮಾದ ದಂತ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ದ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಧನ	ದನ
	ಧರೆ	ದರೆ
	ಧಗೆ	ದಗೆ
	ಧವಳ	ದವಲ/ಳ
	ಧನಿಕ	ದನಿಕ
	ಧಹಿಸು	ದಿಇಸು

[illegible]

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ವಿಧವೆ	ವಿದವೆ
ಮಾಧವ	ಮದವ
ಅಧರ	ಅದರ
ಆಧಾರ	ಆದಾರ
ಬುಧವಾರ	ಬುದವರ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ರಾಧ	ರದ/ರಾದ
	ಬುಧ	ಬುದ
	ಆಯುಧ	ಆಯದ
	ವಿರೋಧ	ಇರೂದ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ದಂತ್ಯಘೋಷ ಸ್ಪರ್ಶ ಮಹಾಪ್ರಾಣವ್ಯಂಜನ 'ಧ' ಧ್ವನಿ ಮತ್ತು ದಂತ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ದ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸದ ಮತ್ತು ರಚನೆಯಲ್ಲಿರುವ ಧ್ವನಿಗಳ ರೂಪ ಸಾಮ್ಯತೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗುರುತಿಸದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೬ ಫ > ಪ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಧ್ವಯೋಷ್ಟ್ಯಅಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಫ' ಧ್ವನಿಮಾದ ಬದಲು ಧ್ವಯೋಷ್ಟ್ಯಅಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಪ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಫಲ	ಪಲ
	ಫಲಿಸು	ಪಲಿಸು
	ಫಲಕ	ಪಲಕ
	ಫಲಿತ	ಪಲಿತ
	ಫಲಹಾರ	ಪಲಆರ
	ಫಲಿತಾಂಶ	ಪಲಿತಾಸ

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಸಫಲ	ಸಪಲ
	ವಿಫಲ	ವಿಪಲ
	ಸಫಾರಿ	ಸಪರಿ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಕಫ	ಕಪ
	ಷರೀಫ	ಸರಿಪ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಧ್ವಯೋಷ್ಠ್ಯ ಅಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಫ' ಧ್ವನಿ ಮತ್ತು ಧ್ವಯೋಷ್ಠ್ಯಅಘೋಷಸ್ಪರ್ಶ ಅಲ್ಪಪ್ರಾಣ ವ್ಯಂಜನ 'ಪ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪಧ್ವನಿ ವ್ಯತ್ಯಾಸವನ್ನು ಗ್ರಹಿಸದ ಮತ್ತು ರಚನೆಯಲ್ಲಿರುವ ಧ್ವನಿಗಳ ರೂಪ ಸಾಮ್ಯತೆಯಲ್ಲಿನ ಗೊಂದಲದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

• ಭ > ಬ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಧ್ವಯೋಷ್ಠ್ಯಘೋಷಸ್ಪರ್ಶ ಮಹಾಪ್ರಾಣ ವ್ಯಂಜನ 'ಭ' ಧ್ವನಿಮಾದ ಬದಲು ಧ್ವಯೋಷ್ಠ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಬ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಭಯ	ಬಯ
	ಭಟ	ಬಟ
	ಭತ್ತ	ಬತ
	ಭವ	ಬವ
	ಭರತ	ಬರತ
	ಭವಾನಿ	ಬವನಿ
	ಭರಣಿ	ಬರನಿ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಅಭಯ	ಅಬಯ
ಉಭಯ	ಉಬಯ
ರಭಸ	ರಬಸ
ವಿಭಜನೆ	ವಿಬಜನೆ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ನಭ	ನಬ
ಲಾಭ	ಲಾಬ
ಶರಭ	ಸರಬ
ವಲ್ಲಭ	ವಲಬ
ಸುಲಭ	ಸುಲಬ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಧ್ವಯೋಷ್ಠ್ಯ ಘೋಷಸ್ಪರ್ಶ ಮಹಾಪ್ರಾಣವ್ಯಂಜನ 'ಭ' ಧ್ವನಿ ಮತ್ತು ಧ್ವಯೋಷ್ಠ್ಯಘೋಷಸ್ಪರ್ಶ ಅಲ್ಪಪ್ರಾಣ ವ್ಯಂಜನ 'ಬ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸದ ಮತ್ತು ರಚನೆಯಲ್ಲಿರುವ ಧ್ವನಿಗಳ ರೂಪ ಸಾಮ್ಯತೆಯಲ್ಲಿರುವ ಅಲ್ಪ ವ್ಯತ್ಯಾಸದ ಸ್ಪಷ್ಟತೆ ಇಲ್ಲದ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

☯ ಶ > ಸ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ತಾಲವ್ಯಊಷ್ಮ ವ್ಯಂಜನ 'ಶ' ಧ್ವನಿಮಾದ ಬದಲು ದಂತ್ಯಊಷ್ಮ ವ್ಯಂಜನ 'ಸ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಶರ	ಸರ
	ಶವ	ಸವ
	ಶಶಿ	ಸಸಿ
	ಶನಿ	ಸನಿ
	ಶರಧಿ	ಸರದಿ
	ಶತಕ	ಸತಕ
	ಶಕುನ	ಸಕುನ
	ಶಯನ	ಸಯನ
	ಶಶಕ	ಸಸಕ
	ಶತಮಾನ	ಸತಮನ

ಪದಮಧ್ಯ ಪರಿಸರ

ಪದಮಧ್ಯ ಪರಿಸರ	ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ಆಶಯ	ಅಸಯ
	ಶಶಕ	ಸಸಕ
	ಶುಭಾಶಯ	ಸುಬಸಯ
	ಶಿಶುನಾಳ	ಸಿಸುನಾಲ
	ಉಪಶಮನ	ಉಪಸಮನ

ಪದಾಂತ್ಯ ಪರಿಸರ

ಬರಹದ ಕನ್ನಡ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ದೇಶ	ದೆಸ
ನಾಶ	ನಸ
ಕಳಶ	ಕಲಸ
ಆಕಾಶ	ಅಕಸ
ವಿದೇಶ	ವಿದೆಸ
ವಿನಾಶ	ವಿನಸ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ತಾಲವ್ಯ ಊಷ್ಮ ವ್ಯಂಜನ 'ಶ' ಧ್ವನಿ ಮತ್ತು ದಂತ್ಯಊಷ್ಮ ವ್ಯಂಜನ 'ಸ' ಧ್ವನಿ ಈ ಎರಡೂ ಧ್ವನಿಗಳ ಅಲ್ಪ ಉಚ್ಚಾರಣಾ ವ್ಯತ್ಯಾಸವನ್ನು ಗ್ರಹಿಸದ ಮತ್ತು ಧ್ವನಿಮಾಗಳ ರಚನೆಯ ಸ್ಪಷ್ಟ ತಿಳುವಳಿಕೆ ಇಲ್ಲದೆ ಗೊಂದಲದ ಕಾರಣದಿಂದಾಗಿ ಲಂಬಾಣಿ ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೬ ಷ > ಸ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರದಲ್ಲಿ ಮೂರ್ಧನ್ಯಊಷ್ಮ ವ್ಯಂಜನ 'ಷ' ಧ್ವನಿಮಾದ ಬದಲು ದಂತ್ಯಊಷ್ಮ ವ್ಯಂಜನ 'ಸ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಷರ	ಸರ
	ಷಂಡ	ಸಡ
	ಷರಾಯಿ	ಸರಾಯಿ
	ಷರತ್ತು	ಸರತು
	ಷರೀಫ	ಸರೀಪ

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಔಷಧ	ಔಸದ
ವಿಷಯ	ವಿಸಯ
ವಿಷಮ	ವಿಸಮ
ವೃಷಭ	ರುಸಬ

ಪದಾಂತ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ವಿಷ	ವಿಸ
ವೇಷ	ವೆಸ
ಉಷ	ಉಸ
ವರುಷ	ವರುಸ
ಹರುಷ	ಹರುಸ
ಪುರುಷ	ಪುರುಷ
ವಿಶೇಷ	ವಿಸೆಸ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಊಷ್ಮ ವ್ಯಂಜನ 'ಷ' ಧ್ವನಿ ಮತ್ತು ದಂತ್ಯಊಷ್ಮ ವ್ಯಂಜನ 'ಸ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸದೆ ಆಲಿಸುವಿಕೆಯಲ್ಲಿನ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೬ ಹ > ಅ

ಪದಾದಿ, ಪದಮಧ್ಯ ಮತ್ತು ಪದಾಂತ್ಯ ಪರಿಸರಗಳಲ್ಲಿ ಕಾಕಲ್ಯಸಂಘರ್ಷ ವ್ಯಂಜನ 'ಹ' ಧ್ವನಿಮಾದ ಬದಲು ಅಗ್ರವಿವೃತಅಗೋಳ ಹ್ರಸ್ವಸ್ವರ 'ಅ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ

	ಬರಹದ ರೂಪ	**ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ**
ಉದಾ :	ಹಕ್ಕಿ	ಅಕಿ
	ಹಗ್ಗ	ಅಗ
	ಹಡಗು	ಅಡಗು
	ಹಗಲು	ಅಗಲು
	ಹರಟೆ	ಅರಟೆ
	ಹಲವು	ಅಲಉ

ಪದಮಧ್ಯ ಪರಿಸರ

ಬರಹದ ರೂಪ	**ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ**
ಬಹಳ	ಬಅಲ
ಆಹಾರ	ಅಅರ
ವಿಹಾರ	ವಿಅರ

ಪದಾಂತ್ಯ ಪರಿಸರ

ಬರಹದ ರೂಪ	**ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ**
ಕಲಹ	ಕಲಅ
ವಿರಹ	ವಿರಅ
ಸನಿಹ	ಸನಿಅ
ತರಹ	ತರಅ
ವಿವಾಹ	ವಿವಅ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಕಾಕಲ್ಯ ಸಂಘರ್ಷ ವ್ಯಂಜನ 'ಹ' ಧ್ವನಿ ಮತ್ತು ಅಗ್ರವಿವೃತಅಗೋಳ ಹ್ರಸ್ವಸ್ವರ 'ಅ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಧ್ವನಿ ವ್ಯತ್ಯಾಸವನ್ನು ಗ್ರಹಿಸದ ಮತ್ತು ಕನ್ನಡ ಭಾಷೆಯ ಪದಗಳ ಅರ್ಥ ವ್ಯತ್ಯಾಸದ ಜ್ಞಾನದ ಕೊರತೆಯಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುವುದು ಕಂಡುಬರುತ್ತದೆ.

ಳ > ಲ

ಪದಮಧ್ಯ, ಪದಾಂತ್ಯ ಪರಿಸರಗಳಲ್ಲಿ ಮೂರ್ಧನ್ಯ ಪಾರ್ಶ್ವಿಕ ವ್ಯಂಜನ 'ಳ' ಧ್ವನಿಮಾದ ಬದಲು ದಂತ್ಯ ಪಾರ್ಶ್ವಿಕ ವ್ಯಂಜನ 'ಲ' ಧ್ವನಿಮಾವನ್ನು ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಅಳತೆ	ಅಲತೆ
	ಕಳಶ	ಕಲಸ
	ಅಳಕು	ಅಲಕು
	ಅಳಲು	ಅಲಲು
	ಕಳವಳ	ಕಲವಲ

ಪದಾಂತ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಆಳ	ಅಲ
	ನಳ	ನಲ
	ತೋಳ	ತೂಲ
	ಬಹಳ	ಬಹಲ
	ಹೇರಳ	ಎರಲ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಮೂರ್ಧನ್ಯ ಪಾರ್ಶಿಕ ವ್ಯಂಜನ 'ಳ' ಧ್ವನಿ ಮತ್ತು ದಂತ್ಯ ಪಾರ್ಶಿಕ ವ್ಯಂಜನ 'ಲ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯ ಅಲ್ಪಧ್ವನಿ ವ್ಯತ್ಯಾಸವನ್ನು ಗ್ರಹಿಸದ ಮತ್ತು ಅಕ್ಷರಗಳ ಸ್ಪಷ್ಟತೆ ಇಲ್ಲದ ಹಾಗೂ ಆಲಿಸುವಿಕೆಯಲ್ಲಿನ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

೬ ಒ > ಬ

ಪದಾದಿ ಪರಿಸರದಲ್ಲಿ ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಮಾದ ಬದಲು ಧ್ವಯೋಷ್ಠ್ಯ ಘೋಷ ಸ್ಪರ್ಶಅಲ್ಪಪ್ರಾಣ ವ್ಯಂಜನ 'ಬ' ಧ್ವನಿಮಾವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಬರೆಯುತ್ತಾರೆ.

ಪದಾದಿ ಪರಿಸರ	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಒಂದು	ಬದು
	ಒಬ್ಬ	ಬಒ
	ಒಮ್ಮೆ	ಬಮೆ
	ಒಂಟೆ	ಬಟೆ
	ಒಗರು	ಬಗರು
	ಒಡನಾಡಿ	ಬಡನಾಡಿ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಪಶ್ಚಅರ್ಧ ಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಮತ್ತು ದ್ವಯೋಷ್ಠ್ಯಘೋಷಸ್ಪರ್ಶ ಅಲ್ಪಪ್ರಾಣವ್ಯಂಜನ 'ಬ' ಧ್ವನಿ ಈ ಎರಡೂ ಧ್ವನಿಗಳ ರಚನೆಯಲ್ಲಿನ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಈ ತೆರನಾದ ವ್ಯತ್ಯಾಸದಿಂದ ಬರೆಯುತ್ತಾರೆ.

೪.೩ ಅರ್ಧಸ್ವರಗಳನ್ನು ಬರೆಯುವಲ್ಲಿನ ಸಮಸ್ಯೆಗಳು

೧ ಯ > ಎ

ಪದಾದಿ ಪರಿಸರದಲ್ಲಿ ತಾಲವ್ಯಅರ್ಧಸ್ವರ 'ಯ' ಧ್ವನಿಯ ಬದಲು ಅಗ್ರಅರ್ಧ ಸಂವೃತಅಗೋಳ ಹ್ರಸ್ವಸ್ವರ 'ಎ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಬರೆಯುತ್ತಾರೆ.

ಪಾದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಯಮ	ಎಮ
	ಯತಿ	ಎತಿ
	ಯಜಮಾನ	ಎಜಮನ
	ಯಕ್ಷಗಾನ	ಎಕ್ಷಗನ
	ಯಥಾವತ್ತು	ಎತವತು

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ತಾಲವ್ಯಅರ್ಧಸ್ವರ 'ಯ' ಧ್ವನಿ ಮತ್ತು ಅಗ್ರಅರ್ಧ ಸಂವೃತಅಗೋಳ ಹ್ರಸ್ವಸ್ವರ 'ಎ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಧ್ವನಿವ್ಯತ್ಯಾಸವನ್ನು ಗ್ರಹಿಸದೆ ಗೊಂದಲಿಂದ ಲಂಬಾಣಿ ಭಾಷಿಕ ಮಕ್ಕಳು ಬರೆಯುವಾಗ ವ್ಯತ್ಯಾಸವನ್ನು ಮಾಡುತ್ತಾರೆ.

◉ ಇ > ಯಿ

ಪದಾದಿ ಪರಿಸರದಲ್ಲಿ ಅಗ್ರಸಂವೃತಅಗೋಳ ಹ್ರಸ್ವಸ್ವರ 'ಇ' ಧ್ವನಿಮಾದ ಬದಲು ತಾಲವ್ಯ ಅರ್ಧಸ್ವರ 'ಯಿ' ಧ್ವನಿಮಾವನ್ನು ನಾಲ್ಕನೆ ತರಗತಿ ಮಕ್ಕಳು ಬರೆಯುತ್ತಾರೆ.

ಪಾದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ಇಲ್ಲ	ಯಿಲ
	ಇಟ್ಟು	ಯಿಟು
	ಇವೆಲ್ಲ	ಯಿವೆಲ
	ಇಸ್ಕಾನ್	ಯಿಸಕಾನ
	ಇಬ್ಬರು	ಯಿಬರು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಅಗ್ರಸಂವೃತ ಅಗೋಳಹ್ರಸ್ವಸ್ವರ 'ಇ' ಧ್ವನಿ ಮತ್ತು ತಾಲವ್ಯ ಅರ್ಧಸ್ವರ 'ಯಿ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ಧ್ವನಿವ್ಯತ್ಯಾಸವನ್ನು ಗ್ರಹಿಸದೆ ಆಲಿಸುವಿಕೆಯಲ್ಲಿನ ಗೊಂದಲದಿಂದ ಲಂಬಾಣಿ ಭಾಷಿಕ ಮಕ್ಕಳು ಈ ರೀತಿಯ ವ್ಯತ್ಯಾಸದಿಂದ ಬರೆಯುತ್ತಾರೆ.

◉ ವ > ಒ

ಪದಾದಿ ಪರಿಸರದಲ್ಲಿ ದಂತೋಷ್ಠ್ಯಅರ್ಧಸ್ವರ 'ವ' ಧ್ವನಿಯ ಬದಲು ಪಶ್ಚಅರ್ಧ ಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿಯನ್ನು ಒಂದರಿಂದ ನಾಲ್ಕನೆಯ ತರಗತಿ ಮಕ್ಕಳು ಬರೆಯುತ್ತಾರೆ.

ಪಾದಾದಿ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ :	ವನ	ಒನ
	ವಚನ	ಒಚನ
	ವರುಷ	ಒರುಸ
	ವಸತಿ	ಒಸತಿ
	ವರಮಾನ	ಒರಮನ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ದಂತೋಷ್ಠ್ಯ

ಅರ್ಧಸ್ವರ 'ವ' ಧ್ವನಿ ಮತ್ತು ಪಶ್ಚಅರ್ಧಸಂವೃತಗೋಳ ಹ್ರಸ್ವಸ್ವರ 'ಒ' ಧ್ವನಿ ಈ ಎರಡೂ ಧ್ವನಿಗಳ ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸದೆ ಗೊಂದಲದಿಂದ ಈ ತೆರನಾಗಿ ವ್ಯತ್ಯಾಸದಿಂದ ಬರೆಯುತ್ತಾರೆ.

೪.೪ ಭಾಷಿಕೇತರ ಕಾರಣಗಳು

೧. ಲಂಬಾಣಿಗರ ವಲಸೆ ಪ್ರವೃತ್ತಿ ಲಂಬಾಣಿ ಮಕ್ಕಳು ಬರವಣಿಗೆಯಲ್ಲಿ ತೀವ್ರವಾಗಿ ಹಿಂದುಳಿಯಲಿಕ್ಕೆ ಪ್ರಮುಖ ಕಾರಣವಾಗಿದೆ. ಶಾಲೆಗೆ ಬರುವ ಮಕ್ಕಳು ಸಹ ನಿರಂತರವಾಗಿ ಶಾಲೆಗೆ ಬರದೆ ವಾರದಲ್ಲಿ ಮೂರು, ನಾಲ್ಕು ದಿನ ಬಂದು ಉಳಿದ ದಿನದಲ್ಲಿ ಗೈರು ಹಾಜರಿರುವುದು ಸಹ ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗಿದೆ.

೨. ಮಕ್ಕಳ ಕಲಿಕೆಯಲ್ಲಿ ಶಿಕ್ಷಕರ ಜವಾಬ್ದಾರಿ ಗುರುತರವಾದುದು. ಇಂತಹ ಶಿಕ್ಷಕರು ಕನ್ನಡ ಭಾಷೆಯ ಸಂಪೂರ್ಣ ಜ್ಞಾನವಿಲ್ಲದೆ ಹ್ರಸ್ವಸ್ವರ, ದೀರ್ಘಸ್ವರ, ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರಗಳ ಬಗ್ಗೆ ಸರಿಯಾದ ತಿಳುವಳಿಕೆ ನೀಡದಿರುವುದು ಸಹ ಮಕ್ಕಳ ಕಲಿಕೆಗೆ ಹಿಂದುಳಿಯಲು ಕಾರಣವಾಗಿದೆ.

೩. ಲಂಬಾಣಿ ಮಕ್ಕಳಲ್ಲಿ ಕನ್ನಡ ಭಾಷೆಯ ಪದ ಸಂಪತ್ತಿನ ಜ್ಞಾನದ ಕೊರತೆ ಹಾಗೂ ಕನ್ನಡ ಧ್ವನಿಮಾಗಳ ರೂಪ ಸಾಮ್ಯತೆ ಧ್ವನಿಮಾಗಳ ಅಲ್ಪ ಸಾಮ್ಯತೆಯನ್ನು ಗ್ರಹಿಸುವಲ್ಲಿ ವಿಫಲರಾಗು ತ್ತಿರುವುದು ಬರವಣಿಗೆಯಲ್ಲಿ ಸಮಸ್ಯೆಯನ್ನು ಎದುರಿಸಲು ಇದೊಂದು ಪ್ರಮುಖ ಕಾರಣವಾಗಿದೆ.

೪. ಲಂಬಾಣಿ ಮಕ್ಕಳಿಗೆ ಶಾಲಾ ಕೊಠಡಿಯ ಒಳಗೆ ಎಲ್ಲಾ ಅವಧಿಗಳನ್ನು ಸಮರ್ಪಕವಾಗಿ ತೆಗೆದುಕೊಳ್ಳದೆ ಎರಡು ಅಥವಾ ಮೂರು ಅವಧಿಯನ್ನು ತೆಗೆದುಕೊಂಡು ಮಕ್ಕಳಿಗೆ ಆಟ ಆಡಲು ಬಿಡುವುದು ಅಥವಾ ಖಾಲಿ ಇರುವ ತರಗತಿಯ ಮಕ್ಕಳು ಓದದೆ, ಬರೆಯದೆ ಹರಟೆ ಹೊಡೆಯುವುದು ಸಹ ಮಕ್ಕಳ ಬರವಣಿಗೆಯಲ್ಲಿ ಹಿಂದುಳಿಯಲು ಕಾರಣವಾಗಿದೆ.

೫. ಬಹುತೇಕ ಲಂಬಾಣಿ ತಾಂಡ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಕಡಿಮೆ ಇದ್ದು, ಅಂದರೆ ೨ ರಿಂದ ೪ ಜನ ಶಿಕ್ಷಕರಿದ್ದು, ೧ ರಿಂದ ೫ನೇ ತರಗತಿ ಇರುವ ತಾಂಡ ಶಾಲೆಗಳಲ್ಲಿ ಎರಡು ಜನ ಶಿಕ್ಷಕರು, ೧ ರಿಂದ ೭ನೇ ತರಗತಿ ಇರುವ ತಾಂಡ ಶಾಲೆಗಳಲ್ಲಿ ೪ ಜನ ಶಿಕ್ಷಕರಿರುವುದು ಬಹುತೇಕವಾಗಿ ಕಂಡುಬರುತ್ತಿದೆ. ಇಂತಹ ಸಂದರ್ಭದಲ್ಲಿ ಬಹುವರ್ಗ ಬೋಧನೆಯನ್ನು ಶಿಕ್ಷಣ ಇಲಾಖೆ ಜಾರಿ ಮಾಡಿದೆ. ಈ ಬೋಧನ ಮಾರ್ಗ ಮೊದಲೇ ಭಾಷಾ ಸಮಸ್ಯೆಯನ್ನು ಎದುರಿಸು ತ್ತಿರುವ ಲಂಬಾಣಿ ಮಕ್ಕಳಿಗೆ ಕನ್ನಡ ಕಲಿಸುವಲ್ಲಿ ಸಹಕಾರಿಯಾಗಲಾರದು. ಹೀಗೆ ಬಹುವರ್ಗ ಬೋಧನೆಯೂ ಮಕ್ಕಳ ಕಲಿಕೆಯಲ್ಲಿ ಹಿಂದುಳಿಯಲು ಕಾರಣವಾಗಿದೆ.

೬. ಲಂಬಾಣಿ ಮಕ್ಕಳು ಶಿಕ್ಷಕರು ನೀಡಿದ ಮನೆಗೆಲಸವನ್ನು ಮಾಡದೆ, ಮನೆಯಲ್ಲಿ ಏನೊಂದೂ ಬರೆಯದೆ, ಶಿಕ್ಷಕರು ಶಾಲೆಯಲ್ಲಿ ಮಾಡಿದ ಪಾಠವನ್ನು ಪುನರ್ಮನನ ಮಾಡದೆ, ಮನೆಯ

ಪರಿಸರದಲ್ಲಿ ಸಂಪೂರ್ಣವಾಗಿ ಮಾತೃಭಾಷೆಯಲ್ಲಿ ತಲ್ಲಿನರಾಗುವುದು ಸಹ ಮಕ್ಕಳ ಬರವಣಿಗೆಯಲ್ಲಿ ಸಮಸ್ಯೆಯನ್ನು ಎದುರಿಸಲು ಕಾರಣವಾಗಿದೆ.

೭. ಶಿಕ್ಷಕರು ಲಂಬಾಣಿ ಮಕ್ಕಳನ್ನು ಹೆಚ್ಚು ಹೆಚ್ಚು ಬರವಣಿಗೆಯಲ್ಲಿ ತೊಡಗಿಸದಿರುವುದು ಸಹ ಮಕ್ಕಳ ಬರವಣಿಗೆಯಲ್ಲಿ ಸಮಸ್ಯೆಯನ್ನು ಎದುರಿಸಲು ಕಾರಣವಾಗಿದೆ.

೮. ಶಿಕ್ಷಕರು ಮಕ್ಕಳ ಬರವಣಿಗೆಯಲ್ಲಿ ಮಾಡುವ ತಪ್ಪುಗಳನ್ನು ಗಮನಿಸದೆ, ಸರಿಯಾದ ಮಾರ್ಗದರ್ಶನ ಮಾಡದಿರುವುದು ಸಹ ಬರವಣಿಗೆಯಲ್ಲಿ ಸಮಸ್ಯೆಯನ್ನು ಎದುರಿಸಲು ಕಾರಣವಾಗಿದೆ.

೯. ಶಿಕ್ಷಕರು ಶಾಲಾ ತರಗತಿಗಳಲ್ಲಿ ಬರೆಯುವ ಪ್ರಮಾಣ ಅಂದರೆ ಮಾದರಿ ಬರವಣಿಗೆ ಮತ್ತು ಮಕ್ಕಳಿಗೆ ಅರ್ಥೈಸುವಲ್ಲಿನ ಬರವಣಿಗೆ ಸಾಕಷ್ಟು ಇಲ್ಲದಿರುವುದು ಸಹ ಲಂಬಾಣಿ ಮಕ್ಕಳ ಬರವಣಿಗೆ ಯಲ್ಲಿ ಹಿಂದುಳಿಯಲು ಕಾರಣವಾಗುತ್ತದೆ.

೪.೫ ಪರಿಹಾರೋಪಾಯಗಳು

೧. ಕನ್ನಡ ಮಾಧ್ಯಮ ಶಾಲೆಗಳಿಗೆ ಕನ್ನಡ ಭಾಷೆಯ ಮೇಲೆ ಪ್ರಭುತ್ವವನ್ನು ಹೊಂದಿದ ಶಿಕ್ಷಕರನ್ನು ನೇಮಕ ಮಾಡಬೇಕು.

೨. ಶಿಕ್ಷಕರಾದವರಿಗೆ ಕನ್ನಡ ಭಾಷೆಯ ಉಚ್ಚಾರಣೆಯ ಕ್ರಮ ಮತ್ತು ಸ್ಥಾನಗಳ ಬಗ್ಗೆ ಸಂಪೂರ್ಣ ತಿಳುವಳಿಕೆ ಇರಬೇಕಾಗುತ್ತದೆ.

೩. ಪ್ರಥಮ ಭಾಷೆಯಾಗಿ ಕನ್ನಡವನ್ನು ಕಲಿಯುವ ಲಂಬಾಣಿ ಭಾಷಿಕ ಮಕ್ಕಳಿಗೆ ಹ್ರಸ್ವಸ್ವರ ಮತ್ತು ದೀರ್ಘಸ್ವರಗಳ ಸ್ಪಷ್ಟ ತಿಳುವಳಿಕೆ ನೀಡುವುದರ ಜೊತೆಗೆ ಅವುಗಳ ನಡುವೆ ಇರುವ ಉಚ್ಚಾರಣೆಯ ಭಿನ್ನತೆ ಬಗೆಗೆ ಮತ್ತು ಅವುಗಳಿಂದುಂಟಾಗುವ ಅರ್ಥವ್ಯತ್ಯಾಸದ ಬಗೆಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಶಿಕ್ಷಕರು ಪದೇ ಪದೇ ಹೇಳಿ ಬರೆಯಬೇಕು ಮತ್ತು ಮಕ್ಕಳಿಂದ ಬರೆಯಿಸಬೇಕು.

೪. ಅಲ್ಪ ಧ್ವನಿವ್ಯತ್ಯಾಸವಿರುವ ಸ್ವರ ಮತ್ತು ವ್ಯಂಜನ ಪದಗಳನ್ನು ಪದೇ ಪದೇ ಬರೆಯಿಸುವುದರ ಜೊತೆಗೆ ಅವುಗಳ ಅರ್ಥವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಶಿಕ್ಷಕರು ಮನಮುಟ್ಟುವಂತೆ ಹೇಳಬೇಕು.

೫. ಲಂಬಾಣಿ ಮಕ್ಕಳಿಗೆ ಹೆಚ್ಚು ಹೆಚ್ಚು ಪದಗಳನ್ನು, ಉಕ್ತಲೇಖನಗಳನ್ನು ಬರೆಸುವುದು ಹಾಗೂ ಡ್ರಿಲ್ಲಿಂಗ್ ವರ್ಕ್‌ನ್ನು ಹೆಚ್ಚು ಹೆಚ್ಚಾಗಿ ಶಿಕ್ಷಕರು ಮಾಡಿಸಬೇಕು.

೬. ಲಂಬಾಣಿ ಭಾಷಿಕ ಮಕ್ಕಳು ಮಾಡುವ ಧ್ವನಿವ್ಯತ್ಯಾಸಗಳನ್ನು ಶಿಕ್ಷಕರು ಗುರುತಿಸಿ ಮಕ್ಕಳಿಗೆ ತಾಳ್ಮೆ ಯಿಂದ, ಪ್ರೀತಿಯಿಂದ ಅವರು ಮಾಡುವ ಧ್ವನಿವ್ಯತ್ಯಾಸಗಳ ತಪ್ಪುಗಳನ್ನು ಅಲ್ಲಲ್ಲೇ ತಿದ್ದಬೇಕು.

೭. ಅಲ್ಪಪ್ರಾಣ ಮತ್ತು ಮಹಾಪ್ರಾಣ ವ್ಯಂಜನ ಅಕ್ಷರಗಳ ಸ್ಪಷ್ಟ ಉಚ್ಚಾರಣೆ ಕ್ರಮ ಮತ್ತು ಧ್ವನ್ಯಾಂಗ ಗಳ ಕುರಿತು ಶಿಕ್ಷಕರು ಮಕ್ಕಳಿಗೆ ಪದೇ ಪದೇ ಮನಸ್ಸಲ್ಲಿ ಉಳಿಯುವಂತೆ ತಿಳಿಯಪಡಿಸಬೇಕು.

೮. ಲ-ಳ, ಅ-ಹ, ಇ-ಯಿ, ಒ-ವ, ಹೊ-ಒ ಅಕ್ಷರಗಳು ಬಾಯಿಯ ಯಾವ ಸ್ಥಾನದಲ್ಲಿ ಹೇಗೆ ಉಚ್ಚಾರಗೊಳ್ಳುತ್ತವೆ ಎಂಬ ಸ್ಪಷ್ಟ ಪರಿಕಲ್ಪನೆಯನ್ನು ಶಿಕ್ಷಕರು ತಾವೇ ಆ ಶಬ್ದಗಳನ್ನು ಉಚ್ಚಾರ ಮಾಡಿ ತೋರಿಸುವ ಮೂಲಕ ವಿದ್ಯಾರ್ಥಿಗಳಿಗೆ ಸ್ಪಷ್ಟಪಡಿಸಬೇಕು.

೯. ಅಲ್ಪಪ್ರಾಣ ಮತ್ತು ಮಹಾಪ್ರಾಣ ಅಕ್ಷರಗಳಿರುವ ಪದಗಳನ್ನೇ ಹೆಚ್ಚು ಹೆಚ್ಚು ಬರೆಸುವುದರ ಜೊತೆಗೆ ಅವುಗಳ ಅರ್ಥವ್ಯತ್ಯಾಸವನ್ನು ಶಿಕ್ಷಕರಾದವರು ಮಕ್ಕಳಿಗೆ ಪದೇ ಪದೇ ತಾಳ್ಮೆಯಿಂದ ಮನವರಿಕೆ ಮಾಡಿಕೊಡಬೇಕು.

೧೦. ಲಂಬಾಣಿ ಮಕ್ಕಳ ಕಲಿಕೆಯ ಮನಸ್ಥಿತಿಯನ್ನು ಅರಿತು ಶಿಕ್ಷಕರಾದವರು ಅವರ ಕಲಿಕೆಯ ಮಟ್ಟಕ್ಕೆ ಇಳಿದು ಪ್ರೀತಿಯಿಂದ ಪ್ರೋತ್ಸಾಹ ನೀಡುತ್ತಾ ಬರವಣಿಗೆಯನ್ನು ನಡೆಸಬೇಕು ಹಾಗೂ ಮಾಡಿಸಬೇಕು.

೧೧. ಮನೆಯ ವಾತಾವರಣದಲ್ಲಿ ಬರವಣಿಗೆಗೆ ತೊಡಗಿಕೊಳ್ಳದ ಲಂಬಾಣಿ ಮಕ್ಕಳಿಗೆ ಶಾಲಾ ಅವಧಿ ಯಲ್ಲಿಯೇ ಸಮಯವನ್ನು ವ್ಯಯ ಮಾಡದಂತೆ ಶಿಕ್ಷಕರು ಹೆಚ್ಚು ಹೆಚ್ಚು ಬರವಣಿಗೆಯಲ್ಲಿ ತೊಡಗುವಂತೆ ಮಾಡಬೇಕು. ಅಲ್ಲದೆ ಮನೆಗೆ ಕೊಡುವ ಬರವಣಿಗೆಯ ಕೆಲಸವನ್ನು ಮಾಡಿಕೊಂಡು ಬರುವಂತೆ ಪ್ರೋತ್ಸಾಹಿಸುವುದರ ಜೊತೆಗೆ ಬರೆದುಕೊಂಡು ಬರುವ ಮಕ್ಕಳಿಗೆ ಪ್ರಶಸ್ತಿಯ ಮೂಲಕ ಪ್ರೋತ್ಸಾಹ ನೀಡಿ ಬರವಣಿಗೆಯಲ್ಲಿ ತೊಡಗುವಂತೆ ಮಾಡಬೇಕು.

೧೨. ಮಕ್ಕಳ ಪಾಲಕರಿಗೆ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಗಮನ ವಹಿಸುವಂತೆ ಶಿಕ್ಷಣ ಇಲಾಖೆಯವರು ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪಾಲಕರಿಗೆ ತಿಳುವಳಿಕೆ ಮೂಡುವಂತೆ ಮಾಡಬೇಕು.

೧೩. ಶಿಕ್ಷಕರು ಉಕ್ತಲೇಖನ ನೀಡುವಾಗ ಒಂದೊಂದು ಪದವನ್ನು ಎರಡೆರಡು ಸಲ ಗಟ್ಟಿಯಾಗಿ ನಿಧಾನ ವಾಗಿ ಸ್ಪಷ್ಟವಾಗಿ ಹೇಳುವುದರಿಂದ ಆಲಿಸಿಕೊಂಡು ಸರಿಯಾಗಿ ಬರೆಯಲು ಸಹಾಯಕವಾಗುತ್ತದೆ.

೧೪. ಅನುಸ್ವರಕ್ಕೆ ನಿಖರವಾದ ಉಚ್ಚಾರಣೆಯಿಲ್ಲ. ಅನುಸ್ವರ (೦) ದ ನಂತರ ಯಾವ ವರ್ಗೀಯ ವ್ಯಂಜನ ಬಂದಿದೆಯೊ ಅದರ ಅನುನಾಸಿಕ ಉಚ್ಚಾರಣೆಗೆ ಬರುತ್ತದೆ ಎಂಬುದನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿ ಬರೆಯಿಸಬೇಕು.

೧೫. ಹಾಲು-ಹಾಳು, ಹಗ್ಗ-ಅಗ್ಗ, ಕಂದ-ಕದ, ಬೆಲೆ-ಬೆಳೆ, ಮೊದಲಾದ ಪದಗಳ ಜೋಡಿಯನ್ನು ಉಕ್ತ ಲೇಖನ ನೀಡಿ ತಿದ್ದಬೇಕು. ಜೊತೆಗೆ ಅರ್ಥದಲ್ಲಾಗುವ ಬದಲಾವಣೆಯನ್ನು ಮನದಟ್ಟು ಮಾಡಬೇಕು.

೧೬. ವಿದ್ಯಾರ್ಥಿಗಳ ಗುಂಪು ಮಾಡಿ ಪ್ರತಿಗುಂಪಿನಲ್ಲಿ ಪ್ರತಿ ವಿದ್ಯಾರ್ಥಿಯೂ ತಮ್ಮ ಪಾಠಗಳಲ್ಲಿ ಅನುಸ್ವರ (೦) ಸಹಿತದ ಪದಗಳನ್ನು ಹುಡುಕಿ ಬರೆದು ಪಟ್ಟಿ ಮಾಡಿ ಬರೆಯುವ ಅಭ್ಯಾಸವನ್ನು ಮಾಡಿಸಬೇಕು.

ಅಧ್ಯಾಯ ಐದು

ಗುಣಿತಾಕ್ಷರ ಮತ್ತು ಒತ್ತಕ್ಷರಗಳಲ್ಲಿನ ಸಮಸ್ಯೆಗಳು

೫.೧. ಗುಣಿತಾಕ್ಷರಗಳು

೫.೨. ಒತ್ತಕ್ಷರಗಳು

೫.೩. ಕಾರಣಗಳು

೫.೪. ಪರಿಹಾರೋಪಾಯಗಳು

ಅಧ್ಯಾಯ ೫

ಗುಣಿತಾಕ್ಷರ ಮತ್ತು ಒತ್ತಕ್ಷರಗಳಲ್ಲಿನ ಸಮಸ್ಯೆಗಳು

ಕನ್ನಡ ವರ್ಣಮಾಲೆಯನ್ನು ಅಧ್ಯಯನದ ಅನುಕೂಲದ ದೃಷ್ಟಿಯಿಂದ ಮೂಲಾಕ್ಷರಗಳು, ಗುಣಿತಾಕ್ಷರಗಳು ಮತ್ತು ಒತ್ತಕ್ಷರಗಳು ಎಂದು ಪ್ರಮುಖವಾಗಿ ಮೂರು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಪ್ರಸ್ತುತ ಈ ಅಧ್ಯಾಯದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಓದು ಮತ್ತು ಬರವಣಿಗೆ ಎರಡೂ ನೆಲೆಗಳಲ್ಲಿ ವ್ಯತ್ಯಾಸ ಮಾಡುವರು. ಅಂತಹ ರಚನೆಗಳನ್ನು ಇಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಇಲ್ಲಿ ಓದುವುದನ್ನು ಮತ್ತು ಬರೆಯುವುದನ್ನು ಪ್ರತ್ಯೇಕವಾಗಿ ವಿಶ್ಲೇಷಣೆ ಮಾಡದೆ ಒಟ್ಟಿಗೆ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಮೊದಲ ಭಾಗದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಗುಣಿತಾಕ್ಷರಗಳನ್ನು ಓದುವಾಗ ಮತ್ತು ಬರೆಯುವಾಗ ವರ್ಗೀಯ ಮತ್ತು ಅವರ್ಗೀಯ ಎಂಬ ಎರಡು ನೆಲೆಗಳಲ್ಲಿ ಗುಣಿತಾಕ್ಷರಗಳನ್ನು ವ್ಯತ್ಯಾಸ ಮಾಡುವರು. ನಿದರ್ಶನಕ್ಕಾಗಿ ಕೆಲವು ಗುಣಿತಾಕ್ಷರಗಳನ್ನು ಮಾತ್ರ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಎರಡನೆಯ ಭಾಗದಲ್ಲಿ ಒತ್ತಕ್ಷರಗಳನ್ನು ಅವುಗಳ ರೂಪ, ಗಾತ್ರ ಭಿನ್ನರೂಪಗಳನ್ನು ಅನುಸರಿಸಿ ಮೂರು ವಿಧಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ನೇರ ಮೂಲ ಅಕ್ಷರಗಳ ಒತ್ತಕ್ಷರ

೨. ಮೂಲಾಕ್ಷರಗಳನ್ನು ಹೋಲುವ ಒತ್ತಕ್ಷರ

೩. ಭಿನ್ನರೂಪದ ಒತ್ತಕ್ಷರ

[illegible]

[illegible]

[illegible]

[illegible]

[illegible]

ಈ ಮೂರು ನೆಲೆಗಳಲ್ಲಿ ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವಲ್ಲಿನ ವ್ಯತ್ಯಾಸಗಳನ್ನು ಮಾಡುವರು. ಅಂತಹ ಕೆಲವು ಒತ್ತಕ್ಷರಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡು ವಿಶ್ಲೇಷಿಸಲಾಗಿದೆ.

ಲಂಬಾಣಿ ಭಾಷಿಕ ಮಕ್ಕಳು ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಓದುವ ಮತ್ತು ಬರೆಯುವಲ್ಲಿ ಮಾಡುವ ವ್ಯತ್ಯಾಸಗಳಿಗೆ ಕಾರಣಗಳನ್ನು ಒಟ್ಟಿಗೆ ನೀಡಲಾಗಿದೆ. ಹಾಗೆಯೇ ಅವುಗಳನ್ನು ಸರಿಪಡಿಸುವಲ್ಲಿ ಕೈಗೊಳ್ಳಬೇಕಾದ ಪರಿಹಾರೋಪಾಯಗಳನ್ನು ನೀಡಲಾಗಿದೆ.

೫.೧. ಗುಣಿತಾಕ್ಷರ ಓದುವ ಮತ್ತು ಬರವಣಿಗೆಯಲ್ಲಿನ ಸಮಸ್ಯೆಗಳು

೫.೨. ಒತ್ತಕ್ಷರ ಓದುವ ಮತ್ತು ಬರವಣಿಗೆಯಲ್ಲಿನ ಸಮಸ್ಯೆಗಳು

೫.೩. ಕಾರಣಗಳು

೫.೪. ಪರಿಹಾರೋಪಾಯಗಳು

೫.೧. ಗುಣಿತಾಕ್ಷರ ಓದುವ ಮತ್ತು ಬರವಣಿಗೆಯಲ್ಲಿನ ಸಮಸ್ಯೆಗಳು

ವ್ಯಂಜನಗಳಿಗೆ ಸ್ವರಗಳನ್ನು ಅಂದರೆ ಸ್ವರ ಚಿಹ್ನೆಗಳನ್ನು ಸೇರಿಸುವುದರಿಂದ ಉಂಟಾಗುವ ಮಿಶ್ರ ವರ್ಣಗಳಿಗೆ "ಗುಣಿತಾಕ್ಷರ" ಅಥವಾ "ಕಾಗುಣಿತ" ಎನ್ನುವರು. ಅಂತಹ ಕೆಲವು ಗುಣಿತಾಕ್ಷರಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸಿ ವಿಶ್ಲೇಷಿಸಲಾಗಿದೆ.

❖ ಕಿ, ಕು, ಕೆ, ಕೊ, ಬದಲು ಕೀ, ಕೂ, ಕೇ, ಕೋ ಎಂದು ಓದುತ್ತಾರೆ. ಕೀ, ಕೂ, ಕೇ, ಕೋ ಬದಲು ಕಿ, ಕು, ಕೆ, ಕೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವನ್ನು 'ಕಾ' ಎಂದು ಓದುತ್ತಾರೆ ಮತ್ತು 'ಕ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಕಿವಿ	ಕೀವೀ
ಕಿಡಿ	ಕೀಡೀ
ಕುಳ	ಕೂಳಾ
ಕುರಿ	ಕೂರೀ
ಕೆರೆ	ಕೇರೇ
ಕೆಡು	ಕೇಡೂ
ಕೊಡು	ಕೋಡೂ
ಕೊರತೆ	ಕೋರಾತೇ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಕೀಟ	ಕಿಟ
ಕೀರು	ಕಿರು
ಕೀರಲು	ಕಿರಲು
ಕೂಸು	ಕುಸು
ಕೂಗಾಡು	ಕುಗಡು
ಕೂಡಿಡು	ಕುಡಿಡು
ಕೂದಲು	ಕುದಲು
ಅನುಕೂಲ	ಅನುಕುಲ
ಕೇಡು	ಕೆಡು
ಕೇರಿ	ಕೆರಿ
ಕೋಗಿಲೆ	ಕೂಗಿಲೆ
ಕೋಟೆ	ಕೂಟ
ಕೋತಿ	ಕೂತಿ
ಕೋಲು	ಕೂಲು
ಪದಕೋಶ	ಪದಕೂಟ

❋ ಖಾ, ಖೀ. ಖೇ, ಖೈ, ಬದಲು ಕಾ, ಕೀ, ಕೇ, ಕೈ ಎಂದು ಓದುತ್ತಾರೆ. ಕ, ಕಿ, ಕೆ, ಕಾಯ್ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆಯ ತರಗತಿ ಮಕ್ಕಳು ಮಾಡುತ್ತಾರೆ. ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವನ್ನು 'ಕಾ' ಎಂದು ಓದುತ್ತಾರೆ ಮತ್ತು 'ಕ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಖಾತೆ	ಕಾತೇ	ಕತೆ
ಖಾಕಿ	ಕಾಕೀ	ಕಕಿ
ರಾಖಿ	ರಾಕೀ	ರಕಿ
ಅಖಿಲ	ಆಕೀಲಾ	ಅಕಿಲ
ಖೇದ	ಕೇದಾ	ಕೆದ
ಖೈದಿ	ಕಾಯಿದಿ	ಕಾಯಿದಿ/ಕೈದಿ

❋ ಗಿ, ಗು, ಗೊ ಬದಲು ಗೀ, ಗೂ, ಗೋ ಎಂದು ಓದುತ್ತಾರೆ. ಗೀ, ಗೂ, ಗೋ ಬದಲು ಗಿ, ಗು, ಗೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ನಾಲ್ಕು ತರಗತಿಯ ಮಕ್ಕಳು ಮಾಡುತ್ತಾರೆ. ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರ 'ಗ' ವನ್ನು ದೀರ್ಘವಾಗಿ ಓದುತ್ತಾರೆ ಮತ್ತು ಅಲ್ಪಪ್ರಾಣಾಕ್ಷರವಾಗಿ ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಗಿಡ	ಗೀಡಾ
ಗಿರಿ	ಗೀರೀ
ಗುಡಿ	ಗೂಡೀ
ಗುರಿ	ಗೂರೀ
ಗುಡಿಸಲು	ಗೂಡಿಸಲೂ
ಗೊಂಬೆ	ಗೋಬೇ
ಗೊಣಗು	ಗೋನಾಗೂ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಗೀತ	ಗಿತ
ಗೀಜುಗ	ಗಿಜಗ
ಗೂಬೆ	ಗುಬೆ
ಗೂಡು	ಗುಡು
ಹಾಗೂ	ಆಗು
ಗೋಡೆ	ಗೂಡೆ
ಗೋಲಿ	ಗೂಲಿ
ಗೋಚರಿಸು	ಗೂಚರಿಸು

❋ ಘಾ, ಘೀ, ಘೋ ಬದಲು ಗಾ, ಗೀ, ಗೋ ಎಂದು ಓದುತ್ತಾರೆ. ಗ, ಗಿ, ಗೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವನ್ನು 'ಗಾ' ಎಂದು ಓದುತ್ತಾರೆ ಮತ್ತು 'ಗ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಘಾಸಿ	ಗಾಸೀ	ಗಸಿ
ಆಘಾತ	ಆಗಾತಾ	ಅಗತ
ಘೀಳಿಡು	ಗೀಲಿಡು	ಗಿಲಿಡು
ಘೋಷಣೆ	ಗೋಸನೆ/ ಣೆ	ಗೂಸನೆ/ ಣ
ಘೋಷಿಸು	ಗೋಸಿಸು	ಗೂಸಿಸು

✸ ಚ, ಚಿ, ಚು, ಚೋ, ಬದಲು ಚಾ, ಚೀ, ಚೂ, ಚೋ, ಎಂದು ಓದುತ್ತಾರೆ. ಚಾ, ಚೀ, ಚೂ, ಚೊ ಬದಲು ಚ, ಚಿ, ಚು, ಚೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಕ್ಷರ 'ಚಾ' ಎಂದು ಓದುವರು. 'ಚ' ಎಂದು ಬರೆಯುವರು.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಚಹ	ಚಾಹಾ
ಚತುರ	ಚಾತೂರಾ
ಚರಣ	ಚಾರಣಾ
ಚಿತೆ	ಚೀತೇ
ಚಿಲುಮೆ	ಚೀಲೂಮೆ
ಚುರುಕು	ಚೂರೂಕೂ
ಚೊಚ್ಚಲ	ಚೋಚಲಾ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಚಾಟಿ	ಚಟಿ
ಚಾಮರ	ಚಮರ
ಚಾವಡಿ	ಚವಡಿ
ಚೀಲ	ಚಿಲ
ಚೀರು	ಚಿರು
ಚೂರಿ	ಚುರಿ
ಚೂಪಾದ	ಚುಪದ
ಚೋರ	ಚೂರ

❋ ಛಾ, ಛೀ, ಛೇ ಬದಲು ವಾ, ವೀ, ವೇ ಎಂದು ಓದುತ್ತಾರೆ. ಚ, ಚಿ, ಚೆ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಅಲ್ಪಪ್ರಾಣ ವ್ಯಂಜನ 'ಚ' ವನ್ನು ಬರೆಯುತ್ತಾರೆ. 'ವಾ' ಎಂದು ದೀರ್ಘವಾಗಿ ಓದುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಛಾಯ	ವಾಯಾ	ಚಯ
ಛೀಮಾರಿ	ಛಿಮಾರಿ	ಚಿಮರಿ
ಛೇದ	ವೇದಾ	ಚೆದ
ಛೇದಿಸು	ವೇದಿಸು	ಚೆದಿಸು
ಕಛೇರಿ	ಕಾವೇರಿ	ಕಚೆರಿ

❋ ಜಾ, ಜೀ, ಜೂ, ಜೇ, ಜೋ ಬದಲು ಜ, ಜಿ, ಜು, ಜೆ, ಜೂ ಎಂದು ಬರೆಯುತ್ತಾರೆ. ಆದರೆ ದೀರ್ಘವಾಗಿಯೇ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ಜಾ' ಎಂದು ಓದುತ್ತಾರೆ. 'ಜ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಜಾರು	ಜಾರೂ	ಜರು
ಜಾರಿಗೆ	ಜಾರೀಗೇ	ಜರಿಗೆ
ಜೀತ	ಜೀತಾ	ಜಿತ
ಜೀವಿ	ಜೀವೀ	ಜಿವಿ
ಜೀವನ	ಜೀವಾನಾ	ಜಿವನ
ಜೂಟಾಟ	ಜೂಟಾಟಾ	ಜುಟಟ
ಜೇನು	ಜೇನು	ಜೆನು
ಜೋಕಾಲಿ	ಜೋಕಾಲಿ	ಜೂಕಲಿ

❋ ಠಾ, ಠೀ, ಠೋ ಬದಲು ರಾ, ರೀ, ರೋ ಎಂದು ಓದುತ್ತಾರೆ. ಟ, ಟಿ, ಟೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ನಾಲ್ಕು ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ರಾ' ಎಂದು ಓದುತ್ತಾರೆ. 'ಟ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಠಾವು	ರಾವ್ರೂ	ಟಉ/ವು
ಠಾಣೆ	ರಾನೆ	ಟನೆ
ಕಠಾರಿ	ಕಾರಾರೀ	ಕಟರಿ
ಠೀವಿ	ರೀವೀ	ಟಿವಿ
ಕಠಿಣ	ಕರಿನ	ಕಟಿನ
ಕಂಠೀರವ	ಕರೀರವಾ	ಕಟಿರವ
ಕಠೋರ	ಕಾರೋರಾ	ಕಟೂರ

❁ ತಿ, ತು, ತೆ, ತೊ ಬದಲು ತೀ, ತೂ, ತೇ, ತೋ ಎಂದು ಓದುತ್ತಾರೆ. ತೀ, ತೂ, ತೇ, ತೋ ಬದಲು ತಿ, ತು, ತೆ, ತೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ತಾ' ಎಂದು ಓದುತ್ತಾರೆ. 'ತ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ತಿರುಗು	ತೀರೂಗೂ
ತಿರುಪೆ	ತೀರೂಪೇ
ತುರುಬು	ತೂರೂಬೂ
ತುರುಕು	ತೂರೂಕೂ
ತೆಗೆದು	ತೇಗೇದೂ
ತೆರೆದು	ತೇರೇದೂ
ತೊರೆದು	ತೋರೇದೂ
ತೊಲಗು	ತೋಲಾಗೂ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ತೀರ	ತಿರ
ಅತೀತ	ಅತಿತ
ತೂತು	ತುತು
ಕುತೂಹಲ	ಕುತುಹಲ
ತೇಲಾಡು	ತೆಲಡು
ತೇರು	ತೆರು
ತೋರಿಕೆ	ತೂರಿಕೆ
ತೋಪು	ತೂಪು
ತೋಟ	ತೂಟ
ಪಾರಿತೋಷಕ	ಪರಿತೂಸಕ

* ಥಿ, ಥು, ಥೆ ಬದಲು ದೀ, ದೂ, ದೇ ಎಂದು ಓದುತ್ತಾರೆ. ತಿ, ತು, ತೆ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ದಾ' ಎಂದು ಓದುತ್ತಾರೆ. 'ತ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಮಥಿಸು	ಮಾದೀಸೂ	ಮತಿಸು
ಅತಿಥಿ	ಆತೀದೀ	ಅತಿತಿ
ಮಿಥುನ	ಮೀದೂನಾ	ಮಿತುನ
ಕಥೆ	ಕಾದೇ	ಕತೆ

* ದಿ, ದು, ದೆ, ದೊ ಬದಲು ದೀ, ದೂ, ದೇ, ದೋ ಎಂದು ಓದುತ್ತಾರೆ. ದೀ, ದೂ, ದೇ, ದೋ ಬದಲು ದಿ, ದು, ದೆ, ದೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ದಾ' ಎಂದು ಓದುತ್ತಾರೆ. 'ದ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ದಿನ	ದೀನಾ
ದಿವಸ	ದೀವಾಸಾ
ದುಡಿಮೆ	ದೂಡಿಮೇ
ದುರುದುರು	ದೂರೂ ದೂರೂ
ದೆಸೆ	ದೇಸೆ
ದೊರೆ	ದೋರೇ
ದೊರಕು	ದೋರಾಕೂ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ದೀಪ	ದಿಪ
ದೀವಿಗೆ	ದಿವಿಗೆ
ದೀನ	ದಿನ
ದೂರ	ದುರ
ತಲೆದೂಗು	ತಲೆದುಗು
ದೇಗುಲ	ದೆಗುಲ
ದೇವಾಲಯ	ದೆವಲಯ
ದೇವತೆ	ದೆವತೆ
ದೋಷ	ದೂಸ

* ಧಾ, ಧೀ, ಧು, ಧೋ ಬದಲು ದಾ, ದೀ, ದೂ ಎಂದು ಓದುತ್ತಾರೆ. ದ, ದಿ, ದು, ದೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ದಾ' ಎಂದು ಓದುತ್ತಾರೆ. 'ದ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಧಾತು	ದಾತೂ	ದತು
ನಿಧಾನ	ನೀದಾನಾ	ನಿದನ
ಆಧಾರ	ಆದಾರಾ	ಆದರ
ಧೀರ	ದೀರಾ	ದಿರ
ಅಧೀನತೆ	ಆದೀನತೆ	ಅದಿನತ
ವಧು	ವಾದೂ	ವದು
ಸಾಧು	ಸಾದೂ	ಸದು
ಅಧೋಗತಿ	ಆದೂಗತಿ	ಅದೂಗತಿ
ಮಧು	ಮಾದೂ	ಮದು
ಅಧಾರ	ಆದಾರಾ	ಅದರ

❋ ನಿ, ನು, ನೆ, ಬದಲು ನೀ, ನೂ, ನೇ ಎಂದು ಓದುತ್ತಾರೆ. ನೀ, ನೂ, ನೇ, ನೋ ಬದಲು ನಿ, ನು, ನ, ನೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು, ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ನಾ' ಎಂದು ಓದುತ್ತಾರೆ. 'ನ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ನಿನಗೆ	ನೀನಾಗೇ
ನಿನ್ನ	ನೀನಾ
ಅನುಕೂಲ	ಅನೂಕೂಲಾ
ನೆನೆ	ನೇನೇ
ಕೆನೆ	ಕೇನೇ
ನೆನಪು	ನೇನಾಪೂ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ನೀನು	ನಿನು
ನೀವು	ನಿವು
ನೀರು	ನಿರು
ನೀಡು	ನಿಡು
ನೀರಜ	ನಿರಜ
ನೂರು	ನುರು
ನೂರಾಸೆ	ನುರಸೆ
ನೇಗಿಲು	ನೆಗಿಲು
ನೇಸರ	ನೆಸರ
ನೇತಾಡು	ನೆತಾಡು
ನೋಡು	ನೂಡು
ನೋವು	ನೂವು
ವಿನೋದ	ವಿನೂದ/ಇನೂದ

❃ ಪೀ, ಪೂ, ಪೇ, ಪೋ, ಬದಲು ಪಿ, ಪು, ಪೆ, ಪೂ ಎಂದು ಬರೆಯುತ್ತಾರೆ. ಮೇಲಿನಂತೆ ದೀರ್ಘವಾಗಿಯೇ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ಪಾ' ಎಂದು ಓದುತ್ತಾರೆ. 'ಪ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಪೀಡಿಸು	ಪೀಡೀಸೂ	ಪಿಡಿಸು
ಪೀಠ	ಪೀಟಾ	ಪಿಟ
ಪೂರಕ	ಪೂರಾಕಾ	ಪುರಕ
ಪೂಜಿಸು	ಪೂಜೀಸೂ	ಪುಜಿಸು
ಬಾಪೂಜಿ	ಬಾಪೂಜೀ	ಬಪುಜಿ
ಪೂಜೆ	ಪೂಜೇ	ಪುಜೆ
ಪೇಠ	ಪೇಟಾ	ಪೆಟ
ಪೇಚಾಡು	ಪೇಚಾಡೂ	ಪೆಚಡು
ಪೋಷಕ	ಪೂಸಾಕಾ	ಪೂಸಕ
ಪೋಲಿಯೊ	ಪೊಲೀಯಾ	ಪೂಲಿಯ

* ಭಾ, ಭೀ, ಭೂ, ಭೇ, ಭೋ ಬದಲು ಬಾ, ಬೀ, ಬೂ, ಬೇ, ಬೂ ಎಂದು ಓದುತ್ತಾರೆ. ಬ, ಬಿ, ಬು, ಬೆ, ಬೂ ಎಂದು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ಬಾ' ಎಂದು ಓದುತ್ತಾರೆ. 'ಬ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಭಾವನೆ	ಬಾವಾನೇ	ಬವನೆ
ಭಾಷೆ	ಬಾಸೆ	ಬಸೆ
ವಿಭಾಗ	ವಿಬಾಗ / ಇಬಾಗಾ	ವಿಬಗ / ಇಬಗ
ಭೀತಿ	ಬೀತೀ	ಬಿತಿ
ಭೀಕರ	ಬೀಕಾರಾ	ಬಿಕರ
ಭೂಮಿ	ಬೂಮೀ	ಬುಮಿ
ಸಹಾನುಭೂತಿ	ಸಾಅನೂಬೂತೀ	ಸಅನುಬುತಿ
ಭೂತ	ಬೂತಾ	ಬುತ
ಭೇದ	ಬೇದಾ	ಬೆದ
ಭೇಟಿ	ಬೇಟಿ	ಬೆಟಿ
ಭೋಗಿ	ಬೂಗೀ	ಬೂಗಿ

* ಮೀ, ಮೂ, ಮೇ, ಮೋ, ಬದಲು ಮಿ, ಮಾ, ಮೆ, ಮಾ ಎಂದು ಬರೆಯುತ್ತಾರೆ. ಮೇಲಿನಂತೆ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವಾದ 'ಮಾ' ಎಂದು ಓದುತ್ತಾರೆ. 'ಮ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಮೀನು	ಮೀನೂ	ಮಿನು
ಮೀಯು	ಮೀಯೂ	ಮಿಯು
ಮೀರಿದ	ಮೀರೀದಾ	ಮಿರಿದ
ಸಮೀಪ	ಸಾಮೀಪಾ	ಸಮಿಪ
ಮೂಲಕ	ಮೂಲಾಕಾ	ಮಾಲಕ
ಮೂಟೆ	ಮೂಟೇ	ಮಾಟೆ
ಮೂಡಲು	ಮೂಡಾಲೂ	ಮಾಡಲು
ಸಮೂಹ	ಸಾಮೂಹಾ	ಸಮಾಹ
ಮೇಲೆ	ಮೇಲೇ	ಮೆಲೆ
ಮೇರೆ	ಮೇರೇ	ಮೆರೆ
ಮೋಸ	ಮಾಸಾ	ಮಾಸ
ಮೋಡ	ಮಾಡಾ	ಮಾಡ
ಅನುಮೋದಿಸು	ಆನೂಮಾದಿಸೂ	ಅನುಮಾದಿಸು

❁ ರೀ, ರೂ, ರೇ, ರೋ ಬದಲು ರಿ, ರು, ರೆ, ರೂ ಎಂದು ಬರೆಯುತ್ತಾರೆ. ಮೇಲಿನಂತೆ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು 'ರಾ' ಎಂದು ಓದುತ್ತಾರೆ. 'ರ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ರೀತಿ	ರೀತೀ	ರಿತಿ
ತಾರೀಖು	ತಾರೀಕೂ	ತರಿಕು
ರೂಢಿ	ರೂಡೀ	ರುಡಿ
ರೂಪ	ರೂಪಾ	ರುಪ
ತವರೂರು	ತಾವರೂರೂ	ತವರುರು
ಜಾಗರೂಕತೆ	ಜಾಗಾರೂಕಾತೇ	ಜಗರುಕತೆ
ರೇಗು	ರೇಗೂ	ರೆಗು
ಹಿರೇಮಣಿ	ಹೀರೇಮನಿ	ಹಿರೆಮನಿ
ರೋಷ	ರೂಸಾ	ರೂಸ
ರೋಚಕ	ರೂಚಕಾ	ರೂಚಕ

❁ ಲೀ, ಲೂ, ಲೇ, ಲೋ ಬದಲು ಲಿ, ಲು, ಲೆ, ಲೂ ಎಂದು ಬರೆಯುತ್ತಾರೆ. ಮೇಲಿನಂತೆ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವಾದ 'ಲಾ' ಎಂದು ಓದುತ್ತಾರೆ. 'ಲ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಲೀಲೆ	ಲೀಲೇ	ಲಿಲ
ಮಾಲೀಕ	ಮಾಲೀಕಾ	ಮಲಿಕ
ಕಾಲೂರು	ಕಾಲೂರೂ	ಕಲುರು
ಯಾವಾಗಲೂ	ಯಾವಾಗಾಲೂ	ಯವಗಲು
ಲೇಪಿಸು	ಲೇಪೀಸೂ	ಲೆಪಿಸು
ಲೇಖನ	ಲೇಕಾನಾ	ಲೆಕನ
ಲೋಹ	ಲೂಹಾ	ಲೂಹ
ಲೋಕ	ಲೂಕಾ	ಲೂಕ
ಅವಲೋಕನ	ಆವಾಲೂಕನಾ	ಅವಲೂಕನ

❁ ವೀ, ವೂ, ವೆ, ವೋ ಬದಲು ಇ, ಉ, ಎ, ಓ ಎಂದು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ವೀರ	ಇರ
ವಿಷ	ಇಸ
ಹಲವು	ಅಲಉ
ಮರುವು	ಮರಉ
ಠರಾವು	ಟರಉ
ವೇಷ	ಎಸ
ವೇದ	ಎದ

❁ ಸೀ, ಸೂ, ಸೇ, ಸೋ ಬದಲು ಸಿ, ಸು, ಸೆ, ಸೂ ಎಂದು ಬರೆಯುತ್ತಾರೆ. ಮೇಲಿನಂತೆ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಆದರೆ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವಾದ 'ಸಾ' ಎಂದು ಓದುತ್ತಾರೆ. 'ಸ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಸೀಮೆ	ಸೀಮೇ	ಸಿಮೆ
ಉದಾಸೀನ	ಊದಾಸೀನಾ	ಉದಸಿನ
ಸೂಚನೆ	ಸೂಚಾನೇ	ಸುಚನೆ
ಸೂಚಿಸು	ಸೂಚೀಸೂ	ಸುಚಿಸು
ಸೂರು	ಸೂರೂ	ಸುರು
ಸೇರು	ಸೇರೂ	ಸೆರು
ಸೇವೆ	ಸೇವೇ	ಸೆವೆ
ಸೋಗೆ	ಸೂಗೆ	ಸೂಗ
ಸೇವಿಸು	ಸೇವೀಸೂ	ಸೆವಿಸು
ಸೋಜಿಗ	ಸೂಜಿಗ	ಸೂಜಿಗ
ಸೋದರ	ಸೂದರ	ಸೂದರ
ಮನಸೋಲು	ಮಾನಸೂಲು	ಮನಸೂಲು

❋ ಹಾ, ಹು, ಹೆ, ಹೇ, ಹೊ ಬದಲು ಆ, ವು, ಎ, ಏ, ವ ಎಂದು ಬರೆಯುತ್ತಾರೆ. ಮೇಲಿನ ಎರಡೂ ರೀತಿಯಲ್ಲಿ ಓದುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ. ಓದುವಾಗ ಒಂದು ಮತ್ತು ಎರಡನೆ ತರಗತಿಯ ಮಕ್ಕಳು ಮೂಲಾಕ್ಷರವಾದ 'ಆ' ಎಂದು ಓದುತ್ತಾರೆ. 'ಅ' ಎಂದು ಬರೆಯುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಹಾಗೂ	ಹಾಗೂ / ಆಗೂ	ಆಗು
ಆಹಾರ	ಆಆರ	ಆಆರ
ಹಾಗೆ	ಹಾಗೇ / ಆಗೇ	ಆಗೆ
ಹುತ್ತ	ಹುತ / ವುತಾ	ವುತ
ಹೆಸರಾಂತ	ಹೆಸರಾತ / ಎಸರಾತಾ	ಎಸರತ
ಹೆಬ್ಬಯಕೆ	ಹೆಬಾಯಕೆ / ಎಬಾಯಕೆ	ಎಬಯಕೆ
ಹೇಳಿದ	ಹೇಳೀದ / ಏಲೀದಾ	ಏಲಿದ
ಹೇರಿದ	ಹೇರೀದ / ಏರೀದಾ	ಏರಿದ
ಹೊರಗಡೆ	ಹೋರಾಗಾಡೇ / ವರಾಗಾಡೇ	ವರಗಡೆ
ಹೊರಗೆ	ಹೋರಾಗೇ / ವರಾಗೆ	ವರಗೆ
ಹೊಂಚುಹಾಕು	ಹೋಚುಹಾಕು / ವಚುಆಕೂ	ವಚುಆಕು
ಹುಟ್ಟುಹಬ್ಬ	ಹೂಟುಹಾಬಾ / ವೂಟುಆಬಾ	ವುಟುಅಬ

* ಅನುಸ್ವರ > Q

ಬಿಂದುವನ್ನು ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ರೀತಿಯ ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಅಂದ	ಆದಾ	ಅದ
ಚಂದ	ಚಾದಾ	ಚದ
ಕಂದು	ಕಾದೂ	ಕದು
ಕಂಪು	ಕಾಪೂ	ಕಪು
ಚಿಂತೆ	ಚೀತೇ	ಚಿತೆ
ಗಂಟೆ	ಗಾಟೆ	ಗಟ
ಕಾಂತಿ	ಕಾತೀ	ಕಾತಿ
ಕಾಂಡ	ಕಾಡಾ	ಕಾಡಾ
ಅಂಜು	ಆಜೂ	ಅಜ
ಆನಂದ	ಆನಾದಾ	ಆನದ
ಸುಂದರ	ಸೂದರಾ	ಸುದರ
ಸಂಗತಿ	ಸಾಗತೀ	ಸಗತಿ
ಆತಂಕ	ಆತಾಕಾ	ಆತಕ
ಗೊಂದಲ	ಗೋದಾಲ	ಗೂದಲ
ಅಂಜಿಕೆ	ಆಜಿಕೇ	ಅಜಿಕೆ
ಅಂಬಿಗ	ಆಬೀಗಾ	ಅಬಿಗ
ಸಂಕಟ	ಸಾಕಾಟಾ	ಸಕಟ
ಅಂಗಲಾಚು	ಆಗಾಲಾಚು	ಅಗಲಾಚು
ಆನಂದಿಸು	ಆನಾದಿಸು	ಅನದಿಸು
ವಸಂತಕಾಲ	ವಸತಕಾಲ	ವಸತಕಲ
ಆರಂಭಿಸು	ಆರಾಬೀಸು	ಆರಬಿಸು

* ಅನುನಾಸಿಕ ಯುಕ್ತ ಪದಗಳು ದ್ವಿತ್ವವಾಗಿಯೂ ಓದುತ್ತಾರೆ. ಆದರೆ ದ್ವಿತ್ವವಾಗಿ ಬರೆಯುವುದಿಲ್ಲ. ಈ ರೀತಿಯ ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ
ಕಂದು	ಕದ್ದೂ
ಕಂಪು	ಕಪ್ಪೂ
ಸಂಜೆ	ಸಜ್ಜೆ
ಬಂಧಿಸು	ಬದ್ದಿಸೂ
ನಿಂದಿಸು	ನಿದ್ದಿಸೂ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಹಿಂಸೆ	ಇಮಸೆ
ಹಿಂಸಿಸು	ಇಮಸಿಸು
ಹಂಸ	ಅಮಸ

೫.೨. ಒತ್ತಕ್ಷರ ಓದುವ ಮತ್ತು ಬರವಣಿಗೆಯಲ್ಲಿನ ಸಮಸ್ಯೆಗಳು

ನಡುವೆ ಸ್ವರವಿಲ್ಲದೆ ಎರಡು ಅಥವಾ ಮೂರು ವ್ಯಂಜನಗಳಿದ್ದು, ಅವುಗಳ ಮುಂದೆ ಸ್ವರವು ಸೇರಿದ ಅಕ್ಷರವನ್ನು 'ಒತ್ತಕ್ಷರ' ಅಥವಾ 'ಸಂಯುಕ್ತಾಕ್ಷರ' ಎಂದು ಕರೆಯುತ್ತಾರೆ. ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿ ಒತ್ತಕ್ಷರಗಳನ್ನು ಮೂರು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೫.೨.೧. ನೇರ ಮೂಲ ಅಕ್ಷರಗಳೇ ಒತ್ತಕ್ಷರಗಳಾಗಿರುವುದು.

೫.೨.೨. ಮೂಲಾಕ್ಷರಗಳನ್ನು ಹೋಲುವ ತಲೆಕಟ್ಟು ರಹಿತ ಒತ್ತಕ್ಷರಗಳು

೫.೨.೩. ಭಿನ್ನರೂಪದ ಒತ್ತಕ್ಷರಗಳು

ಹೀಗೆ ಈ ಮೂರು ರೀತಿಯ ಒತ್ತಕ್ಷರಗಳನ್ನು ಲಂಬಾಣಿ ಭಾಷಿಕ ಮಕ್ಕಳು ಓದುವಾಗ ಮತ್ತು ಬರೆಯುವಾಗ ಮಾಡುವ ಸಮಸ್ಯೆಗಳನ್ನು ಜೊತೆ ಜೊತೆಯಾಗಿ ಚರ್ಚಿಸಲಾಗಿದೆ.

೫.೨.೧. ನೇರ ಮೂಲ ಅಕ್ಷರಗಳೇ ಒತ್ತಕ್ಷರಗಳಾಗಿರುವುದು

ಉದಾ : ಜ್ಜ, ಟ್ಟ, ಣ್ಣ, ಬ್ಬ, ವ್ವ

❁ ಜ್ಜ > ಜ

ಪದಮಧ್ಯ ಪರಿಸರದಲ್ಲಿ 'ಜ್ಜ' ದ್ವಿತ್ವಾಕ್ಷರ ತಾಲವ್ಯಘೋಷಈಷತ್ ಸ್ಪರ್ಶವ್ಯಂಜನ 'ಜ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ದೀರ್ಘವಾಗಿ ಓದುತ್ತಾರೆ ಮತ್ತು ಹ್ರಸ್ವವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಜ್ಜ	ಆಜಾ	ಅಜ
	ಅಜ್ಜಿ	ಆಜೀ	ಅಜಿ
	ಕಜ್ಜಿ	ಕಾಜೀ	ಕಜಿ
	ಗೆಜ್ಜರಿ	ಗೇಜಾರೀ	ಗಜರಿ
	ಸಜ್ಜನ	ಸಾಜಾನ	ಸಜನ
	ಮಜ್ಜನ	ಮಾಜಾನ	ಮಜನ
	ಸಜ್ಜು	ಸಾಜೂ	ಸಜು

* ಟ್ಟ > ಟ

ಪದಮಧ್ಯ ಪರಿಸರದಲ್ಲಿನ 'ಟ್ಟ' ದ್ವಿತ್ವಾಕ್ಷರವನ್ನು ಮೂರ್ಧನ್ಯಅಘೋಷಸ್ಪರ್ಶ ವ್ಯಂಜನ 'ಟ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಹಟ್ಟಿ	ಆಟಾ	ಅಟಿ
	ದಟ್ಟಿ	ದಾಟಾ	ದಟಿ
	ಬೆಟ್ಟಿ	ಬೇಟಾ	ಬೆಟಿ
	ಪುಟ್ಟಿ	ಪೂಟಾ	ಪುಟಿ
	ಥಟ್ಟನೆ	ತಾಟಾನೇ	ತಟನೆ
	ಲಟ್ಟಣಿಕೆ	ಲಟಾನಿಕೆ	ಲಟನಿಕೆ
	ತೊಟ್ಟಿಲು	ತೂಟೀಲು	ತೂಟಿಲು
	ಕಟ್ಟಳೆ	ಕಾಟಾಲೆ	ಕಟಲೆ
	ಹುಟ್ಟುಹಬ್ಬ	ಉಟುಅಬ	ಉಟುಅಬ
	ಕೊಟ್ಟಿಗೆ	ಕೋಟಿಗೆ	ಕೂಟಿಗೆ

* ಣ್ಣ > ನ

ಪದಮಧ್ಯ ಪರಿಸರದಲ್ಲಿ 'ಣ್ಣ' ದ್ವಿತ್ವಾಕ್ಷರವನ್ನು ದಂತ್ಯಅನುನಾಸಿಕ ವ್ಯಂಜನ 'ನ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವಾಗಿ ಮತ್ತು ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಣ್ಣ	ಆನಾ	ಅನ
	ಬಣ್ಣ	ಬಾನಾ	ಬನ
	ಸುಣ್ಣ	ಸುನಾ	ಸುನ
	ಸಣ್ಣ	ಸನಾ	ಸನ
	ತಣ್ಣಗೆ	ತಾನಗೆ	ತನಗೆ
	ಬಣ್ಣನೆ	ಬಾನಾನೆ	ಬನನೆ
	ಎಣ್ಣೆ	ಏನಾ	ಎನ
	ಮಣ್ಣು	ಮಾನು	ಮನು

* ಬ್ಬ > ಬ

ಪದಮಧ್ಯ ಪರಿಸರದಲ್ಲಿ 'ಬ್ಬ' ದ್ವಿತ್ವಾಕ್ಷರವನ್ನು ಧ್ವಯೋಷ್ಠ್ಯಘೋಷಸ್ಪರ್ಶ ವ್ಯಂಜನ 'ಬ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಒಬ್ಬ	ಓಬಾ	ಒಬ
	ಹಬ್ಬ	ಆಬಾ/ಹಾಬಾ	ಹಬ/ಅಬ
	ದಿಬ್ಬ	ದೀಬಾ	ದಿಬ
	ಡಬ್ಬ	ಡಾಬಾ	ಡಬ
	ಅಬ್ಬರ	ಆಬಾರಾ	ಅಬರ
	ಇಬ್ಬನಿ	ಈಬಾನೀ	ಇಬನಿ
	ಇಬ್ಬರು	ಈಬಾರೂ	ಇಬರು
	ಅಬ್ಬರಿಸು	ಆಬಾರಿಸೂ	ಅಬರಿಸು
	ದಿಬ್ಬಣ	ದೀಬಾನ	ದಿಬನ
	ತಬ್ಬಲಿ	ತಾಬಾಲಿ	ತಬಲಿ
	ಅಬ್ಬಬ್ಬ	ಆಬಾಬಾ	ಅಬಬ
	ಉಬ್ಬು	ಊಬೂ	ಉಬು
	ಕಬ್ಬು	ಕಾಬೂ	ಕಬು

❋ ವ್ವ > ವ

ಪದಮಧ್ಯ ಪರಿಸರದಲ್ಲಿನ 'ವ್ವ' ದ್ವಿತ್ವಾಕ್ಷರವನ್ನು ದಂತೋಷ್ಠ್ಯ ಅರ್ಧಸ್ವರ 'ವ' ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನ (ಅರ್ಧ ಸ್ವರ)ವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅವ್ವ	ಆವಾ	ಅವ
	ದೆವ್ವ	ದೇವಾ	ದೆವ
	ಓಬವ್ವ	ಓಬಾವಾ	ಒಬವ
	ನವ್ವಾಲೆ	ನವಾಲೆ	ನವಲೆ
	ಜವ್ವನ	ಜಾವಾನ	ಜವನ
	ಸುವ್ವಾಲಿ	ಸೂವಾಲಿ	ಸುವಲಿ

೫.೨.೨. ಮೂಲಾಕ್ಷರಗಳನ್ನು ಹೋಲುವ ತಲೆಕಟ್ಟು ರಹಿತ ಒತ್ತಕ್ಷರಗಳು

ಮೂಲಾಕ್ಷರ	ಒತ್ತು	ಒತ್ತಕ್ಷರ
ಕ	್ಕ	ಕ್ಕ
ಗ	್ಗ	ಗ್ಗ
ಘ	್ಘ	ಘ್ಘ
ಚ	್ಚ	ಚ್ಚ
ಛ	್ಛ	ಛ್ಛ
ಝ	್ಝ	ಝ್ಝ
ಠ	್ಠ	ಠ್ಠ
ಡ	್ಡ	ಡ್ಡ
ಢ	್ಢ	ಢ್ಢ
ಥ	್ಥ	ಥ್ಥ
ದ	್ದ	ದ್ದ
ಧ	್ಧ	ಧ್ಧ
ಪ	್ಪ	ಪ್ಪ
ಫ	್ಫ	ಫ್ಫ
ಬ	್ಬ	ಬ್ಬ
ಭ	್ಭ	ಭ್ಭ
ಶ	್ಶ	ಶ್ಶ
ಷ	್ಷ	ಷ್ಷ
ಸ	್ಸ	ಸ್ಸ
ಹ	್ಹ	ಹ್ಹ
ಳ	್ಳ	ಳ್ಳ

❋ ಕ್ಕ > ಕ

ಪದಮಧ್ಯ ಪರಿಸರದಲ್ಲಿನ 'ಕ್ಕ' ದ್ವಿತ್ವಾಕ್ಷರದ ಬದಲು ಕಂಠ್ಯಅಘೋಷಸ್ಪರ್ಶ ವ್ಯಂಜನ 'ಕ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಕ್ಕ	ಅಕಾ	ಅಕ
	ಪಕ್ಕ	ಪಕಾ	ಪಕ
	ಬೆಕ್ಕು	ಬೇಕೂ	ಬೆಕು
	ಲೆಕ್ಕ	ಲೇಕಾ	ಲೆಕ
	ಚಿಕ್ಕ	ಚಿಕಾ	ಚಿಕ
	ಪುಕ್ಕ	ಪುಕಾ	ಪುಕ
	ಅಕ್ಕರೆ	ಅಕಾರೆ	ಅಕರ
	ಇಕ್ಕಳ	ಈಕಾಲಾ	ಇಕಲ
	ಮಕ್ಕಳು	ಮಕಾಲು	ಮಕಲು
	ಚಕ್ಕಡಿ	ಚಕಾಡಿ	ಚಕಡಿ
	ತಕ್ಕಡಿ	ತಕಾಡಿ	ತಕಡಿ
	ಕೊಕ್ಕರೆ	ಕೂಕಾರೆ	ಕೂಕರೆ

❋ ಗ್ಗ > ಗ

ಪದಮಧ್ಯ ಪರಿಸರದಲ್ಲಿನ 'ಗ್ಗ' ದ್ವಿತ್ವಾಕ್ಷರದ ಬದಲು ಕಂಠ್ಯಘೋಷಸ್ಪರ್ಶ ವ್ಯಂಜನ 'ಗ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಮಗ್ಗ	ಮಗಾ	ಮಗ
	ಅಗ್ಗ	ಅಗಾ	ಅಗ
	ಹಗ್ಗ	ಅಗಾ	ಅಗ
	ಸಗ್ಗ	ಸಗಾ	ಸಗ
	ಜಗ್ಗದೆ	ಜಗಾದೆ	ಜಗದೆ
	ಒಗ್ಗದೆ	ಓಗಾದೆ	ಒಗದೆ
	ಕುಗ್ಗದೆ	ಕುಗಾದೆ	ಕುಗದೆ
	ಬಗ್ಗದೆ	ಬಗಾದೆ	ಬಗದೆ
	ಮುಗ್ಗರಿಸು	ಮೂಗಾರಿಸು	ಮುಗರಿಸು
	ನುಗ್ಗಾಟ	ನೂಗಾಟ	ನುಗಟ
	ಜಗ್ಗಾಟ	ಜಗಾಟ	ಜಗಟ

❁ ಚ್ಚ > ಚ

ಪದಮಧ್ಯ ಪರಿಸರದಲ್ಲಿನ 'ಚ್ಚ' ದ್ವಿತ್ವಾಕ್ಷರದ ಬದಲು ತಾಲವ್ಯಅಘೋಷ ಈಷತ್‌ಸ್ಪರ್ಶ ವ್ಯಂಜನ 'ಚ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಚ್ಚ	ಅಚಾ	ಅಚ
	ಎಚ್ಚರ	ಏಚಾರಾ	ಎಚರ
	ಬಚ್ಚಲು	ಬಚಾಲೂ	ಬಚಲು
	ಹೆಚ್ಚಳ	ಏಚಾಲಾ	ಎಚಲ
	ಚೊಚ್ಚಲು	ಚೂಚಾಲೂ	ಚೂಚಲು
	ಹಚ್ಚಡ	ಆಚಾಡಾ	ಅಚಡ
	ವೆಚ್ಚ	ವೇಚಾ	ವಚ
	ಅಚ್ಚುಚ್ಚು	ಆಚಾಚೂ	ಅಚಚು
	ಮೆಚ್ಚು	ಮೇಚೂ	ಮೆಚು
	ಪಚ್ಚೆ	ಪಚೇ	ಪಚೆ

❁ ಡ್ಡ > ಡ

ಪದಮಧ್ಯ ಪರಿಸರದಲ್ಲಿನ 'ಡ್ಡ' ದ್ವಿತ್ವಾಕ್ಷರದ ಬದಲು ಮೂರ್ಧನ್ಯಘೋಷಸ್ಪರ್ಶ ವ್ಯಂಜನ 'ಡ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಡ್ಡ	ಅಡಾ	ಅಡ
	ಗುಡ್ಡ	ಗುಡಾ	ಗುಡ
	ದೊಡ್ಡ	ದೂಡಾ	ದೂಡ
	ಖೆಡ್ಡ	ಕೇಡಾ	ಕೆಡ
	ಹೆಡ್ಡ	ಏಡಾ	ಎಡ
	ದುಡ್ಡು	ದುಡಾ	ದುಡ
	ಬಡ್ಡಿ	ಬಾಡೀ	ಬಡಿ
	ಒಡ್ಡು	ಒಡೂ	ಒಡು
	ಗಡ್ಡೆ	ಗಡೇ	ಗಡೆ
	ಅಡ್ಡಾಡು	ಅಡಾಡು	ಅಡಡು

* ದ್ದ > ದ

ಪದಮಧ್ಯ ಪರಿಸರದಲ್ಲಿನ 'ದ್ದ' ದ್ವಿತ್ವಾಕ್ಷರದ ಬದಲು ದಂತ್ಯಘೋಷಸ್ಪರ್ಶ ವ್ಯಂಜನ 'ದ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಉದ್ದ	ಊದಾ	ಉದ
	ಸಿದ್ದ	ಸಿದಾ	ಸಿದ
	ಎದ್ದ	ಏದಾ	ಎದ
	ಗದ್ದೆ	ಗದೆ	ಗದೆ
	ಸದ್ದು	ಸದೂ	ಸದು
	ಗೆದ್ದ	ಗೆದಾ	ಗೆದ
	ಗೆದ್ದಲು	ಗೆದಾಲು	ಗೆದಲು
	ಗದ್ದಲು	ಗದಾಲು	ಗದಲು
	ಗುದ್ದಲಿ	ಗುದಾಲಿ	ಗುದಲಿ

❁ ಪ್ಪ > ಪ

ಪದಮಧ್ಯ ಪರಿಸರದಲ್ಲಿನ 'ಪ್ಪ' ದ್ವಿತ್ವಾಕ್ಷರದ ಬದಲು ದ್ವ್ಯೋಷ್ಠ್ಯಅಘೋಷಸ್ಪರ್ಶ ವ್ಯಂಜನ 'ಪ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವ್ಯಂಜನವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಪ್ಪ	ಅಪಾ	ಅಪ
	ದಪ್ಪ	ದಪಾ	ದಪ
	ತುಪ್ಪ	ತೂಪಾ	ತುಪ
	ಅಪ್ಪಣೆ	ಅಪಾನೆ	ಅಪನ
	ಚಪ್ಪರ	ಚಪರಾ	ಚಪರ
	ಕುಪ್ಪಸ	ಕುಪಾಸಾ	ಕುಪಸ
	ಚಪ್ಪಾಳೆ	ಚಪಾಲೆ	ಚಪಲೆ
	ಸಪ್ಪಳ	ಸಪಾಲ	ಸಪಲ
	ತೆಪ್ಪಗೆ	ತಪಾಗೆ	ತಪಗ
	ಕೊಪ್ಪರಿಗೆ	ಕೂಪಾರಿಗೆ	ಕೂಪರಿಗ
	ಚಪ್ಪಟೆ	ಚಪಾಟೆ	ಚಪಟೆ
	ಒಪ್ಪಿಗೆ	ವಪೀಗೆ	ವಪಿಗೆ

❁ ಸ್ಸ > ಸ

ಪದಮಧ್ಯ ಪರಿಸರದಲ್ಲಿನ 'ಸ್ಸ' ದ್ವಿತ್ವಾಕ್ಷರದ ಬದಲು ದಂತ್ಯಊಷ್ಮ ವ್ಯಂಜನ 'ಸ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ದೀರ್ಘವಾಗಿ ಓದುತ್ತಾರೆ ಮತ್ತು ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಠಸ್ಸೆ	ಟಾಸೇ	ಟಸ
	ಮನಸ್ಸು	ಮಾನಸೂ	ಮನಸು
	ಆಯಸ್ಸು	ಆಯಾಸೂ	ಆಯಸು
	ವಯಸ್ಸು	ವಾಯಸೂ	ವಯಸು
	ಯಶಸ್ಸು	ಯಾಸಾಸು	ಯಸಸು
	ಧನಸ್ಸು	ದಾನಾಸೂ	ದನಸು
	ತೇಜಸ್ಸು	ತಾಜಸೂ	ತಜಸು
	ಹುಮ್ಮಸ್ಸು	ಊಮಾಸೂ	ಉಮಸು

೫.೨.೩. ಭಿನ್ನರೂಪದ ಒತ್ತಕ್ಷರಗಳು

ಮೂಲಾಕ್ಷರ	ಒತ್ತು	ಭಿನ್ನ ಒತ್ತಕ್ಷರ
ತ	್ತ	ತ್ತ
ನ	್ನ	ನ್ನ
ಮ	್ಮ	ಮ್ಮ
ಯ	್ಯ	ಯ್ಯ
ರ	್ರ	ರ್ರ
ಲ	್ಲ	ಲ್ಲ
	ರ್	

❁ ತ್ತ > ತ

ಪದಮಧ್ಯ ಪರಿಸರದಲ್ಲಿನ 'ತ್ತ' ದ್ವಿತ್ವಾಕ್ಷರದ ಬದಲು ದಂತ್ಯಅಘೋಷಸ್ಪರ್ಶ ವ್ಯಂಜನ 'ತ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವಾಗಿ ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅತ್ತ	ಅತಾ	ಅತ
	ಸುತ್ತ	ಸುತಾ	ಸುತ
	ಹುತ್ತ	ಉತಾ	ಉತ
	ಭತ್ತ	ಬತಾ	ಬತ
	ಕತ್ತಲೆ	ಕತಾಲೇ	ಕತಲೆ
	ಕತ್ತರಿ	ಕತಾರೀ	ಕತರಿ
	ಮೆತ್ತಗೆ	ಮೆತಾಗ	ಮತಗೆ
	ಕತ್ತಲು	ಕತಾಲೂ	ಕತಲು

* ನ್ನ > ನ

ಪದಮಧ್ಯ ಪರಿಸರದಲ್ಲಿನ 'ನ್ನ' ದ್ವಿತ್ವಾಕ್ಷರದ ಬದಲು ದಂತ್ಯ ಅನುನಾಸಿಕ ವ್ಯಂಜನ 'ನ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅನ್ನ	ಅನಾ	ಅನ
	ಚಿನ್ನ	ಚೀನಾ	ಚಿನ
	ಚೆನ್ನ	ಚಾನಾ	ಚನ
	ನನ್ನ	ನಾನಾ	ನನ
	ಭಿನ್ನ	ಬೀನಾ	ಬಿನ
	ಕನ್ನಡ	ಕಾನಾಡ	ಕನಡ
	ಕನ್ನಡಿ	ಕಾನಾಡಿ	ಕನಡಿ
	ಉನ್ನತಿ	ಊನಾತಿ	ಉನತಿ
	ತನ್ನವರು	ತಾನಾವರೂ	ತನವರು

❁ ಮ್ಮ > ಮ

ಪದಮಧ್ಯ ಪರಿಸರದಲ್ಲಿನ 'ಮ್ಮ' ದ್ವಿತ್ವಾಕ್ಷರದ ಬದಲು ಓಷ್ಠ್ಯ ಅನುನಾಸಿಕ ವ್ಯಂಜನ 'ಮ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಮ್ಮ	ಅಮಾ	ಅಮ
	ತಮ್ಮ	ತಮಾ	ತಮ
	ನಮ್ಮ	ನಮಾ	ನಮ
	ನಿಮ್ಮ	ನಿಮಾ	ನಿಮ
	ಗುಮ್ಮ	ಗುಮಾ	ಗುಮ
	ಸುಮ್ಮನೆ	ಸುಮಾನೆ	ಸುಮನೆ
	ಹೆಮ್ಮರ	ಏಮಾರ	ಎಮರ
	ಬೊಮ್ಮ	ಬೂಮಾ	ಬೂಮ
	ಗೊಮ್ಮಟ	ಗೂಮಾಟಾ	ಗೂಮಟ

❁ ಯ್ಯ > ಯ

ಪದಮಧ್ಯ ಪರಿಸರದಲ್ಲಿನ 'ಯ್ಯ' ದ್ವಿತ್ವಾಕ್ಷರದ ಬದಲು ತಾಲವ್ಯ ಅರ್ಧಸ್ವರ ಧ್ವನಿ 'ಯ' ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಯ್ಯ	ಅಯಾ	ಅಯ
	ಅಕ್ಕಯ್ಯ	ಅಕಯಾ	ಅಕಯ
	ರಾಮಯ್ಯ	ರಾಮಾಯಾ	ರಮಯ
	ಕಯ್ಯಾರ	ಕಯಾರಾ	ಕಯರ
	ಉಯ್ಯಾಲೆ	ಊಯಾಲೆ	ಉಯಲ

❁ ಲ್ಲ > ಲ

ಪದಮಧ್ಯ ಪರಿಸರದಲ್ಲಿನ ‘ಲ್ಲ’ ದ್ವಿತ್ವಾಕ್ಷರದ ಬದಲು ದಂತ್ಯಪಾರ್ಶ್ವಿಕ ವ್ಯಂಜನ ‘ಲ’ ಎಂದು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಓದುವಾಗ ದೀರ್ಘವಾಗಿ, ಬರೆಯುವಾಗ ಅಲ್ಪಪ್ರಾಣ ವ್ಯಂಜನವಾಗಿ ಬರೆಯುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಅಲ್ಲ	ಅಲಾ	ಅಲ
	ಇಲ್ಲ	ಈಲಾ	ಇಲ
	ಎಲ್ಲ	ಏಲಾ	ಎಲ
	ಗೊಲ್ಲ	ಗೂಲಾ	ಗೂಲ
	ಪಲ್ಲವಿ	ಪಲಾವೀ	ಪಲವಿ
	ಪಲ್ಲವ	ಪಲಾವಾ	ಪಲವ

❁ ್ರ > Q

ಪದಮಧ್ಯ ಪರಿಸರದಲ್ಲಿನ ‘ ್ರ’ ಸ್ಪರ್ಶ ದ್ವಿತ್ವ ವ್ಯಂಜನವನ್ನು ಲೋಪ ಮಾಡಿ ಓದುತ್ತಾರೆ. ಬರೆಯುವಾಗ ಸರಳೀಕರಿಸಿ ‘ರ’ ವರ್ತ್ಸ್ಯಕಂಪಿತ ವ್ಯಂಜನಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಚಕ್ರ	ಚಕಾ	ಚಕರ
	ಅಗ್ರ	ಅಗಾ	ಅಗರ
	ಉಗ್ರ	ಉಗಾ	ಉಗರ
	ಪತ್ರ	ಪತಾ	ಪತರ
	ತ್ರಾಣ	ತಾನ	ತರನ

❁ ್ತ > Q

ಪದಮಧ್ಯ ಪರಿಸರದಲ್ಲಿನ ‘ ್ತ’ ದ್ವಿತ್ವಾಕ್ಷರವನ್ನು ಲೋಪ ಮಾಡಿ ಓದುತ್ತಾರೆ. ಬರೆಯುವಾಗ ಸರಳೀಕರಿಸಿ ‘ತ’ ದಂತ್ಯಅಘೋಷಸ್ಪರ್ಶ ವ್ಯಂಜನವನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಭಕ್ತ	ಬಾಕಾ	ಬಕುತಿ
	ರಕ್ತ	ರಕಾ	ಠಕುತ
	ಆಪ್ತ	ಆಪಾ	ಆಪತ
	ಮುಕ್ತಿ	ಮಾಕಿ	ಮಕತಿ
	ಶಕ್ತ	ಸಾಕಾ	ಸಕತ

❋ ್ಯ > Q

ಪದಮಧ್ಯ ಪರಿಸರದಲ್ಲಿನ ‘ ್ಯ’ ದ್ವಿತ್ವಾಕ್ಷರವನ್ನು ಲೋಪ ಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉದಾ:	ಐಕ್ಯ	ಆಯಿಕಾ	ಆಯಿಕಾ
	ಅಯೋಗ್ಯ	ಅಯಾಗ	ಅಯಾಗ
	ಅಸತ್ಯ	ಅಸತ	ಅಸತ
	ಅನ್ಯಾಯ	ಅನಯ	ಅನಯ

❋ ಷ್ಟ / ಷ್ಠ > Q

ಪದಮಧ್ಯ ಪರಿಸರದಲ್ಲಿ ‘ಟ’ ಮತ್ತು ‘ ಠ ’ ದ್ವಿತ್ವಾಕ್ಷರವನ್ನು ಲೋಪಮಾಡಿ ಓದುತ್ತಾರೆ. ಬರೆಯುವಾಗ ಮೂರ್ಧನ್ಯ ವ್ಯಂಜನ ‘ಟ’ ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

	ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
	ಕಷ್ಟ	ಕಸ	ಕಟ
	ಎಷ್ಟು	ಏಸು	ಎಟು
	ಕನಿಷ್ಟ	ಕನಿಸ	ಕನಿಟ
	ವರಿಷ್ಠ	ವರಿಸ	ವರಿಟ
	ಗರಿಷ್ಠ	ಗರಿಸ	ಗರಿಟ

❀ ್ಮ > Q

ಪದಮಧ್ಯ ಪರಿಸರದಲ್ಲಿ '್ಮ' ದ್ವಿತ್ವಾಕ್ಷರವನ್ನು ಲೋಪಮಾಡಿ ಓದುತ್ತಾರೆ. ಬರೆಯುವಾಗ ಓಷ್ಠ್ಯ ಅನುನಾಸಿಕ ವ್ಯಂಜನ 'ಮ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಆತ್ಮ	ಆತಾ	ಆತಮ
ಪದ್ಮ	ಪದಾ	ಪದಮ
ಭಸ್ಮ	ಬಸಾ	ಬಸಮ
ಕಲ್ಮಶ	ಕಲಸಾ	ಕಲುಮಸ
ಸನ್ಮಾನ	ಸನಾನಾ	ಸನಮನ

❀ ರ್ > Q

ಪದಮಧ್ಯ ಪರಿಸರದಲ್ಲಿ 'ರ್' ದ್ವಿತ್ವಾಕ್ಷರವನ್ನು ಲೋಪ ಮಾಡಿ ಓದುತ್ತಾರೆ. ಬರೆಯುವಾಗ ವರ್ತ್ಸ್ಯಕಂಪಿತ ವ್ಯಂಜನ 'ರ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಧರ್ಮ	ದಮಾ	ದರಮ
ಕಾರ್ಖಾನೆ	ಕಾಕಾನೆ	ಕಾರಕಾನೆ
ಕರ್ತಾರ	ಕತಾರಾ	ತರತರ
ಚರ್ಮ	ಚಮಾ	ಚರಮ
ಕಾರ್ಮುಗಿಲು	ಕಾಮುಗೀಲು	ಕಾರಮುಗಿಲು

❀ ್ರ > Q

ಪದಮಧ್ಯ ಪರಿಸರದಲ್ಲಿ '್ರ' ದ್ವಿತ್ವಾಕ್ಷರವನ್ನು ಲೋಪಮಾಡಿ ಓದುತ್ತಾರೆ. ಬರೆಯುವಾಗ ಸರಳೀಕರಿಸಿ ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಉತ್ಸವ	ಉತ್ತವ	ಉತಸವ
ಉತ್ಸಾಹ	ಉತ್ತಾಹ	ಉತಸಅ
ವತ್ಸಲ	ವತ್ತಲ	ವತಸಲ
ಉತ್ಸುಕ	ಉತ್ತುಕ	ಉತಸುಕ

❁ ್ಷ > Q

ಪದಮಧ್ಯ ಪರಿಸರದಲ್ಲಿ '್ಷ' ದ್ವಿತ್ವಾಕ್ಷರವನ್ನು ಲೋಪಮಾಡಿ ತಾಲವ್ಯಅಘೋಷ ಈಷತ್‌ಸ್ಪರ್ಶ ವ್ಯಂಜನ 'ಚ' ಧ್ವನಿಯನ್ನು ಓದುತ್ತಾರೆ. ಬರೆಯುವಾಗ ಕಂಠ್ಯಅಘೋಷಸ್ಪರ್ಶ ವ್ಯಂಜನ 'ಕ' ಧ್ವನಿಯನ್ನು ಲೋಪಮಾಡಿ ಮೂರ್ಧನ್ಯಊಷ್ಮ ವ್ಯಂಜನ 'ಷ' ಧ್ವನಿಯನ್ನು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಕ್ಷಮ	ಚಮಾ	ಷಮ
ಕ್ಷಯ	ಚಯ	ಷಯ
ಕ್ಷತ್ರಿಯ	ಚತ್ರಿಯ	ಷತಿಯ
ಕ್ಷಮಿಸು	ಚಮಿಸು	ಷಮಿಸು

❁ ಕ್ಷ > ಸಿ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಪಕ್ಷಿ	ಪಕ್ಸಿ	ಪಷಿ
ಸಾಕ್ಷಿ	ಸಾಕ್ಸಿ	ಸಷಿ
ಪಕ್ಷ	ಪಕ್ಸ	ಪಷ
ಅಕ್ಷತೆ	ಅಕ್ಸತೆ	ಅಷತೆ
ನಕ್ಷತ್ರ	ನಕ್ಸತ	ನಷತ
ರಕ್ಷಕ	ರಕ್ಸಕ	ರಷತ
ಅಕ್ಷರ	ಅಕ್ಸರ	ಅಷರ

❋ ್ಛ > Q

ಪದಮಧ್ಯ ಪರಿಸರದಲ್ಲಿ ‘ ್ಛ ’ ದ್ವಿತ್ವಾಕ್ಷರವನ್ನು ಲೋಪಮಾಡಿ ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಪಚ್ಛೆ	ಪಚೇ	ಪಚೆ
ಇಚ್ಛಿಸು	ಇಚೀಸು	ಇಚಿಸು

❋ ೃ > Q

ಪದಮಧ್ಯ ಪರಿಸರದಲ್ಲಿ ‘ ೃ ’ ಸಂಯುಕ್ತ ವ್ಯಂಜನವನ್ನು ಲೋಪಮಾಡಿ ಓದುತ್ತಾರೆ. ಬರೆಯುವಾಗ ‘ಉ’ ಕಾರ ಯುಕ್ತವಾಗಿ ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದರಿಂದ ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಪದಮಧ್ಯ ಪರಿಸರ

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಗೃಹ	ಗಹ	ಗುಹ
ಕೃಪೆ	ಕಪೆ	ಕುಪೆ
ಶೃತಿ	ಸತಿ	ಸುತಿ
ಬೃಹತ್	ಬಹತ	ಬುಹತ
ತೃತೀಯ	ತತೀಯ	ತುತಿಯ

೫.೩. ಕಾರಣಗಳು

೧. ಲಂಬಾಣಿ ಮಕ್ಕಳಿಗೆ ಕನ್ನಡ ಭಾಷೆಯ ಜ್ಞಾನದ ಕೊರತೆಯ ಕಾರಣದಿಂದ ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಓದುವಲ್ಲಿ ಮತ್ತು ಬರೆಯುವಲ್ಲಿ ವ್ಯತ್ಯಾಸ ಮಾಡುತ್ತಿದ್ದಾರೆ.

೨. ಗುಣಿತಾಕ್ಷರಗಳ ಮತ್ತು ಒತ್ತಕ್ಷರಗಳ ನಡುವೆ ಇರುವ ರಚನೆಯಲ್ಲಿನ ಅಲ್ಪ ಸಾಮ್ಯತೆಯನ್ನು ಗುರುತಿಸುವಲ್ಲಿ ಮತ್ತು ಉಚ್ಚಾರಣೆಯಲ್ಲಿನ ಅಲ್ಪ ವ್ಯತ್ಯಾಸವನ್ನು ಗ್ರಹಿಸುವಲ್ಲಿ ಲಂಬಾಣಿ ಮಕ್ಕಳಿಗೆ ಸಾಧ್ಯವಾಗದಿರುವ ಕಾರಣ ಓದುವಲ್ಲಿ ಮತ್ತು ಬರೆಯುವಲ್ಲಿ ಸಮಸ್ಯೆಯನ್ನು ಅನುಭವಿಸುತ್ತಿದ್ದಾರೆ.

೩. ಶಿಕ್ಷಕರು ಗುಣಿತಾಕ್ಷರ ಮತ್ತು ಒತ್ತಕ್ಷರಗಳ ಉಚ್ಚಾರಣೆಯನ್ನು ಬರವಣಿಗೆಯ ಭಿನ್ನ ಭಿನ್ನರೂಪಗಳನ್ನು ಸ್ಪಷ್ಟವಾಗಿ ಮಕ್ಕಳಿಗೆ ಮನಮುಟ್ಟುವಂತೆ ಬೋಧಿಸದಿರುವುದು.

೪. ಮೂಲಾಕ್ಷರಕ್ಕೂ ಮತ್ತು ಗುಣಿತಾಕ್ಷರಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಉಚ್ಚಾರಣೆ ಮಾಡಿ ಶಿಕ್ಷಕರು ಬೋಧಿಸದಿರುವುದು ಕಾರಣವಾಗಿದೆ.

೫. ಅಲ್ಪ ವ್ಯತ್ಯಾಸವಿರುವ ಮೂಲಾಕ್ಷರ ಮತ್ತು ಗುಣಿತಾಕ್ಷರ ಪದಗಳನ್ನು ಬರೆಸದೆ, ಅವುಗಳ ಅರ್ಥ ವ್ಯತ್ಯಾಸವನ್ನು ಶಿಕ್ಷಕರು ಮಕ್ಕಳಿಗೆ ಪದೇ ಪದೇ ತಿಳಿಸದೆ ಬರೆಸದಿರುವುದು.

೬. ಲಂಬಾಣಿ ಮಕ್ಕಳು ಮೂರು, ನಾಲ್ಕು ವರ್ಷಗಳವರೆಗೆ ಶಾಲಾ ಆವರಣದಲ್ಲಿ ಕನ್ನಡ ಭಾಷೆಯ ಬಗ್ಗೆ ಬೋಧನೆಯನ್ನು ಕೇಳಿದರೂ ತಮ್ಮ ಲಂಬಾಣಿ ಭಾಷೆಯ ಪ್ರಭಾವದಿಂದ ಆಚೆ ಬರದಿರುವುದು.

೭. ಲಂಬಾಣಿ ಮಕ್ಕಳು ಸಹ ಶಿಕ್ಷಕರು ಹೇಳಿದ ಮನೆಗೆಲಸವನ್ನು ಮಾಡದಿರುವುದು, ತಮಗೆ ಆಗುವ ಸಮಸ್ಯೆಗಳನ್ನು ಶಿಕ್ಷಕರ ಹತ್ತಿರ ಹೇಳದಿರುವುದು ಸಹ ಕಾರಣವಾಗಿದೆ.

೮. ಮಕ್ಕಳ ನಿರಾಸಕ್ತಿ, ಗೈರುಹಾಜರಿ, ಭಾಷೆಯ ಗೊಂದಲ ಇವೆಲ್ಲ ಕಾರಣದಿಂದಲೂ ಮಕ್ಕಳು ಕಲಿಕೆ ಯಲ್ಲಿ ಹಿಂದುಳಿಯಲು ಕಾರಣವಾಗಿದೆ.

೯. ಲಂಬಾಣಿ ಭಾಷೆಯಲ್ಲಿ ಸಜಾತಿ ದ್ವಿತ್ವಾಕ್ಷರ ಪದಗಳು ಕಡಿಮೆ. ಹಾಗೆ ವಿಜಾತಿ ದ್ವಿತ್ವಾಕ್ಷರ ಪದ ಗಳು ಕಂಡುಬರುವುದಿಲ್ಲ. ಒಂದು ವೇಳೆ ಕನ್ನಡ ಭಾಷೆಯಿಂದ ಸ್ವೀಕರಣ ಮಾಡಿಕೊಂಡರೂ ದ್ವಿತ್ವಾಕ್ಷರವಾಗಿ ಹೇಳದೆ ಸರಳೀಕರಿಸಿ ಬಳಕೆ ಮಾಡುತ್ತಾರೆ. ಈ ಕಾರಣದಿಂದ ಲಂಬಾಣಿ ಭಾಷಿಕ ಮಕ್ಕಳು ದ್ವಿತ್ವಾಕ್ಷರಗಳನ್ನು ಓದುವಲ್ಲಿ ಮತ್ತು ಬರೆಯುವಲ್ಲಿ ವ್ಯತ್ಯಾಸ ಮಾಡುತ್ತಾರೆ.

೧೦. ಶಿಕ್ಷಕರು ಸಂಯುಕ್ತಾಕ್ಷರಗಳಲ್ಲಿನ ವಿವಿಧ ರೀತಿಯ ಒತ್ತಕ್ಷರಗಳ ಮಾದರಿಗಳನ್ನು ಸ್ಪಷ್ಟವಾಗಿ ಮಕ್ಕಳಿಗೆ ಓದುವ ಮತ್ತು ಬರೆಯುವಲ್ಲಿ ಮನವರಿಕೆ ಮಾಡದಿರುವುದು.

೫.೪. ಪರಿಹಾರೋಪಾಯಗಳು

೧. ಶಿಕ್ಷಕರು ಗುಣಿತಾಕ್ಷರಗಳಲ್ಲಿನ ವ್ಯತ್ಯಾಸ ಮತ್ತು ಒತ್ತಕ್ಷರಗಳಲ್ಲಿನ ವ್ಯತ್ಯಾಸವನ್ನು ಮಕ್ಕಳಿಗೆ ಉದಾಹರಣೆ ಸಹಿತ ಹಂತ ಹಂತವಾಗಿ ಮನದಟ್ಟಾಗುವಂತೆ ಓದಿಸುವುದು ಮತ್ತು ಬರೆಸುವುದನ್ನು ಆಸಕ್ತಿವಹಿಸಿ ಮಾಡಬೇಕು.

೨. ಶಿಕ್ಷಕರು ಎಲ್ಲಾ ಮಕ್ಕಳಿಗೆ ತರಗತಿಗಳಲ್ಲಿ ಒಂದು ಗಂಟೆಯ ಕಾಲ ಯಾವುದಾದರೂ ಮಕ್ಕಳಿಗೆ ಗೊತ್ತಿರುವ ವಿಷಯದ ಕುರಿತು ಕನ್ನಡದಲ್ಲಿಯೆ ಮಾತನಾಡುವಂತೆ ಹೇಳಬೇಕು. ವಿದ್ಯಾರ್ಥಿಗಳು ತಪ್ಪಿದಲ್ಲಿ ಅಥವಾ ಹಿಂಜರಿದಲ್ಲಿ ಶಿಕ್ಷಕರು ಅದನ್ನು ತಿದ್ದುತ್ತಾ ಅವರಿಗೆ ಮನವರಿಕೆ ಮಾಡಿ ಕೊಡಬೇಕು. ಅದೇ ರೀತಿ ಒಂದು ವಿಷಯದ ಕುರಿತು ಮಕ್ಕಳಿಗೆ ಬರೆಯುವಂತೆ ಹೇಳಬೇಕು. ಅಲ್ಲಿ ಮಾಡುವ ಗುಣಿತಾಕ್ಷರ, ಒತ್ತಕ್ಷರ ಮತ್ತು ವ್ಯಾಕರಣ ರಚನೆ ಗುರುತಿಸಿ ಅಂತಹ ತಪ್ಪುಗಳನ್ನು ತಿದ್ದಿ ಹೇಳುವ ಮೂಲಕ ಮಕ್ಕಳಲ್ಲಿ ಆಸಕ್ತಿ ಮೂಡುವಂತೆ ಮಾಡಬೇಕು.

೩. ಶಿಕ್ಷಕರು ಮೂಲಾಕ್ಷರ ಮತ್ತು ಗುಣಿತಾಕ್ಷರಗಳ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ಉಚ್ಚಾರಣೆ ಮಾಡಿ, ಪದಗಳ ಅರ್ಥವ್ಯತ್ಯಾಸವನ್ನು ಹೇಳುತ್ತಾ ಮಕ್ಕಳನ್ನು ಬರವಣಿಗೆಗೆ ತೊಡಗಿಸಬೇಕು.

೪. ಲಂಬಾಣಿ ಮಕ್ಕಳ ಹೆಚ್ಚಿನ ತರಬೇತಿ ಶಾಲಾ ಆವರಣದಲ್ಲೇ ಆಗಬೇಕಾಗಿರುವುದರಿಂದ ಶಿಕ್ಷಕರು ತಾಳ್ಮೆ ವಹಿಸಿ, ಮಕ್ಕಳಿಗೆ ಪ್ರೀತಿಯಿಂದ, ಆಕರ್ಷಕ ಕಥೆ, ಹಾಡುಗಳನ್ನು ಹೇಳುವ ಮೂಲಕ ಕಲಿಕೆಯಲ್ಲಿ ಆಸಕ್ತಿ ಬರುವಂತೆ ಮಕ್ಕಳನ್ನು ಪ್ರಚೋದಿಸಬೇಕು.

೫. ಗುಣಿತಾಕ್ಷರಗಳ ಚಿಹ್ನೆಗಳನ್ನು ಸ್ಪಷ್ಟಪಡಿಸುವುದು. ವ್ಯಂಜನ ಅಕ್ಷರಗಳಿಗೆ ಗುಣಿತ ಚಿಹ್ನೆಗಳನ್ನು ಹಚ್ಚಿದಾಗ ಉಚ್ಚರಿಸಬೇಕಾದ ಕ್ರಮವನ್ನು ಸ್ಪಷ್ಟಪಡಿಸುವುದು. ಈ ಸಂದರ್ಭದಲ್ಲಿ (ಾ) (ಿ) (ೀ) ಹೀಗೆ ಎರಡೆರಡು ಗುಣಿತ ಚಿಹ್ನೆಗಳನ್ನು ವ್ಯಂಜನಾಕ್ಷರಗಳಿಗೆ ಹಚ್ಚಿ ಓದಿಸುವ ಬರೆಸುವ ಅಭ್ಯಾಸ ಮಾಡಿಸುವುದು ಸೂಕ್ತ. ಅನಂತರ ದಾರ-ದರ, ಬೆಲೆ-ಬೆಳೆ, ಬಿಸಿ-ಬೀಸಿ, ಕೂರಿ-ಕುರಿ, ಧನ-ದನ ಮೊದಲಾದ ಮಾದರಿಯಲ್ಲಿ ಜೋಡಿಪದಗಳ ಉಕ್ತಲೇಖನ ನೀಡಿ, ಅರ್ಥವ್ಯತ್ಯಾಸವನ್ನು ಮನದಟ್ಟು ಮಾಡಬೇಕು.

೬. ವಿದ್ಯಾರ್ಥಿಗಳಿಗೆ ಗುಂಪು ಚಟುವಟಿಕೆ ನೀಡುವಂತೆ ಪ್ರತಿಗುಂಪಿಗೂ ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರ ಪದಗಳ ಪಟ್ಟಿಯನ್ನು ನೀಡಿ ಪ್ರತಿಗುಂಪಿನಲ್ಲೂ, ಪ್ರತಿ ವಿದ್ಯಾರ್ಥಿಗೂ ಓದುವ, ಬರೆಯುವ ಅಭ್ಯಾಸ ಮಾಡಿಸಬೇಕು.

೭. ಶಿಕ್ಷಕರು ಮಕ್ಕಳಿಗೆ ಬೋಧನೆ ಮಾಡುವಾಗ ಕೆಲವು ಅಕ್ಷರಗಳನ್ನು ಒತ್ತುಕೊಟ್ಟು ಉಚ್ಚರಿಸುತ್ತಾ ಅವುಗಳನ್ನು ಒತ್ತಕ್ಷರಗಳೆಂದು ಸ್ಪಷ್ಟವಾಗಿ ಮನಮುಟ್ಟುವಂತೆ ಹೇಳಬೇಕು.

೮. ನೇರ ಮೂಲ ಒತ್ತಕ್ಷರದ ಬಗ್ಗೆ ಹೇಳುವಾಗ ನೇರ ವ್ಯಂಜನಾಕ್ಷರಗಳು ಒತ್ತಕ್ಷರಗಳಾಗುತ್ತವೆ ಎಂಬುದರ ಬಗ್ಗೆ ಹೇಳುವುದು. ಪದ ಮತ್ತು ವಾಕ್ಯಗಳನ್ನು ಪದೇ ಪದೇ ಬರೆಸುವುದು ಮತ್ತು ಓದಿಸುವುದು.

೯. ತಲೆಕಟ್ಟಿಲ್ಲದ ಒತ್ತಕ್ಷರಗಳ ಬಗ್ಗೆ ಮತ್ತು ಪದಗಳ ಪಟ್ಟಿ ಅಂತಹ ವಾಕ್ಯಗಳ ಪಟ್ಟಿಯನ್ನು ಮಾಡಿ ಓದಿಸುವುದು ಮತ್ತು ಬರೆಸುವುದು.

೧೦. ಬೇರೆ ಬೇರೆ ಜಾತಿಯ ವ್ಯಂಜನಾಕ್ಷರಗಳು ಒಂದಕ್ಕೊಂದು ಸೇರಿಸಿ ಉಚ್ಚರಿಸುವ ರೀತಿ ಮತ್ತು ಬರೆಯುವ ರೀತಿ ಹೇಳುವುದು. ಇಂತಹ ಪದಗಳ ಪಟ್ಟಿ ಮತ್ತು ವಾಕ್ಯಗಳ ಪಟ್ಟಿಯನ್ನು ಮಾಡಿ ಪದೇ ಪದೇ ಮನವರಿಕೆ ಆಗುವ ಹಾಗೆ ಬರೆಸುವುದು ಮತ್ತು ಓದಿಸುವುದು.

ಅಧ್ಯಾಯ ಆರು

ವ್ಯಾಕಾರಣಾಂಶಗಳು

ಅಧ್ಯಾಯ ೬

ವ್ಯಾಕರಣಾಂಶಗಳು

ಓದು ಮತ್ತು ಬರವಣಿಗೆಯಲ್ಲಿ ವ್ಯಾಕರಣಾಂಶಗಳು

ಭಾಷೆಯ ವೈಜ್ಞಾನಿಕ ಅಧ್ಯಯನವೇ ವ್ಯಾಕರಣ. ಅಂದರೆ ಭಾಷಿಕ ರಚನೆಗಳನ್ನು ವ್ಯವಸ್ಥಿತವಾಗಿ ವಿಶ್ಲೇಷಿಸಿ ಅಧ್ಯಯನ ಮಾಡುವ ಶಾಸ್ತ್ರ. ಒಂದು ಭಾಷೆಯನ್ನು ಕಲಿತು ಹೆಚ್ಚು ಪರಿಣಾಮಕಾರಿಯಾಗಿ ಬಳಸಬೇಕಾದರೆ ಆ ಭಾಷೆಯ ವ್ಯಾಕರಣವನ್ನು ಕಲಿಯಬೇಕಾದದ್ದು ಅತ್ಯಗತ್ಯ. ಅಂದರೆ ಒಂದು ಭಾಷೆಯು ಧ್ವನಿ, ಪದ ಮತ್ತು ವಾಕ್ಯ ರಚನೆಗಳನ್ನು ಹೊಂದಿದ್ದು. ಆ ಭಾಷೆಯಲ್ಲಿನ ವರ್ಣ, ಪದಗಳ ಸ್ವರೂಪ, ಪದ ಸಂಯೋಜನೆ, ಪದಗಳಿಗಿರುವ ಸಂಬಂಧ ಮತ್ತು ಅವು ವಾಕ್ಯದಲ್ಲಿ ನಿರ್ವಹಿಸುವ ಪಾತ್ರ, ಕಾಲ, ಲಿಂಗ, ವಚನ, ಪ್ರತ್ಯಯ ಹೀಗೆ ಮೊದಲಾದವುಗಳಿಗೆ ಸಂಬಂಧಿಸಿದ ಅಧ್ಯಯನವೇ ವ್ಯಾಕರಣ. ಇಂತಹ ವ್ಯಾಕರಣ ಜ್ಞಾನವಿಲ್ಲದ ಭಾಷಾ ಬಳಕೆ ಅರ್ಥಪೂರ್ಣವೆನಿಸಿಕೊಳ್ಳುವುದಿಲ್ಲ. ವ್ಯಾಕರಣಾಂಶವನ್ನು ಕಲಿಸದೆ ಭಾಷಾ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಭಾಷಾ ಬೋಧನೆಯಲ್ಲಿ ವ್ಯಾಕರಣಾಂಶಗಳನ್ನು ಪಠ್ಯವಸ್ತುವಿನ ಜೊತೆಗೆ ಸಾಂದರ್ಭಿಕವಾಗಿ ಬೋಧಿಸಲಾಗುತ್ತದೆ. ಹಾಗೆ ಪಠ್ಯಪುಸ್ತಕಗಳಲ್ಲಿ ಭಾಷಾಭ್ಯಾಸದ ಮೂಲಕ ಕನ್ನಡ ಭಾಷೆಯ ವ್ಯಾಕರಣಾಂಶಗಳನ್ನೆ ಹಂತ ಹಂತವಾಗಿ ಪರಿಚಯಿಸಿ ಕಲಿಸಿ ಕೊಡುವ ಹಿನ್ನೆಲೆಯಲ್ಲಿ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಇಂತಹ ಪಠ್ಯಪುಸ್ತಕಗಳನ್ನು ಕನ್ನಡ ಮಾತೃಭಾಷಿಕ ಮಕ್ಕಳನ್ನು ಮಾತ್ರ ಗಮನದಲ್ಲಿರಿಸಿಕೊಂಡು ರಚನೆ ಮಾಡಲಾಗಿದೆ. ಅದೇ ರೀತಿಯಲ್ಲಿ ಶಿಕ್ಷಕರು ಸಿದ್ದ ಮಾದರಿಯಲ್ಲಿಯೇ ವ್ಯಾಕರಣಾಂಶಗಳ ಬೋಧನೆಯನ್ನು ಮಾಡುತ್ತಿದ್ದಾರೆ. ಆದರೆ ಪ್ರತ್ಯೇಕ ಮಾತೃಭಾಷೆಯನ್ನು ಹೊಂದಿದ ಮತ್ತು ಕನ್ನಡ ಭಾಷಿಕ ಪರಿಸರದಿಂದ ದೂರ ಇದ್ದು, ಜೀವಿಸುವ ಮತ್ತು ಶಿಕ್ಷಣ ಪಡೆಯುತ್ತಿರುವ ಲಂಬಾಣಿ ಭಾಷಿಕ ಮಕ್ಕಳನ್ನು ನಿರ್ಲಕ್ಷಿಸಲಾಗಿದೆ.

ಇಂತಹ ಮಕ್ಕಳಿಗೆ ಶಿಕ್ಷಕರು ಪ್ರತ್ಯೇಕವಾದ ಬೋಧನ ವಿಧಾನಗಳನ್ನು ಅನುಸರಿಸದೆ ಕನ್ನಡ ಮಾತೃಭಾಷಿಕ ಮಕ್ಕಳಿಗೆ ಬೋಧಿಸುವ ರೀತಿಯಲ್ಲಿಯೇ ಕನ್ನಡ ಭಾಷೆಯ ವ್ಯಾಕರಣಾಂಶಗಳನ್ನು ಬೋಧಿಸಲಾಗುತ್ತಿದೆ. ಇಂತಹ ಲಂಬಾಣಿ ಭಾಷಿಕ ಮಕ್ಕಳ ಕನ್ನಡ ಭಾಷೆಯ ವ್ಯಾಕರಣಾಂಶಗಳಲ್ಲಿನ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡುವುದೆ ಪ್ರಸ್ತುತ ಅಧ್ಯಾಯನದ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಚರ್ಚೆ ಮಾಡಿರುವ ವ್ಯಾಕರಣಾಂಶಗಳಿಗೆ ಮಾಹಿತಿಯನ್ನು ೧, ೨, ೩ ಮತ್ತು ೪ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳಲ್ಲಿ ಅಳವಡಿಸಿರುವ ಭಾಷಾಭ್ಯಾಸದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಅಲ್ಲಿ ಅಳವಡಿಸಿರುವ ವ್ಯಾಕರಣಾಂಶಗಳ ಹಲವಾರು ಮಾದರಿ ಪ್ರಶ್ನೆಗಳನ್ನು ಲಂಬಾಣಿ ಭಾಷಿಕ ಮಕ್ಕಳಿಂದ ಓದಿಸಿ ಮತ್ತು ಬರವಣಿಗೆ ಮಾಡಿಸಲಾಗಿದೆ. ಹಾಗೆ ಪಠ್ಯದಲ್ಲಿನ ಒಂದು ವಿಷಯವನ್ನು ಕೊಟ್ಟು ಅದನ್ನು ಅವರದೇ ಆದ ವಾಕ್ಯಗಳಲ್ಲಿ ಬರೆಯಿಸಿ ಮತ್ತು ಓದಿಸಲಾಗಿದೆ. ಅಂತಹ ಸಂದರ್ಭದಲ್ಲಿ ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯಾಕರಣ ವ್ಯತ್ಯಾಸಗಳನ್ನು ಪಟ್ಟಿ ಮಾಡಲಾಗಿದೆ. ಸಾಧ್ಯವಾದ ಕಡೆಗಳಲ್ಲಿ ಕಾರಣಗಳ ಸಹಿತ ಚರ್ಚಿಸಲಾಗಿದೆ. ಕೆಲವು ಕಡೆ ಸಾಧ್ಯತೆ ಕುರಿತು ವಿಶ್ಲೇಷಣೆ ಮಾಡಲಾಗಿದೆ. ಜೊತೆಗೆ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ.

❁ ಈ ಕೆಳಗೆ ಕೊಟ್ಟಿರುವ ಪ್ರಾಸ ಪದಗಳಿಗೆ ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಸರಿಯಾಗಿ ಗುರುತಿಸಿ ಬರೆಯುವಲ್ಲಿ ಲಂಬಾಣಿ ಭಾಷಿಕ ಮಕ್ಕಳಿಗೆ ಕಷ್ಟವಾಗುತ್ತಿದೆ.

[ಸಕ್ಕರೆ, ಮುತ್ತಲು, ಗೆಲುವಿದೆ, ಹಣ, ಬೇವು]

ಕೊಟ್ಟಿರುವ ಪ್ರಾಸಪದ	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಗುರುತಿಸಿ ಬರೆಯುವ ರೂಪ
ಝಣ	ಹಣ	ಬೇವು
ಮಾವು	ಬೇವು	ಹಣ
ಸುತ್ತಲು	ಮುತ್ತಲು	ಸಕ್ಕರೆ
ಅಕ್ಕರೆ	ಸಕ್ಕರೆ	ಗೆಲುವಿದೆ
ಚೆಲುವಿದೆ	ಗೆಲುವಿದೆ	ಮುತ್ತಲು

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸವನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಪ್ರಾಸ ಪದಗಳನ್ನು ಗುರುತಿಸಿ ಬರೆಯುವ ಸಾಮರ್ಥ್ಯ ಇಲ್ಲ ಎಂಬುದು ತಿಳಿದುಬರುತ್ತದೆ. ಇದಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಲ್ಲಿ ಕನ್ನಡ ಭಾಷೆಯ ಪದ ಸಂಪತ್ತಿನ ಜ್ಞಾನ ಅತಿ ಕನಿಷ್ಠ ಮಟ್ಟದಲ್ಲಿರುವುದು. ಹಾಗೆ ಒಂದು ಪ್ರಾಸ ಪದದಂತೆ ಮತ್ತೊಂದು ಪ್ರಾಸ ಪದ ಇರುತ್ತದೆ ಎಂಬ ಅಂಶವನ್ನು ಶಿಕ್ಷಕರು ಮಕ್ಕಳಿಗೆ ಸ್ಪಷ್ಟವಾಗಿ ತಿಳಿಯಪಡಿಸದಿರುವುದು ಮತ್ತು ಮಕ್ಕಳು ಸರಿಯಾಗಿ ಗ್ರಹಿಸದಿರುವುದು ಈ ಎಲ್ಲಾ ಕಾರಣಗಳಿಂದ ಈ ರೀತಿಯ ವ್ಯತ್ಯಾಸವನ್ನು ಎಲ್ಲಾ ಮಕ್ಕಳು ಮಾಡುತ್ತಾರೆ.

❋ ಮಾದರಿಯಲ್ಲಿ ಸೂಚಿಸಿರುವಂತೆ ಈ ಕೆಳಗಿನ ಪದಗಳಿಗೆ ಸೂಕ್ತ ಜೋಡಿ ಪದ ಗುರುತಿಸಿ ಬರೆಯುವಲ್ಲಿ ಲಂಬಾಣಿ ಭಾಷಿಕ ಮಕ್ಕಳು ಸಮಸ್ಯೆಯನ್ನು ಎದುರಿಸುತ್ತಿದ್ದಾರೆ.

ಮಾದರಿ: ಅಚ್ಚು - ಮೆಚ್ಚು

ಜೋಡಿ ಪದ ಬರಹದ ರೂಪ	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಗುರುತಿಸಿ ಬರೆಯುವ ರೂಪ
ಅಕ್ಕ	ಪಕ್ಕ	ಅಣ್ಣ
ಚಿಕ್ಕ	ದೊಡ್ಡ	ಸಣ್ಣ
ಹಾದಿ	ಬೀದಿ	ಹಾದಿ
ಏಳು	ಬೀಳು	ಏಳು
ಆಟ	ಪಾಠ	ಓಟ

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸವನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಜೋಡಿ ಪದಗಳ ಕಲ್ಪನೆ, ತಿಳುವಳಿಕೆಯ ಅಭಾವ ಪದಗಳ ಪ್ರಾರಂಭ, ಪದಗಳ ಮೂಲ ಮತ್ತು ಅಂತ್ಯ ಇವುಗಳನ್ನಾಧರಿಸಿ ಪದಗಳ ನಡುವಣ ಸಾಮ್ಯತೆಯನ್ನು ಅರಿಯುವಲ್ಲಿ ಸಾಮರ್ಥ್ಯ ಇಲ್ಲದ ಕಾರಣ ಮತ್ತು ಅರ್ಥ ವ್ಯತ್ಯಾಸದ ಸ್ಪಷ್ಟತೆಯ ಕೊರತೆಯಿಂದ ಜೋಡಿ ಪದಗಳನ್ನು ಗುರುತಿಸುವ ಮತ್ತು ಬರೆಯುವ ಸಾಮರ್ಥ್ಯ ಇಲ್ಲದಿರುವುದರಿಂದ ಲಂಬಾಣಿ ಭಾಷಿಕ ಮಕ್ಕಳಲ್ಲಿ ಈ ರೀತಿಯ ವ್ಯತ್ಯಾಸ ಕಂಡುಬರುತ್ತಿರಬಹುದು.

❋ ಈ ಕೆಳಗೆ ಕೊಟ್ಟಿರುವ ಮಾದರಿಯಂತೆ ವಿರುದ್ಧಾರ್ಥಕ ಪದಗಳನ್ನು ಬರೆಯುವಲ್ಲಿ ಲಂಬಾಣಿ ಭಾಷಿಕ ಮಕ್ಕಳಿಗೆ ವಿರುದ್ಧಾರ್ಥ ಪದಗಳ ಕಲ್ಪನೆ ಇಲ್ಲದಿರುವುದು ಕೆಳಗಿನ ಉದಾಹರಣೆಗಳಿಂದ ತಿಳಿಯ ಬಹುದು.

ಮಾದರಿ: ಧೈರ್ಯ x ಅಧೈರ್ಯ

ಬರಹದ ರೂಪ	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಗುರುತಿಸಿ ಬರೆಯುವ ರೂಪ
ಉಪಕಾರ	ಅಪಕಾರ	ಅಉಪಕಾರ
ಸಮಾಧಾನ	ಅಸಮಾಧಾನ	ಅಸಮಾಧಾನ
ಹೊಗಳು	ತೆಗಳು	ಅಹೊಗಳು
ನಿಲ್ಲು	ಹೋಗು	ಅನಿಲು
ಆಸೆ	ನಿರಾಸೆ	ಆಸೆ
ಭಯ	ನಿರ್ಭಯ	ಅಬಯ

[illegible]

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಪದಗಳ ಕೊರತೆಯಿಂದ ಮತ್ತು ವಿರುದ್ಧ ಪದಗಳ ಸ್ಪಷ್ಟತೆ ಇಲ್ಲದ ಕಾರಣದಿಂದ ಮಾದರಿಯಲ್ಲಿ ಕೊಟ್ಟಿರುವಂತೆಯೇ 'ಅ' ಅಕ್ಷರವನ್ನು ಸೇರಿಸುತ್ತಾ ಬರೆಯುವುದು ಕಂಡುಬರುತ್ತದೆ.

❋ ಕೊಟ್ಟಿರುವ ಪದ ಗಮನಿಸಿ ಸಮನಾರ್ಥಕ ಪದಗಳನ್ನು ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳಿಗೆ ಸಮನಾರ್ಥಕ ಪದಗಳನ್ನು ಬರೆಯುವ ಸಾಮರ್ಥ್ಯ ಇಲ್ಲದಿರುವುದನ್ನು ಗಮನಿಸಬಹುದು.

ಬರಹದ ರೂಪ	ಸರಿಯಾಗಿ ಬರೆಯಬೇಕಾದ ಸಮನಾರ್ಥಕ ರೂಪಗಳು	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ
ಅಡವಿ	ಕಾಡು, ವನ, ಕಾನನ, ಅರಣ್ಯ	ಕಾಡು
ರಾಜ	ಅರಸ, ನಾಯಕ, ದೊರೆ, ಮಹಾರಾಜ	ರಾಣಿ
ಉಸಿರು	ಜೀವ, ಪ್ರಾಣ,	-
ಆಪತ್ತು	ತೊಂದರೆ, ಕಂಠಕ, ವಿಪತ್ತು	-
ಸಂಪತ್ತು	ಸಿರಿ, ಐಶ್ವರ್ಯ, ಶ್ರೀಮಂತಿಕೆ,	-

ಈ ಮೇಲಿನ ಉದಾಹರಣೆಗಳಲ್ಲಿನ ವ್ಯತ್ಯಾಸವನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಪದಗಳ ಅರ್ಥವನ್ನು ಗ್ರಹಿಸಿದ ಮತ್ತು ಆ ಪದಗಳ ಬೇರೆ ಬೇರೆ ರೂಪಗಳ ತಿಳುವಳಿಕೆ ಇಲ್ಲದಿರುವುದರಿಂದ ಲಂಬಾಣಿ ಭಾಷಿಕ ಮಕ್ಕಳಲ್ಲಿ ಸಮನಾರ್ಥಕ ಪದಗಳ ಸಾಮರ್ಥ್ಯದ ಕೊರತೆ ಇರುವುದರಿಂದ ಈ ತೆರನಾದ ವ್ಯತ್ಯಾಸ ಕಂಡುಬರುವುದು.

❋ ಈ ಕೆಳಗಿನ ಪದಗಳಿಗೆ ಬಹುವಚನ ರೂಪಗಳನ್ನು ಬರೆಯಿರಿ ಎಂಬ ಮಾದರಿಯನ್ನು ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಪದಗಳ ಬಹುವಚನ ರೂಪಗಳನ್ನು ಗುರುತಿಸಿ ಬರೆಯುವಲ್ಲಿ ಸಾಮರ್ಥ್ಯ ಇಲ್ಲದಿರುವುದು ಕಂಡುಬರುತ್ತದೆ.

ಬರಹದ ರೂಪ	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ರಾಜ	ರಾಜರು	ರಾಜಗಳು
ಮಗು	ಮಕ್ಕಳು	ಮಗುಗಳು
ಅಣ್ಣ	ಅಣ್ಣಂದಿರು	ಅಣ್ಣರು
ಅತ್ತೆ	ಅತ್ತೆಯಂದಿರು	ಅತ್ತೆಗಳು
ಬಳೆ	ಬಳೆಗಳು	ಬಳೆಗಳು
ಹಬ್ಬ	ಹಬ್ಬಗಳು	ಹಬ್ಬಗಳು
ನಾನು	ನಾವು	ನೀನು
ಅವನು	ಅವರು	ಅವನು

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣಗಳನ್ನು ಈ ರೀತಿ ಗುರುತಿಸಬಹುದು.

೧. ಲಂಬಾಣಿ ಭಾಷೆಯಲ್ಲಿ ನಾಮಪದಗಳಲ್ಲಿ ಏಕವಚನ ಮತ್ತು ಬಹುವಚನ ರೂಪಗಳಿಗೆ ಭೇದವಿಲ್ಲ. ಸಂದರ್ಭಾನುಸಾರ ಒಂದೇ ಪದವು ಏಕವಚನ ಹಾಗೂ ಬಹುವಚನಗಳೆರಡನ್ನೂ ಸೂಚಿಸುತ್ತದೆ. ಉದಾಹರಣೆಗೆ ಭಾಟಾ ಕಲ್ಲು, ಕಲ್ಲುಗಳು, ಬಳದ ಎತ್ತು ಎತ್ತುಗಳು ಇತ್ಯಾದಿ. ಇದರ ಪ್ರಭಾವ ಲಂಬಾಣಿ ಮಕ್ಕಳಲ್ಲಿರುವುದರಿಂದ ಮಾದರಿಯಲ್ಲಿರುವಂತೆ ಎಲ್ಲ ಪದಗಳನ್ನು ಓದುತ್ತಾರೆ ಮತ್ತು ಬರೆಯುತ್ತಾರೆ.

೨. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಏಕವಚನ ಮತ್ತು ಬಹುವಚನದ ಸ್ಪಷ್ಟತೆ ಇಲ್ಲದಿರುವುದು.

೩. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ತಿಳುವಳಿಕೆ ಮತ್ತು ಬಳಕೆಯ ಪರಿಸರ ಇಲ್ಲದಿರುವುದು.

೪. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ಬಹುವಚನ ಪ್ರತ್ಯಯಗಳಾದ ಗಳು, ಅರು, ಅಂದಿರು ಇವುಗಳ ಬಳಕೆಯ ಸ್ವರೂಪ ಗೊತ್ತಿಲ್ಲದಿರುವುದು.

ಈ ಮೇಲಿನ ಎಲ್ಲಾ ಕಾರಣಗಳಿಂದ ಲಂಬಾಣಿ ಭಾಷಿಕ ಮಕ್ಕಳಲ್ಲಿ ಏಕವಚನ ಮತ್ತು ಬಹುವಚನ ಪದಗಳನ್ನು ಗುರುತಿಸಿ ಓದುವಾಗ ಮತ್ತು ಬರೆಯುವಾಗ ಸಮಸ್ಯೆಗಳು ಕಂಡುಬರುತ್ತಿರುತ್ತವೆ.

❁ ಗುಂಪಿಗೆ ಸೇರದ ಪದಗಳನ್ನು ಗುರುತಿಸಿ ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಸರಿಯಾಗಿ ಗುರುತಿಸಿ ಬರೆಯಲಾರರು.

ಬರಹದ ರೂಪ	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ಕಾಗೆ, ಕೋಗಿಲೆ, ಸಿಂಹ, ಗುಬ್ಬಿ	ಸಿಂಹ	ಕಾಕೆ
ನಾಯಿ, ಮರ, ಬೆಕ್ಕು, ಕೋತಿ	ಮರ	ಕೋತಿ
ಬಾಲ, ರೆಕ್ಕೆ, ಪುಕ್ಕ, ಗರಿ	ಬಾಲ	ಪುಕ್ಕ
ರಾಜ, ಅರಸ, ದೊರೆ, ನಾಯಕ	ನಾಯಕ	ದೊರೆ
ಕೆಂಪು, ಸೊಂಪು, ಹಳದಿ, ಬಿಳುಪು	ಸೊಂಪು	ಹಳದಿ
ತೋಟ, ಎಲೆ, ಹೂ, ಹಣ್ಣು	ತೋಟ	ಹೂ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಈ ಕೆಳಗಿನಂತೆ ಗುರುತಿಸಬಹುದು.

೧. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿನ ಪದಗಳನ್ನು ಗುರುತಿಸಿ ಸ್ಪಷ್ಟ ಪಡಿಸಿ ಕೊಳ್ಳದಿರುವುದು.

೨. ಪದಗಳ ನಡುವೆ ಇರುವ ಭಿನ್ನತೆಯನ್ನು ಗ್ರಹಿಸದಿರುವುದು.

೩. ಪದಗಳ ನಡುವೆ ಇರುವ ಸಂಬಂಧವನ್ನು ಗ್ರಹಿಸದೆ, ಸಂಬಂಧವಿಲ್ಲದ ಅಥವಾ ಆ ಗುಂಪಿನಿಂದ ಹೊರತಾದ ಪದಗಳನ್ನು ಗುರುತಿಸುವುದು.

ಈ ಮೇಲಿನ ಎಲ್ಲಾ ಕಾರಣಗಳಿಂದ ಲಂಬಾಣಿ ಭಾಷಿಕ ಮಕ್ಕಳು ಗುಂಪಿಗೆ ಸೇರದ ಪದಗಳನ್ನು ಗುರುತಿಸಿ ಬರೆಯುವ ಸಾಮರ್ಥ್ಯ ಇಲ್ಲದೆ ಈ ರೀತಿಯ ವ್ಯತ್ಯಾಸವನ್ನು ಮಾಡಬಹುದು.

❁ ಕೊಟ್ಟಿರುವ ವಾಕ್ಯ ಕೋಷ್ಟಕವನ್ನು ಗಮನವಿಟ್ಟು ಓದಿ ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳಿಗೆ ಸರಿಯಾಗಿ ವಾಕ್ಯರಚನೆ ಮಾಡುವ ಸಾಮರ್ಥ್ಯ ಇಲ್ಲದಿರುವುದು ಅಥವಾ ಗೊಂದಲ ವಿರುವುದು ಕಂಡುಬರುತ್ತದೆ.

ಕೋಷ್ಟಕ			**ಸರಿಯಾದ ರೂಪ**	**ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ**
ನಾನು		- ತ್ತೇನೆ	ನಾನು ಓಡುತ್ತೇನೆ	ನಾನು ಓಡುತ್ತೆನೆ
ನೀನು		- ತ್ತೀ	ನೀನು ಓಡುತ್ತೀ	ನೀನು ಓಡುತಾನೆ
ಅವನು	ಓಡು	- ತ್ತಾನೆ	ಅವನು ಓಡುತ್ತಾನೆ	ಅವನು ಓಡುತೆನೆ
ಅವಳು		- ತ್ತಾಳೆ	ಅವಳು ಓಡುತ್ತಾಳೆ	ಅವಳು ಓಡುತ್ತದೆ
ಅದು		- ತ್ತದೆ	ಅದು ಓಡುತ್ತದೆ	ಅದು ಓಡುತ್ತಿ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿನ ವಾಕ್ಯರಚನೆಯ ಸ್ಪಷ್ಟತೆ ಇಲ್ಲದಿರುವುದು ಹಾಗೂ ಪದಗಳನ್ನು ಬಳಸಿ ವಾಕ್ಯರಚನೆ ಮಾಡುವ ಗ್ರಹಿಕೆಯಲ್ಲಿ ಅರ್ಥ ಸ್ಪಷ್ಟತೆ ಇಲ್ಲದೆ ಗೊಂದಲದಿಂದ ಈ ತೆರನಾದ ವ್ಯತ್ಯಾಸವನ್ನು ಲಂಬಾಣಿ ಮಕ್ಕಳು ಮಾಡುವುದು ಕಂಡುಬರುತ್ತದೆ.

❁ ಚೌಕಟ್ಟಿನಲ್ಲಿರುವ ಪದಗಳನ್ನು ಉಪಯೋಗಿಸಿ ವಾಕ್ಯ ಮಾಡಿ ಓದಿ ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳಿಗೆ ಎಲ್ಲಾ ಪದಗಳನ್ನು ಬಳಸಿಕೊಂಡು ವಾಕ್ಯರಚನೆ ಮಾಡಿ ಓದುವುದು ಮತ್ತು ಬರೆಯುವುದು ಕಷ್ಟವಾಗುತ್ತದೆ.

ಮಾದರಿ ಕೋಷ್ಟಕ				ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ಜಗದೀಶ	ಶಾಲೆ	ಗೆ	ಹೋಗುತ್ತಾನೆ / ಹೋಗುತ್ತಾಳೆ	ಜಗದೀಶ ಶಾಲೆ ಹೋಗುತಾನೆ
ಝುರೀನಾ	ಊರು			ಝುರೀನಾ ಊರು ಹೋಗುತಾನೆ
ಜಮುನಾ	ಮನೆ			ಜಮುನಾ ಮನೆಗೆ ಹೋಗುತಾನೆ
ಝುಕೀರ	ಅಂಗಡಿ			ಝುಕೀರ ಅಂಗಡಿ ಹೋಗುತಾನೆ
ಜಾನ್	ಜಾತ್ರೆ			ಜಾನ್ ಜಾತ್ರೆಗೆ ಹೋಗುತಾನೆ

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಕೊಟ್ಟಿರುವ ಕೋಷ್ಟಕದಲ್ಲಿನ ಪದಗಳನ್ನೇ ಉಪಯೋಗಿಸಿ ವಾಕ್ಯ ರಚನೆ ಮಾಡುವಲ್ಲಿ ಗೊಂದಲವನ್ನು ಅನುಭವಿಸುತ್ತಿದ್ದಾರೆ. ಹಾಗೆ ವಿಭಕ್ತಿ ಪ್ರತ್ಯವನ್ನು ಬಳಕೆಮಾಡುವ ಸಾಮರ್ಥ್ಯ ಇಲ್ಲದರಿಂದ ಈ ತೆರನಾದ ವ್ಯತ್ಯಾಸವನ್ನು ಮಾಡುತ್ತಾರೆ.

❀ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯತ್ಯಾಸವನ್ನು ಇಲ್ಲಿ ಗಮನಿಸಬಹುದು.

ಪದಗಳು	ಸರಿಯಾದ ವಿಂಗಡಿಸಿದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ತವರೂರು	ತವರು + ಊರು	ತವರೂ + ರು
ಬೇರೂರು	ಬೇರು + ಊರು	ಬೇರೂ + ರು
ನಮ್ಮೂರು	ನಮ್ಮ + ಊರು	ನಮೂ + ರು
ಬೀಡಿದು	ಬೀಡು + ಇದು	ಬೀಡಿ + ದು
ನಾಡಿದು	ನಾಡು + ಇದು	ನಾಡಿ + ದು
ಮನೆಯಿಂದ	ಮನೆ + ಇಂದ	ಮನೆ+ ಯಿಂದ
ಅಗ್ಗಿಷ್ಟಿಕೆಯಿಂದ	ಅಗ್ಗಿಷ್ಟಿಕೆ + ಇಂದ	ಅಗಿಷಿಕೆ + ಯಿಂದ
ಗುಣವಂತ	ಗುಣ + ವಂತ	ಗುಣ + ವಂತ
ಮಳೆಗಾಲ	ಮಳೆ + ಕಾಲ	ಮಳೆ + ಗಾಲ
ಬರಗಾಲ	ಬರ + ಕಾಲ	ಬರ + ಗಾಲ
ಶಾಲೆಯಲ್ಲಿ	ಶಾಲೆ + ಅಲ್ಲಿ	ಶಾಲೆಯ + ಲ್ಲಿ
ರಸ್ತೆಯನ್ನು	ರಸ್ತೆ + ಅನ್ನು	ರಸ್ತೆಯ + ನು

ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಪದಗಳನ್ನು ಬಿಡಿಸಿ ಬರೆಯುವ ಸಾಮರ್ಥ್ಯ ಇಲ್ಲದಿರುವುದು ಹಾಗೂ ಪದಗಳನ್ನು ಬಿಡಿಸಿ ಬರೆಯುವ ಸ್ಪಷ್ಟ ಕಲ್ಪನೆ ಇಲ್ಲದಿರುವುದು. ಪ್ರಕೃತಿ ಮತ್ತು ಪ್ರತ್ಯಯಗಳ ಬಗೆಗೆ ಸ್ಪಷ್ಟವಾಗಿ ತಿಳಿಯದೆ ಇರುವುದರಿಂದ ಈ ತೆರನಾದ ವ್ಯತ್ಯಾಸ ಮಾಡಲು ಕಾರಣವಿರಬಹುದು.

❋ ಕೊಟ್ಟಿರುವ ಪದಗಳನ್ನು ಸೇರಿಸಿ ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಮಾಡುವ ವ್ಯತ್ಯಾಸವನ್ನು ಇಲ್ಲಿ ಗಮನಿಸಬಹುದು.

ಪದಗಳು	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ಮೇಲೆ + ಏಳು	ಮೇಲೇಳು	ಮೇಲೆಏಳು
ನಾನು + ಒಬ್ಬ	ನಾನೊಬ್ಬ	ನಾನುಒಬ್ಬ
ನಿನ್ನ + ಅಂಥ	ನಿನ್ನಂಥ	ನಿನ್ನಅಂಥ
ಮುಗಿ + ಇಸು	ಮುಗಿಸು	ಮುಗಿಇಸು
ಓದು + ಇಸು	ಓದಿಸು	ಓದುಇಸು
ಕೋಳಿ + ಇಂದ	ಕೋಳಿಯಿಂದ	ಕೋಳಿಇಂದ
ಚಳಿ + ಕಾಲ	ಚಳಿಗಾಲ	ಚಳಿಕಾಲ
ಅರ್ಥ + ಆಯಿತು	ಅರ್ಥವಾಯಿತು	ಅರ್ಥಆಯಿತು
ಒಂದು + ಅಲ್ಲ	ಒಂದಲ್ಲ	ಒಂದುಅಲ
ಎದುರು + ಆಯಿತು	ಎದುರಾಯಿತು	ಎದುರುಆಯಿತು
ಶಾಲೆ + ಅಲ್ಲಿ	ಶಾಲೆಯಲ್ಲಿ	ಶಾಲೆಅಲ್ಲಿ
ಗೂಡು + ಆಸೆ	ಗೂಡಾಸೆ	ಗೂಡುಆಸೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳಿಗೆ ಪದಗಳನ್ನು ಸೇರಿಸಿ ಬರೆಯುವ ಸಾಮರ್ಥ್ಯ ಇಲ್ಲ ಹಾಗೂ ಪದಗಳನ್ನು ಯಾವ ರೀತಿ ಸೇರಿಸಿ ಬರೆಯಬೇಕು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದಿರುವ ಕಾರಣ ಈ ರೀತಿಯ ವ್ಯತ್ಯಾಸ ಮಾಡುವರು. ಹಾಗೂ ಕನ್ನಡ ಭಾಷಾ ಬೋಧಕರು ಭಾಷಾ ರಚನೆಗಳನ್ನು ಸರಿಯಾಗಿ ಸ್ಪಷ್ಟಪಡಿಸದಿರುವುದು ಕಾರಣವಿರಬಹುದು.

❋ ಕೆಳಗೆ ಆವರಣದಲ್ಲಿ ಕೊಟ್ಟಿರುವ ವಿವಿಧ ಲಿಂಗರೂಪಗಳನ್ನು ಗುರುತಿಸಿ ಬರೆಯಿರಿ.

[ರಾಮು, ಗಂಗೆ, ಮಗು, ಶಿಕ್ಷಕ, ಗಾಯಕಿ, ಎಮ್ಮೆ, ಗೆಳೆಯ, ಎತ್ತು, ಕೋಣ, ಟೀಚರ್, ರಾಧ, ನಾಯಿ, ಮೇಡಂ, ಕುದುರೆ, ಸೋದರ, ಶಿಕ್ಷಕಿ, ಅವನು, ಅವಳು, ಯುವತಿ, ಸದಸ್ಯೆ, ಬುಟ್ಟಿ, ದೋಬಿ]

ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ

ಪುಲ್ಲಿಂಗ	ಸ್ತ್ರೀಲಿಂಗ	ನಪುಂಸಕಲಿಂಗ
ರಾಮ	ಗಂಗೆ	
ಮಗು	ಶಿಕ್ಷಕ	
ಎಮ್ಮೆ	ಅವನು	
ನಾಯಿ	ಗೆಳೆಯ	
ಎತ್ತು	ಕೋಣ	
ಕುದುರೆ	ರಾಧ	
ಕೋಣ	ಅವಳು	
ಟೀಚರ್	ಬುಟ್ಟಿ	
ಗಾಯಕಿ	ದೋಬಿ	
ಸದಸ್ಯೆ		

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ೧, ೨, ೩ ಮತ್ತು ೪ನೇ ತರಗತಿಯ ಲಂಬಾಣಿ ಭಾಷಿಕ ಮಕ್ಕಳಿಗೆ ಮೇಲಿನಂತೆ ಪದಗಳ ಪಟ್ಟಿ ಕೊಟ್ಟು ಪುಲ್ಲಿಂಗ, ಸ್ತ್ರೀಲೀಂಗ, ನಪುಂಸಕಲಿಂಗ ಪದಗಳನ್ನಾಗಿ ವಿಂಗಡಿಸಿ ಓದಲು ಮತ್ತು ಬರೆಯಲು ಕೇಳಿದಾಗ ಮೇಲಿನಂತೆ ವ್ಯತ್ಯಾಸ ಮಾಡಲು ಕಾರಣಗಳನ್ನು ಊಹಿಸಬಹುದು.

೧. ಕನ್ನಡದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗ ಎಂಬ ಮೂರು ವಿಧಗಳಿವೆ. ಆದರೆ ಲಂಬಾಣಿ ಭಾಷೆಯಲ್ಲಿ ಪುಲ್ಲಿಂಗ ಮತ್ತು ಸ್ತ್ರೀಲಿಂಗ ಎಂಬ ಎರಡು ಲಿಂಗ ಭೇದಗಳಿವೆ. ಆದರೆ ಲಂಬಾಣಿ ಭಾಷೆಯಲ್ಲಿ ನಪುಂಸಕ ಲಿಂಗ ಪ್ರತ್ಯೇಕವಾಗಿ ಇಲ್ಲ. ಆದರೆ ಕನ್ನಡದಲ್ಲಿ ನಿರ್ಜೀವ ವಸ್ತುಗಳಿಗೆ ಸಾಮಾನ್ಯವಾಗಿ ನಪುಂಸಕಲಿಂಗವೆಂದು ಕರೆಯಲಾಗುತ್ತದೆ. ಆದರೆ ಲಂಬಾಣಿ ಭಾಷೆಯಲ್ಲಿ ನಿರ್ಜೀವ ವಸ್ತುಗಳ ಗಾತ್ರಕ್ಕನುಸಾರವಾಗಿ ಲಿಂಗ ವಿಂಗಡಣೆ ಮಾಡುವರು.

೨. ಲಂಬಾಣಿ ಭಾಷೆಯಲ್ಲಿ ಶಬ್ದಾಂತ್ಯದಲ್ಲಿ 'ಇ' ಕಾರಾಂತದಿಂದ ಅಂತ್ಯವಾದರೆ ಅಂತಹ ಪದಗಳಿಗೆ ಸ್ತ್ರೀಲಿಂಗವೆಂದು. ಶಬ್ದಾಂತ್ಯದಲ್ಲಿ 'ಆ' ಕಾರದಿಂದ ಅಂತ್ಯವಾದರೆ ಅಂತಹ ಪದಗಳನ್ನು ಪುಲ್ಲಿಂಗವೆಂದು ಭಾವಿಸುವರು. ವೃತ್ತಿಯಾಧಾರಿತ ವ್ಯಕ್ತಿಗಳನ್ನು ನಾವು ಪುಲ್ಲಿಂಗವೆಂದು ಭಾವಿಸುವುದುಂಟು. ಆದರೆ ಲಂಬಾಣಿ ಭಾಷೆಯಲ್ಲಿ ಇಂತಹವುಗಳನ್ನು ಸ್ತ್ರೀಲಿಂಗವೆಂದು ಭಾವಿಸುವವರು. ಆದ್ದರಿಂದ ಕನ್ನಡ ಭಾಷೆಯಲ್ಲಿನ ಲಿಂಗವ್ಯವಸ್ಥೆಯ ತಿಳುವಳಿಕೆಯಿಲ್ಲದ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯಲ್ಲಿನ ಪದಗಳನ್ನು ಓದುವಾಗ ಮತ್ತು ಬರೆಯುವಾಗ ಗೊಂದಲ ಉಂಟಾಗುತ್ತದೆ. ಮತ್ತು ಅವರ ಮಾತೃಭಾಷೆಯ ಪ್ರಭಾವದಿಂದ ಹಾಗೂ ಕನ್ನಡ ಭಾಷೆಯ ರಚನೆಯಲ್ಲಿನ ಸ್ಪಷ್ಟ ತಿಳುವಳಿಕೆ ಇಲ್ಲದೆ ಗೊಂದಲದಿಂದ ಈ ರೀತಿಯ ವ್ಯತ್ಯಾಸವನ್ನು ಮಾಡುವರು.

❁ ಈ ಕೆಳಗಿನ ಕೋಷ್ಟಕದಲ್ಲಿರುವ ಪದಗಳನ್ನು ಗಮನಿಸಿ ಸರಿಯಾದ ವಾಕ್ಯ ಮಾಡಿ ಬರೆಯಿರಿ ಎಂಬ ಮಾದರಿಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಕನ್ನಡದಲ್ಲಿರುವ ಎಲ್ಲಾ ಸರ್ವನಾಮ ಪದಗಳಿಗೂ ಒಂದೇ ರೀತಿಯ ಕ್ರಿಯಾ ಪದವನ್ನು ಓದುತ್ತಾರೆ ಮತ್ತು ಬರೆಯುತ್ತಾರೆ. ಈ ಒಂದು ವ್ಯತ್ಯಾಸವನ್ನು ಮೂರು ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುತ್ತಾರೆ.

ಮಾದರಿ ಕೋಷ್ಟಕ			ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ನಾನು			ನಾನು ಜೇನನ್ನು ಸವಿಯುತ್ತೇನೆ	ನಾನು ಜೇನು ಸವಿತಾನೆ
ನಾವು			ನಾವು ಜೇನನ್ನು ಸವಿಯುತ್ತೇವೆ	ನಾವು ಜೇನು ಸವಿತಾನೆ
ನೀನು			ನೀನು ಜೇನನ್ನು ಸವಿಯುತ್ತೀಯ	ನೀನು ಜೇನು ಸವಿತಾನೆ
ನೀವು	ಜೇನು	ಸವಿ	ನೀವು ಜೇನನ್ನು ಸವಿಯುತ್ತೀರಿ	ನೀವು ಜೇನು ಸವಿತಾನೆ
ಅವನು			ಅವನು ಜೇನನ್ನು ಸವಿಯುತ್ತಾನೆ	ಅವನು ಜೇನು ಸವಿತಾನೆ
ಅವಳು			ಅವಳು ಜೇನನ್ನು ಸವಿಯುತ್ತಾಳೆ	ಅವಳು ಜೇನು ಸವಿತಾನೆ
ಅವರು			ಅವರು ಜೇನನ್ನು ಸವಿಯುತ್ತಾರೆ	ಅವರು ಜೇನು ಸವಿತಾನೆ
ಅದು			ಅದು ಜೇನನ್ನು ಸವಿಯುತ್ತದೆ	ಅದು ಜೇನು ಸವಿತಾನೆ
ಇವು			ಇವು ಜೇನನ್ನು ಸವಿಯುತ್ತವೆ	ಇವು ಜೇನು ಸವಿತಾನೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣಗಳನ್ನು ಈ ಕೆಳಕಂಡಂತೆ ಊಹಿಸಬಹುದು.

೧. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿನ ವಿಭಕ್ತಿ ಪ್ರತ್ಯಯಗಳ ಸ್ಪಷ್ಟ ತಿಳುವಳಿಕೆ ಇಲ್ಲದಿರುವುದು ಮತ್ತು ಅವುಗಳನ್ನು ಶಿಕ್ಷಕರು ಸರಿಯಾಗಿ ತಿಳಿಸಿಕೊಡದಿರುವುದು.

೨. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿರುವ ಸರ್ವನಾಮಗಳ ಲಿಂಗ, ವಚನಗಳ ಸ್ಪಷ್ಟ ತಿಳುವಳಿಕೆ ಇಲ್ಲದೆ ಇರುವುದರಿಂದ, ಯಾವ ಯಾವ ಸರ್ವನಾಮಗಳಿಗೆ ಯಾವ ಯಾವ ಕ್ರಿಯಾ ಪ್ರತ್ಯಯಗಳು ಬರುತ್ತವೆ ಎಂಬ ಕ್ರಿಯಾ ಪದಗಳ ಪ್ರತ್ಯಯಗಳ ಸ್ಪಷ್ಟ ಅರಿವು ಇಲ್ಲದೆ ಇರುವುದರಿಂದ, ಎಲ್ಲದಕ್ಕೂ ಒಂದೇ ರೀತಿಯ ಕ್ರಿಯಾ ಪ್ರತ್ಯಯ / ಕ್ರಿಯ ಪದವನ್ನು ಬಳಕೆ ಮಾಡಲು ಕಾರಣವಿರಬಹುದು.

೩. ಲಂಬಾಣಿ ಭಾಷೆಯಲ್ಲಿ ಪುರುಷಾರ್ಥಕ ಸರ್ವನಾಮ ಪದಗಳಲ್ಲಿ ಪ್ರಥಮ ಪುರುಷ ಸರ್ವನಾಮ ಪದಗಳಿಗೆ ಕನ್ನಡದಲ್ಲಿರುವಂತೆ ಲಿಂಗ ವಚನ ಭೇದ ಇಲ್ಲ. ಉದಾಹರಣೆಗೆ:

ಕನ್ನಡ ಭಾಷೆ		ಲಂಬಾಣಿ ಭಾಷೆ	
ಏಕವಚನ	ಬಹುವಚನ	ಏಕವಚನ	ಬಹುವಚನ
ಅವನು ಅವಳು	ಅವರು	ಊ	ವೊ
ಅದು	ಅವು		

ಹೀಗೆ ಲಂಬಾಣಿ ಭಾಷಿಕ ಮಕ್ಕಳು ಮಾತೃಭಾಷೆಯ ಪ್ರಭಾವ ಮತ್ತು ಕನ್ನಡ ಭಾಷೆಯ ಸರ್ವನಾಮಗಳನ್ನು ಗ್ರಹಿಸುವ ಗೊಂದಲದಿಂದಲೂ ಈ ರೀತಿಯ ವ್ಯತ್ಯಾಸ ಮಾಡಲು ಕಾರಣವಿರಬಹುದು.

❁ ಬಿಟ್ಟಿರುವ ಜಾಗವನ್ನು ಭರ್ತಿ ಮಾಡಿ ಎಂಬ ಮಾದರಿ ಪ್ರಶ್ನೆಯನ್ನು ಲಂಬಾಣಿಭಾಷಿಕ ಮಕ್ಕಳು ಸರಿಯಾಗಿ ಗ್ರಹಿಸಲ್ಲ. ಲಂಬಾಣಿ ಭಾಷಿಕ ಮಕ್ಕಳಿಗೆ ಕಾಲ ಸೂಚಕ ಪ್ರತ್ಯಯಗಳ ಪರಿಕಲ್ಪನೆ ಇಲ್ಲ ಎಂಬುದು ಇದರಿಂದ ತಿಳಿದುಬರುತ್ತದೆ.

ಬರಹದ ರೂಪ	ಸರಿಯಾದ ರೂಪ	ಲಂಬಾಣಿ ಭಾಷಿಕ ಮಕ್ಕಳ ಓದುವ ಮತ್ತು ಬರೆಯುವ ರೂಪ
ನಾನು ನಾಳೆ ಶಾಲೆಗೆ ಬಂದನು/ಬರುತ್ತೇನೆ/ಬರುತ್ತಿದ್ದಾನೆ	ಬರುತ್ತೇನೆ	ನಾನು ನಾಳೆ ಶಾಲೆಗೆ ಬಂದನು
ರಾಧ ನಿನ್ನೆ ಊರಿಗೆ ಹೋದಳು/ಹೋಗುತ್ತಿದ್ದಾರೆ/ಹೋಗುತ್ತದೆ	ಹೋದಳು	ರಾಧ ನಿನ್ನೆ ಊರಿಗೆ ಹೋಗುತ್ತಿದ್ದಾರೆ
ವಿದ್ಯಾರ್ಥಿಗಳು ಶಾಲೆಯ ಒಳಗೆ ಬಂದನು/ಬಂದಳು/ಬಂದರು	ಬಂದರು	ವಿದ್ಯಾರ್ಥಿಗಳು ಶಾಲೆಯ ಒಳಗೆ ಬಂದನು
ನಾವೆಲ್ಲರೂ ಇಂದು ಸಂಜೆ ತಾತನ ಮನೆಗೆ ಹೋದೆವು/ಹೋಗುತ್ತಾರೆ/ಬರುತ್ತಾರೆ	ಹೋದೆವು	ನಾವೆಲ್ಲರೂ ಇಂದು ಸಂಜೆ ತಾತನ ಮನೆಗೆ ಹೋಗುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ನಾನು ಓದುತ್ತೇನೆ	ನಾನು ವೊತ್ತಿವಿ
ನಾನು ಬರೆಯುತ್ತೇನೆ	ನಾನು ಬರಿತಿವಿ
ನಾನು ಮುಖವನ್ನು ತೊಳೆಯುತ್ತೇನೆ	ಮಕ ತೊಳಿತಿವಿ
ನಾನು ಹಾಲನ್ನು ಕುಡಿಯುತ್ತೇನೆ	ನಾನು ಹಾಲು ಕುಡಿತಿವಿ
ನಾನು ಆಟವನ್ನು ಆಡುತ್ತೇನೆ	ನಾನು ಆಟ ಆಡುತೆವೆ

ಈ ಮೇಲಿನ ಉದಾರಣೆಗಳನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ವರ್ತಮಾನ ಕಾಲದ ಕ್ರಿಯಾ ಪದದ ಏಕ ಮತ್ತು ಬಹುವಚನ ರೂಪಗಳ ಸ್ಪಷ್ಟ ತಿಳುವಳಿಕೆ ಇಲ್ಲದೆ ಬಳಕೆಯ ಬಹುವಚನದ ಆಡು ರೂಪಗಳನ್ನು ಬಳಸಲು ಕಾರಣವಿರಬಹುದು.

❁ ಸಾಮಾನ್ಯವಾಗಿ ಎರಡನೆ ಭಾಷೆಯನ್ನು ಕಲಿಯುವ ಮಗು ತಾನು ಕಲಿಯುವ ಸಾಮಾಜಿಕ ಪರಿಸರದ ಭಾಷೆಯನ್ನು ಔಪಚಾರಿಕ (ಶಿಕ್ಷಣ) ವಲಯದಲ್ಲು ಯಥವತ್ತಾಗಿ ಬಳಕೆ ಮಾಡುತ್ತದೆ. ಅಂದರೆ ಈ ಕ್ರಿಯೆ ಓದುವಾಗ ಸಹಜವಾಗಿರುತ್ತದೆ. ಆದರೆ ಬರವಣಿಗೆಯಲ್ಲೂ ಈ ಮಾದರಿಯನ್ನು ಅನುಸರಿಸುತ್ತದೆ ಎಂದರೆ ಆಡುಮಾತಿನ ರೂಪಗಳನ್ನು ಬರವಣಿಗೆಯಲ್ಲಿ ತರುವ ಪ್ರಕ್ರಿಯೆ ಕಲಿಕೆಯ ಸಮಸ್ಯೆಗಳಲ್ಲಿ ಸಹಜವಾದುದು. ಈ ಹಿನ್ನೆಲೆಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಸಾರ್ವಜನಿಕವಲಯದಲ್ಲಿ ಅಂದರೆ ಅನೌಪಚಾರಿಕ ವಲಯದಲ್ಲಿ ಬಳಕೆಯಾಗುತ್ತಿರುವ ಕನ್ನಡದ ರಚನೆಗಳನ್ನು ಔಪಚಾರಿಕ ವಲಯದಲ್ಲಿ ಬಳಕೆಮಾಡುತ್ತಿರುವುದು ಅದರಲ್ಲೂ ವಾರ್ಷಿಕ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ಎಂದರೆ ಗಮನಾರ್ಹವಾದ ವಿಚಾರವಾಗಿದೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ವಾಕ್ಯಗಳ ಮಾದರಿ
ಸರ್ ಬರುತ್ತಾರೆ	ಸಾರ್ ಬರುತ್ತೆ
ಮೇಡಂ ಬರುತ್ತಾರೆ	ಮೇಡಂ ಬರುತ್ತೆ
ಮುಖ್ಯಗುರುಗಳು ಬರುತ್ತಾರೆ	ಮುಖ್ಯಗುರುಗಳು ಬರುತ್ತೆ
ಪ್ರಾರ್ಥನೆ ಮಾಡುತ್ತಾರೆ	ಪಾತನೆ ಮಾಡುತ್ತೆ

ಲಂಬಾಣಿ ಭಾಷಿಕ ಮಕ್ಕಳು ಕನ್ನಡದ ಲಿಂಗ ವ್ಯವಸ್ಥೆಯನ್ನು ವಿಶಿಷ್ಟವಾಗಿ ಬರೆಯುವರು ಮತ್ತು ಓದುವರು. ಯಾಕೆಂದರೆ ಲಂಬಾಣಿ ಮತ್ತು ಕನ್ನಡ ಭಾಷೆಯ ಲಿಂಗದ ವಿಚಾರ ಭಿನ್ನವಾಗಿರುವುದರಿಂದ ಈ ಮಾದರಿಯ ವ್ಯತ್ಯಾಸ ಮಾಡುವರು. ಮೂಲತಃ ಲಂಬಾಣಿ ಭಾಷೆಯಲ್ಲಿ ನಪುಸಂಕಲಿಂಗವಿಲ್ಲ. ಅದರ ಕೆಲಸವನ್ನು ಪುಲ್ಲಿಂಗ ಮತ್ತು ಸ್ತ್ರೀಲಿಂಗ ಸಾಂದರ್ಭಿಕವಾಗಿ ನಿರ್ವಹಿಸುವವು. ಲಂಬಾಣಿ ಭಾಷಿಕ ಮಕ್ಕಳು ಮಾನವ ಜೀವಿಗಳಿಗೆ ಮಾನವೇತರ ಪ್ರತ್ಯಯಗಳನ್ನು ಹಚ್ಚಿ ಬಳಕೆ ಮಾಡಿದರೆ, ಮಾನವೇತರ ಜೀವಿಗಳಿಗೆ ಮಾನವ ಜೀವಿಗಳ ಲಿಂಗ ಪ್ರತ್ಯಯಗಳನ್ನು ಅನ್ವಯಿಸಿ ಬರೆಯುವರು ಮತ್ತು ಓದುವರು. ಇಲ್ಲಿ ಲಂಬಾಣಿ ಭಾಷಿಕ ಮಕ್ಕಳಿಗೆ ಲಿಂಗದ ಮತ್ತು ಪ್ರತ್ಯಯಗಳ ಸ್ಪಷ್ಟ ಕಲ್ಪನೆ ಇಲ್ಲದಿರುವುದು ಈ ರೀತಿಯ ವ್ಯತ್ಯಾಸಕ್ಕೆ ಕಾರಣವಿರಬಹುದು.

❁ ಲಂಬಾಣಿ ಭಾಷಿಕ ಮಕ್ಕಳು ಲಿಂಗಕ್ಕನುಸಾರವಾಗಿ ಬಹುವಚನ ಕ್ರಿಯಾಪದ ಬಳಕೆಯಾಗುವ ಕಡೆ ಏಕವಚನ ಕ್ರಿಯಾಪದ ಬಳಕೆ ಮಾಡುವರು. ಈ ಒಂದು ವ್ಯತ್ಯಾಸವನ್ನು ಮೂರನೆ ಮತ್ತು ನಾಲ್ಕನೆ ತರಗತಿಯ ಮಕ್ಕಳು ಮಾಡುವರು. ಉದಾಹರಣೆಗೆ,

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ನಮ್ಮ ಶಾಲೆಯಲ್ಲಿ ನಾಲ್ಕು ಜನ ಶಿಕ್ಷಕರು ಇದ್ದಾರೆ.	ನಮ್ಮ ಶಾಲೆಯಲಿ ನಾಲ್ಕು ಜನ ಸಾರ್ ಇದೆ
ನಮ್ಮ ಶಾಲೆಯಲ್ಲಿ ಗಿಡಮರಗಳು ಬಹಳ ಇವೆ.	ನಮ್ಮ ಶಾಲೆಯಲಿ ಗಿಡಮರಗಳು ಬಹಳ ಇದೆ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಿಂಗ ವಚನಕ್ಕನುಸಾರವಾಗಿ ಕ್ರಿಯಾಪದ ಬದಲಾವಣೆ ಮಾಡಬೇಕೆಂಬ ಕನಿಷ್ಠ ಮಟ್ಟದ ತಿಳುವಳಿಕೆ ಇಲ್ಲದಿರುವುದರಿಂದ ಈ ರೀತಿಯ ವ್ಯತ್ಯಾಸ ಲಂಬಾಣಿ ಭಾಷಿಕ ಮಕ್ಕಳಲ್ಲಿ ಓದು ಮತ್ತು ಬರೆಯುವಲ್ಲಿ ಕಂಡುಬರುತ್ತದೆ.

❁ ಲಂಬಾಣಿ ಭಾಷಿಕ ಮಕ್ಕಳು ಪುಲ್ಲಿಂಗ, ಸ್ತ್ರೀಲಿಂಗಕ್ಕನುಸಾರವಾಗಿ ಲಿಂಗ ಬದಲಾವಣೆ ಮಾಡದೆ ನಪುಂಸಕ ಲಿಂಗದಲ್ಲಿ ಕ್ರಿಯಾಪದ ಬಳಸುವರು. ಈ ಒಂದು ವ್ಯತ್ಯಾಸವನ್ನು ಲಂಬಾಣಿ ಭಾಷಿಕ ಮಕ್ಕಳು ಮಾಡುತ್ತಾರೆ. ಉದಾಹರಣೆಗೆ:

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ನಮ್ಮ ಮನೆಯಲ್ಲಿ ಅಪ್ಪ ಇದ್ದಾರೆ	ನನ್ನ ಮನೆಯಲಿ ನನಪ್ಪ ಇದೆ
ನಮ್ಮ ಮನೆಯಲ್ಲಿ ಅಕ್ಕ ಇದ್ದಾಳೆ	ನನ್ನ ಮನೆಯಲಿ ನನ ಅಕ್ಕ ಇದೆ

ಈ ಮೇಲಿನ ವ್ಯತ್ಯಾಸವನ್ನು ಗಮನಿಸಿದಾಗ ಪುಲ್ಲಿಂಗ ಮತ್ತು ಸ್ತ್ರೀ ಲಿಂಗಕ್ಕನುಸಾರವಾಗಿ ಲಿಂಗ ಬದಲಾವಣೆ ಮಾಡದೆ ನಪುಂಸಕ ಲಿಂಗದ ಕ್ರಿಯಾ ರೂಪವಾಗಿ 'ಇದೆ' ಎಂಬ ಕ್ರಿಯಾಪದವನ್ನು ಸ್ತ್ರೀಲಿಂಗ ಪುಲ್ಲಿಂಗಕ್ಕೆ ಒಂದೇ ರೀತಿಯಾಗಿ ಬಳಸುವರು. ಇದಕ್ಕೆ ಕಾರಣ ಲಿಂಗ ವಚನಕ್ಕನುಸಾರವಾಗಿ ಕ್ರಿಯಾಪದ ಬಳಸಬೇಕೆಂಬ ಸ್ಪಷ್ಟವಾದ ತಿಳುವಳಿಕೆ ಇಲ್ಲದೆ ಇರುವುದರಿಂದ ಈ ತರಹದ ವ್ಯತ್ಯಾಸ ಮಾಡಬಹುದು.

❁ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯಲ್ಲಿ ಸಂಖ್ಯಾಸೂಚಕ ಮತ್ತು ಮಾನವ ಸೂಚಿತ ಸಂಖ್ಯಾವಾಚಕ ಎರಡೂ ಪರಿಸರಕ್ಕೂ ಒಂದೇ ತೆರನಾದ ಸಂಖ್ಯಾವಾಚಿ ಸೂಚಕ ಪದವನ್ನು ಬಳಸುತ್ತಾರೆ. ಈ ಒಂದು ವ್ಯತ್ಯಾಸವನ್ನು ಒಂದನೆ ತರಗತಿಯಿಂದ ನಾಲ್ಕನೆ ತರಗತಿ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳು ಓದುವ ಮತ್ತು ಬರೆಯುವ ರೂಪ
ಒಂದು ಊರಿನಲ್ಲಿ ಒಬ್ಬ ರಾಜನಿದ್ದ	ಒಂದು ಊರಲಿ ಒಂದು ರಾಜ ಇದ
ನಾವು ಇಬ್ಬರು ಶಾಲೆಗೆ ಬಂದೆವು	ನಾವು ಎರಡು ಜನ ಶಾಲೆಗೆ ಬಂದೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಮಾನವ ಸೂಚಿತ ಸಂಖ್ಯಾ ಸೂಚಕಗಳನ್ನು ಎಲ್ಲಿ ಹೇಗೆ ಬಳಸಬೇಕೆಂಬ ತಿಳುವಳಿಕೆ ಇಲ್ಲದ ಕಾರಣ ಅವರಲ್ಲಿ ಈ ರೀತಿಯ ವ್ಯತ್ಯಾಸ ಕಾಣಬಹುದು.

❁ ನಪುಂಸಕ ಲಿಂಗದ ಪ್ರಾಣಿಗಳಿಗೆ ವಾಕ್ಯದ ಕೊನೆಯಲ್ಲಿ ನಪುಂಸಕ ಕ್ರಿಯಾಪದವನ್ನು ಬಳಸದೆ ಪುಲ್ಲಿಂಗ / ಸ್ತ್ರೀಲಿಂಗ ಕ್ರಿಯಾಪದವನ್ನು ಬಳಸುವರು. ಈ ಒಂದು ವ್ಯತ್ಯಾಸವನ್ನು ಎಲ್ಲಾ ತರಗತಿಯ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ಎತ್ತು ಬರುತ್ತಿದೆ	ಎತ್ತು ಬರ್‍ತಾನೆ
ಆಕಳು ಹಾಲು ಕೊಡುತ್ತದೆ	ಆಕಳು ಹಾಲು ಕೊಡುತಾಳೆ

ಈ ಮೇಲಿನ ವ್ಯತ್ಯಾಸಕ್ಕೆ ಕಾರಣ ಲಂಬಾಣಿ ಭಾಷಿಕ ಮಕ್ಕಳು ನಪುಂಸಕ ಲಿಂಗ ಪ್ರಾಣಿಗಳಲ್ಲಿ ಗಂಡು ಪ್ರಾಣಿಯನ್ನು ಪುಲ್ಲಿಂಗವೆಂದೂ, ಹೆಣ್ಣು ಪ್ರಾಣಿಯನ್ನು ಸ್ತ್ರೀಲಿಂಗವೆಂದೂ ಗುರುತಿಸುತ್ತಾರೆ. ಇದರಿಂದಾಗಿ ಕನ್ನಡದಲ್ಲಿ ನಪುಂಸಕಲಿಂಗವಾದ 'ಎತ್ತು'ಗೆ ಪುಲ್ಲಿಂಗ ಕ್ರಿಯಾಪದವನ್ನು, 'ಆಕಳು'ಗೆ ಸ್ತ್ರೀಲಿಂಗ ಕ್ರಿಯಾಪದವನ್ನು ಬಳಸುವುದು ಕಾರಣವಿರಬಹುದು.

❁ ಏಕವಚನ ಕ್ರಿಯಾಪದವನ್ನು ಬಳಸುವಲ್ಲಿ ಬಹುವಚನ ಕ್ರಿಯಾಪದವನ್ನು ಬಳಸುವರು. ಈ ಒಂದು ವ್ಯತ್ಯಾಸ ಎಲ್ಲಾ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ನಾನು ಓದುತ್ತೇನೆ	ನಾನು ಓದುವೆವು
ನಾನು ಶಾಲೆಯಲ್ಲಿ ಕುಳಿತುಕೊಳ್ಳುತ್ತೇನೆ	ನಾನು ಶಾಲೆಯಲ್ಲಿ ಕುಳಿತುಕೊಳುವುದು

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಏಕವಚನ ಮತ್ತು ಬಹುವಚನಗಳ ಸ್ಪಷ್ಟ ತಿಳುವಳಿಕೆ ಇಲ್ಲದ ಕಾರಣ ಈ ರೀತಿಯ ವ್ಯತ್ಯಾಸವನ್ನು ಮಾಡಬಹುದು.

❁ ಗೌರವ ಸಂಬೋಧನಾ ಪದಗಳನ್ನು ಮತ್ತು ಕ್ರಿಯಾ ರೂಪಗಳನ್ನು ಬಳಸದೆ ಏಕವಚನ ಸರ್ವನಾಮ ಮತ್ತು ಕ್ರಿಯಾಪದಗಳನ್ನೆ ಬಳಸುವರು. ಈ ರೀತಿಯ ವ್ಯತ್ಯಾಸವನ್ನು ಲಂಬಾಣಿ ಭಾಷಿಕ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ಸರ್ ಪಾಠ ಮಾಡುತ್ತಾರೆ	ಸಾರು ಪಟ ಮಡುತ್ತನೆ
ಸರ್ ಬಂದರು	ಸಾರು ಬಂದ
ನೀವು ಪಾಠವನ್ನು ಮಾಡಿದಿರಿ	ನೀನು ಪಾಠ ಮಾಡಿದೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಲಂಬಾಣಿ ಭಾಷೆಯಲ್ಲಿ ಗೌರವ ಸಂಬೋಧನಾ ರೂಪಗಳು ಇಲ್ಲದಿರುವುದರಿಂದ ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯ ಬಳಕೆಯ ಮತ್ತು ಬರೆಯುವ ಸಂದರ್ಭದಲ್ಲಿ ಗೌರವ ಸಂಬೋಧನಾ ರೂಪಗಳನ್ನು ಬಳಸದೆ ಏಕವಚನವಾಗಿ ಎಲ್ಲಾ ಮಕ್ಕಳು ಬಳಕೆ ಮಾಡಲು ಕಾರಣವಿರಬಹುದು.

❋ ವರ್ತಮಾನ ಕಾಲದ ಕ್ರಿಯಪದಗಳನ್ನು ಬರೆಯದೆ ಭೂತಕಾಲದ ಕ್ರಿಯಾಪದಗಳನ್ನೆ ಬಳಸುವರು. ಈ ಒಂದು ವ್ಯತ್ಯಾಸವನ್ನೆ ಲಂಬಾಣಿ ಭಾಷಿಕ ಮಕ್ಕಳು ಮಾಡುತ್ತಾರೆ.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ಕಸ ಗೂಡಿಸುತ್ತೇನೆ	ಕಸ ಗುಡಿಸಿದೆ
ನಾನು ಪಾಠವನ್ನು ಬರೆಯುತ್ತೇನೆ	ನಾನು ಪಾಠ ಬರಿದಿದ್ದೆ
ಮನೆಗೆ ಹೋಗಿ ಪಾಠವನ್ನು ಓದುತ್ತೇನೆ	ಮನೆಗೆ ಹೋಗಿ ಪಾಟವನ್ನು ಓದಿದ್ದೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯಲ್ಲಿರುವ ವರ್ತಮಾನ, ಭೂತ ಮತ್ತು ಭವಿಷ್ಯತ್ ಕಾಲದ ಕ್ರಿಯಾಪದಗಳ ಬಳಕೆಯ ಸಾಮರ್ಥ್ಯ ಇಲ್ಲದ ಕಾರಣ ಮತ್ತು ಅರ್ಥ ವ್ಯತ್ಯಾಸದ ತಿಳುವಳಿಕೆಯ ಅಭಾವದ ಗೊಂದಲದಿಂದಲೂ ಈ ರೀತಿಯ ವ್ಯತ್ಯಾಸವನ್ನು ಮಾಡಲು ಕಾರಣವಿರಬಹುದು.

❋ ಲಂಬಾಣಿ ಭಾಷಿಕ ಮಕ್ಕಳು ಒಪ್ಪಿದ ಮಾದರಿ ರೂಪದಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾ ಪದಗಳನ್ನು ಕ್ರಮವಾಗಿ ಬಳಸದೆ ಹಿಂದುಮುಂದಾಗಿ ವಾಕ್ಯ ರಚನೆ ಮಾಡುವರು. ಈ ಒಂದು ವ್ಯತ್ಯಾಸವನ್ನು ಎಲ್ಲಾ ಮಕ್ಕಳು ಮಾಡುವರು.

ಬರಹದ ರೂಪ	ಲಂಬಾಣಿ ಭಾಷಿಕ ಮಕ್ಕಳ ವಾಕ್ಯಗಳ ಮಾದರಿ
ನಾನು ಬೆಳಿಗ್ಗೆ ಎದ್ದು ಓದುತ್ತೇನೆ	ಬೆಳಿಗೆ ಎದ್ದು ನಾನು ಓದುವೆವು
ನಾನು ಶಾಲೆಗೆ ಹೋಗುತ್ತೇನೆ	ಶಾಲೆಗೆ ನಾನು ಹೋಗುತೆನೆ
ಆಕಳು ಹಾಲನ್ನು ಕೊಡುತ್ತದೆ	ಹಾಲನು ಆಕಳು ಕೊಡುತದೆ
ನಮ್ಮ ಶಾಲೆ ಬಹಳ ಚೆನ್ನಾಗಿದೆ	ಬಹಳ ಚನ್ನಾಗಿದೆ ನಮ್ಮ ಸಾಲೆ

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಈ ರೀತಿಯ ವ್ಯತ್ಯಾಸಕ್ಕೆ ಕಾರಣಗಳನ್ನು ಊಹಿಸಬಹುದಾಗಿದೆ.

೧. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡ ಭಾಷೆಯ ಜ್ಞಾನದ ಕೊರತೆ ಮತ್ತು ಕತೃ, ಕರ್ಮ ಮತ್ತು ಕ್ರಿಯಾ ಪದಗಳ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇಲ್ಲದಿರುವುದು.

೨. ಲಂಬಾಣಿ ಭಾಷಿಕ ಮಕ್ಕಳಿಗೆ ಕರ್ತೃ ಪದ ಮೊದಲು ಬರಬೇಕು, ನಂತರ ಕರ್ಮಪದ ಬರಬೇಕು, ಕೊನೆಗೆ ಕ್ರಿಯಾಪದ ಬರಬೇಕು ಎಂಬ ಕನ್ನಡದ ವಾಕ್ಯರಚನೆಯ ತಿಳುವಳಿಕೆ ಇಲ್ಲದೆ ಆಡುವ ಭಾಷೆಯಲ್ಲಿ ಉಪಯೋಗಿಸುವಂತೆ ವಾಕ್ಯರಚನೆ ಮಾಡುವರು.

* ಲೇಖನ ಚಿಹ್ನೆಗಳನ್ನು ಸರಿಯಾಗಿ ಹೊಂದಿಸಿ ಬರೆಯಿರಿ ಎಂಬ ಮಾದರಿ ಪ್ರಶ್ನೆಯಲ್ಲಿ ಲಂಬಾಣಿ ಭಾಷಿಕ ಮಕ್ಕಳು ಸರಿಯಾಗಿ ಗ್ರಹಿಸುವುದಿಲ್ಲ. ಲಂಬಾಣಿ ಭಾಷಿಕ ಮಕ್ಕಳಿಗೆ ಲೇಖನ ಚಿಹ್ನೆಗಳ ಪರಿಕಲ್ಪನೆ ಇಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ.

ಮಾದರಿ ರೂಪ		ಸರಿ ರೂಪ	ಲಂಬಾಣಿ ಭಾಷಿಕ ಮಕ್ಕಳು ಬರೆಯುವ ರೂಪ	
ಅ	ಆ		ಅ	ಆ
ಭಾವಸೂಚಕ ಚಿಹ್ನೆ	?	!	ಭಾವ ಸೂಚಕ ಚಿಹ್ನೆ	?
ಪೂರ್ಣವಿರಾಮ ಚಿಹ್ನೆ	“ ”	.	ಪೂರ್ಣವಿರಾಮ ಚಿಹ್ನೆ	“ ”
ಅಲ್ಪವಿರಾಮ ಚಿಹ್ನೆ	.	,	ಅಲ್ಪವಿರಾಮ ಚಿಹ್ನೆ	.
ಪ್ರಶ್ನಾರ್ಥಕ ಚಿಹ್ನೆ	!	?	ಪ್ರಶ್ನಾರ್ಥಕ ಚಿಹ್ನೆ	!
ಉದ್ಧರಣ ಚಿಹ್ನೆ	;	“ ”	ಉದ್ಧರಣ ಚಿಹ್ನೆ	;
ಅರ್ಧ ವಿರಾಮ ಚಿಹ್ನೆ	,	;	ಅರ್ಧ ವಿರಾಮ ಚಿಹ್ನೆ	,

ಪರಿಹಾರೋಪಾಯಗಳು

* ಕನ್ನಡ ಭಾಷಾ ಬೋಧಕರು ಸರ್ವನಾಮಗಳ ಬಗ್ಗೆ ಮತ್ತು ಅದರಲ್ಲಿರುವ ವಿಧಗಳ ಕುರಿತು ಉದಾಹರಣೆಗಳ ಸಹಿತ ಪದೇ ಪದೇ ಓದಿಸುವ ಮತ್ತು ಬರೆಯಿಸುವ ಮೂಲಕ ಲಂಬಾಣಿ ಭಾಷಿಕ ಮಕ್ಕಳಿಗೆ ಸ್ಪಷ್ಟಪಡಿಸಬೇಕು.
* ಅನೇಕ ಪದಗಳನ್ನು ಬರೆದು ಅವುಗಳ ವಿರುದ್ಧ ಪದಗಳನ್ನು ಹಿಂದೆ ಮುಂದೆ ಕೊಟ್ಟು ಅವುಗಳನ್ನು ಸರಿಯಾಗಿ ಜೋಡಿಸಲು ಶಿಕ್ಷಕರು ಮಕ್ಕಳಿಗೆ ಹೇಳಬೇಕು ಮತ್ತು ಸರಿಯಾದ ವಿರುದ್ಧ ಪದವನ್ನು ಮಕ್ಕಳಿಗೆ ಕಪ್ಪು ಹಲಗೆಯ ಮೇಲೆ ಬರೆದು ಓದಿಸಬೇಕು. ಇಂತಹ ಚಟುವಟಿಕೆಯನ್ನು ಮಕ್ಕಳಿಗೆ ಸ್ಪಷ್ಟ ಆಗುವವರೆಗೆ ಪದೇ ಪದೇ ಮನವರಿಕೆ ಮಾಡಿ ಕೊಡಬೇಕು.
* ಸಮನಾರ್ಥಕ ಪದಗಳನ್ನು ಶಿಕ್ಷಕರು ಕೆಲವು ಚಿತ್ರಗಳನ್ನು ಉದಾಹರಣೆಗೆ ಸೂರ್ಯನ ಚಿತ್ರ, ಚಂದ್ರನ ಚಿತ್ರ, ರಾಜನ ಚಿತ್ರ ಮೊದಲಾದವುಗಳನ್ನು ತೋರಿಸಿ ಅವುಗಳಿಗಿರುವ ಬೇರೆ ಬೇರೆ

ಹೆಸರುಗಳನ್ನು ಮಕ್ಕಳೇ ತಿಳಿಸುವಂತೆ ಹೇಳಿ, ಮಕ್ಕಳಿಗೆ ಗೊತ್ತಾಗದಿದ್ದಾಗ ಶಿಕ್ಷಕರು ಇವುಗಳಿಗಿರುವ ಬೇರೆ ಬೇರೆ ಹೆಸರುಗಳನ್ನು ಚಿತ್ರಗಳ ಮುಂದೆ ಬರೆಯಬೇಕು ಮತ್ತು ಮಕ್ಕಳಿಂದ ಓದಿಸಿ, ಬರೆಯಿಸಬೇಕು. ಇಂತಹ ಕೆಲವು ಚಟುವಟಿಕೆಗಳನ್ನು ಶಿಕ್ಷಕರೇ ಪದೇ ಪದೇ ಮಕ್ಕಳಿಗೆ ಸ್ಪಷ್ಟ ವಾಗುವವರೆಗೆ ಹೇಳಿಕೊಡಬೇಕು.

* ಜೋಡು ನುಡಿಗಳ ಹಲವಾರು ಪದಗಳನ್ನು ಅಂದರೆ ಪೂರ್ವಪದಗಳನ್ನು ಕೊಟ್ಟು, ಉತ್ತರ ಪದಗಳನ್ನು ಹಿಂದೆ ಮುಂದೆ ಕೊಟ್ಟು ಅವುಗಳನ್ನು ಸರಿಯಾಗಿ ಜೋಡಿಸಿ ಓದಲು ಮತ್ತು ಬರೆಯಲು ಶಿಕ್ಷಕರು ಮಕ್ಕಳಿಗೆ ಹೇಳಬೇಕು. ಸರಿಯಾಗಿ ಹೇಳದಿದ್ದಲ್ಲಿ ಅವುಗಳ ಸರಿಯಾದ ಕ್ರಮವನ್ನು ಕಪ್ಪು ಹಲಗೆಯ ಮೇಲೆ ಬರೆದು ಅರ್ಥ ಸಹಿತವಾಗಿ ಮಕ್ಕಳಿಗೆ ತಿಳಿಯುವ ಹಾಗೆ ಶಿಕ್ಷಕರು ಹೇಳಬೇಕು ಮತ್ತು ಇಂತಹ ಚಟುವಟಿಕೆಗಳನ್ನು ಪದೇ ಪದೇ ಮಕ್ಕಳಿಗೆ ಮಾಡಲು ಹೇಳಬೇಕು ಹಾಗೆಯೇ ಶಿಕ್ಷಕರು ಹಾಗೆ ಮಾಡಿಸುತ್ತಾ ಇರಬೇಕು.

* ಗುಂಪಿಗೆ ಸೇರದಿರುವ ಪದಗಳನ್ನು ಗುರುತಿಸುವ ಸಾಮರ್ಥ್ಯ ಪಡೆಯಲು ಪುನರ್‌ಮನನಕ್ಕೆ ಹಲವಾರು ಸುಲಭ ಚಟುವಟಿಕೆಗಳನ್ನು ಶಿಕ್ಷಕರು ತರಗತಿಯ ಕೋಣೆಗಳಲ್ಲಿಯೇ ಅಳವಡಿಸಿಕೊಳ್ಳಬಹುದಾಗಿದೆ. ತರಗತಿಯ ಕೋಣೆಯಲ್ಲಿ ಲಭ್ಯವಿರುವ ವಸ್ತುಗಳಾದ ಪುಸ್ತಕ, ಬಳಪ, ಪೆನ್ನು ಮತ್ತು ಟೇಬಲ್‌ನ್ನು ಒಂದು ಕಡೆ ಇರಿಸುವುದು ನಂತರ ತರಗತಿಯ ಒಂದು ಮಗುವನ್ನು ಕರೆದು ಅಲ್ಲಿರುವ ವಸ್ತುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಲು ಸೂಚಿಸುವುದು. ನಂತರ ಈ ನಾಲ್ಕು ಪದಗಳಲ್ಲಿ ಯಾವ ಪದಗಳು ಸಾಮ್ಯತೆಯನ್ನು ಹೊಂದಿದ್ದು, ಯಾವ ಪದ ಗುಂಪಿಗೆ ಸೇರಲ್ಲ? ಎಂದು ಪ್ರಶ್ನಿಸಿದಾಗ ಮಗು ಉತ್ತರ ಹೇಳಬಹುದು ಅಥವಾ ಹೇಳದೆ ಇರಲೂಬಹುದು. ಆಗ ಶಿಕ್ಷಕ 'ಟೇಬಲ್' ಎಂದು ಹೇಳಬೇಕು. ಏಕೆಂದು ಕೇಳಿದಾಗ ಪೆನ್ನು, ಬಳಪ, ಪುಸ್ತಕ ಇವು ಬರೆಯುವ, ಓದುವ ಸಾಧನಗಳಾಗಿವೆ. ಆದರೆ ಟೇಬಲ್ ಇದನ್ನು ಬರೆಯುವುದಕ್ಕೆ ಮಾತ್ರ ಬಳಸದೆ ಹಲವಾರು ಉದ್ದೇಶಗಳಿಗೆ ಬಳಸುವುದಾಗಿದೆ ಎಂದು ಮಕ್ಕಳಿಗೆ ಅರ್ಥೈಸಬೇಕು. ಹೀಗೆ ಹಲವಾರು ಕಣ್ಣಿಗೆ ಕಾಣುವ ಪರಿಚಿತ ವಸ್ತುಗಳನ್ನು ಈ ಚಟುವಟಿಕೆಗೆ ಬಳಸಿಕೊಳ್ಳಬಹುದಾಗಿದೆ.

* ಶಿಕ್ಷಕರು ತರಗತಿಗನುಗುಣವಾಗಿ ಒಂದು ಮತ್ತು ಗುಂಪು ಇರುವ ಚಿತ್ರಪಟಗಳನ್ನು ಬಳಸಿ ಏಕವಚನ ಮತ್ತು ಬಹುವಚನದ ಸಾಮರ್ಥ್ಯವನ್ನು ಪುನರ್ಬಲನಗೊಳ್ಳಿಸುವುದು. ಹಾಗೆ ಶಿಕ್ಷಕರು ತರಗತಿ ಗನುಗುಣವಾಗಿ ಕಪ್ಪು ಹಲಗೆಯ ಮೇಲೆ ಏಕವಚನದ ಹತ್ತು ಪದಗಳನ್ನು ಬರೆದು, ಇವುಗಳಿಗೆ ಬಹುವಚನದ ರೂಪಗಳನ್ನು ಮಕ್ಕಳಿಂದ ಹೇಳಿಸುತ್ತಾ, ಅರ್ಥೈಯಿಸುತ್ತಾ ಬರೆಸುವುದು.

* ಮಕ್ಕಳಿಗೆ ಲಿಂಗಗಳ ಕಲ್ಪನೆ ಬರುವುದಕ್ಕಾಗಿ ಈ ಕೆಳಕಂಡ ಚಟುವಟಿಕೆಗಳನ್ನು ಮಾಡಿಸಬಹುದು.

  ೧. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳ ಉದಾಹರಣೆಗಳನ್ನು ಮಕ್ಕಳಿಂದಲೇ ಪಟ್ಟಿ ತಯಾರಿಸುವುದು.

೨. ದೊಡ್ಡ ಚಾರ್ಟ್‌ನಲ್ಲಿ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಅಂಟಿಸಿ ಮಕ್ಕಳು ಅವುಗಳನ್ನು ಸರಿಯಾಗಿ ಗುರುತಿಸುವಂತೆ ಪ್ರೇರೇಪಿಸುವುದು.

೩. ಒಂದು ಕಡೆ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳ ಪದಗಳನ್ನು ಕೊಟ್ಟು ಅವುಗಳನ್ನು ಬೇರೆ ಬೇರೆಯಾಗಿ ಗುರುತಿಸಿ ಬರೆಯಲು ಹೇಳುವುದು. ತಪ್ಪಿದ್ದಲ್ಲಿ ಶಿಕ್ಷಕರು ಅಲ್ಲಲ್ಲಿಯೇ ತಿದ್ದುತ್ತಾ ಮಕ್ಕಳಿಗೆ ಮನವರಿಕೆಯನ್ನು ಮಾಡಿಸಬಹುದು. ಇದರಿಂದ ಲಂಬಾಣಿ ಭಾಷಿಕ ಮಕ್ಕಳಿಗೆ ಪದಗಳ ಪರಿಚಯ ಆಗುವುದರೊಂದಿಗೆ ಜ್ಞಾಪಕ ಶಕ್ತಿ ಹೆಚ್ಚುತ್ತದೆ ಮತ್ತು ಲಿಂಗಗಳ ಸ್ಪಷ್ಟ ತಿಳುವಳಿಕೆ ಬರುತ್ತದೆ.

* ಪದಗಳನ್ನು ಸರಿಯಾಗಿ ಬಿಡಿಸಿ ಓದುವ ಮತ್ತು ಬರೆಯುವ ವಿಧಾನವನ್ನು ಮತ್ತು ಆ ಪದಗಳ ಅರ್ಥವನ್ನು ತಿಳಿಸಬೇಕು. ಹಾಗೆ ಪದಗಳನ್ನು ಕೂಡಿಸಿ ಓದುವ ಮತ್ತು ಬರೆಯುವ ವಿಧಾನವನ್ನು ಶಿಕ್ಷಕರು ಕಪ್ಪು ಹಲಗೆಯ ಮೇಲೆ ಹಲವಾರು ಉದಾಹರಣೆಗಳ ಸಹಿತ ಲಂಬಾಣಿ ಭಾಷಿಕ ಮಕ್ಕಳಿಗೆ ಸ್ಪಷ್ಟ ಪಡಿಸಬಹುದು.
* ಕೆಲವು ಅಕ್ಷರಗಳು ಮತ್ತು ಪದಗಳ ಪರಿಚಯದಲ್ಲಿ ತೊಡಕು ನಿವಾರಿಸಿ, ಉಚ್ಚಾರಣೆ ಹಾಗೂ ಬರವಣಿಗೆಯಲ್ಲಿ ವ್ಯತ್ಯಾಸವಾಗದಂತೆ ಶಿಕ್ಷಕರು ನೋಡಿಕೊಳ್ಳುವುದು.
* ಆಲಿಸುವಿಕೆಯಲ್ಲಿ ವ್ಯತ್ಯಾಸಗಳನ್ನು ಪರಿಹರಿಸುವುದು.
* ಮಕ್ಕಳಲ್ಲಿರುವ ನಿರಾಸಕ್ತಿಯನ್ನು ವ್ಯಾಕರಣದ ಬಗೆಗಿನ ಭಯ ಮತ್ತು ಸಂಕುಚಿತ ಮನೋಭಾವವನ್ನು ಹೋಗಲಾಡಿಸುವುದು.
* ಮಕ್ಕಳನ್ನು ನಿರಂತರವಾಗಿ ಮಾತುಗಾರಿಕೆ ಮತ್ತು ಬರವಣಿಗೆಯ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುವಂತೆ ಮಾಡುವುದು.

ಅಧ್ಯಾಯ ಏಳು

ಸಮಾರೋಪ

ಅಧ್ಯಾಯ ೭

ಸಮಾರೋಪ

ಭಾರತವು ಬಹುಭಾಷಿಕ ಪರಿಸರವನ್ನು ಹೊಂದಿದ ಹಾಗೆ, ಕರ್ನಾಟಕವೂ ಬಹುಭಾಷಿಕ ಪರಿಸರವನ್ನು ಹೊಂದಿದೆ. ಆದರೆ ಕರ್ನಾಟಕ ರಾಜ್ಯದ ಅಧಿಕೃತ ಭಾಷೆಯಾದ ಕನ್ನಡವು ಈ ರಾಜ್ಯದ ಬಹುಸಂಖ್ಯಾತರ ಮಾತೃಭಾಷೆಯಾಗಿದೆ. ಇಲ್ಲಿ ಮಾತೃಭಾಷೆಯ ಪ್ರಸ್ತಾಪ ಬಂದಾಗ ಪ್ರಧಾನವಾಗಿ ಕನ್ನಡ ಭಾಷೆಯನ್ನೇ ಗಮನಿಸಲಾಗುತ್ತದೆ. ಆದರೂ ಈ ರಾಜ್ಯದಲ್ಲಿರುವ ಅನ್ಯಭಾಷಿಕರು ಅಥವಾ ಭಾಷಾ ಅಲ್ಪಸಂಖ್ಯಾತರಿಗೆ ಅವರವರ ಮಾತೃಭಾಷಾ ಮಾಧ್ಯಮ ಶಾಲೆಗಳನ್ನು ತೆರೆದು ಅವರಿಗೆ ಶಿಕ್ಷಣ ಪಡೆಯಲು ಅವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. ಆದರೂ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಅಂದರೆ ದ್ವಿತೀಯ/ತೃತೀಯ ಭಾಷೆಯಾಗಿ ಕಲಿಯಬೇಕಾಗುತ್ತದೆ. ಅದೇ ರೀತಿ ಕರ್ನಾಟಕದಲ್ಲಿ ಇತರ ಭಾಷಿಕರು ತಮ್ಮ ಭಾಷೆಯನ್ನು ಕಲಿಯುವ ಅವಕಾಶವಿದ್ದರೂ ನಿಗದಿಪಡಿಸದಷ್ಟು ಸಂಖ್ಯೆಯ ವಿದ್ಯಾರ್ಥಿಗಳಿಲ್ಲದಿದ್ದರೆ ಅಂತಹ ಅವಕಾಶ ಕೂಡ ಇರುವುದಿಲ್ಲ. ಆದರೆ ಲಿಪಿ ಇಲ್ಲದ ಮಾತೃಭಾಷೆಯ ಮಕ್ಕಳು ಓದಲು ಅಗತ್ಯವಿರುವಷ್ಟು ಸಂಖ್ಯೆ ಇದ್ದರೂ ಪ್ರಾದೇಶಿಕ ಭಾಷೆಯನ್ನು ಕಲಿಯಬೇಕಾಗುತ್ತದೆ. ಅಂದರೆ ಕರ್ನಾಟಕದಲ್ಲಿ ಕನ್ನಡವನ್ನೇ ಮಾಧ್ಯಮವಾಗಿ ಆಯ್ದುಕೊಳ್ಳಬೇಕೆಂಬ ಅನಿವಾರ್ಯತೆ ಇದೆ. ಡಾ. ಎಚ್. ನರಸಿಂಹಯ್ಯನವರ ನೇತೃತ್ವದ ೧೯೯೧ರ ವರದಿಯು ಇದನ್ನೇ ತಿಳಿಸುತ್ತದೆ. ಹಾಗಾಗಿ ಕರ್ನಾಟಕದಲ್ಲಿರುವ ಬುಡಕಟ್ಟು ಸಮುದಾಯದ ಲಂಬಾಣಿಗರಿಗೆ ಕನ್ನಡವು ಮಾತೃಭಾಷೆ ಅಥವಾ ಸ್ವಭಾಷೆ ಎಂದು ಶಿಕ್ಷಣ ತಜ್ಞರು ತಿಳಿದು ಶಿಕ್ಷಣವನ್ನು ಇವರು ಕನ್ನಡ ಮಾಧ್ಯಮದಲ್ಲೆ ಶಿಕ್ಷಣವನ್ನು ಪಡೆಯಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಅದರಂತೆಯೆ ಪ್ರತಿಯೊಂದು ತಾಂಡಾಗಳಲ್ಲಿ ಸರ್ಕಾರ ಕನ್ನಡ ಮಾಧ್ಯಮ ಶಾಲೆಗಳನ್ನೇ ತೆರೆಯಲಾಗಿದೆ. ಇದರ ಮುಖಾಂತರ ಲಂಬಾಣಿ ಭಾಷಿಕ ಮಕ್ಕಳು ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುತ್ತಿರುವುದು ಕಂಡುಬರುತ್ತದೆ.

[illegible]

ಶಿಕ್ಷಣ ಮಾಧ್ಯಮದ ಪ್ರಶ್ನೆ ಕೇವಲ ಭಾಷೆಗೆ ಸೀಮಿತವಾದುದಲ್ಲ. ಒಟ್ಟು ಶಿಕ್ಷಣ ಪದ್ಧತಿ, ಪಠ್ಯಕ್ರಮ, ಸಾಮಾಜಿಕ, ಆರ್ಥಿಕ, ಸನ್ನಿವೇಶಗಳಿಂದ ಉಂಟಾಗುವ ನೀತಿ ನಿರೂಪಣೆಯ ನೆಲೆ, ಹೀಗೆ ವಿವಿಧ ಅಂಶಗಳ ಅಂತರ್‌ಸಂಬಂಧವನ್ನು ಗ್ರಹಿಸುತ್ತಲೇ ಶಿಕ್ಷಣ ಮಾಧ್ಯಮದ ನಿಲುವುಗಳನ್ನು ಖಚಿತಪಡಿಸಿಕೊಳ್ಳುವುದು ಸೂಕ್ತ. ಯಾಕೆಂದರೆ ಶಿಕ್ಷಣ ಮಾಧ್ಯಮವೆನ್ನುವುದು ಸಮಾಜ ಮತ್ತು ಸಂಸ್ಕೃತಿಯ ಇತರೆ ಘಟಕಗಳಿಂದ ಪ್ರತ್ಯೇಕಿಸಿ ನೋಡುವ ಪರಿಕಲ್ಪನೆಯಲ್ಲ. ಮಾತೃ ಭಾಷಾ ಮಾಧ್ಯಮದಲ್ಲಿ ಶಿಕ್ಷಣ ಕೊಡಬೇಕೆಂಬ ವಿಚಾರವು ವಿದ್ಯಾರ್ಥಿಗಳ ಜ್ಞಾನ ಗ್ರಹಿಕೆಗೆ ಪೂರಕ/ಪ್ರೇರಕ ಅಂಶವೂ ಆಗಿರುತ್ತದೆ. ಅಲ್ಲದೆ ಸಾಮಾಜಿಕ-ಆರ್ಥಿಕ ಕಾರಣಗಳೂ ಇರುತ್ತವೆ. ಹುಟ್ಟಿನಿಂದಲೇ ಆಡುಮಾತಾಗಿ ನಮ್ಮೊಳಗೆ ಬೇರೂರಿರುವ ಮಾತೃಭಾಷೆಯ ಮೂಲಕ ಜ್ಞಾನವನ್ನು ಗಳಿಸುವುದು ಯಾವತ್ತೂ ಸುಲಭ ಸಾಧ್ಯವಾದುದು. ಇಲ್ಲಿ ಭಾಷಾ ಮಾಧ್ಯಮವೆಂದರೆ ಭಾಷೆ ಮಾತ್ರ ಮುಖ್ಯವಾಗದೆ ಆ ಭಾಷೆಯ ಜನಜೀವನ, ಆಲೋಚನಾ ವಿಧಾನ, ಸಂಸ್ಕೃತಿ ಇತ್ಯಾದಿಗಳಿಂದ ಒಗ್ಗೂಡಿದ ಒಂದು ಸ್ವರೂಪವೇ ರೂಪಿತವಾಗುತ್ತದೆ. ಇದರಲ್ಲಿ ನಾಡು-ನುಡಿಗಳ ಅಭಿಮಾನವೂ ಒಂದಂಶ ವಾಗಿರುತ್ತದೆ. ಆದ್ದರಿಂದ ಜಗತ್ತಿನ ಬಹುಪಾಲು ಶಿಕ್ಷಣ ತಜ್ಞರು-ಚಿಂತಕರು ಮಾತೃಭಾಷಾ ಮಾಧ್ಯಮದ ಶಿಕ್ಷಣವನ್ನು ಪ್ರತಿಪಾದಿಸಿದ್ದಾರೆ. ಅದರಲ್ಲೂ ಪ್ರಾಥಮಿಕ ಶಿಕ್ಷಣ ಮಾತೃಭಾಷಾ ಮಾಧ್ಯಮದಲ್ಲೇ ಇರಬೇಕೆಂಬ ಬಗ್ಗೆ ಒತ್ತು ನೀಡಿದ್ದಾರೆ. ಆದರೆ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಪಡೆಯಲು ಆಗದ ಲಂಬಾಣಿ ಭಾಷಿಕ ಮಕ್ಕಳಂತಹ ಎಷ್ಟೋ ಮಕ್ಕಳಿಗೆ ಯಾವ ಭಾಷೆಯ, ಯಾವ ಯಾವ ವಸ್ತು ವಿಷಯಗಳನ್ನು ಒಳಗೊಂಡ ಪಠ್ಯ ಹಾಗೂ ಯಾವ ರೀತಿಯ ವಿಶೇಷ ಬೋಧನಾ ಕ್ರಮಗಳನ್ನು ಅಳವಡಿಸಬೇಕು ಎಂಬ ವಿಚಾರದ ಕುರಿತು ಭಾಷಾ ಚಿಂತಕರು ಹಾಗೂ ಶಿಕ್ಷಣ ತಜ್ಞರು ಯೋಚಿಸಬೇಕಾಗಿದೆ.

ಭಾರತದಲ್ಲಿ ಸ್ವಾತಂತ್ರ್ಯಾ ನಂತರ ಭಾಷಾ ಸಮುದಾಯಗಳು ವಾಸಿಸುವ ಪ್ರದೇಶಗಳನ್ನು ಸ್ವತಂತ್ರ ಪ್ರಾಂತ್ಯಾಡಳಿತಗಳನ್ನಾಗಿ ವಿಂಗಡಿಸಲಾಯಿತು. ಅಲ್ಲದೆ ರಾಜ್ಯಾಂಗದಲ್ಲಿ ಪರಿಗಣಿಸಲಾದ ೧೮ ಭಾಷೆಗಳನ್ನು ಮಾತ್ರ ಅಧಿಕೃತಗೊಳಿಸಿ ಆಡಳಿತದಲ್ಲಿ ಪ್ರಾಂತೀಯವಾಗಿ ಜಾರಿಗೆ ತರಲಾಯಿತು. ಅದನ್ನು ಶಿಕ್ಷಣ ಕ್ಷೇತ್ರಕ್ಕೂ ಅಳವಡಿಸಲಾಯಿತು. ಇದಕ್ಕಿಂತ ಮೊದಲಿಗೆ ಬ್ರಿಟೀಶ್ ಆಡಳಿತಾವಧಿಯಲ್ಲಿ ಹೊಸ ಶಿಕ್ಷಣ ನೀತಿಯ ಪರಿಣಾಮವಾಗಿ ಏಕ ಮಾದರಿಯ ಶಿಕ್ಷಣ ವ್ಯವಸ್ಥೆಯು ಜಾರಿಗೆ ಬಂದಿತು. ಇದರ ಪರಿಣಾಮವಾಗಿ ಬ್ರಿಟೀಶ್ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಾಂತೀಯ ಭಾಷೆ ಹಾಗೂ ಇಂಗ್ಲಿಶ್ ಭಾಷೆಗಳೆರಡನ್ನೂ ಏಕ ಮಾದರಿಯಲ್ಲಿ ಪರಿಗಣಿಸಲಾಯಿತು. ನಂತರ ಜಾರಿಯಾದ ಪದ್ಧತಿಯನ್ನು ಅನುಸರಿಸಿದ ಸ್ವತಂತ್ರ ಭಾರತದ ಸರ್ಕಾರಗಳು ರಾಜ್ಯಾಂಗದಲ್ಲಿ ಅಂಗೀಕೃತಗೊಂಡ ಭಾಷೆಗಳಿಗಷ್ಟೇ ಪ್ರಾಮುಖ್ಯತೆ ನೀಡಿ ವಿವಿಧ ರಾಜ್ಯಗಳಲ್ಲಿ ಇರುವ ಇತರೆ ಅಲ್ಪಸಂಖ್ಯಾತ ಭಾಷೆ ಹಾಗೂ ಬುಡಕಟ್ಟುಗಳ, ಅಲೆಮಾರಿಗಳ ಭಾಷೆಗಳನ್ನು ಮುಖ್ಯವಾಹಿನಿ ಯಿಂದ ಹೊರಗಿಡಲಾಗಿದೆ. ನಂತರ ಅಂತಹ ಸಮುದಾಯಗಳನ್ನು ಆಡಳಿತ, ಶಿಕ್ಷಣ ಹಾಗೂ ಸಾಂಸ್ಕೃತಿಕ ಅಂಶಗಳಿಂದ ಏಕ ಗವಾಕ್ಷಿ ಪದ್ಧತಿಯಡಿಯಲ್ಲಿ ಪರಿಗಣಿಸಲಾಯಿತು. ಇದು ಎಲ್ಲ ರಾಜ್ಯಗಳಲ್ಲಿ ಜಾರಿ ಯಾದಂತೆ ಕರ್ನಾಟಕದಲ್ಲಿಯೂ ಕಾರ್ಯರೂಪಕ್ಕೆ ಬಂದಿತು. ಪರಿಣಾಮವಾಗಿ ಕರ್ನಾಟಕದಲ್ಲಿನ ಬುಡಕಟ್ಟು

ಭಾಷೆಗಳಾದ ಗೊಂಡ, ಕಾಡುಕುರುಬ, ಬ್ಯಾರಿ, ಸೋಲಿಗ, ಕೊಡವ ಹಾಗೂ ಲಂಬಾಣಿ, ತುಳು, ಮೊದಲಾದ ಭಾಷಿಕ ಸಮುದಾಯಗಳು ಸಾಂಸ್ಕೃತಿಕವಾಗಿ ಭಾಷಿಕ ಸಂಕಷ್ಟಕ್ಕೆ ಗುರಿಯಾದವು.

ಇದೆಲ್ಲದರ ಪರಿಣಾಮವಾಗಿ ಶಿಕ್ಷಣ ವ್ಯವಸ್ಥೆಯಲ್ಲಿಯೂ ಇದೇ ರೀತಿಯ ಸಮಸ್ಯೆಗಳು ಸೃಷ್ಟಿಯಾದವು. ಮಾತೃಭಾಷಾ ಶಿಕ್ಷಣ ವ್ಯವಸ್ಥೆ ಎಂಬುದನ್ನು ಕೇವಲ ಕನ್ನಡ ಭಾಷಿಕರನ್ನು ದೃಷ್ಟಿಯಲ್ಲಿರಿಸಿಕೊಂಡು ರೂಪಿಸಲಾಗಿದೆ. ಶಿಕ್ಷಣದಲ್ಲಿ ಕನ್ನಡವನ್ನು ಮಾತ್ರ ಪರಿಗಣಿಸಿ ಈ ಮೇಲೆ ತಿಳಿಸಿದ ಭಾಷೆಗಳನ್ನು ಕಡೆಗಣಿಸಲಾಗಿದೆ. ಈ ಹಿನ್ನೆಲೆಯಲ್ಲಿ ಆ ಭಾಷಾ ಸಮುದಾಯದ ಮಕ್ಕಳು ಶಾಲೆಯಲ್ಲಿ ಕನ್ನಡ ಮಕ್ಕಳಿಗೆ ಸರಿಸಮಾನವಾಗಿ ಕಲಿಕೆಯಲ್ಲಿ ಪಾಲ್ಗೊಳ್ಳದೆ ಹಿಂದುಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಂತಹ ಸಮುದಾಯಗಳಲ್ಲಿ ಲಂಬಾಣಿ ಸಮುದಾಯವು ಒಂದು. ಕನ್ನಡ ಭಾಷಾ ಮಕ್ಕಳೊಂದಿಗೆ ದ್ರಾವಿಡ ಮೂಲದ ಇತರೆ ಭಾಷಿಕ ಮಕ್ಕಳು ಕಲಿಕೆಯಲ್ಲಿ ಭಾಗವಹಿಸುವುದು ಬೇರೆ, ಸಮಸ್ಯೆಗಳನ್ನು ಎದುರಿಸುವುದು ಬೇರೆ. ಆದರೆ ಇಂಡೋ ಆರ್ಯನ್ ಮೂಲದ ಲಂಬಾಣಿ ಭಾಷಾ ಸಮುದಾಯದ ಮಕ್ಕಳು ಕನ್ನಡ ಭಾಷಿಕ ಮಕ್ಕಳ ಜೊತೆ ಪಾಲ್ಗೊಳ್ಳುವುದು ಕೆಲವು ಸಮಸ್ಯೆಗಳನ್ನು ಸೃಷ್ಟಿಯಾಗುವುದಕ್ಕೆ ಎಡೆ ಮಾಡಿಕೊಟ್ಟಿದೆ. ಲಂಬಾಣಿ ಭಾಷೆಯ ಧ್ವನಿರಚನೆ, ಪದರಚನೆ ಹಾಗೂ ವಾಕ್ಯರಚನೆಯ ಕ್ರಮಗಳು ದ್ರಾವಿಡ ಭಾಷೆಗಳಿಗೆ ತೀರಾ ಭಿನ್ನವಾಗಿ ಸಂರಚಿತಗೊಂಡಿರುತ್ತವೆ. ಜೊತೆಗೆ ಆ ಭಾಷೆಗೆ ಲಿಪಿಯಿಲ್ಲದ ಕಾರಣಕ್ಕಾಗಿ ಆ ಭಾಷಿಕ ಮಕ್ಕಳ ಕಲಿಕೆಯು ಕನ್ನಡ ಮಾಧ್ಯಮದಲ್ಲಿ ಆಗುವುದರಿಂದ ಹಲವಾರು ಸಮಸ್ಯೆಗಳನ್ನು ನಿರ್ಮಾಣ ಮಾಡಲಾಗುತ್ತಿರುತ್ತದೆ. ಇದೇ ಅಂಶಗಳನ್ನೇ ಹಲವಾರು ಭಾಷಾ ವಿದ್ವಾಂಸರು, ಭಾಷಾ ಆಯೋಗಗಳು ತಮ್ಮ ವರದಿಯಲ್ಲಿ ತಿಳಿಸಿರುವುದು ಕಂಡುಬರುತ್ತದೆ. ಲಂಬಾಣಿ ಭಾಷಾ ಸಮುದಾಯದ ಮಕ್ಕಳಲ್ಲದೆ ಅಂತಹ ಇತರೆ ಭಾಷಿಕರ ಮಕ್ಕಳು ಇದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ತಿಳಿದುಬರುತ್ತದೆ.

ಕನ್ನಡವನ್ನು ಕಲಿಕೆಯ ವಿಷಯಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ. ಕನ್ನಡವನ್ನು ಮಾತನಾಡುತ್ತಿದ್ದವರಿಗೆ ಕನ್ನಡ ಓದುವುದನ್ನು ಮತ್ತು ಬರವಣಿಗೆಯನ್ನು ಕಲಿಸುವುದು ಮತ್ತು ಆಯಾ ಕಾಲದ ಪ್ರಮಾಣ ರೂಪದ ಬಳಕೆಯಲ್ಲಿ ತರಬೇತಿಯನ್ನು ಕೊಡುವುದು ಈ ಕಲಿಕೆಯ ಉದ್ದೇಶವಾಗಿದೆ. ಭಾಷೆಯ ಕಲಿಕೆಯ ತತ್ವಗಳಿಗೂ ಈ ಶಿಕ್ಷಣ ಕ್ರಮಕ್ಕೂ ಯಾವ ಸಂಬಂಧವೂ ಇರುವುದು ಅಗತ್ಯವಿಲ್ಲ. ಏಕೆಂದರೆ ಹೀಗೆ ಕನ್ನಡವನ್ನು ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಈಗಾಗಲೇ ಕನ್ನಡವನ್ನು ಕಲಿತಿರುತ್ತಾರೆ. ಆ ಭಾಷೆಯ ಬಳಕೆ ಸಾಮರ್ಥ್ಯ ಅವರಿಗೆ ಇರುತ್ತದೆ. ಆದರೆ ಬರವಣಿಗೆಯ ಮತ್ತು ಓದಿನ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ಈ ಶೈಕ್ಷಣಿಕ ಪ್ರಕ್ರಿಯೆಗೆ ಅವರು ಒಳಗಾಗುತ್ತಿರುತ್ತಾರೆ. ಆದರೆ ಶಾಲಾ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣ ಪಡೆಯುವ 'ಅನ್ಯ' ಭಾಷಿಕ ಮಕ್ಕಳು ಕನ್ನಡವನ್ನು ದ್ವಿತೀಯ/ತೃತೀಯ ಭಾಷೆಯಾಗಿ ಮತ್ತು ಲಿಪಿ ಇಲ್ಲದ ಇತರೆ ಭಾಷಿಕ ಮಕ್ಕಳು ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಯುವ ವಿದ್ಯಾರ್ಥಿಗಳು ಅದರ ಚೌಕಟ್ಟಿಗೆ ಒಳಪಡುತ್ತಾರೆ. ಇಂಥ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಸಾಮರ್ಥ್ಯ ಇರುವುದು ಮತ್ತು ಇಲ್ಲದಿರುವುದು ನಮ್ಮ ಶಿಕ್ಷಣ ತಜ್ಞರಿಗೆ ಮುಖ್ಯ ಸಂಗತಿಯಾಗಿ ತೋರಿದಂತೆ ಕಾಣಲಿಲ್ಲ. ಏಕೆಂದರೆ

ಮೊದಲ ಗುಂಪಿಗೆ ಸೇರುವ ಎಷ್ಟೋ ವಿದ್ಯಾರ್ಥಿಗಳು ಅಂದರೆ ಉರ್ದು, ತೆಲುಗು, ತಮಿಳು ಮೊದಲಾದ ಮಾತೃಭಾಷೆಯ ಮಾಧ್ಯಮದ ಮೂಲಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಕನ್ನಡವನ್ನು ಎರಡನೆ ಭಾಷೆಯಾಗಿ ಶಾಲೆಯ ಹೊರಗೆ ತಮ್ಮ ಸುತ್ತಮುತ್ತಲಿನ ಕನ್ನಡ ಭಾಷಿಕ ಪರಿಸರದಲ್ಲಿ ಕಲಿತು ಬಳಸುವವರು ಆಗಿರುತ್ತಾರೆ. ಇಂಥವರು ಕನ್ನಡ ಬರವಣಿಗೆಯ ಮತ್ತು ಪ್ರಮಾಣ ಕನ್ನಡದ ರೂಪ ಇವುಗಳನ್ನು ಕಲಿಯುವ ಗುರಿಯನ್ನು ಹೊಂದಿರುತ್ತಾರೆ. ಎರಡನೇ ಗುಂಪಿಗೆ ಸೇರುವ ವಿದ್ಯಾರ್ಥಿಗಳು ಅಂದರೆ ಕರ್ನಾಟಕದಾದ್ಯಂತ ಅಲ್ಲಲ್ಲಿ ನೆಲೆಸಿರುವ ಲಂಬಾಣಿ ಜನಾಂಗ ತನ್ನದೇ ಆದ ಮಾತೃಭಾಷೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದು, ಲಂಬಾಣಿ ಭಾಷಿಕ ಮಕ್ಕಳು ಔಪಚಾರಿಕವಾಗಿ ಕನ್ನಡ ಮಾಧ್ಯಮದಲ್ಲೆ ಶಿಕ್ಷಣವನ್ನು ಪಡೆಯುವ ಅನಿವಾರ್ಯತೆ ಯಿದೆ. ಇಂತಹ ಮಕ್ಕಳು ಕನ್ನಡ ಭಾಷಿಕ ಪರಿಸರದಿಂದ ದೂರ ಇರುವ ಇವರು ಶಾಲೆಯ ಹೊರಗೆ ಮತ್ತು ತಮ್ಮ ಸಮಾಜದಲ್ಲಿ ಮಾತೃಭಾಷೆಯಾದ ಲಂಬಾಣಿಯನ್ನು ಮಾತ್ರ ಕಲಿತು ಬಳಸುವವರು ಆಗಿರುತ್ತಾರೆ. ಆದರೆ ಲಂಬಾಣಿ ಭಾಷಿಕ ಮಕ್ಕಳು ಶಾಲೆಗೆ ಬರುವ ಪೂರ್ವದಲ್ಲಿ ಅಲ್ಲಲ್ಲಿ ಕೇವಲ ಕೇಳುವಿಕೆಯ ನೆಲೆ ಯಲ್ಲಿ ಕನ್ನಡ ಭಾಷೆ ಅವರ ಕಿವಿಯ ಮೇಲೆ ಬಿದ್ದಿರುತ್ತದೆ. ಆದರೆ ಅದು ಆ ಮಕ್ಕಳ ಆಲಿಸುವಿಕೆಯಾಗಿ ರುವುದಿಲ್ಲ. ಆದ್ದರಿಂದ ಶಾಲೆಯ ತರಗತಿಗಳಲ್ಲೆ ಕನ್ನಡ ಭಾಷೆಯ ಎಲ್ಲಾ ಕೌಶಲಗಳನ್ನು ಕನ್ನಡ ಮಾತೃಭಾಷಿಕ ಮಕ್ಕಳಿಗೆ ಸರಿಸಮಾನವಾಗಿ ಗ್ರಹಿಸಿ, ಏಕ ಮಾದರಿಯ ಪಠ್ಯಕ್ರಮವನ್ನು ಅಳವಡಿಸಿ, ಏಕ ಮಾದರಿಯ ಬೋಧನಾ ವಿಧಾನ ಮತ್ತು ಕಲಿಕೆಯಲ್ಲಿ ತೊಡಗಿಸಲಾಗುತ್ತಿದೆ. ಆದರೆ ಇಂತಹ ಮಕ್ಕಳಿಗೆ ಕನ್ನಡ ಪಠ್ಯಕ್ರಮ, ಬೋಧನಾ ವಿಧಾನ ಮತ್ತು ಕಲಿಕೆಯ ಸ್ವರೂಪವನ್ನು ಬದಲಿಸಬೇಕಾದ ಅಗತ್ಯತೆ ಇದೆ.

ಭಾಷಾ ಬೋಧನೆಯು ಶಿಕ್ಷಣದ ಅವಿಭಾಜ್ಯ ಅಂಗ. ವಿದ್ಯಾರ್ಥಿಗಳನ್ನು ಕಲಿಯುವಂತೆ ಪ್ರೇರೇಪಿಸುವುದೇ ಬೋಧನೆಯಾಗಿರುತ್ತದೆ. ಕಲಿಕೆ ಆಗಿದೆ ಅಥವಾ ಆಗಿಲ್ಲ ಎನ್ನುವುದು ಬೋಧನೆಯ ಆಧಾರದಿಂದ ನಿರ್ಧರಿತ ವಾಗುತ್ತಿರುತ್ತದೆ. ಮಕ್ಕಳಲ್ಲಿ ಕಲಿಕೆಗೆ ಅಗತ್ಯವಾದ ಆಲಿಸುವ, ಮಾತನಾಡುವ, ಓದುವ ಮತ್ತು ಬರೆಯುವ ಮೊದಲಾದ ಉದ್ದೇಶಿತ ಸಾಮರ್ಥ್ಯಗಳನ್ನು ಕಲಿಸುವುದೆ ಬೋಧನೆಯ ಮುಖ್ಯ ಗುರಿ. ಕಲಿಕೆಯಲ್ಲಿ ಭಾಷೆಯ ಧ್ವನಿಸಂಕೇತಗಳು ಅಥವಾ ಪದ ಸಂಪತ್ತನ್ನು ಗ್ರಹಿಸಿ ಅರ್ಥ ಮಾಡಿಕೊಳ್ಳುವುದನ್ನು ಆಲಿಸುವಿಕೆ ಎನ್ನಲಾಗುತ್ತದೆ. ಕೇಳಿಸುವಿಕೆ ಆಲಿಸುವಿಕೆಯ ಒಂದು ಭಾಗ. ನಮ್ಮ ಕಿವಿಗೆ ಬೀಳುವ ಶಬ್ದಗಳೆಲ್ಲ ಆಲಿಸುವಿಕೆಯಾಗುವುದಿಲ್ಲ. ಆಲಿಸುವಿಕೆಯು ಒಂದು ಪ್ರಜ್ಞಾಪೂರ್ವಕ, ಉದ್ದೇಶ ಪೂರ್ವಕ ಹಾಗೂ ಮಾನಸಿಕ ಕ್ರಿಯೆಯಾಗಿದ್ದು, ಕೇಳುವ ಶಬ್ದಗಳನ್ನು ಅರ್ಥ ಮಾಡಿಕೊಳ್ಳುವುದೇ ಆಗಿದೆ. ಕೇಳುಗರ ಏಕಾಗ್ರತೆ ಬೌದ್ಧಿಕ ಹಾಗೂ ಉದ್ದೇಶಗಳ ಸಾಮರ್ಥ್ಯಕ್ಕನುಗುಣವಾಗಿ ಗ್ರಹಿಕೆಯಾಗುತ್ತಿರುತ್ತದೆ.

ಲಂಬಾಣಿ ಭಾಷಿಕ ಮಕ್ಕಳು ಕನ್ನಡ ಭಾಷೆಯನ್ನು ಅತ್ಯಂತ ಕನಿಷ್ಟವಾಗಿ ಆಲಿಸುವಂತಹ ಪರಿಸ್ಥಿತಿಯೂ ಇಲ್ಲ. ಆದ್ದರಿಂದ ತರಗತಿಗಳಲ್ಲಿ ಕನ್ನಡ ಭಾಷೆಯನ್ನು ತಮ್ಮ ಮಾತೃಭಾಷೆಯ ಮೂಲಕ ಗ್ರಹಿಸಿ ಅರ್ಥ ಮಾಡಿಕೊಳ್ಳುವುದು ನಡೆಯುತ್ತಿರುತ್ತದೆ. ಉದಾಹರಣೆಗೆ ಚಿತ್ರದ ಮೂಲಕ ಭಾಷೆಯನ್ನು ಕಲಿಯುವ ಸಂದರ್ಭ ದಲ್ಲಿ ಕನ್ನಡದ 'ಆಕಳು' ಎಂಬ ಪದವನ್ನು 'ಗಾವಡಿ' ಎಂದೂ ಎಮ್ಮೆ ಎಂಬ ಪದವನ್ನು 'ಭೇಂಸಿ' ಎಂದೂ, 'ಮೊಲ' ಎಂಬ ಪದವನ್ನು 'ಸಸ್ಯ' ಎಂದೂ, 'ಸರ' ಎಂಬ ಪದವನ್ನು 'ಲಾಲ್ಡಿ' ಎಂದೂ, ಹೀಗೆ

ತಮ್ಮ ಮಾತೃ ಭಾಷೆಯ ಮೂಲಕ ಗ್ರಹಿಸಿ, ಆಲಿಸುವುದು ವಿಶಿಷ್ಟವಾಗಿ ಕಂಡುಬರುತ್ತದೆ. ಪದ ಮತ್ತು ವಾಕ್ಯಗಳ ರಚನೆಯ ಸಾಮರ್ಥ್ಯ, ಗದ್ಯ ಪದ್ಯಗಳ ಸಾಂದರ್ಭಿಕ ಸಂಭಾಷಣೆ, ಗ್ರಹಿಕೆ ಹಾಗೂ ಅಭಿವ್ಯಕ್ತಿ ಇವೆಲ್ಲವೂ ಆಲಿಸುವಿಕೆಯಲ್ಲಿ ಬರುತ್ತವೆ. ಲಂಬಾಣಿ ಭಾಷಿಕ ಮಕ್ಕಳು ಕನ್ನಡದ ಸಂದರ್ಭದಲ್ಲಿ ಏಕಭಾಷಿಕರು ಮತ್ತು ದ್ವಿಭಾಷಿಕರೂ ಹೌದು. ಇಂತಹ ಮಕ್ಕಳಿಗೆ ಆಲಿಸುವ ಪ್ರಕ್ರಿಯೆ ತನ್ನಿಂದ ತಾನೆ ಬರುವುದಿಲ್ಲ. ಆಲಿಸುವಿಕೆಯ ಕ್ರಿಯೆಯು ಹೇಳುವ ಕ್ರಿಯೆಯನ್ನು ಪ್ರಧಾನವಾಗಿ ಅವಲಂಬಿಸಿರುತ್ತದೆ. ಆಲಿಸುವಿಕೆಯಲ್ಲಿ ಕಂಡುಬರುವ ದೋಷಗಳಿಗೆ ಹಲವಾರು ಕಾರಣಗಳನ್ನು ಗುರ್ತಿಸಬಹುದಾದರೂ ಹೇಳುವಿಕೆ ಯಲ್ಲಿನ ದೋಷಗಳು ಆಲಿಸುವಿಕೆಯ ಮೇಲೆ ಪ್ರಭಾವ ಬೀರುತ್ತವೆ. ಅದಕ್ಕಾಗಿ ಇಂತಹ ಮಕ್ಕಳಲ್ಲಿ ಉತ್ತಮ ಆಲಿಸುವಿಕೆಯ ಕೌಶಲ ಬೆಳೆಸಲು ಶಿಕ್ಷಕರು ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ಲಂಬಾಣಿ ಭಾಷಿಕ ಮಕ್ಕಳು ಶಾಲೆಯ ಪ್ರವೇಶ ಪಡೆಯುವವರೆಗೆ ಲಂಬಾಣಿ ಭಾಷೆಯ ಹೊರತು ಬೇರೆ ಭಾಷೆಯ ಬಳಕೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾತೃಭಾಷೆಯಾದ ಲಂಬಾಣಿಯ ಪದ ಸಂಪತ್ತನ್ನು ತುಂಬಿಕೊಂಡು ಬಂದ ಲಂಬಾಣಿ ಮಕ್ಕಳಿಗೆ ಕನ್ನಡ ಭಾಷೆಯ ಶಾಲೆಗೆ ಬಂದಾಗ ಹೊಸದೊಂದು ಪ್ರಪಂಚಕ್ಕೆ ಕಾಲಿಟ್ಟಂತಾಗುತ್ತದೆ. ಕನ್ನಡ ಭಾಷೆಯ ಯಾವುದೊಂದು ಪದ, ವಾಕ್ಯ ಬಳಕೆಯನ್ನು ಮಾಡದ ಲಂಬಾಣಿ ಮಕ್ಕಳಿಗೆ ಈಗಾಗಲೇ ಕನ್ನಡ ಮಾತೃಭಾಷೆಯನ್ನು ಹೊಂದಿದ, ಕನ್ನಡ ಭಾಷಿಕ ಪರಿಸರದಲ್ಲಿ ಬೆಳೆದು ಕನ್ನಡ ಪದ ಸಂಪತ್ತನ್ನು ತಲೆಯಲ್ಲಿ ತುಂಬಿಕೊಂಡ ಮಕ್ಕಳು ಕನ್ನಡ ಭಾಷೆಯನ್ನು ಮಾತನಾಡುವುದು ಮತ್ತು ಆಲಿಸಿ ಅರ್ಥ ಮಾಡಿಕೊಳ್ಳುವ ಮನಸ್ಥಿತಿಯನ್ನು ಹೊಂದಿರುತ್ತಾರೆ. ಇಂತಹ ಮಕ್ಕಳನ್ನು ಗಮನದಲ್ಲಿರಿಸಿ ರಚಿಸಿದ ಕನ್ನಡ ಪಠ್ಯಪುಸ್ತಕ ಲಂಬಾಣಿ ಮಕ್ಕಳಿಗೆ ಎಷ್ಟರ ಮಟ್ಟಿಗೆ ಕನ್ನಡ ಮಕ್ಕಳ ಸರಿಸಮವಾಗಿ ಪಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ಚಿಂತನೆ ಮಾಡಬೇಕಾದ ವಿಚಾರ. ಹೀಗಾಗಿ ಲಂಬಾಣಿ ಮಕ್ಕಳು ೬ನೇ ವಯಸ್ಸಿಗೆ ಕನ್ನಡ ಭಾಷೆ ಕಲಿಯಲು ತೊಡಗುವುದರಿಂದ ಕನ್ನಡದ ಧ್ವನಿ, ಪದ ಪರಿಚಯ, ಸರಳ ವಾಕ್ಯಗಳನ್ನು ಕಲಿಯಲು ಮತ್ತು ಕನ್ನಡದಲ್ಲಿ ಹೇಳಿದ್ದನ್ನು ಅರ್ಥ ಮಾಡಿಕೊಳ್ಳಲು ಒಂದೆರಡು ವರ್ಷಗಳೇ ಬೇಕಾಗುತ್ತದೆ. ಅದಲ್ಲದೆ ಮಾತೃಭಾಷೆಯ ಪ್ರಭಾವ ಕನ್ನಡ ಭಾಷೆಯನ್ನು ನಿಯಂತ್ರಿಸುತ್ತಿರುತ್ತದೆ. ಹೀಗಾಗಿ ಉಚ್ಚಾರಣೆಯಲ್ಲಿ ಲಂಬಾಣಿ ಭಾಷೆಯ ಪ್ರಭಾವವನ್ನು ನೋಡಬಹುದು. ಒಂದು ಮತ್ತು ಎರಡನೆ ತರಗತಿಯ ಮಕ್ಕಳಿಗೆ ಕನ್ನಡ ಭಾಷೆಯ ಉಚ್ಚಾರಣೆಯು ಕಷ್ಟವಾಗುತ್ತಿರುತ್ತದೆ. ಹೀಗಿರುವಾಗ ಲಂಬಾಣಿ ಮಕ್ಕಳು ಒಂದನೆ ತರಗತಿಯಲ್ಲಿ ಕಲಿಯಬೇಕಾದ ವಿಷಯವನ್ನು ೩ನೇ ತರಗತಿಗೆ ಬಂದಾಗ ಕಲಿಯಲು ಪ್ರಾರಂಭಿಸುತ್ತಾರೆ. ಅಂದರೆ ಕನ್ನಡ ಭಾಷೆಯ ಪದಪರಿಚಯ ಸರಳ ವಾಕ್ಯಗಳನ್ನು ಹೇಳುವ ಮತ್ತು ಹೇಳಿದ್ದನ್ನು ಸ್ವಲ್ಪ ಪ್ರಮಾಣದಲ್ಲಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಆಗ ಪಡೆದುಕೊಳ್ಳುತ್ತಿರುತ್ತಾರೆ. ಹೀಗಾಗಿ ಲಂಬಾಣಿ ಭಾಷಿಕ ಮಕ್ಕಳಲ್ಲಿ ಆಲಿಸುವಿಕೆ ಮತ್ತು ಮಾತನಾಡುವಿಕೆಯಲ್ಲಿನ ಕೊರತೆಯಿಂದಾಗಿ ಓದು ಮತ್ತು ಬರವಣಿಗೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದರಲ್ಲಿ ಒಂದರಿಂದ ನಾಲ್ಕನೆಯ ತರಗತಿಯ ಮಕ್ಕಳು ಕನ್ನಡ ಕಲಿಕೆಯಲ್ಲಿ ಭಾಷಾ ಸಮಸ್ಯೆಯನ್ನು ಎದುರಿಸುತ್ತಿರುವುದು ಪ್ರಸ್ತುತ ಅಧ್ಯಯನ ಖಚಿತಪಡಿಸುತ್ತದೆ.

ಲಂಬಾಣಿ ಮಕ್ಕಳು ಕನ್ನಡ ಕಲಿಕೆಯಲ್ಲಿ ತೊಂದರೆ ಅನುಭವಿಸುವ ಈ ಸನ್ನಿವೇಶಕ್ಕೆ ಇರುವ ಬಲವಾದ ಕಾರಣ ನಮ್ಮ ಶಿಕ್ಷಣ ತಜ್ಞರು ಭಾಷಾ ಕಲಿಕೆಯ ಬಗೆಗೆ ಹೊಂದಿರುವ ಸಿದ್ಧಾಂತದಲ್ಲಿದೆ. ಕಲಿಕೆ ಎನ್ನುವ ವಿಷಯದ ವ್ಯಾಪ್ತಿಯಲ್ಲಿ ಎಲ್ಲವನ್ನು ತಂದು ಸೇರಿಸುವ ಈ ಸಿದ್ಧಾಂತದಲ್ಲಿ ಭಾಷಾ ಕಲಿಕೆಯ ಸ್ವರೂಪದ ಬಗೆಗೆ ಯಾವ ವಿಶಿಷ್ಟವಾದ ನೆಲೆಗಳೂ ಕಂಡುಬರುತ್ತಿಲ್ಲ. ಗೊತ್ತಿಲ್ಲದ ಸಾಮರ್ಥ್ಯವನ್ನು ಪಡೆದುಕೊಳ್ಳುವುದು ಎಲ್ಲ ಕಲಿಕೆಗಳ ಮೂಲ ಉದ್ದೇಶ. ಆದರೆ ಕನ್ನಡ ಮಕ್ಕಳ ವಿಚಾರದಲ್ಲಿ ಭಾಷೆ ಕಲಿಕೆ ಎನ್ನುವುದು ಗೊತ್ತಿಲ್ಲದ ಸಾಮರ್ಥ್ಯದ ಗಳಿಕೆಯಲ್ಲ. ಓದು ಮತ್ತು ಬರವಣಿಗೆಗೆ ಸಂಬಂಧಿಸಿದಂತೆ ಈ ಮಾತು ನಿಜವಾದುದಾರೂ ಪ್ರಾಥಮಿಕ ಕೌಶಲಗಳಾದ ಮಾತನಾಡುವುದು ಮತ್ತು ಕೇಳಿ ತಿಳಿದುಕೊಳ್ಳುವುದು ಈಗಾಗಲೇ ಕಲಿಯುವವರ ಸಾಮರ್ಥ್ಯದ ಭಾಗವಾಗಿರುತ್ತದೆ. ಆದರೆ ಲಂಬಾಣಿ ಮಕ್ಕಳ ವಿಚಾರದಲ್ಲಿ ಪ್ರಾಥಮಿಕ ಕೌಶಲಗಳಾದ ಮಾತನಾಡುವುದು ಮತ್ತು ಕೇಳಿ ಅರ್ಥಮಾಡಿಕೊಳ್ಳುವುದು ಸಹ ಶಾಲೆಯಲ್ಲೆ ನಡೆಯಬೇಕಾಗುತ್ತದೆ. ಈ ಕೌಶಲಗಳನ್ನು ನಮ್ಮ ಶಿಕ್ಷಣ ಕ್ರಮದಲ್ಲಿ ಹೇಗೆ ನಿರ್ವಹಿಸಬೇಕು ಎಂಬುದು ಅತ್ಯಂತ ಗೊಂದಲದ ವಿಚಾರವಾಗಿದೆ. ಮೊದಲು ಇದಕ್ಕೆ ಸೂಕ್ತ ಕ್ರಮಗಳನ್ನು ಜರುಗಿಸಬೇಕಾದ ನಿಟ್ಟಿನಲ್ಲಿ ಚರ್ಚೆಯಾಗಬೇಕಾದ ಅಗತ್ಯತೆ ಇದೆ.

ನಮ್ಮ ಶಿಕ್ಷಣ ಕ್ರಮದಲ್ಲಿ ಎಷ್ಟು ಭಾಷೆಗಳನ್ನು ಎಷ್ಟು ಪ್ರಮಾಣದಲ್ಲಿ ಮತ್ತು ಯಾವ ಯಾವ ಹಂತದಲ್ಲಿ ಕಲಿಸಬೇಕು ಎಂಬ ಬಗ್ಗೆ ನಡೆದಿರುವ ಪ್ರಯೋಗಗಳ ಸಂಖ್ಯೆ ಅಧಿಕವಾಗಿದೆ. ಅದಕ್ಕೆ ಹೋಲಿಸಿದರೆ ಶಿಕ್ಷಣದಲ್ಲಿ ಭಾಷಾ ಕಲಿಕೆಯ ವಿಧಾನವನ್ನು ಬದಲಾಯಿಸಲು ನಡೆದಿರುವ ಪ್ರಯೋಗಗಳು ತುಂಬಾ ಕಡಿಮೆ ಯಾಗಿವೆ. ಈಗ ಕನ್ನಡವನ್ನು ಕನ್ನಡ ಮಕ್ಕಳು ಕಲಿಯುತ್ತಿಲ್ಲ ಎನ್ನುವ ಆತಂಕ ಹೆಚ್ಚಾಗುತ್ತಿರುವಾಗ ಇನ್ನು ಲಂಬಾಣಿ ಮಕ್ಕಳು ಮತ್ತು ಅಂತಹ ಇತರ ಭಾಷಿಕ ಮಕ್ಕಳ ಕಲಿಕೆಯನ್ನು ಸುಧಾರಿಸಲು ಪರ್ಯಾಯ ಬೋಧನಾ ವಿಧಾನವನ್ನು ರೂಪಿಸಬೇಕಾದ ಅಗತ್ಯತೆ ಇದೆ. ಮನೆಯಲ್ಲಿ ಲಂಬಾಣಿಯನ್ನು ಬಳಸುವ ಮಕ್ಕಳು ಶಾಲಾ ಶಿಕ್ಷಣದಲ್ಲಿ ಕನ್ನಡ ಬರವಣಿಗೆ ಮತ್ತು ಪ್ರಮಾಣ ರೂಪಗಳ ಪರಿಚಯವನ್ನು ಪಡೆಯದೇ ಹೋಗುತ್ತಾರೆ ಅಥವಾ ಹಾಗೆ ಪಡೆದರೂ ಅದು ಕೇವಲ ಔಪಚಾರಿಕವಾಗಿದ್ದು, ಶಾಲಾ ಶಿಕ್ಷಣದ ಅನಂತರದಲ್ಲಿ ಅದು ಸಂಪೂರ್ಣವಾಗಿ ನಿರುಪಯುಕ್ತವಾಗುತ್ತದೆ.

ಒಟ್ಟಾರೆಯಾಗಿ ಲಂಬಾಣಿ ಭಾಷಿಕ ಮಕ್ಕಳು ಔಪಚಾರಿಕವಾಗಿ ಕನ್ನಡ ಕಲಿಯುವಲ್ಲಿ ಕಂಡುಕೊಂಡ ಫಲಿತಗಳನ್ನು ಈ ಕೆಳಕಂಡತೆ ನೋಡಬಹುದಾಗಿದೆ.

* ಲಂಬಾಣಿ ಮಕ್ಕಳಿಗೆ ಬೋಧನೆ ಮಾಡುವಾಗ ಬಳಕೆಯಾಗುವ ಭಾಷೆ ಕನ್ನಡವಾಗಿದ್ದು, ಅದು ಆ ಮಕ್ಕಳಿಗೆ 'ಅನ್ಯ' ಭಾಷೆಯಾಗಿರುತ್ತದೆ. ಅಲ್ಲದೆ ಬೋಧನೆಗೆ ಅಳವಡಿಸಿರುವ ವಿಷಯ ವಸ್ತುಗಳೂ ಅವರಿಗೆ ಅಪರಿಚಿತವಾಗಿರುತ್ತವೆ. ಆದ್ದರಿಂದ ಬೋಧನೆಗೆ ಬಳಕೆ ಮಾಡುವಂತಹ ಭಾಷೆ ಮಾತೃಭಾಷೆ ಯಾಗಿರಬೇಕು. ಇಲ್ಲವೆ ಪಠ್ಯದಲ್ಲಿರುವ ವಿಷಯವಾದರೂ ಲಂಬಾಣಿ ಸಂಸ್ಕೃತಿಯದ್ದಾಗಿರ ಬೇಕು. ಇವೆರಡೂ ಅಂಶಗಳು ಸಾಧ್ಯವಿಲ್ಲವಾದರೆ ಬೋಧನೆ ಮತ್ತು ಮಕ್ಕಳ ಕಲಿಕೆ ಯಶಸ್ವಿ ಯಾಗುವುದಿಲ್ಲ.

* ಸಿದ್ಧ ಮಾದರಿಯ ಪಠ್ಯವಸ್ತು ಅಥವಾ ಪಠ್ಯಕ್ರಮವನ್ನು ಬಿಟ್ಟು ಅವರ ಸಾಂಸ್ಕೃತಿಕ ಅಂಶಗಳ ಆಧಾರದ ಮೇಲೆ ಚಟುವಟಿಕೆಯುಕ್ತ ಸರಳವಾದ ಪಠ್ಯವಸ್ತುವನ್ನು ರಚಿಸಬೇಕು. ಇದು ಪ್ರಾಥಮಿಕ ಹಂತಕ್ಕೆ ಸೀಮಿತವಾಗಿರಬೇಕು.

* ಒಂದು ಮತ್ತು ಎರಡನೆ ತರಗತಿ ಲಂಬಾಣಿ ಭಾಷಿಕ ಮಕ್ಕಳಿಗೆ ಪಠ್ಯಪುಸ್ತಕ ನಿಗದಿಗೊಳಿಸದೆ ಅವರ ಭಾಷೆಯ ಮೂಲಕ ಕನ್ನಡ ಭಾಷೆಯ ಧ್ವನಿ, ಪದ ಮತ್ತು ವಾಕ್ಯಗಳನ್ನು ಅರ್ಥಸಹಿತ ಪರಿಚಯ ಮಾಡಿಕೊಡುತ್ತಾ ಆಲಿಸುವ ಮತ್ತು ಮಾತನಾಡುವ ಕೌಶಲದ ಕಡೆಗೆ ಹೆಚ್ಚು ಗಮನಕೊಡಬೇಕು.

* ಲಂಬಾಣಿಗರು ವಲಸೆ ಹೋಗುತ್ತಿರುವುದರಿಂದ ಅವರ ಮಕ್ಕಳ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲುತ್ತದೆ. ಆದ್ದರಿಂದ ವಲಸೆ ಹೋಗುವ ಮಕ್ಕಳೆಲ್ಲರಿಗೂ ಖಾಯಂ ವಸತಿಯುಕ್ತ ಶಾಲೆಯನ್ನು ನಿರ್ಮಿಸುವುದು ತುಂಬಾ ಅಗತ್ಯವಾಗಿದೆ. ಹಾಗೂ ಸಂಚಾರಿ ಶಾಲೆಗಳನ್ನು ತೆರೆದು ಪರಿಣಾಮಕಾರಿಯಾಗಿ ಕಲಿಕೆ ಬೋಧನೆಯನ್ನು ಆಯೋಜಿಸಬೇಕಾಗಿದೆ.

* ಲಂಬಾಣಿ ಭಾಷಿಕ ಮಕ್ಕಳಿಗೆ ವಸತಿ ಶಾಲೆಯನ್ನು ಕನ್ನಡ ಭಾಷಿಕ ಪರಿಸರದಲ್ಲಿ ನಿರ್ಮಿಸುವ ಮೂಲಕ ಕನ್ನಡ ಭಾಷೆಯ ಒಡನಾಟವನ್ನು ಆರಂಭದಿಂದಲೇ ಕಲ್ಪಿಸಿ ಕೊಡುವಂತಾಗಬೇಕು.

* ಏಕಮಾದರಿ ಶಿಕ್ಷಣ ಕ್ರಮವನ್ನು ತೆಗೆದು ಹಾಕಿ ಬಹುಮಾದರಿ ಶಿಕ್ಷಣ ಕ್ರಮವನ್ನು ಅಳವಡಿಸಬೇಕು. ಆಯಾ ಸಾಮಾಜಿಕ ಪರಿಸರಕ್ಕೆ ಅನುಗುಣವಾಗಿ ಪಠ್ಯಕ್ರಮ ರಚನೆಯಾಗಬೇಕು. ಅಂತಹ ಪಠ್ಯಕ್ರಮಕ್ಕೆ ಅಳವಡಿಸುವ ಭಾಷೆಯಲ್ಲಿ ಸಡಿಲ ನೀತಿಯನ್ನು ಅನುಸರಿಸಬೇಕು.

* ಪ್ರಾಥಮಿಕ ತಾಂಡಾ ಶಾಲೆಗಳಿಗೆ ಲಂಬಾಣಿ ಮಾತೃಭಾಷೆಯ ಶಿಕ್ಷಕರನ್ನು ನೇಮಕ ಮಾಡಬೇಕು.

* ಶಿಕ್ಷಕರು ಯಾಂತ್ರಿಕವಾಗಿ ಬೋಧನೆ ಮಾಡದೆ ಮಕ್ಕಳ ಸಾಮಾಜಿಕ ಮತ್ತು ಮಾನಸಿಕ, ಬೌದ್ಧಿಕ ಅಂಶಗಳನ್ನು ತಿಳಿದುಕೊಂಡು ಅವರ ಮಾನಸಿಕ ಮಟ್ಟಕ್ಕಿಳಿದು ಬೋಧನೆ ಮಾಡಬೇಕು. ಬೋಧನಾ ಕ್ರಮಗಳಲ್ಲಿ ಸಾಕಷ್ಟು ಬದಲಾವಣೆ ಮಾಡುವ ಅಗತ್ಯತೆಯಿದೆ.

* ಲಂಬಾಣಿ ಭಾಷಿಕ ಮಕ್ಕಳಿಗೆ ಅಗತ್ಯವಾದ ಮತ್ತು ಸೂಕ್ಷ್ಮವಾದ ಭಾಷಾ ಯೋಜನೆಗಳನ್ನು ರೂಪಿಸುವ ಅಗತ್ಯತೆ ಇದೆ.

* ಲಂಬಾಣಿಗರಿಗೆ ವಲಸೆ ಪ್ರಕ್ರಿಯೆಯಿಂದ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಆಗುವ ದುಷ್ಪರಿಣಾಮಗಳನ್ನು ತಿಳಿಸಿ, ಪಾಲಕರ ಮನಃ ಪರಿವರ್ತನೆ ಮಾಡಬೇಕಾಗಿದೆ.

* ಲಂಬಾಣಿ ಸಮುದಾಯದವರಿಗೆ ಶಿಕ್ಷಣದ ಅಗತ್ಯತೆ ಹಾಗೂ ಅದರ ಮಹತ್ವವನ್ನು ಕುರಿತು ಕಾರ್ಯಗಾರ ಗಳನ್ನು ಹಮ್ಮಿಕೊಳ್ಳುವ ಮೂಲಕ ತಿಳಿವಳಿಕೆ ಮತ್ತು ಜಾಗೃತಿಯನ್ನು ಮೂಡಿಸಬೇಕು.

* ಮಕ್ಕಳ ಶಿಕ್ಷಣದ ಕುರಿತು ಪಾಲಕರ ಜವಾಬ್ದಾರಿಗಳನ್ನು ಮನ ಮುಟ್ಟುವಂತೆ ತಿಳಿಯಪಡಿಸಬೇಕು.

* ಲಂಬಾಣಿ ಮಕ್ಕಳ ಸ್ವಚ್ಛತೆ, ಆರೋಗ್ಯ ಮತ್ತು ಶಿಕ್ಷಣ ಮೊದಲಾದವುಗಳ ಕುರಿತು ಪಾಲಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

* ಲಂಬಾಣಿ ಭಾಷಿಕ ಮಕ್ಕಳಿರುವ ಶಾಲೆಗಳಲ್ಲಿ ೨೦ ಮಕ್ಕಳಿಗೆ ಒಬ್ಬ ಶಿಕ್ಷಕರಂತೆ ನೇಮಕ ಮಾಡಿದಾಗ ಮಾತ್ರ ಮಕ್ಕಳ ಕಲಿಕೆಯಲ್ಲಿ ಸ್ವಲ್ಪವಾದರೂ ಬದಲಾವಣೆ ಮತ್ತು ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ.

* ಶಿಕ್ಷಕರನ್ನು ಆದಷ್ಟು ಬಿಸಿಊಟ, ಕಟ್ಟಡಗಳ ಮೇಲ್ವಿಚಾರಣೆ ಮೊದಲಾದ ಕೆಲಸಗಳಿಂದ ಮುಕ್ತಗೊಳಿಸಿ, ಮಕ್ಕಳ ಪರಿಣಾಮಕಾರಿ ಕಲಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸುವಂತೆ ಮಾಡಬೇಕಾಗಿದೆ.

* ಮಕ್ಕಳ ಕಲಿಕೆಗಾಗಿ ತಯಾರಿಸುವ ಕಲಾಚಿತ್ರಗಳು ಕೇವಲ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗದೆ ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಸಿ ಮಕ್ಕಳ ಹೆಚ್ಚಿನ ಕಲಿಕೆಗೆ ಅನುವು ಮಾಡಿಕೊಟ್ಟರೆ ಮಾತ್ರ ಪರಿಣಾಮ ಕಲಿಕೆಯನ್ನು ಕಾಣಬಹುದಾಗಿದೆ. ಆದರೆ ಇವತ್ತಿನ ಶೈಕ್ಷಣಿಕ ಕ್ಷೇತ್ರದಲ್ಲಿ ಅದರಲ್ಲೂ ಪ್ರಾಥಮಿಕ ಶಾಲೆಯ ಹಂತದಲ್ಲಿನ ಚಟುವಟಿಕೆ ಆಧಾರಿತ ಕಲಿಕಾ ಸಾಮಗ್ರಿಗಳು ಶಿಕ್ಷಣಾಧಿಕಾರಿಗಳು ವೀಕ್ಷಣೆಗಾಗಿ ಬಂದಾಗ ರೇಕಾರ್ಡ್ಸ್‌ಗಾಗಿ ತಾತ್ಕಾಲಿಕವಾಗಿ ತೋರಿಸುವುದಕ್ಕೆ ಮತ್ತು ಯಾವುದಾದರೂ ಕಲಾ ಪ್ರದರ್ಶನದಲ್ಲಿ ಸ್ಥಾನವನ್ನು ಗಿಟ್ಟಿಸಿಕೊಳ್ಳಲು ನಡೆಯುವ ಪ್ರಯತ್ನಗಳಾಗಿವೆ. ಹೆಚ್ಚಿನ ಶಿಕ್ಷಕರು ಕಲಿಕಾ ಸಾಮಗ್ರಿಗಳ ಮೂಲಕ ಚಟುವಟಿಕೆ ಆಧಾರಿತ ಬೋಧನೆ ಮಾಡುವುದು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತಿದ್ದು, ಮತ್ತೆ ಅದೇ ಹಳೆಯ ಮಾದರಿಯ ಮೂಲಕ ಬೋಧನೆ ಮಾಡುವುದು ಕಂಡು ಬರುತ್ತಿದೆ. ಇದರಿಂದ ಹೆಚ್ಚಿನ ಗುಣಮಟ್ಟದ ಶಿಕ್ಷಣವನ್ನು ಮಕ್ಕಳು ಪಡೆಯಲು ಸಾಧ್ಯವಾಗುತ್ತಿಲ್ಲ. ಇಂತಹ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸೂಕ್ತವಾದ ಕ್ರಮಗಳನ್ನು ಜರುಗಿಸಬೇಕಾಗಿದೆ.

ಜಗತ್ತಿನ ಪ್ರತಿಯೊಂದು ಭಾಷಿಕ ಮಗುವಿಗೂ ತನ್ನ ಎಲ್ಲ ಆಲೋಚನೆ, ಕಲಿಕೆಗಳನ್ನು ನೆರವೇರಿಸಿ ಕೊಳ್ಳುವ ಅವಕಾಶ ತನ್ನ ಮಾತೃಭಾಷೆಯಿಂದ ಮಾತ್ರ ಸಾಧ್ಯವಿರುತ್ತದೆ. ಆದ್ದರಿಂದ ಅದರ ಎಲ್ಲಾ ಚಟುವಟಿಕೆಗಳು ಹಾಗೂ ಮಾತೃಭಾಷೆಗೆ ಅವಿನಾಭಾವ ಸಂಬಂಧಗಳಿರುತ್ತವೆ. ಆ ಕಾರಣಕ್ಕಾಗಿ ಮಗುವಿಗೆ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿಯೆ ಲಭ್ಯವಾಗುವಂತೆ ಅವಕಾಶ ಮಾಡಿಕೊಡಬೇಕಾಗಿದೆ. ಆದರೆ ನಮ್ಮ ಆಡಳಿತ ಪದ್ಧತಿಯಲ್ಲಿ ಕೇವಲ ಡಾಮಿನೆಂಟ್ ಭಾಷೆಗಳನ್ನೇ ಶಿಕ್ಷಣದ ಮಾಧ್ಯಮವನ್ನಾಗಿ ಅಳವಡಿಸಿ ಲಿಪಿರಹಿತ ಹಲವಾರು ಭಾಷೆಯ ಮಕ್ಕಳಿಗೆ ಮಾತೃಭಾಷೆಯಲ್ಲಿ ಕಲಿಕೆಯ ಅವಕಾಶವನ್ನು ಇಲ್ಲವಾಗಿಸಲಾಗಿದೆ. ಈ ಸಮಸ್ಯೆಯು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಧಾನವಾಗಿದೆ. ಈ ಕುರಿತು ಪರಿಣಾಮಕಾರಿ ನೀತಿಗಳನ್ನು ಜಾರಿಗೊಳಿಸುವುದು ಶಿಕ್ಷಣಶಾಸ್ತ್ರಜ್ಞರು ಹಾಗೂ ಸರ್ಕಾರಗಳ ಜವಾಬ್ದಾರಿಯಾಗಿದೆ.

ಅನುಬಂಧ

- ಪ್ರಶ್ನಾವಳಿಗಳು
- ಪರಾಮರ್ಶನ ಗ್ರಂಥಗಳು

ಅನುಬಂಧ

ವಿದ್ಯಾರ್ಥಿಗಳ ಪ್ರಶ್ನಾವಳಿ

೧. ಶಾಲೆಯ ಹೆಸರು: ....ಖಾಸಗಿ / ಸರ್ಕಾರಿ

ಮಾಧ್ಯಮ ....

ವಿದ್ಯಾರ್ಥಿ ಹೆಸರು :

ತರಗತಿ :

ವಿಭಾಗ :

ಲಿಂಗ :

ಮಾತೃಭಾಷೆ :

ವಯಸ್ಸು :

ವಿಳಾಸ :

೨. ತಂದೆಯ ಹೆಸರು ಮತ್ತು ವಿದ್ಯಾರ್ಹತೆ :

೩. ತಾಯಿಯ ಹೆಸರು ಮತ್ತು ವಿದ್ಯಾರ್ಹತೆ :

೪. ತಂದೆ / ತಾಯಿ ವಾರ್ಷಿಕ ಆದಾಯ :

೫. ಮನೆಯಲ್ಲಿ ಯಾವ ಭಾಷೆ ಮಾತನಾಡುತ್ತೀರಿ? :

೬. ನೀವು ಯಾವಾಗ ಕನ್ನಡ ಭಾಷೆ ಕಲಿಯಲು ಪ್ರಾರಂಭಿಸಿದ್ದು :

೭. ನೀವು ಪ್ರತಿದಿನ ಕನ್ನಡ ಭಾಷೆ ಬಳಕೆ ಮಾಡುತ್ತೀರಾ?

ಹೌದು : ಇಲ್ಲ :

೮. ನೀವು ಸ್ನೇಹಿತ, ಸಂಬಂಧಿ ಮತ್ತು ಉಪಾಧ್ಯಾಯರ ಅಕ್ಕಪಕ್ಕದ ಮನೆಯವರ ಜೊತೆ ಯಾವ ಭಾಷೆ ಮಾತನಾಡುತ್ತೀರಿ?

೯. ಕನ್ನಡವನ್ನು ಹೇಗೆ ಕಲಿತಿರಿ?

ಅ. ಮನೆಯಲ್ಲಿ

ಆ. ಶಾಲೆಯಲ್ಲಿ

ಇ. ಟಿ.ವಿ. ಕಾರ್ಯಕ್ರಮಗಳ ಮೂಲಕ

ಈ. ಅಕ್ಕಪಕ್ಕದವರ ಜೊತೆ

ಉ. ವ್ಯವಹಾರ ಮಾಡುವ ಕಡೆ

ಊ. ಸ್ನೆಹಿತರು

೧೦. ನೀವು ನೋಡುವ ಸಿನಿಮಾಗಳು ಯಾವ ಭಾಷೆಯವು? ಕನ್ನಡದ್ದಾದರೆ ಮೂರು ಸಿನಿಮಾಗಳನ್ನು ಹೆಸರಿಸಿ?

೧.

೨.

೩.

೧೧. ತರಗತಿಯಲ್ಲಿ ನಿಮ್ಮ ಸ್ನೇಹಿತರೊಂದಿಗೆ ಯಾವ ಭಾಷೆಯಲ್ಲಿ ವ್ಯವಹಾರ ಮಾಡುತ್ತೀರಿ?

ಅ. ಕನ್ನಡ ಆ. ಲಂಬಾಣಿ

ಇ. ತೆಲುಗು ಈ. ಇತರೆ

೧೨. ಪೂರ್ವಶಿಕ್ಷಣದ ಬಗೆಗೆ ಮಾಹಿತಿ ಕೊಡಿ?

ತರಗತಿ ಮತ್ತು ವಿಭಾಗ / ಮಾಧ್ಯಮ

ನರ್ಸರಿ

ಎಲ್ ಕೆ ಜಿ

ಯು ಕೆ ಜಿ

೧೩. ನೀವು ವಾಸಿಸುವ ಸುತ್ತಮುತ್ತ ಪರಿಸರದಲ್ಲಿ ಯಾವ ಭಾಷೆಯ ಜನರು ಹೆಚ್ಚು ವಾಸಿಸುತ್ತಾರೆ?

ಅ. ಲಂಬಾಣಿ ಆ. ಕನ್ನಡ

ಇ. ತೆಲುಗು ಈ. ಇತರೆ

೧೪. ನೀವು ಯಾವ ಪ್ರದೇಶದಿಂದ ಶಾಲೆಗೆ ಬರುತ್ತೀರಿ?

ಅ. ನಗರ ಆ. ಅರೆನಗರ

ಇ. ಗ್ರಾಮೀಣ ಈ. ಕೊಳಚೆ ಪ್ರದೇಶ

ಉ. ಇತರೆ

೧೫. ನೀವು ಕನ್ನಡ ಭಾಷೆ ಕಲಿಯಬೇಕಾ?

ಅ. ಹೌದಾದರೆ ಏಕೆ?

ಆ. ಇಲ್ಲವಾದರೆ ಏಕೆ?

೧೬. ನೀವು ಪರೀಕ್ಷೆಯನ್ನು ಕನ್ನಡ ಭಾಷೆ ಉಳಿದಂತೆ ಯಾವ ಮಾಧ್ಯಮಗಳಲ್ಲಿ ಬರೆಯುತ್ತಿರಿ?

೧೭. ರೇಡಿಯೊ ಮತ್ತು ದೂರದರ್ಶನದಲ್ಲಿ ಕಾರ್ಯಕ್ರಮಗಳನ್ನು ಯಾವ ಮಾಧ್ಯಮದಲ್ಲಿ ವೀಕ್ಷಿಸುತ್ತೀರಿ?

ಅ. ಕನ್ನಡ ಆ. ಹಿಂದಿ

ಇ. ತೆಲುಗು ಈ. ಇತರೆ

೧೮. ನೀವು ಯಾವ ಭಾಷೆಯ ಸ್ನೇಹಿತರನ್ನು ಹೆಚ್ಚು ಇಷ್ಟಪಡುತ್ತೀರಿ?

ಅ. ಎಲ್ಲ ಲಂಬಾಣಿ ಸ್ನೇಹಿತರು

ಆ. ಕನ್ನಡ ಸ್ನೇಹಿತರು

ಇ. ಹೆಚ್ಚು ಕನ್ನಡ ಸ್ನೇಹಿತರು

ಈ. ಹೆಚ್ಚು ಲಂಬಾಣಿ ಸ್ನೇಹಿತರು

೧೯. ಕನ್ನಡ ಭಾಷೆಯ ಸ್ನೇಹಿತರಿಂದ ದಿನನಿತ್ಯ ವ್ಯವಹಾರಗಳಿಗೆ ಅನುಕೂಲವಿದೆಯೆ?

ಹೌದಾದರೆ ಏಕೆ?

ಇಲ್ಲವಾದರೆ ಏಕೆ?

೨೦. ನೀವು ಯಾವ ಯಾವ ದೇವಸ್ಥಾನಗಳಿಗೆ ಹೋಗುತ್ತೀರಿ ಮತ್ತು ಅಲ್ಲಿ ಅಲ್ಲಿ ಯಾವ ಭಾಷೆ ಮಾತನಾಡುತ್ತೀರಿ?

ಅ. ಲಂಬಾಣಿ ಆ. ಕನ್ನಡ

ಇ. ತೆಲುಗು ಈ. ಇತರೆ

೨೧. ನೀವು ಹೋಟೆಲ್ ಮಾರುಕಟ್ಟೆಗಳಲ್ಲಿ ಯಾವ ಭಾಷೆಯನ್ನು ಬಳಕೆ ಮಾಡುತ್ತೀರಿ?

ಅ. ಲಂಬಾಣಿ ಆ. ಕನ್ನಡ

ಇ. ತೆಲುಗು ಈ. ಇತರೆ

೨೨. ಮನೆ ಶಾಲೆಯಲ್ಲಿ ಬಿಡುವಿನ ವೇಳೆಯಲ್ಲಿ ಏನು ಮಾಡುತ್ತೀರಿ?

೨೩. ನಿಮ್ಮ ತಂದೆ / ತಾಯಿ ವೃತ್ತಿ ಏನು?

ಅ. ಕೃಷಿ ಕಾರ್ಮಿಕರು ಆ. ಕೂಲಿ ಕಾರ್ಮಿಕರು

ಇ. ವ್ಯಾಪಾರಸ್ಥರು ಈ. ಅಧಿಕಾರಿ

೨೪. ನಿಮಗೆ ಸಕಾಲಕ್ಕೆ ಪುಸ್ತಕ ತಲುಪುತ್ತಿದೆಯೆ?

ಹೌದು ಕಾರಣ?

ಇಲ್ಲ ಕಾರಣ?

೨೫. ನಿಮಗೆ ಇಟ್ಟಿರುವ ಪಠ್ಯಕ್ರಮ ಅರ್ಥವಾಗುತ್ತಿದೆಯೆ?

ಹೌದು: ಕಾರಣ

ಇಲ್ಲ : ಕಾರಣ

೨೬. ಕನ್ನಡ ಭಾಷೆಯ ಬಗೆಗೆ ನಿಮ್ಮ ಅಭಿಪ್ರಾಯಗಳೇನು?

ಅ. ಸುಂದರವಾಗಿದೆ

ಆ. ಕಲಿಯಲು ಇಷ್ಟ

ಇ. ಕೇಳಿಸಿ ಕೊಳ್ಳಲು ಇಂಪಾಗಿದೆ

ಈ. ಕೇಳಿಸಿ ಕೊಳ್ಳಲು ಒರಟಾಗಿದೆ

ಉ. ಅರ್ಥ ಮಾಡಿಕೊಳ್ಳಲು ಕಷ್ಟ

ಊ. ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು

ಋ. ನಮ್ಮ ಭಾಷೆಗೆ ಹತ್ತಿರವಾಗಿದೆ, ಹೋಲಿಕೆಗಳು ತುಂಬಾ ಇದೆ

೨೭. ಬೇರೆ ಭಾಷೆಯವರ ಬಳಿ ಮಾತನಾಡುವಾಗ ಯಾವ ಭಾಷೆಯಲ್ಲಿ ಮಾತನಾಡುವಿರಿ?

ಅ. ಅವರ ಭಾಷೆಯಲ್ಲಿ

ಆ. ನಿಮ್ಮ ಭಾಷೆಯಲ್ಲಿ

ಇ. ಎರಡೂ ಭಾಷೆಯಲ್ಲಿ

೨೮. ಇತರರೊಂದಿಗೆ ಮಾತನಾಡುವಾಗ ಭಾಷೆಯನ್ನು ಬೆರೆಸಿ ಮಾತನಾಡುವಿರಾ?

ಅ. ಹೌದು ಕಾರಣ

ಆ. ಇಲ್ಲ ಕಾರಣ

ಇ. ಆಗಾಗ ಕಾರಣ

೨೯. ಭಾಷೆಯನ್ನು ಬೆರೆಸಿ ಮಾತನಾಡುವ ಸಂದರ್ಭಗಳಾವುವು?

ಅ. ವ್ಯಾಪಾರದ ಸಂದರ್ಭ

ಆ. ಸರಿಯಾಗಿ ಭಾಷೆ ಗೊತ್ತಿಲ್ಲದ ಸಂದರ್ಭಗಳು

ಇ. ಮಾತನಾಡುವುದು ಕಷ್ಟವಾದಾಗ

ಈ. ನಮ್ಮ ಭಾಷೆಯ ಹಾದಿಗಳು ತಕ್ಷಣ ಹೊಳೆಯದೆ ಹೋದಾಗ

ಉ. ಬೇರೆ ಭಾಷೆ ಗೊತ್ತೆಂದು ತೋರಿಸಲು

ಊ. ಭಾಷೆ ಗೊತ್ತಿಲ್ಲದ ಅಪರಿಚಿತರೊಡನೆ

ಋ. ಸಿನಿಮಾ ಕಥೆ ಹೇಳುವಾಗ

೩೦. ಈಗ ಯಾವ ಭಾಷೆಯನ್ನೆ ಹೆಚ್ಚಿನ ಸಂದರ್ಭದಲ್ಲಿ ಬಳಸುತ್ತೀರಾ?

ಅ. ಕನ್ನಡ

ಆ. ಲಂಬಾಣಿ

ಇ. ಎರಡನ್ನೂ ಸಮವಾಗಿ

ಈ. ತೆಲುಗು

೩೧. ರೇಡಿಯೊ ಕೇಳುವುದಾದರೆ ಯಾವ ಭಾಷೆಯ ಕಾರ್ಯಕ್ರಮಗಳನ್ನು ಕೇಳುವಿರಿ?

ಅ. ಕನ್ನಡ

ಆ. ಹಿಂದಿ

ಇ. ಇತರೆ

೩೨. ಗ್ರಾಮ / ಶಾಲೆಯಲ್ಲಿ ನೀವು ಯಾವ ಭಾಷೆಯಲ್ಲಿ ಪ್ರಾರ್ಥನೆ ಮಾಡುತ್ತೀರಾ?

ಅ. ಕನ್ನಡ

ಆ. ಲಂಬಾಣಿ

ಇ. ಇತರೆ

೩೩. ನೀವು ನಿಮ್ಮ ಭಾಷೆಯಲ್ಲಿ ಮಾತನಾಡುವಾಗ ನಿಮಗೆ ಗೊತ್ತಿಲ್ಲದೆಯೇ ಅಥವಾ ಗೊತ್ತಿದ್ದು ಬೇರೆ ಭಾಷೆಗೆ ನುಡಿ ಪಲ್ಲಟ ಮಾಡುತ್ತೀರಾ?

ಅ. ಹೌದು : ಕಾರಣ

ಆ. ಇಲ್ಲ : ಕಾರಣ

ಇ. ಆಗಾಗ : ಕಾರಣ

ಈ. ಅಪರೂಪ : ಕಾರಣ

೩೪. ನುಡಿ ಪಲ್ಲಟವಾಗುವ ಸಂದರ್ಭ ಯಾವಾಗ ಬರಬಹುದು?

ಅ. ಯಾವುದಾದರೊಂದು ಸಂದರ್ಭ ವಿವರಿಸುವಾಗ

ಆ. ಅನ್ಯಭಾಷಿಕರ ಮಾತುಗಳನ್ನು ಅವರ ಭಾಷೆಯಲ್ಲೇ ವಿವರಿಸುವ ಸಂದರ್ಭ

ಇ. ಸಿನಿಮಾ, ನಾಟಕ, ಇನ್ನಿತರೆ ಸಂಭಾಷಣೆಗಳನ್ನು ವಿವರಿಸುವ ಪ್ರಸಂಗಗಳು

ಈ. ಅನ್ಯಭಾಷಿಕರಿಗೆ ಅರ್ಥವಾಗದ ಮಾತುಗಳನ್ನು ಆಡುವಾಗಿನ ಸಂದರ್ಭ

ಉ. ವ್ಯಾಪಾರದ ಸಂದರ್ಭಗಳಲ್ಲಿ

ಊ. ಕನ್ನಡದ ಸಾಮಾಜಿಕ ಸಂದರ್ಭಗಳಿಗೆ ತೆರೆದು ಕೊಳ್ಳುವಾಗ

ಋ. ಮದುವೆ ಸಮಾರಂಭ

೪೨. ಭಾಷಾ ಬಳಕೆಯ ಆವರಣಗಳು:

ಮಕ್ಕಳು + ವಯಸ್ಕರು	ಲಂಬಾಣಿ	ಕನ್ನಡ	ತೆಲುಗು
ತಂದೆಯ ಬಳಿ			
ತಾಯಿಯ ಬಳಿ			
ಅಜ್ಜನ ಬಳಿ			
ಅಜ್ಜಿಯ ಬಳಿ			
ಸಂಬಂಧಿಕರ ಬಳಿ			
ಶಿಕ್ಷಕರ ಬಳಿ			
ಅಕ್ಕಪಕ್ಕದವರೊಡನೆ			

ಮಕ್ಕಳು + ಮಕ್ಕಳು	ಲಂಬಾಣಿ	ಕನ್ನಡ	ತೆಲುಗು
ಸ್ನೇಹಿತರು			
ಶಾಲೆಯಲ್ಲಿ ಶಿಕ್ಷಕರ ಬಳಿ			
ಪಾಠದ ಮನೆಯಲ್ಲಿ			
ಆಟದ ಮೈದಾನದಲ್ಲಿ			
ಹಾಡು ಕಥೆ ಕೇಳುವಾಗ ಹೇಳುವಾಗ			
ಬೈಯುವಾಗ			
ಸಿನಿಮಾ ಕಥೆಗಳನ್ನು ಹೇಳುವಾಗ			
ಯಾವುದೇ ಸಂದರ್ಭವೊಂದಕ್ಕೆ - ಉದಾಹರಣೆ ಕೊಡುವಾಗ			

ವಯಸ್ಕರು + ವಯಸ್ಕರು	ಲಂಬಾಣಿ	ಕನ್ನಡ	ತೆಲುಗು
ಗಂಡನೊಂದಿಗೆ			
ಹೆಂಡತಿಯೊಂದಿಗೆ			
ತಾಯಿಯೊಂದಿಗೆ			
ತಂದೆಯೊಂದಿಗೆ			
ಸ್ನೇಹಿತರೊಂದಿಗೆ			
ಮಾರುಕಟ್ಟೆಯಲ್ಲಿ			
ಅಂಗಡಿಗಳಲ್ಲಿ			
ಸಾಮಾನ್ಯ ಮಾತುಕಥೆಗಳು			
ಸಂಬಂಧಿಕರ ಬಳಿ			
ಕಛೇರಿಯಲ್ಲಿ			
ಹಾಲು ಪೇಪರಿನವರೊಡನೆ			
ಅಪರಿಚತರೊಡನೆ			
ಭಿಕ್ಷುಕರೊಡನೆ			
ಅಕ್ಕಪಕ್ಕದ ಮನೆಯವರೊಂದಿಗೆ			
ದೇವಸ್ಥಾನದ ಪೂಜಾರಿಗಳೊಂದಿಗೆ			
ಗುಟ್ಟಿನ ವಿಷಯಗಳು			

ಪಾಲಕರ ಪ್ರಶ್ನಾವಳಿ

೧. ಹೆಸರು :

೨. ವಿದ್ಯಾಭ್ಯಾಸ :

೩. ಉದ್ಯೋಗ :

೪. ಕುಟುಂಬದ ಒಟ್ಟು ವಾರ್ಷಿಕ ಆದಾಯ :

೫. ಅವಿಭಕ್ತ / ಕೂಡು ಕುಟುಂಬ / ವಿಭಕ್ತ ಕುಟುಂಬವೆ :

೬. ಮಕ್ಕಳೆಷ್ಟು? :

ಹೆಣ್ಣು: ಗಂಡು:

೭. ಸ್ವಂತ ಸ್ಥಳ :

೮. ವಲಸಿಗರೆ? ಹಾಗಾದರೆ ಬಂದ ವರ್ಷ :

೯. ಯಾವ ಉದ್ದೇಶಕ್ಕಾಗಿ ವಲಸೆ ಬಂದಿರುವುದು? :

೧೦. ಇಲ್ಲಿಗೆ ಬಂದಾಗ ನಿಮಗಾದ ಸಮಸ್ಯೆ ಏನು? :

೧೧. ಹೇಗೆ ಪರಿಹರಿಸಿ ಕೊಂಡಿರಿ? :

೧೨. ಕನ್ನಡ ಭಾಷೆ ನಿಮಗೆ ಮೊದಲೆ ಗೊತ್ತಿತ್ತಾ ಅಥವಾ ಇಲ್ಲಿಗೆ ಬಂದು ಕಲಿತಿದ್ದ?

೧೩. ಕನ್ನಡವನ್ನು ಹೇಗೆ ಕಲಿತಿರಿ?

ಅ. ಮನೆಯಲ್ಲಿ

ಆ. ಟಿ.ವಿ. ಕಾರ್ಯಕ್ರಮಗಳ ಮೂಲಕ

ಇ. ವ್ಯವಹಾರ ಮಾಡುವ ಕಡೆ

ಈ. ಅಕ್ಕಪಕ್ಕದವರ ಮನೆಯವರೊಂದಿಗೆ

ಉ. ಸ್ನೇಹಿತರು

೧೪. ನೀವು ಪ್ರತಿದಿನ ಕನ್ನಡ ಭಾಷೆ ಬಳಕೆ ಮಾಡುತ್ತೀರಾ

ಹೌದು: ಇಲ್ಲ:

೧೫. ಕೆಳಗಿನ ಸಂದರ್ಭದಲ್ಲಿ ಸಂಭಾಷಣೆಗೆ ಯಾವ ಭಾಷೆಯಲ್ಲಿ ಮಾತನಾಡುತ್ತೀರಾ?

ಅ. ಸ್ನೇಹಿತರೊಂದಿಗೆ

ಆ. ಕುಟುಂಬದವರೊಡನೆ

ಇ. ಅಕ್ಕಪಕ್ಕದ ಮನೆಯವರೊಂದಿಗೆ

೧೬. ಪ್ರತಿದಿನ ಯಾವ ಭಾಷೆಯ ಪತ್ರಿಕೆ ಓದುತ್ತೀರಿ ಎಷ್ಟು ಸಮಯ ತೆಗೆದು ಕೊಳ್ಳುತ್ತೀರಿ?

ಅ. ಕನ್ನಡ

ಆ. ಇತರೆ

೧೭. ನೀವು ನೋಡುವ ಸಿನಿಮಾಗಳು ಯಾವ ಭಾಷೆಯವು?

ಅ. ಕನ್ನಡ

ಆ. ಹಿಂದಿ

ಇ. ತೆಲುಗು

ಈ. ಇತರೆ

೧೮. ನೀವು ಪತ್ರ ವ್ಯವಹಾರವನ್ನು ಯಾವ ಭಾಷೆಯಲ್ಲಿ ಬರೆಯುತ್ತೀರಿ?

ಅ. ಕನ್ನಡ

ಆ. ಹಿಂದಿ

ಇ. ಇತರೆ

೧೯. ನೀವು ವಾಸಿಸುವ ಸುತ್ತಮುತ್ತ ಪರಿಸರದಲ್ಲಿ ಯಾವ ಭಾಷೆಯ ಜನರು ಹೆಚ್ಚು ವಾಸಿಸುತ್ತಾರೆ?

ಅ. ಕನ್ನಡ

ಆ. ಲಂಬಾಣಿ

ಇ. ತೆಲುಗು

ಈ. ಇತರೆ

೨೦. ರೇಡಿಯೊ ಮತ್ತು ದೂರದರ್ಶನದಲ್ಲಿ ಕಾರ್ಯಕ್ರಮಳನ್ನು ಯಾವ ಮಾಧ್ಯಮದಲ್ಲಿ ವಿಕ್ಷಿಸುತ್ತೀರಾ?

ಅ. ಕನ್ನಡ

ಆ. ಹಿಂದಿ

ಇ. ತೆಲುಗು

ಈ. ಇತರೆ

೨೧. ನೀವು ಯಾವ ಭಾಷೆಯನ್ನು ಓದುವುದು, ಬರೆಯುವುದು ಮತ್ತು ಮಾತನಾಡುವುದು?

	ಓದುವುದು	ಬರೆಯುವುದು	ಮಾತನಾಡುವುದು
ಲಂಬಾಣಿ			
ಕನ್ನಡ			
ತೆಲುಗು			
ಇತರೆ			

೨೨. ನಿಮಗೆ ಯಾವ ಯಾವ ಭಾಷೆ ಮಾತನಾಡುವ ಸ್ನೇಹಿತರಿದ್ದಾರೆ?

ಅ. ಕನ್ನಡ

ಆ. ಲಂಬಾಣಿ

ಇ. ಹಿಂದಿ ಉರ್ದು

ಈ. ತೆಲುಗು

ಉ. ಇತರೆ

೨೩. ನೀವು ಯಾವ ಭಾಷೆಯ ಸ್ನೇಹಿತರನ್ನು ಹೆಚ್ಚು ಇಷ್ಟಪಡುತ್ತೀರಾ?

ಅ. ಎಲ್ಲ ಲಂಬಾಣಿ ಸ್ನೇಹಿತರು

ಆ. ಕನ್ನಡ ಸ್ನೇಹಿತರು

ಇ. ಹೆಚ್ಚು ಕನ್ನಡ ಸ್ನೇಹಿತರು

ಈ. ಹೆಚ್ಚು ಲಂಬಾಣಿ ಸ್ನೇಹಿತರು

೨೪. ಕನ್ನಡ ಭಾಷೆಯ ಸ್ನೇಹಿತರಿಂದ ದಿನನಿತ್ಯ ವ್ಯವಹಾರಗಳಿಗೆ ಅನುಕೂಲವಿದೆಯೆ?

ಹೌದು: ಯಾಕೆ ಇಲ್ಲ: ಯಾಕೆ:

೨೫. ನಿಮ್ಮ ಮನೆಗೆ ಕನ್ನಡ ಸ್ನೇಹಿತರನ್ನು ಕರೆದೊಯ್ಯುತ್ತೀರಾ?

ಹೌದು: ಯಾಕೆ ಇಲ್ಲ: ಯಾಕೆ:

೨೬. ನೀವು ಯಾವ ಯಾವ ದೇವಸ್ಥಾನಗಳಿಗೆ ಹೋಗುತ್ತೀರಿ ಮತ್ತು ಅಲ್ಲಿ ಯಾವ ಭಾಷೆ ಮಾತನಾಡುತ್ತೀರಾ?

೨೭. ನೀವು ಹೋಟೆಲ್, ಮಾರುಕಟ್ಟೆಗಳಲ್ಲಿ ಯಾವ ಭಾಷೆಯನ್ನು ಬಳಕೆ ಮಾಡುತ್ತೀರಾ?

ಅ. ಕನ್ನಡ ಆ. ಲಂಬಾಣಿ

ಇ. ಹಿಂದಿ ಈ. ತೆಲುಗು

ಉ. ಇತರೆ

೨೮. ಬೇರೆ ಭಾಷೆಯವರ ಬಳಿ ಮಾತನಾಡುವಾಗ ಯಾವ ಭಾಷೆಯಲ್ಲಿ ಮಾತನಾಡುವಿರಿ?

ಅ. ಅವರ ಭಾಷೆಯಲ್ಲಿ

ಆ. ನಿಮ್ಮ ಭಾಷೆಯಲ್ಲಿ

ಇ. ಎರಡೂ ಭಾಷೆಯಲ್ಲಿ

೨೯. ಇತರರೊಂದಿಗೆ ಮಾತನಾಡುವಾಗ ಭಾಷೆಯನ್ನು ಬೆರೆಸಿ ಮಾತನಾಡುವಿರಾ?

ಅ. ಹೌದು

ಆ. ಇಲ್ಲ

ಇ. ಆಗಾಗ

೩೦. ಭಾಷೆಯನ್ನು ಬೆರೆಸಿ ಮಾತನಾಡುವ ಸಂದರ್ಭಗಳಾವುವು?

ಅ. ವ್ಯಾಪಾರದ ಸಂದರ್ಭ

ಆ. ಸರಿಯಾಗಿ ಭಾಷೆ ಗೊತ್ತಿಲ್ಲದ ಸಂದರ್ಭಗಳು

ಇ. ಮಾತನಾಡುವುದು ಕಷ್ಟವಾದಾಗ

ಈ. ನಮ್ಮ ಭಾಷೆಯ ಪದಗಳು ತಕ್ಷಣ ಹೊಳೆಯದೆ ಹೋದಾಗ

ಉ. ಬೇರೆ ಭಾಷೆ ಗೊತ್ತೆಂದು ತೋರಿಸಲು

ಊ. ಭಾಷೆ ಗೊತ್ತಿಲ್ಲದ ಅಪರಿಚಿತರೊಂದಿಗೆ

ಋ. ಸ್ನೇಹಕ್ಕಾಗಿ

ೠ. ಸಿನಿಮಾ ಕಥೆ ಹೇಳುವಾಗ

೩೧. ಕನ್ನಡ ಭಾಷೆಯನ್ನು ಹೆಚ್ಚು ಬಳಸುವವರು ಯಾರು?

ಅ. ದೊಡ್ಡವರು

ಆ. ನಡುವಯಸ್ಕರು

ಇ. ಮಕ್ಕಳು

೩೨. ನಿಮ್ಮ ಭಾಷಿಕ ಸಮುದಾಯದವರಿಗೆ ಕನ್ನಡ ಕಲಿಯುವ ಒತ್ತಾಯ ಇದೆಯೆ?

ಅ. ಇದೆ: ಯಾಕೆ?

ಆ. ಇಲ್ಲ: ಯಾಕೆ?

೩೩. ನಿಮ್ಮ ಮಕ್ಕಳನ್ನು ಯಾವ ಮಾಧ್ಯಮದ ಶಾಲೆಗೆ ಕಳಿಸಲು ಇಷ್ಟಪಡುತ್ತೀರಿ?

ಅ. ಕನ್ನಡ

ಆ. ಇಂಗ್ಲೀಷ್

ಇ. ಇತರೆ

೩೪. ಹೆಚ್ಚಿನ ಸಂದರ್ಭಗಳಲ್ಲಿ ಯಾವ ಭಾಷೆಯನ್ನು ಬಳಸುತ್ತೀರಿ?

ಅ. ಕನ್ನಡ

ಆ. ಲಂಬಾಣಿ

ಇ. ತೆಲುಗು

ಈ. ಇತರೆ

೩೫. ನಿಮ್ಮ ಮನೆಯಲ್ಲಿ ನಡೆಯುವ ಮದುವೆ ಸಮಾರಂಭಗಳಿಗೆ ಯಾವ ಭಾಷೆಯಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸುತ್ತೀರಿ?

ಅ. ಕನ್ನಡ

ಆ. ಇಂಗ್ಲಿಷ್

ಇ. ಇತರೆ

೩೬. ನಿಮ್ಮ ಮಕ್ಕಳಿಗೆ ಕಥೆ ಹಾಡುಗಳನ್ನು ಹೇಳುವಾಗ ಯಾವ ಭಾಷೆಯನ್ನು ಬಳಸುವಿರಿ?

ಅ. ಲಂಬಾಣಿ

ಆ. ಕನ್ನಡ

ಇ. ತೆಲುಗು

ಈ. ಇತರೆ

೩೭. ನೀವು ಟಿ.ವಿ., ರೇಡಿಯೊ ಮತ್ತು ಸಿನಿಮಾಗಳಲ್ಲಿನ ಯಾವ ಭಾಷೆಯ ಕಾರ್ಯಕ್ರಮ ಇಷ್ಟಪಡುತ್ತೀರಿ? ಕೇಳುತ್ತೀರಿ?

ಅ. ಕನ್ನಡ

ಆ. ಹಿಂದಿ

ಇ. ತೆಲುಗು

ಈ. ಇತರೆ

೩೮. ನಿಮ್ಮಲ್ಲಿ ಕೆಲಸದವರಿದ್ದರೆ ಅವರ ಬಳಿ ಯಾವ ಭಾಷೆಯಲ್ಲಿ ಮಾತನಾಡುತ್ತೀರಿ?

	ಕನ್ನಡ	ಲಂಬಾಣಿ	ತೆಲುಗು	ಇತರೆ
ಅ. ಯಾವಾಗಲೂ				
ಆ. ಅಪರೂಪಕ್ಕೆ				
ಇ. ಆಗಾಗ				

೩೯. ಗಾದೆ, ಒಗಟು, ಸಮಾರಂಭಗಳಲ್ಲಿ ಹಾಡುಗಳನ್ನು, ಹೇಳುವ ಪ್ರಸಂಗ ಬಂದರೆ ನಿಮ್ಮ ಭಾಷಾ ಆಯ್ಕೆ ಯಾವುದು?

ಅ. ಕನ್ನಡ : ಆಗಾಗ / ಅಪರೂಪ / ಯಾವಾಗಲೂ

ಆ. ಲಂಬಾಣಿ : ಆಗಾಗ / ಅಪರೂಪ / ಯಾವಾಗಲೂ

೪೦. ನೀವು ನಿಮ್ಮ ಭಾಷೆಯಲ್ಲಿ ಮಾತನಾಡುವಾಗ ನಿಮಗೆ ಗೊತ್ತಿಲದೆಯೇ ಅಥವಾ ಗೊತ್ತಿದ್ದು ಬೇರೆ ಭಾಷೆಗೆ ನುಡಿಪಲ್ಲಟ ಮಾಡುತ್ತೀರಾ?

ಅ. ಹೌದು

ಆ. ಇಲ್ಲ

ಇ. ಆಗಾಗ

ಈ. ಅಪರೂಪ

೪೧. ನುಡಿ ಪಲ್ಲಟವಾಗುವ ಸಂದರ್ಭ ಯಾವಾಗ ಬರಬಹುದು?

ಅ. ಯಾವುದಾದರೊಂದು ಸಂದರ್ಭ ವಿವರಿಸುವಾಗ

ಆ. ಅನ್ಯಭಾಷಿಕರ ಮಾತುಗಳನ್ನು ಅವರ ಭಾಷೆಯಲ್ಲೇ ವಿವರಿಸುವ ಸಂದರ್ಭ

ಇ. ಸಿನಿಮಾ, ನಾಟಕ, ಇನ್ನಿತರೆ ಸಂಭಾಷಣೆಗಳನ್ನು ವಿವರಿಸುವ ಪ್ರಸಂಗಗಳು

ಈ. ಅನ್ಯಭಾಷಿಕರಿಗೆ ಅರ್ಥವಾಗದ ಮಾತುಗಳನ್ನು ಆಡುವಾಗಿನ ಸಂದರ್ಭ

ಉ. ವ್ಯಾಪಾರದ ಸಂದರ್ಭಗಳಲ್ಲಿ

ಊ. ಕನ್ನಡದ ಸಾಮಾಜಿಕ ಸಂದರ್ಭಗಳಿಗೆ ತೆರೆದು ಕೊಳ್ಳುವಾಗ

ಋ. ಮದುವೆ ಸಮಾರಂಭ

೪೨. ಭಾಷಾ ಬಳಕೆಯ ಆವರಣಗಳು:

ವಯಸ್ಕರು	ಲಂಬಾಣಿ	ಕನ್ನಡ	ತೆಲುಗು
ತಂದೆಯ ಬಳಿ			
ತಾಯಿಯ ಬಳಿ			
ಅಜ್ಜನ ಬಳಿ			
ಅಜ್ಜಿಯ ಬಳಿ			
ಸಂಬಂಧಿಕರ ಬಳಿ			
ಮಕ್ಕಳ ಬಳಿ			
ಅಕ್ಕಪಕ್ಕದವರೊಡನೆ			
ಅಪರಿಚಿತರೊಡನೆ			
ಬೈಯುವಾಗ			

೪೩. ಆಧುನಿಕವೆನಿಸುವ ಪರಿಸರಗಳಲ್ಲಿ ಹೆಚ್ಚಾಗಿ ಯಾವ ಭಾಷೆಯನ್ನು ಬಳಸುವಿರಿ?

ಅ. ಕನ್ನಡ

ಆ. ಲಂಬಾಣಿ

ಇ. ಹಿಂದಿ

ಈ. ತೆಲುಗು

ಉ. ಇತರೆ

೪೪. ಆಧುನಿಕವೆನಿಸುವ ಪರಿಸರಗಳಲ್ಲಿ ನಿಮ್ಮ ಸ್ವಭಾಷೆಯನ್ನು ಬಳಸುತ್ತೀರಾ ಬಳಸಲು ನಿಮ್ಮಗೆ ಯಾವುದೇ ಹಿಂಜರಿಕೆಗಳಿಲ್ಲವೆ?

ಅ. ಹೌದು: ಯಾಕೆ?

ಆ. ಇಲ್ಲ: ಯಾಕೆ?

ಶಿಕ್ಷಕರ ಪ್ರಶ್ನಾವಳಿ

೧. ಶೈಕ್ಷಣಿಕ ಸಾಧನೆಗಳಲ್ಲಿ ಲಂಬಾಣಿ ವಿದ್ಯಾರ್ಥಿಗಳ ಸಾಧನೆ ಹೇಗಿದೆ?

ಅ. ಉತ್ತಮ

ಆ. ಮಧ್ಯಮ

ಇ. ಪರವಾಗಿಲ್ಲ

ಈ. ಏನೂ ಇಲ್ಲ

೨. ಲಂಬಾಣಿ ಭಾಷೆಯ ವಿದ್ಯಾರ್ಥಿಗಳು ಕನ್ನಡ ತರಗತಿಗಳಲ್ಲಿ ಓದುವಾಗ ಗ್ರಹಿಕೆಯ ನೆಲೆಯಲ್ಲಿ ಸಮಸ್ಯೆ ಇದೆಯೆ ಅಥವಾ ಬರವಣಿಗೆ ನೆಲೆಯಲ್ಲಿ ಸಮಸ್ಯೆ ಇದೆಯೆ ಅಥವಾ ಯಾವ ರೀತಿ?

೩. ಕನ್ನಡ ಮಾಧ್ಯಮಗಳಿಗೆ ಲಂಬಾಣಿ ಭಾಷಿಕ ಮಕ್ಕಳನ್ನು ಕಳಿಸುವಲ್ಲಿ ಪೋಷಕರ ಪಾತ್ರ, ಯೋಚನೆಗಳೇನು?

೪. ಲಂಬಾಣಿ ಭಾಷಿಕ ಮಕ್ಕಳಿಗೆ ಕನ್ನಡವನ್ನು ಬೋಧಿಸುವಾಗ ಯಾವ ರೀತಿಯ ಸಮಸ್ಯೆಗಳನ್ನು ಎದುರಾಗಿವೆ?

೫. ಶಾಲಾ ಆವರಣದಲ್ಲಿ ದ್ವಿಭಾಷಿಕ ಶಿಕ್ಷಕರನ್ನು ನಿಯೋಜಿಸುವ ಅವಶ್ಯಕತೆ ಇದೆಯೆ ನಿಮ್ಮ ಸಲಹೆ ಏನು?

೬. ಲಂಬಾಣಿ ಮಕ್ಕಳಿಗೆ ಕಲಿಕಾ ಯೋಜನೆಯಲ್ಲಿ ಹೊಸ ಪದ್ಧತಿಯ ಅನಿವಾರ್ಯವಿದೆಯೆ?

೭. ಲಂಬಾಣಿ ಭಾಷಿಕ ಮಕ್ಕಳಿಗೆ ಬೋಧಿಸುವ ಸಂದರ್ಭದಲ್ಲಿ ನಿಮಗೆ ಉಂಟಾದ ಸಮಸ್ಯೆ ಏನು?

೮. ಲಂಬಾಣಿ ಭಾಷಿಕ ಮಕ್ಕಳಿಗೆ ಪಠ್ಯವನ್ನು ಅರ್ಥೈಸುವಾಗ ಹೇಗೆ ಅರ್ಥೈಸುವಿರಿ?

೯. ಕನ್ನಡ ಸ್ವಭಾಷಿಕ ಮಕ್ಕಳಿಗಿಂತ ಲಂಬಾಣಿ ಸ್ವಭಾಷಿಕ ಮಕ್ಕಳ ಕಲಿಕೆಯ ನೆಲೆಗಳು ಭಿನ್ನವಾಗಿದೆಯೆ ಅಥವಾ ಸಮವಾಗಿದೆಯೆ?

೧೦. ಮಕ್ಕಳಲ್ಲಿ ಕನ್ನಡ ಭಾಷೆ ಸ್ಥಿತಿ ಹೇಗಿದೆ?

ಅ. ಅರ್ಥ ಮಾಡಿಕೊಳ್ಳುತ್ತಾರೆ. ಮಾತನಾಡುವುದಿಲ್ಲ

ಆ. ಅರ್ಥ ಮಾಡಿಕೊಂಡು ಮಾತನಾಡುತ್ತಾರೆ. ಆದರೆ ಓದುವುದು ಮತ್ತು ಬರೆಯುವುದಿಲ್ಲ

ಇ. ಓದುವುದು, ಬರೆಯುವುದು, ಮಾತನಾಡುತ್ತಾರೆ

೧೧. ಕನ್ನಡ ಪಠ್ಯಕ್ರಮ ಲಂಬಾಣಿ ಮಕ್ಕಳಿಗೆ ಇಟ್ಟಿರುವುದು ಸಮರ್ಪಕವಾಗಿದೆಯೆ?

ಹೌದು : ಇಲ್ಲ :

೧೧.೨ ಪಠ್ಯಕ್ರಮ ಸರಿಯಾಗಿಲ್ಲದಿದ್ದರೆ ಹೇಗೆ ಪರಿಹರಿಸಬಹುದು?

೧೧.೩ ಪಠ್ಯಪುಸ್ತಕ ಪಾಠಗಳ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

೧೧.೪ ಸೂಕ್ತವಾಗಿಲ್ಲ ಎನ್ನುವುದಾದರೆ, ಸೂಕ್ತವಾಗಿಸಲು ನಿಮ್ಮ ಸಲಹೆಗಳೇನು?

೧೧.೫ ಪ್ರತಿ ಪಾಠದ ಬಗ್ಗೆ ಕೊಟ್ಟಿರುವ ಮಾಹಿತಿ ಉಪಯುಕ್ತವಾಗಿದೆಯೆ ಅಥವಾ ಸಾಕಷ್ಟಿದೆಯೆ?

೧೧.೬ ಸಾಕಷ್ಟಿಲ್ಲ ಎನ್ನುವುದಾದರೆ ಇನ್ನು ಯಾವ ರೀತಿಯ ಮಾಹಿತಿಯನ್ನು ಕೊಟ್ಟಿದ್ದಾರೆ ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾಗುತ್ತಿತು?

೧೨. ಲಂಬಾಣಿ ಭಾಷಿಕರ ಮಕ್ಕಳಿಗೆ ಕನ್ನಡ ಬೋಧಿಸಲು ಸೂಕ್ತ ತರಬೇತಿ ಏನಾದರೂ ಪಡೆದಿದ್ದೀರಾ?

೧೩. ತರಬೇತಿಯ ಅಗತ್ಯವಿದೆಯೆ?

ಹೌದು : ಇಲ್ಲ :

೧೩.೧ ಹೌದಾದರೆ ಯಾವ ರೀತಿ ತರಬೇತಿ ಅಗತ್ಯವಿದೆ? ಯಾವ ಯಾವ ಅಂಶಗಳ ಬಗ್ಗೆ ತರಬೇತಿ ಬೇಕಾಗುತ್ತದೆ?

೧೪. ಕನ್ನಡ ಭಾಷೆ ಕಲಿಯುವಾಗ ವಿದ್ಯಾರ್ಥಿಗಳು ಯಾವ ಸಮಸ್ಯೆಗಳನ್ನು ಎದುರಿಸುತ್ತಾರೆ?

ಅ. ಮೂಲತಾಕ್ಷರ ಯಾವುದು?

ಆ. ಗುಣಿತಾಕ್ಷರ ಯಾವುದು?

ಇ. ಒತ್ತಕ್ಷರ ಯಾವುದು?

ಈ. ಎಲ್ಲವೂ ಯಾವುದು?

೧೫. ನಿಮಗೆ ಬೋಧನೆಯಲ್ಲಿ ಯಾವ ಸಮಸ್ಯೆ ಎದುರಾಗಿದೆ?

ಅ. ಪಠ್ಯ ಪುಸ್ತಕದ ಕೊರತೆ

ಆ. ಬೋಧನಾ ಉಪಕರಣಗಳ ಕೊರತೆ

ಇ. ಪಿಠೋಪಕರಣಗಳ ಕೊರತೆ

ಈ. ವಿದ್ಯಾರ್ಥಿಗಳ ಕೊರತೆ

ಉ. ಇತರೆ

೧೬. ಸರ್ಕಾರದ ಶಿಕ್ಷಣ ನೀತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

೧೭. ಲಂಬಾಣಿ ಭಾಷಿಕರ ಮಕ್ಕಳಿಗೆ ಪ್ರತ್ಯೇಕ ಕನ್ನಡ ಪಠ್ಯ ಅಗತ್ಯವಿದೆಯೆ?

೧೮. ಲಂಬಾಣಿ ಭಾಷಿಕರ ಮಕ್ಕಳಿಗೆ ಕನ್ನಡ ಬೋಧಕರು ಯಾರು ಆಗಬೇಕಿದೆ?

ಅ. ಲಂಬಾಣಿ ಮಾತೃ ಭಾಷೆಯುಳ್ಳವರು

ಆ. ಕನ್ನಡ ಮಾತೃ ಭಾಷೆಯುಳ್ಳವರು

ಇ. ಎರಡು ಭಾಷೆಗಳ ಜ್ಞಾನವುಳ್ಳವರು

೧೯. ಕನ್ನಡ ಭಾಷೆ ಕಲಿಕೆಗೆ ಬೋಧನೆಗೆ ಸಮಯ ಸಾಕಾಗುತ್ತಿದೆಯೆ?

ಹೌದು : ಇಲ್ಲ : ಯಾಕೆ :

೨೦. ಲಂಬಾಣಿ ಭಾಷಿಕರ ಮಕ್ಕಳು ಕನ್ನಡ ಕಲಿಕೆಯಲ್ಲಿ ಹೆಚ್ಚು ದೋಷಗಳನ್ನು ಎಲ್ಲಿ ಮಾಡುತ್ತಾರೆ?

ಅ. ಬರವಣಿಗೆ

ಆ. ಓದುವುದು

ಇ. ಮಾತನಾಡುವುದು

ಈ. ಬರವಣಿಗೆ ಮತ್ತು ಓದುವುದು ಎರಡರಲ್ಲೂ

ಪರಾಮರ್ಶನ ಗ್ರಂಥಗಳು

ಅಮರ್‌ಸಿಂಗ್ ರಾಠೋಡ್., ೧೯೭೧, ಲಂಬಾಣಿ ಭಾಷೆ, ಅದರ ವ್ಯಾಕರಣ ಹಾಗೂ ರಾಜಸ್ಥಾನಿ ಮತ್ತು ಹಿಂದಿಯೊಡನೆ ಅದರ ಸಂಬಂಧ, ಹಿಂದಿ ಮಹಾಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅಶೋಕ ಕುಮಾರ ರಂಜೇರೆ, ೨೦೦೫, ಭಾಷೆ ಮತ್ತು ಶಿಕ್ಷಣ, ನಿಧಿ ಪ್ರಕಾಶನ, ಹೊಸಪೇಟೆ.

ಎನ್ಕೆ., ೧೯೯೭, ಸಮಗ್ರ ಶಿಕ್ಷಣ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಓಬಳೇಶ ಘಟ್ಟಿ, ೧೯೯೨, ಭಾರತೀಯ ಶಿಕ್ಷಣ ಮತ್ತು ಪ್ರಚಲಿತ ಸಮಸ್ಯೆಗಳು, ಶಿವಗಂಗಾ ಪ್ರಕಾಶನ, ತೋರಣಘಟ್ಟ.

ಕರ್ನಾಟಕ ಬಂಜಾರ ಕೈಪಿಡಿ, ೧೯೯೬-೯೭, ಕರ್ನಾಟಕ ರಾಜ್ಯ ಬಂಜಾರ ಲಂಬಾಣಿ, ಜನಾಂಗದ ಜನಗಣತಿ ಅಂಕಿ-ಅಂಶ ಮತ್ತು ಪರಿಸ್ಥಿತಿಗಳನ್ನೊಳಗೊಂಡ ಕೃತಿ ಅಖಿಲ ಕರ್ನಾಟಕ ಬಂಜಾರ ವಿದ್ಯಾರ್ಥಿ ವೇದಿಕೆ, ಬೆಂಗಳೂರು.

ಕಿಕ್ಕೇರಿ ವೀರನಾರಾಯಣ ಲೇ. ಚಂದ್ರಶೇಕರ ಸಿ.ಆರ್., ಸಂ, ೨೦೦೭, ಆಟವೇ ಪಾಠವಾಗುವುದು ಹೇಗೆ? ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಕುಲಕರ್ಣಿ ಎನ್.ಕೆ., ೧೯೯೭, ಸಮಗ್ರ ಶಿಕ್ಷಣ, ಮೀರಾಂಬಿಕ ಮುದ್ರಣಾಲಯ, ಶ್ರೀ ಅರವಿಂದ ಸಂಕೀರ್ಣ, ಬೆಂಗಳೂರು.

ಕುಲಕರ್ಣಿ ವ್ಹಿ.ಎಸ್., ೧೯೮೪, ಆಧುನಿಕ ಶಿಕ್ಷಣದ ಅರ್ಥ ವಿಸ್ತಾರ, ಸಮಾಜ ಪುಸ್ತಕಾಲಯ, ಧಾರವಾಡ.

ಕುಶಾಲಪ್ಪಗೌಡ ಕೆ., ೨೦೦೭, ಕನ್ನಡ ಸಂಕ್ಷಿಪ್ತ ವ್ಯಾಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಕೃಷ್ಣಪ್ಪ ಎಸ್., ೧೯೮೨, ಸಾಮಾಜಿಕ ಅಧ್ಯಯನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣಪ್ಪ ಎಸ್., ೧೯೮೨, ಬೋಧನಾ ನಿಯಮಗಳು ಮತ್ತು ಶಿಕ್ಷಣ ಸಮಸ್ಯೆಗಳು, ಡಿ.ವಿ.ಕೆ.ಮೂರ್ತಿ, ಮೈಸೂರು.

ಕೃಷ್ಣಪ್ಪ ಎಸ್., ೨೦೦೦, ಬೋಧನಾ ತತ್ವಗಳು ಮತ್ತು ಆಧುನಿಕ ಕ್ರಮಗಳು, ಚೇತನ ಬುಕ್‌ಹೌಸ್, ಬೆಂಗಳೂರು.

ಕೃಷ್ಣಪರಮೇಶ್ವರ ಭಟ್ಟ, ೧೯೯೫, ಕನ್ನಡ ಮತ್ತು ತೆಲುಗು ದ್ವಿಭಾಷಿಕತೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕೆಂಪೇಗೌಡ ಕೆ., ೧೯೮೦, ಧ್ವನಿಮಾ ವಿಜ್ಞಾನ, ಭಾರತೀ ಪ್ರಕಾಶನ, ಮೈಸೂರು.

ಕೆಂಪೇಗೌಡ ಕೆ., ಕನ್ನಡ ಭಾಷಾ ಸ್ವರೂಪ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಕೆಂಪೇಗೌಡ ಕೆ., ೨೦೦೩, ಉಪಭಾಷೆಗಳ ತೌಲನಿಕ ಅಧ್ಯಯನ, ಭಾರತೀ ಪ್ರಕಾಶನ, ಮೈಸೂರು.

ಖಂಡೋಬಾ ಪಿ.ಕೆ., ೧೯೮೮, ಲಂಬಾಣಿ ಸಂಸ್ಕೃತಿ (ಸಂಶೋಧನ ಪ್ರಬಂಧಗಳು), ಪ್ರಕಾಶನ ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ.

ಖಂಡೋಬಾ ಪಿ.ಕೆ., ೧೯೯೧, ಕರ್ನಾಟಕದ ಲಂಬಾಣಿಗಳು : ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಕಾಶನ ದಿ. ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್, ಗುಲಬರ್ಗಾ.

ಗಂಗಾಧರಪ್ಪ ಎಸ್.ಆರ್., ೨೦೦೪, ಶಿಕ್ಷಣದ ಮೂಲತತ್ವಗಳು, ರೇಖಾ ಪ್ರಕಾಶನ, ದಾವಣಗೆರೆ.

ಗಂಗಾನಾಯ್ಕ, ೨೦೦೪, ಲಂಬಾಣಿಗರು, ಕನ್ನಡ ಭಾರತೀ ಪ್ರಕಾಶನ, ಕುವೆಂಪು ವಿಶ್ವವಿದ್ಯಾಲಯ,

ಚಿದಾನಂದಮೂರ್ತಿ ಎಂ., ೧೯೮೧, ವಾಗಾರ್ಥ, ಬಾಪ್ಕೋ, ಬೆಂಗಳೂರು.

ಚಿದಾನಂದಮೂರ್ತಿ ಎಂ., ೧೯೯೮, ಭಾಷಾ ವಿಜ್ಞಾನದ ಮೂಲ ತತ್ವಗಳು, ಪ್ರಕಾಶಕರು ಡಿ.ವಿ.ಕೆ.ಮೂರ್ತಿ, ಮೈಸೂರು.

ಚಂದ್ರಚಾರ್ ಎಚ್.ಎಂ., ೧೯೯೧, ಶೈಕ್ಷಣಿಕ ಮನೋವಿಜ್ಞಾನ, ಯುವ ಹಿರಿಯ ವಿದ್ಯಾರ್ಥಿ ಸಂಘ, ಎಂ. ಬಸವಯ್ಯ ವಸತಿ ಮಹಾವಿದ್ಯಾಲಯ, ಸಿರಿಗೆರಿ, ಚಿತ್ರದುರ್ಗ ಜಿ.

ಚಂದ್ರಶೇಖರ ಕಂಬಾರ ಸಂ, ೧೯೯೮, ಕನ್ನಡ ಜಾನಪದ ವಿಶ್ವಕೋಶ ಸಂ-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಜವಳಿ ವ್ಹಿ.ಕೆ., ಅನು ೧೯೭೧, ಶಿಕ್ಷಣ ಆಧಾರಗಳು ಮತ್ತು ಪ್ರಥಮ ತತ್ವಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಜಯಣ್ಣ ಸಿ.ವಿ., ೨೦೦೫, ಶೈಕ್ಷಣಿಕ ಮನೋವಿಜ್ಞಾನದ ಬುನಾದಿಗಳು, ಕಲಿಕೆ ಮತ್ತು ಬೋಧನೆಯಲ್ಲಿ ಮನೋವಿಜ್ಞಾನ, ಸಪ್ನ ಬುಕ್‌ಹೌಸ್, ಬೆಂಗಳೂರು.

ಜಯಣ್ಣ ಸಿ.ವಿ., ೨೦೦೫, ಆಧುನಿಕ ಶಿಕ್ಷಣದ ಒಲವುಗಳು, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

ಜಯಣ್ಣ ಸಿ.ವಿ., ಮತ್ತು ರುದ್ರಾಣಿ ವಿ.ಸಿ., ೨೦೦೬, ಕನ್ನಡ ವಿಷಯಾಧಾರಿತ ಬೋಧನಾ ಪದ್ಧತಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು.

ಜ್ಯೋತ್ಸ್ನಾ ಕಾಮತ್, ೧೯೮೮, ಕರ್ನಾಟಕದ ಶಿಕ್ಷಣ ಪರಂಪರೆ, ಕನ್ನಡ ಅಧ್ಯಯನ ವಿಭಾಗ, ಮುಂಬಾಯಿ ವಿಶ್ವವಿದ್ಯಾಲಯ, ಮುಂಬಾಯಿ.

ಡಿ.ಎಸ್.ಇ.ಆರ್.ಟಿ., ಪ್ರಾಥಮಿಕ ಶಿಕ್ಷಕ ಶಿಕ್ಷಣ, ಪಠ್ಯಪುಸ್ತಕ ವಿಭಾಗ, ಬೆಂಗಳೂರು.

ನಾಗರಾಜಯ್ಯ ಹಂಪ, ೧೯೯೧, ದ್ರಾವಿಡ ಭಾಷಾ ವಿಜ್ಞಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ನಾಯಕ ಡಿ.ಬಿ., ೧೯೯೪, ಲಂಬಾಣಿ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ನಾಯಕ ಡಿ.ಬಿ., ೨೦೦೦, ಲಂಬಾಣಿ ಜನಪದ ಸಾಹಿತ್ಯ (ಸಮಾಜೋ-ಸಾಂಸ್ಕೃತಿಕ ಅಧ್ಯಯನ), ಬಂಜಾರಾ ಪ್ರಕಾಶನ, ಗುಲಬರ್ಗಾ.

ನಾಯಕ ಡಿ.ಬಿ., ೨೦೦೨, ದೇಶಿ ಸಂಸ್ಕೃತಿ, ಬಂಜಾರ ಪ್ರಕಾಶನ, ಗುಲಬರ್ಗಾ.

ನಾಯಕ್ ಜೆ.ಪಿ., ೧೯೮೭, ಶಿಕ್ಷಣ ಆಯೋಗ: ಪೂರ್ವೋತ್ತರ, (ಕನ್ನಡಕ್ಕೆ ಅನುವಾದ) ಮಹಾಬಲೇಶ್ವರ ರಾವ್, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ನಾಯಕ್ ಜೆ.ಪಿ., ೧೯೯೦, ಭಾರತದಲ್ಲಿ ಪ್ರಾಥಮಿಕ ಶಿಕ್ಷಣ, ಪ್ರಕಾಶಕರು ಗೀತಾ ಬುಕ್‌ಹೌಸ್, ಮೈಸೂರು.

ನಾಯಕ ಬಿ.ಜಿ., ೧೯೮೧, ಲಂಬಾಣಿಗರ ಜನಪದ ಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನಾರಾಯಣ ಕೆ.ವಿ., ೧೯೯೫, ಕನ್ನಡ ಶೈಲಿ ಕೈಪಿಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ನಾರಾಯಣ ಕೆ.ವಿ., ೧೯೯೮, ದ್ವಿಭಾಷಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ನಾರಾಯಣ ಕೆ.ವಿ., ೧೯೯೯, ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕೆ.ವಿ., (ಸಂ), ೨೦೦೦, ಭಾಷೆ ವಿಶ್ವಕೋಶ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾರಾಯಣ ಕೆ.ವಿ., ೨೦೦೧, ಮತ್ತೆ ಭಾಷೆಯ ಸುತ್ತಮುತ್ತ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ನಾರಾಯಣ ಕೆ.ವಿ., ೨೦೦೧, ಭಾಷೆಯ ಸುತ್ತಮುತ್ತ, ಕ್ರೈಸ್ಟ್ ಕಾಲೇಜು, ಬೆಂಗಳೂರು.

ನಾರಾಯಣ ಕೆ.ವಿ., ೨೦೦೫, ನಮ್ಮೊಡನೆ ನಮ್ಮನುಡಿ, ವಿಶ್ವಾಸ ಪ್ರಿಂಟ್ಸ್, ಬೆಂಗಳೂರು.

ನಾರಾಯಣ ಘಟ್ಟ ಎ.ಆರ್., ೧೯೯೩, ಶಿಕ್ಷಣ ಮಾಧ್ಯಮ ಸಮಗ್ರ ಚಿಂತನ, ಪ್ರಕಾಶಕರು ಗೀತಾ ಕುಟೀರ, ಬೆಂಗಳೂರು.

ಪುರುಷೋತ್ತಮ ಜಿ., ೧೯೯೯, ಕಲಿಕೆಯ ತೊಂದರೆಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಪ್ರಶಾಂತ ಎಚ್.ಡಿ., ೨೦೦೫, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಪಂಡಿತ ಸಿ. ಕೃಷ್ಣ., ೧೯೯೦, ಶಾಲೆಗಳಲ್ಲಿ ಕನ್ನಡ ಬೋಧನೆ, ಪ್ರಕಾಶನ ಗೀತಾಬುಕ್ ಹೌಸ್, ಮೈಸೂರು.

ಪಾಂಡುರಂಗಬಾಬು ಡಿ., ೨೦೦೫, ನುಡಿ ನೋಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಬರಗೂರು ರಾಮಚಂದ್ರಪ್ಪ, ೨೦೦೧, ಶಿಕ್ಷಣ ಮತ್ತು ಮಾಧ್ಯಮ ನೀತಿ ನಿರೂಪಣಾ ಮಾದರಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಬಸವರಾಜ ನೆಲ್ಲಿಸರ, ೧೯೮೦, ಲಂಬಾಣಿಗರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

ಬಸವರಾಜ ಪೋಲಿಸ ಪಾಟೀಲ, ೨೦೦೩, ಭಾಷಾ ಸಂಗಮ, ಡಾ. ಸಂಗಮೇಶ ಸವದತ್ತಿಮಠ ಸಮಿತಿ, ಗುಲಬರ್ಗಾ.

ಬಿಳಿಗಿರಿ ಎಚ್.ಎಸ್., ೧೯೭೦, ವರ್ಣನಾತ್ಮಕ ವ್ಯಾಕರಣ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಭಟ್ಟ ಬೆತ್ತಗೇರಿ ಜಿ.ಐ., ೨೦೦೦, ಪಠ್ಯಕ್ರಮ ತತ್ವಗಳು ಮತ್ತು ಯೋಜನೆ, ಪದ್ಮ ಪ್ರಕಾಶನ, ಕಾಸರಕೋಡ, ಹೊನ್ನಾವರ ಉ.ಕ.ಜಿಲ್ಲೆ.

ಬಾಲಚಂದ್ರ ಜಯಶೆಟ್ಟಿ ಸಂ, ೨೦೦೨, ಚನ್ನಬಸಪ್ಪ ಕೋ. ನವರ ವಿಚಾರಗಳು, ಪ್ರಾಥಮಿಕ ಶಿಕ್ಷಣ ಮಕ್ಕಳ ಮೂಲಭೂತ ಹಕ್ಕು, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

ಭಾಷಾ ಸಮಿತಿಯ ವರದಿ, ೧೯೮೨, ಡಾ. ಗೋಕಾಕ್ ಸಮಿತಿ ವರದಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮರಿದೇವರು ಸಿ.ಎಚ್., ೧೯೯೧, ಮುನ್ನಡೆದ ಶಿಕ್ಷಣ ಮನಶಾಸ್ತ್ರ, ಉದಯಭಾನು ಪ್ರಕಾಶನ, ಕಲ್ಪಕೃಪ, ಯಲ್ಲಾಪುರ, ತುಮಕೂರು.

ಮಹಾದೇವಯ್ಯ ಪಿ., ೧೯೯೮, ಸಾಮಾಜಿಕ ಉಪಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವಯ್ಯ ಪಿ., ೧೯೯೯, ಮುಸ್ಲಿಂ ಕನ್ನಡ ಒಂದು ಸಾಮಾಜಿಕ ಭಾಷಾ ವೈಜ್ಞಾನಿಕ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಮಹಾದೇವಯ್ಯ ಪಿ., ೨೦೦೬, ದಲಿತರು, ಭಾಷೆ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹಾದೇವಯ್ಯ ಪಿ., ೨೦೦೬, ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.

ಮಹಾಬಲೇಶ್ವರ ರಾವ್, ೧೯೯೨, ಬಹುಮುಖ ಶಿಕ್ಷಣ, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು.

ಮಹಾಬಲೇಶ್ವರ ರಾವ್, ೧೯೯೩, ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಬೋಧನೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಮಹಾಬಲೇಶ್ವರ ರಾವ್, ೧೯೯೬, ಬೋಧನ ಕಲೆ, ಪ್ರಕಾಶಕರು ಡಾ. ಟಿ.ಎಂ. ಪೈಮಾನವ ಸಂಪದಭಿವೃದ್ಧಿ ಕೇಂದ್ರ, ಕುಂಜಿಬೆಟ್ಟು, ಉಡುಪಿ.

ಮಹಾಬಲೇಶ್ವರ ರಾವ್, ೧೯೯೮, ರಾಷ್ಟ್ರೀಯ ಶಿಕ್ಷಣ ನೀತಿ, ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

ಮಹಾಬಲೇಶ್ವರ ರಾವ್, ೧೯೯೯, ಹಾಯಬೇಡಿ, ಒದೆಯಬೇಡಿ, ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು.

ಮಹಾಬಲೇಶ್ವರ ರಾವ್, ೧೯೯೯, ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು ಸವಾಲುಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಮಹಾಬಲೇಶ್ವರ ರಾವ್, ೨೦೦೩, ಮನೆಶಾಲೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡಬೇಕು, ಕರ್ನಾಟಕ ಉಚ್ಚನ್ಯಾಯಾಲಯದ ತೀರ್ಮಾನ, ಏಪ್ರಿಲ್ ೨೯, ೧೯೮೯.

ಮಂಜುನಾಥ ಎಸ್., ಬಳ್ಳಾರಿ ನಗರದ ದ್ವಿಭಾಷಿಕತೆಯ ವೈವಿಧ್ಯತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಜಶೇಖರಯ್ಯ ಕೆ.ಎನ್., ೨೦೦೬, ಶಿಕ್ಷಣ ಮತ್ತು ಮನೋವಿಕಾಸ, ಸುಮುಖ ಪ್ರಕಾಶನ, ಬೆಂಗಳೂರು.

ರಾಜಶೇಖರಯ್ಯ ಕೆ.ಎನ್., ೨೦೦೭, ಕಲಿಕಾ ಪ್ರಕ್ರಿಯೆಗಳು, ಚೇತನ ಬುಕ್‌ಹೌಸ್, ಮೈಸೂರು.

ರಾಜೇಶ್ ಇ. ಬೆಳ್ಳೇರ್, ೨೦೦೪, ಪಠ್ಯಕ್ರಮ ಸಂವಹನಾ ತತ್ವಗಳು, ಕಾವೇರಿ ಪ್ರಕಾಶನ, ಸಹಕಾರ ನಗರ, ಬೆಂಗಳೂರು.

ರಾಜೇಶ್ವರಿ ಮಹೇಶ್ವರಯ್ಯ, ೨೦೦೩, ಆಧುನಿಕ ವರ್ಣನಾತ್ಮಕ ಭಾಷಾ ವಿಜ್ಞಾನ, ಸಮಾಜ ಪುಸ್ತಕಾಲಯ, ಧಾರವಾಡ.

ಲಮಾಣ ಎಚ್.ಡಿ., ೧೯೭೬, ಕರ್ನಾಟಕದ ಲಮಾಣಿ ಜನಪದ ಗೀತೆಗಳ ಸಾಹಿತ್ಯಿಕ ಅಧ್ಯಯನ, ಅಪ್ರಕಟಿತ ಹಿಂದಿ ಪ್ರಬಂಧ.

ರಾಮಚಂದ್ರರಾವ್ ಬಿ., ೧೯೯೯, ಕನ್ನಡ ಭಾಷೆಯ ಇತಿಹಾಸ, ಡಿ.ವಿ.ಕೆ. ಪ್ರಕಾಶನ, ಮೈಸೂರು.

ರಾಮಚಂದ್ರ ಸಿ.ಎಸ್., ೧೯೯೯, ಕನ್ನಡ ಭಾಷಾಲೋಚನ, ಮಾಂಗರಿ ಪ್ರಕಾಶನ, ಮೈಸೂರು.

ರೂಪ್ಲಾನಾಯಕ್ ವೈ., ೧೯೯೮, ರಂಗುರಂಗಿನ ಬಂಜಾರ ಲಂಬಾಣಿ ಜನಾಂಗ, ಎಸ್.ಬಿ.ಸಿ.ಜಿ. ಪಬ್ಲಿಕೇಷನ್, ಬೆಂಗಳೂರು.

ಲಲಿತಾಂಬ ವೃಷಬೇಂದ್ರಸ್ವಾಮಿ, ೧೯೯೭, ಮಕ್ಕಳ ಶಿಕ್ಷಣ: ಚಿಂತನೆಗಳು, ಮಹಿಳಾ ಸಾಹಿತ್ಯಕಾ, ನವನಗರ, ಹುಬ್ಬಳ್ಳಿ.

ವೀಣಾ ಎಂ.ಪಿ., ೨೦೦೦, ಮನೆ, ಸಮಾಜ ಮತ್ತು ಸಂಸ್ಕೃತಿ, ನೆಲಮನೆ ಪ್ರಕಾಶನ, ಬೆಂಗಳೂರು.

ವೀರಭದ್ರಪ್ಪ ಬಿ.ವಿ., ೧೯೭೮, ದ್ವಿತೀಯ ಭಾಷಾ ಬೋಧನೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವೀರಭದ್ರಪ್ಪ ಬಿ.ವಿ., ೨೦೦೫, ಶಿಕ್ಷಣ ಮತ್ತು ಸಂಸ್ಕೃತಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

ವಿಲ್ಯಂ ಮಾಡ್ತ, ೧೯೭೯, ಅನ್ಯ ಭಾಷಾಬೋಧ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶ್ಯಾಮಲಾ ಕುಮಾರಿ ಬಿ., ೧೯೮೭, ಮೊದಲ ಹೆಜ್ಜೆ, ಭಾರತೀಯ ಭಾಷೆಗಳ ಕೇಂದ್ರಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಶ್ಯಾಮಲಾ ಕುಮಾರಿ ಸಂ, ೧೯೮೮, ಹೊಸ ಹೆಜ್ಜೆ, ಭಾರತೀಯ ಭಾಷೆಗಳ ಕೇಂದ್ರಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಶ್ಯಾಮಲಾ ಕುಮಾರಿ ಬಿ., ಮಲ್ಲಿಕಾರ್ಜುನ ಭ., ಪ್ರಾಥಮಿಕ ಶಾಲಾ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕನ್ನಡ ಬೋಧನೆ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಶಿವಾನಂದ ವಿ., ೧೯೮೭, ಕನ್ನಡ ಆಕೃತಿಮಾ, ಧ್ವನಿ-ಧ್ವನಿಮಾ ಪ್ರಕಾಶನ, ಕಲಬುರ್ಗಿ.

ಶ್ರೀಧರ್ ಎಸ್.ಎನ್., ೧೯೯೫, ಇಂದಿನ ಕನ್ನಡ ರಚನೆ ಮತ್ತು ಬಳಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಶರ್ಮಾ ಕೆ.ಎಸ್., ೨೦೦೦, ಜನತೆಗಾಗಿ ಶೈಕ್ಷಣಿಕ ಪ್ರಕ್ರಿಯೆ, ನವಸಹಸ್ರಮಾನದ ಒಂದು ಸವಾಲು, ಪುರೋಗಾಮಿ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ.

ಶಂಕರಭಟ್ಟ ಡಿ.ಎಸ್., ೧೯೯೫, ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶಂಕರಭಟ್ಟ ಡಿ.ಎಸ್., ೨೦೦೧, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು.

ಶಂಕರಭಟ್ಟ ಡಿ.ಎಸ್., ೨೦೦೨, ಭಾಷೆಯ ಬಗೆಗೆ ನೀವೇನು ಬಲ್ಲಿರಿ?, ಭಾಷಾ ಪ್ರಕಾಶನ, ಮೈಸೂರು.

ಶಂಕರಭಟ್ಟ ಡಿ.ಎಸ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ, ಭಾಷಾ ಪ್ರಕಾಶನ, ಮೈಸೂರು.

ಶಂಕರಭಟ್ಟ ಡಿ.ಎಸ್., ೨೦೦೬, ಕನ್ನಡ ನುಡಿಯ ಬಗೆಗೆ ಚಿಂತನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಸಣ್ಣರಾಮ, ೧೯೮೨, ಲಂಬಾಣಿ ಗಾದೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸಣ್ಣರಾಮ, ೧೯೯೫, ಲಂಬಾಣಿ ಸಂಸ್ಕೃತಿ ಒಂದು ಅಧ್ಯಯನ, ಸಂಸ್ಕೃತಿ ಮತ್ತು ಜಾನಪದ ಕುವೆಂಪು ವಿಶ್ವವಿದ್ಯಾಲಯ, ಬೆಂಗಳೂರು.

ಸುರೇಶ್ ಕೆ.ಎಂ., ೨೦೦೬, ಶೈಕ್ಷಣಿಕ ಮನೋವಿಜ್ಞಾನದ ಮೂಲಾಂಶಗಳು, ಸುಮುಖ ಪ್ರಕಾಶನ, ಬೆಂಗಳೂರು.

ಸುರೇಶ್ ಕೆ.ಎಂ., ೨೦೦೬, ಕಲಿಕೆ ಮತ್ತು ಬೋಧನೆಯ ಮನೋವಿಜ್ಞಾನ, ಸುಮುಖ ಪ್ರಕಾಶನ, ಬೆಂಗಳೂರು.

ಸಂಗಮೇಶ ಸವದತ್ತಿಮಠ, ೧೯೯೯, ಭಾಷಾಲೇಖ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ.

ಸಂಗಮೇಶ ಸವದತ್ತಿಮಠ, ೨೦೦೩, ಕನ್ನಡ ಭಾಷಾ ಸ್ವರೂಪ, ರೂಪರಶ್ಮಿ ಪ್ರಕಾಶನ, ಗುಲಬರ್ಗಾ.

ಸಾಂಬಾಮೂರ್ತಿ, ೨೦೦೪, ಭಾಷೆ ಮತ್ತು ಅಶಾಬ್ದಿಕ ಸಂವಹನ, ಸಿ.ವಿ.ಜಿ. ಪಬ್ಲಿಕೇಷನ್, ಮೈಸೂರು.

ಸಾಂಬಾಮೂರ್ತಿ, ೨೦೦೬, ಕನ್ನಡದಲ್ಲಿ ಪ್ರತ್ಯಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ಹರಿಲಾಲ್ ಪವಾರ್, ೧೯೯೬, ಲಂಬಾಣಿಗರಲ್ಲಿ ಮದುವೆ ಸಂಪ್ರದಾಯಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹಳಬರ ಬಿ.ಜಿ., ೧೯೭೫, ಉತ್ತರ ಕರ್ನಾಟಕದ ಲಂಬಾಣಿಗಳಲ್ಲಿ ಆರ್ಥಿಕ ಬದಲಾವಣೆಯ ಸಾಮಾಜಿಕ ಪರಿಣಾಮ, ಮಾನವ ವಿಜ್ಞಾನದ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ.

ಹಾ.ಮಾ. ನಾಯಕ, ೧೯೮೩, ಕನ್ನಡ ವಿಶ್ವಕೋಶ ಸಂಪುಟ ೧೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಹಿರೇಮಠ ಸಿ.ಜಿ., ತಳವಾರ ಜಿ.ಕೆ., ಉಗರಗೋಳ ಎಮ್.ಬಿ., ೨೦೦೬, ಆಧುನಿಕ ಶಿಕ್ಷಣದ ಒಲವುಗಳು, ನಿಶಾಂತ ಪ್ರಕಾಶನ ಸೀಮಿಕೇರಿ, ಬಾಗಲಕೋಟೆ.

ENGLISH

Acharya A.S., 1967, Halakki Kannada, Deccan College, Post Graduate and Research Institute, Poona.

Barikeri V.H., 1982, A Descriptive Analysis of Lamani Language Spoken in Bijapur District, unpublished Thesis Karnataka University, Dharwad.

Berar Census Report, 1981.

Charles F. Hockett, 1958, 'A Course in Modern Linguistics', Mohan Primlani, Oxford and IBH Publishing Co.Pvt.Ltd. New Delhi.

Gleson H.A. Jr., 1955, "An ntroduction to Descriptive Linguistics, Mohan Primlani, Oxford and IBH Publishing Co.Pvt.Ltd. New Delhi.

Grierson G.A., Linguistic Survey of India Vol. IX, Banglore Road, Delhi.

Hiremath R.C., Kulli J.S. 1976, (Ed), Procudings of the Third All Inida Conference Linguist ics, Karnataka University, Dharwad.

Hiremath R.C., 1980, The Staucture of Kannada, Prasaranga Karnataka University, Dharwad.

Kempe Gowda K., A Descriptive Analysis of the Irula Dialect, (unpublished Ph.D., Thesis) University of Mysore.

Maheshwaraiah M., Linguistic Analysis of Diwar Kannada (unpublished Ph.D., Thesis) Karnataka University, Dharwad.

Murigeppa A., Bidar Kannada : A Descriptive Analysis (unpublished Ph.D., Thesis) Karnataka University, Dharwad.

Nanjundayya and Ananthayyar, 1928, The Mysore Tribes and Castes Bangalore, Mysore Govt. Press.

Irvin, Army of Inidan Moghals

Pasumpon, 1993, Problems in Learning Thamil, Devi Publication.

Reports of All India Banjara Study Team, 1968.

Report of All India Banjara Sevak Sibir held on 24th to 26th Aug. 1966.

Rupla Naik Y., 1988, Colourful Banjara Tribe Through the Ages. BANJARA Souvehir P. I. All India Banjara Conference, Bijapur.

Russel and Hiral, 1975, The Tribes and Casts of Central Proviness of India, Vol.II, Cosmo Publications, New Delhi.

Shastri K.G., 1971, The Havyaka Dialect of North Kanara, Karnataka University, Dharwad.

William Madtha., 1984, The Christian Konkani of Kanara (A Linguistic Analysis) Prasaranga, Karnataka University, Dharwad.

ಲೇಖನಗಳು

ಉಮಾಶಂಕರ್ ಪೆರೆಯೋಡಿ ಮಾರ್ಗದರ್ಶಿ, ೧೯೯೭, ತೆರೆ ಆರು ಶೈಕ್ಷಣಿಕ ಬರಿಗಾಲ ಸಂಶೋಧನೆಗೆ ಸಂಕಲನ, ಪ್ರಕಾಶಕರು ಸಂಗತಿ, ಮಂಗಳೂರು.

೧. ಜನಾರ್ಧನ ನಾಯಕ್ ಎಸ್., (ಲೇ), ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳಿಗೆ ಪುಸ್ತಕಗಳ ಹೊರೆ ಒಂದು ಅಧ್ಯಯನ.

೨. ವಿಜಯಕುಮಾರ ಜಿ. ಶೆಟ್ಟಿ, (ಲೇ), ತರಗತಿಯಲ್ಲಿ ೫೦ಕ್ಕಿಂತ ಮೇಲ್ಪಟ್ಟು ವಿದ್ಯಾರ್ಥಿಗಳಿರುವಾಗ ಯಶಸ್ವಿ ಬೋಧನೆ ಬಗ್ಗೆ ಶಿಕ್ಷಕರ ಅಭಿಪ್ರಾಯದ ಅಧ್ಯಯನ.

ಕರೂರ ಎನ್.ಜಿ., ೨೦೦೧, ಶಿಕ್ಷಣ ಮಾರ್ಗ, ಲೇ. ಪ್ರಾಥಮಿಕ ಶಿಕ್ಷಣ ಸಮಸ್ಯೆಗಳು ಪರಿಹಾರಗಳು, ಸಪ್ನ ಬುಕ್‌ಹೌಸ್, ಬೆಂಗಳೂರು.

ಕೃಷ್ಣಪ್ಪ ಎಸ್., ೧೯೭೬, ಶಿಕ್ಷಣದ ತಾತ್ವಿಕ ಮತ್ತು ಸಾಮಾಜಿಕ ಮೂಲಾಧಾರಗಳು, ಲೇ. ಶಾಲಾ ಶಿಕ್ಷಣಕ್ಕೆ ಮೊದಲಿನ ಕಲಿಕೆಯ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಕೃಷ್ಣಪ್ಪ ಎಂ.ಜಿ., ೨೦೦೭, ಮಹಿಳೆಯರಿಗೆ ಶಿಕ್ಷಣ, ಸಮಗ್ರ ಅಬಿವೃದ್ಧಿಗೆ ಪೂರಕ, ಪ್ರಜಾವಾಣಿ, ಜನವರಿ ೮.

ಕೇಶವ ಜಿ. ಝಿಂಗಾಡೆ, ೨೦೦೬, ಪ್ರಾಥಮಿಕ ಶಿಕ್ಷಣ ನಿರಾಶಾದಾಯಕ ಚಿತ್ರಣ, ಪ್ರಜಾವಾಣಿ, ಜನವರಿ ೩೦.

ಗಣೇಶ್ ಜಿ.ಎಂ., ೨೦೦೮, ಕಲಿಕೆಯ ಮಾಧ್ಯಮ ಯಾವುದಿರಬೆಕು, ಪ್ರಜಾವಾಣಿ ಜೂಲೈ ೧೫.

ನಾರಾಯಣ ಕೆ.ವಿ., ೨೦೦೧, ಕನ್ನಡ ಮುಂದೇನು, ಸುಧಾವಾರ ಪತ್ರಿಕೆ, ನವೆಂಬರ್ ಸಂಚಿಕೆ.

ಪ್ರಶಾಂತ್ ಎಚ್.ಡಿ., ೨೦೦೬, ಶಾಲಾ ಶಿಕ್ಷಣ ಪರಿಣಾಮಕಾರಿ ಬೋಧನಾ ಸಮಯ, ಪ್ರಜಾವಾಣಿ, ಮಾರ್ಚ್ ೩.

ಬುರ್ಲಿ ಎಸ್.ಎ., (ಅನು) ೧೯೯೧, ಭಾರತದಲ್ಲಿ ಮಾತೃಭಾಷೆಯ ಬೋಧನೆಯ ಬಗ್ಗೆ ಸಲಹೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬೇದ್ರೆ ಮಂಜುನಾಥ, ೨೦೦೮, ಕಾರ್ಡ್ ಬಳಸಿ ಓದಿಸುವ ಆಟ, ಪ್ರಜಾವಾಣಿ, ಆಗಸ್ಟ್ ೨೬.

ಭರತಭೂಷಣ್ ಬೂ., ೧೯೮೯, ನವೀನ ಶಿಕ್ಷಣ, ಭಾಗ೩ ಲೇ. ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣ ಪ್ರಕಾಶನ ನವೀನ ಹರಪನಹಳ್ಳಿ.

ಮಲ್ಲಿಕಾರ್ಜುನ ಭ., ೨೦೦೭, ಮಾತೃಭಾಷೆಯಾಗಿ ಕನ್ನಡ ಬೋಧನೆ ಮತ್ತು ವ್ಯಾಕರಣ, ಹೊಸತು ಸಂಚಿಕೆ, ಆಗಸ್ಟ್.

ಮಹಾಬಲೇಶ್ವರ ರಾವ್, ೨೦೦೬, ಭಾಷೆ ಮತ್ತು ಮಾಧ್ಯಮ, ಹೊಸತು ಸಂಚಿಕೆ, ಏಪ್ರಿಲ್.

ಮಹಾಬಲೇಶ್ವರ ರಾವ್, ೨೦೦೬, ಕಲಿಕೆಯ ಅನನ್ಯ ಶೈಲಿಗಳು, ಪ್ರಜಾವಾಣಿ, ಜೂನ್ ೬.

ಮಹಾಬಲೇಶ್ವರ ರಾವ್, ೨೦೦೭, ಶಾಲೆಗಳಲ್ಲಿ ಕೊಂಕಣಿ ಕಲಿಕೆಯ ತೊವಲ್ಲುಡಿ, ಪ್ರಜಾವಾಣಿ, ಜೂನ್ ೩.

ಮಹಾಬಲೇಶ್ವರ ರಾವ್, ೨೦೦೮, ಪರಿಣಾಮಕಾರಿ ಬೋಧನೆಗೊಂದು ಮೆಟ್ಟಿಲು ಸೂಕ್ಷ್ಮ ಬೋಧನೆ, ಪ್ರಜಾವಾಣಿ, ಆಗಸ್ಟ್ ೧೯.

ಮೋಹಿದ್ದೀನ್ ಖಾನ್ ಬಿ., ೨೦೦೮, ಪ್ರಾಥಮಿಕ ಶಿಕ್ಷಣ ಪದ್ಧತಿಯೊಳಗೊಂದು ಇಣುಕು, ಪ್ರಜಾವಾಣಿ, ನವೆಂಬರ್ ೧೧.

ಮಹಾಲಿಂಗ, ೨೦೦೬, ಕನ್ನಡ ಬಹುರೂಪಿ ಪಠ್ಯದ ವಿಕಾಸ, ಪ್ರಜಾವಾಣಿ, ಮೇ ೫.

ರವೀಂದ್ರ ಎಂ., ೨೦೦೭, ಶಿಕ್ಷಣ ಮಾಧ್ಯಮವಾಗಿ ಕನ್ನಡ, ಪ್ರಜಾವಾಣಿ, ಫೆಬ್ರವರಿ ೧೨.

ರಾಜಶೇಖರ ಜೆ.ಎಂ., ೨೦೦೭, ಮಕ್ಕಳ ಬಗ್ಗೆ ಕಾಳಜಿ ವಹಿಸಿ, ಪ್ರಜಾವಾಣಿ, ಅಗಸ್ಟ್ ೫.

ವಿಜಯ್ ಮಾಧವ್, ೨೦೦೬, ಶಾಲಾಪೂರ್ವ ಶಿಕ್ಷಣದಲ್ಲಿ ಪ್ರಯೋಗ, ಪ್ರಜಾವಾಣಿ, ಜೂನ್ ೧೨.

ವೀರಭದ್ರಶರ್ಮ ಕೆ.ಎಂ., ೧೯೭೬, ಬಳ್ಳಾರಿ ಜಿಲ್ಲೆಯ ಕನ್ನಡ, ಕರ್ನಾಟಕ ಭಾರತಿ ಸಂ-೯ ಸಂ. ೧,೨ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿಷ್ಣು ಎಂ. ಶಿಂಧೆ, ೨೦೦೯, ಪರಿಣಾಮಕಾರಿ ಬೋಧನೆಗೆ ಧ್ವನಿಯೂ ಮಹತ್ವ, ವಿಜಯಕರ್ನಾಟಕ, ಜನವರಿ ೫.

ಶಾರದಾ ಮಾನವಿಕರ್ ಶಿರಹಟ್ಟಿ, ೨೦೦೭, ಕಲಿಕಾ ಸಾಮರ್ಥ್ಯ ಹೆಚ್ಚಳ ಹೇಗೆ, ಸುಧಾ, ಜೂನ್ ೧೪.

ಶಾರದಾ ಮಾನವಿಕರ್ ಶಿರಹಟ್ಟಿ, ೨೦೦೭, ಗಮನದ ಕೊರತೆಯ ವ್ಯಾದಿ, ಪ್ರಜಾವಾಣಿ, ಅಕ್ಟೋಬರ್ ೬.

ಶಂಕರಭಟ್ ಡಿ.ಎನ್., ಧ್ವನಿ ಪರಿವರ್ತನೆ ಮತ್ತು ವರ್ಣ ಪರಿವರ್ತನೆ, ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಸರಸ್ವತಿ ವಿಜಯಕುಮಾರ್, ೨೦೦೬, ಮಾತೃಭಾಷೆ ಮತ್ತು ಶಿಕ್ಷಣ, ಪ್ರಜಾವಾಣಿ, ಜೂನ್ ೩.

ಸುಬ್ಬರಾವ್ ಕೆ.ಎನ್., ೨೦೦೭, ಕಲಿಸುವ, ಕಲಿಯುವ ಕಲೆ, ಕರ್ಮವೀರ, ಜೂನ್ ೧೭.

ಸುಲೋಚನಾ ವೆಂಕಟೇಶ, ೨೦೦೯, ಬರವಣಿಗೆಯ ದೋಷ ಮತ್ತು ಪರಿಹಾರ ಕ್ರಮ, ಪ್ರಜಾವಾಣಿ, ಪೆಬ್ರವರಿ ೧೦.

ಸಂಗಮೇಶ ಸವದತ್ತಿ ಮಠ, ೧೯೭೨, ಕನ್ನಡ ಪ್ರಭೇದಗಳ ನಿರ್ಮಾಣಕ್ಕೆ ಕಾರಣಗಳು, ಕರ್ನಾಟಕ ಭಾರತಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಹಿರೇಮಠ ಆರ್.ಸಿ., ೧೯೭೬, ಭಾಷಾ ಪ್ರಭೇದ, ಕರ್ನಾಟಕ ಭಾರತೀ, ಸಂ-೯, ಸಂ. ೧,೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹೆಗಡೆ ಜಿ.ಎಂ., ೧೯೮೦, ಭಾರತೀಯ ಪಸಿರದಲ್ಲಿ ದ್ವಿಭಾಷಿಕತೆ, ಶಂಬಾಜೋಶಿಯವರ ಅಭಿನಂದನ ಗ್ರಂಥ, ಶಂಬಾ ಜೋಶಿ ಸಮ್ಮಾನ ಸಮಿತಿ, ಬೆಂಗಳೂರು.

ಹಂದೆ ಕೆ.ಆರ್., ೧೯೮೭, ಸಾರ್ಥಕ ಶಿಕ್ಷಣ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಹಂದೆ ಕೆ.ಆರ್., ೨೦೦೬, ಶಿಕ್ಷಣ ಸಂಚಯ, ಜೀವನ ದರ್ಶನ, (ಲೇ), ಶಿಕ್ಷಣ ಸಮಸ್ಯೆಗಳು ಹಾಗೂ ಸವಾಲುಗಳು, ವಿದ್ಯಾಶ್ರೀ ಪಬ್ಲಿಕೇಶನ್ಸ್, ಅಂಬಲಪಾಡಿ, ಉಡುಪಿ.

049172

AKSHARA GRANTHALAYA
ACC.NO.049172